ಭಾನುವಾರ, ಆಗಸ್ಟ್ 10, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 221 | ಪುಟ 20
www.prajavani.net prajavani.net prajavani
ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಅನ್ನುರಾಣಿ ಕಣಕ್ಕೆ
ಭಾರತದ ಜಾವೆಲಿನ್ ಥ್ರೋ ತಾರೆ ಅನ್ನುರಾಣಿ ಅವರು ಭಾನುವಾರ ಭುವನೇಶ್ವರದ ಕಳಿಂಗ ಕ್ರೀಡಾಂಗಣದಲ್ಲಿ ನಡೆಯುವ ವಿಶ್ವ ಅಥ್ಲೆಟಿಕ್ಸ್ ಕಾಂಟಿನೆಂಟಲ್ ಟೂರ್‌ನಲ್ಲಿ ಕಣಕ್ಕೆ ಇಳಿಯುವರು

ಪೌರತ್ವ ತ್ಯಜಿಸಿದವರು
2024ರಲ್ಲಿ ಎರಡು ಲಕ್ಷಕ್ಕೂ ಅಧಿಕ ಮಂದಿ ಭಾರತದ ಪೌರತ್ವವನ್ನು ತ್ಯಜಿಸಿದ್ದಾರೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ

ರಫ್ತುದಾರರಿಗೆ ಕೇಂದ್ರ ಶೀಘ್ರ ನೆರವು? 6
ವಿಷ್ಣು ಸ್ಮಾರಕಕ್ಕಾಗಿ ಕಲಾವಿದರ ಧ್ವನಿ 7

ಮಹದೇವಪುರದ ‘ಮತ’ ಮಹಾತ್ಮೆ

ಎಲ್ಲಿಂದಲೋ ಬಂದರು... ಮತ ಹಾಕಿ ಹೋದರು... ಯಾರಿವರು?

● ಜಯಸಿಂಹ ಆರ್.

ಒಳನೋಟ



ಬೆಂಗಳೂರು: ಮತ ಕಳವು ಆರೋಪಕ್ಕೆ ಸಂಬಂಧಿಸಿದಂತೆ ದೇಶದಾದ್ಯಂತ ಸುದ್ದಿಯಲ್ಲಿರುವ ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಮಹದೇವಪುರ ವಿಧಾನಸಭಾ ಕ್ಷೇತ್ರಕ್ಕೆ ಕಾಲಿಟ್ಟರೆ ಮತದಾರರ ಪಟ್ಟಿಯ ನಿಗೂಢ ಲೋಕವೊಂದು ತೆರೆದುಕೊಳ್ಳುತ್ತಾ, ಅಚ್ಚರಿಯ ಸಂಗತಿಗಳು ಎದುರುಗೊಳ್ಳುತ್ತವೆ.

ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಮುಂದಿಟ್ಟ ದಾಖಲೆ, ಚುನಾವಣಾ ಆಯೋಗದ ಜಾಲತಾಣದಲ್ಲಿರುವ ಮತದಾರರ ಗುರುತಿನ ಚೀಟಿಗಳಲ್ಲಿರುವ (ಎಪಿಕ್ ಕಾರ್ಡ್) ವಿಳಾಸಗಳ ಬೆನ್ನುಹತ್ತಿ ಹೊರಟ ‘ಪ್ರಜಾವಾಣಿ’ಗೆ, ಹಲವು ‘ಪವಾಡ’ಗಳು ಕ್ಷೇತ್ರದಲ್ಲಿ ನಡೆದಿರುವುದು ಕಾಣಿಸಿತು. ಅದರ ಜತೆಗೆ, ಈ ಪ್ರದೇಶದ ಮತಗಟ್ಟೆ ಅಧಿಕಾರಿ (ಬಿಎಲ್‌ಒ) ನೀಡಿದ ಮಾಹಿತಿಗಳು ಆ ‘ಪವಾಡ’ಗಳಿಗೆ ಪೂರಕ ಸಾಕ್ಷ್ಯ ಒದಗಿಸುತ್ತಲೇ ಹೋದವು.

ಇಬ್ಬರು ವಯಸ್ಕರು ಕಾಲುಚಾಚಿ ಮಲಗಲಷ್ಟೇ ಸಾಧ್ಯವಿರುವ ಮನೆಯ ವಿಳಾಸದಲ್ಲಿ 80 ಮತದಾರರ ಚೀಟಿಗಳು, ಆಯೋಗದ ಜಾಲತಾಣದಲ್ಲಿ ಲಭ್ಯ ಇವೆ. ‘ಪ್ರಜಾವಾಣಿ’ ಪ್ರತಿನಿಧಿ ಅಲ್ಲಿಗೆ ಭೇಟಿ ನೀಡಿ ಪರಿಶೀಲಿಸಿದಾಗ, 80ರಲ್ಲಿ ಯಾರೊಬ್ಬರೂ ಆ ವಿಳಾಸದಲ್ಲಿ ಇರಲಿಲ್ಲ. ಆದರೆ, ಅವರಲ್ಲಿ ಬಹುತೇಕರು ಚುನಾವಣೆ ಸಂದರ್ಭದಲ್ಲಿ ಬಂದು ಮತಹಾಕಿ ಹೋಗುತ್ತಾರೆ ಎಂಬುದು ಗೊತ್ತಾಯಿತು.

ಮಹದೇವಪುರ ಕ್ಷೇತ್ರದ ವ್ಯಾಪ್ತಿಯ ಮುನಿರೆಡ್ಡಿ ಗಾರ್ಡನ್ (ಪಾರ್ಟ್ ಸಂಖ್ಯೆ: 173) 35ನೇ ನಂಬರ್‌ನ ಮನೆಯೊಂದರಿಂದ 80 ಮತದಾರರು ನೋಂದಣಿಯಾಗಿದ್ದಾರೆ ಎಂದು ದಾಖಲೆ ಬಿಡುಗಡೆ ಮಾಡಿದ್ದ ರಾಹುಲ್ ಗಾಂಧಿ ಪ್ರತಿಪಾದಿಸಿದ್ದರು. ಆ ದಾಖಲೆಯಲ್ಲಿ 80 ಮತದಾರರ ಎಪಿಕ್ ಸಂಖ್ಯೆಯೂ ಇದ್ದವು. ಅವುಗಳನ್ನು ಭಾರತೀಯ ಚುನಾವಣಾ ಆಯೋಗದ ‘ಮತದಾರರ ಸೇವಾ ಪೋರ್ಟಲ್’ನಲ್ಲಿ ಪರಿಶೀಲಿಸಿದಾಗ, 80 ಎಪಿಕ್ ಸಂಖ್ಯೆಗಳೂ ಈಗಲೂ ಅಸ್ತಿತ್ವದಲ್ಲೇ ಇವೆ.

▶4

ಯಾರಿವರು ಮತದಾರರು...? ಮುನಿರೆಡ್ಡಿ ಗಾರ್ಡನ್‌ನ 35ನೇ ನಂಬರ್‌ನ ಮನೆಯಲ್ಲಿ ನೋಂದಣಿಯಾಗಿರುವ ಮತದಾರರ ವಿವರವನ್ನು ಪರಿಶೀಲಿಸಿದ ಸ್ಥಳೀಯ ನಿವಾಸಿ ಚಿತ್ರ: ರಂಜು ಪಿ.

‘ಶಿಫ್ಟೆಡ್ ಎಂದು ವರದಿ ನೀಡಿದ್ದೆ’

‘ಮುನಿರೆಡ್ಡಿ ಗಾರ್ಡನ್‌ನ 35ನೇ ಮನೆ ನಂಬರ್‌ನಲ್ಲಿ 80ಕ್ಕೂ ಹೆಚ್ಚು ಮತದಾರರ ಹೆಸರು ಇತ್ತು. ಅವರು ಯಾರೂ ಆ ಮನೆಯಲ್ಲಿ ಇಲ್ಲ, ಬೇರೆಡೆಗೆ ಹೋಗಿದ್ದಾರೆ ಎಂದು ವರದಿ ನೀಡಿದ್ದೆ. ಅದಕ್ಕೆ ಸಂಬಂಧಿಸಿದ ‘ಫಾರಂ ನಂಬರ್ 7’ ಮತ್ತು ‘ಫಾರಂ ನಂಬರ್ 8ಎಂ’ ಅನ್ನು ಮೇಲಧಿಕಾರಿಗಳಿಗೆ ಸಲ್ಲಿಸಿದ್ದೆ’ ಎನ್ನುತ್ತಾರೆ ಮುನಿರೆಡ್ಡಿ ಗಾರ್ಡನ್‌ನ ಮತಗಟ್ಟೆ ಸಂಖ್ಯೆ 173ರ ಮತಗಟ್ಟೆ ಅಧಿಕಾರಿ (ಬಿಎಲ್‌ಒ) ಮುನಿರತ್ನಮ್ಮ.

‘ನಾನು 80ಕ್ಕೂ ಹೆಚ್ಚು ಮಂದಿಗೆ ಸಂಬಂಧಿಸಿದಂತೆ ಫಾರಂ ನಂಬರ್ 7 ಮತ್ತು ಫಾರಂ ನಂಬರ್ 8ಎಂ ಸಲ್ಲಿಸಿದ್ದರೂ, ಕೆಲವರ ಹೆಸರಷ್ಟೇ ಮತದಾರರ ಪಟ್ಟಿಯಿಂದ ಡಿಲೀಟ್ ಆಗಿದೆ. ಉಳಿದವರ ಹೆಸರು ಉಳಿದಿದೆ’ ಎನ್ನುತ್ತಾರೆ.

ಬಿಎಲ್‌ಒ ಸಲ್ಲಿಸುವ ಫಾರಂ ನಂಬರ್ 7 ಮತ್ತು ಫಾರಂ ನಂಬರ್ 8ಎಂ ಅನ್ನು ಪರಿಶೀಲಿಸುವ ಹೊಣೆಗಾರಿಕೆ ಮೇಲ್ವಿಚಾರಕರದು.

▶4

‘ಇವರ್‍ಯಾರೂ ಇಲ್ಲಿರಲಿಲ್ಲ’

ಸುರೇಶ್

35ನೇ ನಂಬರ್‌ನ ಮನೆ ಇರುವ ವಠಾರದಲ್ಲಿ ಒಟ್ಟು 37 ಮನೆಗಳಿದ್ದು, ಜಯರಾಮ ರೆಡ್ಡಿ ಅವುಗಳ ಮಾಲೀಕ. ಆದರೆ ಮನೆಗಳ ಬಾಡಿಗೆ, ಬಾಡಿಗೆದಾರರ ಪಟ್ಟಿ ಮತ್ತಿತರ ವ್ಯವಹಾರ ನೋಡಿಕೊಳ್ಳುವುದು ಸುರೇಶ್ ಎಂಬ ಸ್ಥಳೀಯ ನಿವಾಸಿ. ಸುರೇಶ್ ಅವರಿಗೆ ಮತದಾರರ ಪಟ್ಟಿ ನೀಡಿದಾಗ, ‘ನಾನು 25 ವರ್ಷಗಳಿಂದ ಇಲ್ಲೇ ಇದ್ದೇನೆ. ಮೊಗವೀರ ಎಂಬುವವರು ಇದ್ದ ನೆನಪು. ಅವರ ಹೆಸರು ನೆನಪಿದೆಯಷ್ಟೇ, ಅವರ ಮುಖ ನೆನಪಿಲ್ಲ. ಈ ಪಟ್ಟಿಯಲ್ಲಿ ಇರುವ ಮತ್ಯಾರೂ ಇಲ್ಲಿ ಇರಲಿಲ್ಲ’ ಎಂದರು.

ಪ್ರತಿಕ್ರಿಯೆ ಪಡೆಯಲು ಮನೆ ಮಾಲೀಕ ಜಯರಾಮ ರೆಡ್ಡಿ ಅವರಿಗೆ ಹಲವು ಬಾರಿ ಕರೆ ಮಾಡಿದರೂ, ಅವರು ಕರೆ ಸ್ವೀಕರಿಸಲಿಲ್ಲ.

ಮಳೆ ಅಬ್ಬರ

ಪ್ರಜಾವಾಣಿ ಚಿತ್ರ

ಚನ್ನಪಟ್ಟಣದಲ್ಲಿ ಶನಿವಾರ ಸಂಜೆ ಸುರಿದ ಮಳೆಯಿಂದಾಗಿ ಪೆಟ್ರೋಲ್ ಬಂಕ್ ಆವರಣದಲ್ಲಿ ನಿಂತ ಮಳೆ ನೀರು

‘ಪಾಕ್‌ನ 6 ಯುದ್ಧವಿಮಾನ ನಾಶ’

ಮಾಹಿತಿ ಹಂಚಿಕೊಂಡ ಏರ್ ಚೀಫ್ ಮಾರ್ಷಲ್ ಎ.ಪಿ.ಸಿಂಗ್

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ‘ಆಪರೇಷನ್ ಸಿಂಧೂರ’ದ ವೇಳೆ ಪಾಕಿಸ್ತಾನದ ಕನಿಷ್ಠ ಐದು ಯುದ್ಧ ವಿಮಾನ ಮತ್ತು ಒಂದು ದೊಡ್ಡ ಗಾತ್ರದ ಸೇನಾ ವಿಮಾನವನ್ನು ಹೊಡೆದು ಉರುಳಿಸಿದ್ದೇವೆ’ ಎಂದು ವಾಯುಸೇನೆ ಮುಖ್ಯಸ್ಥ ಏರ್ ಚೀಫ್ ಮಾರ್ಷಲ್ ಎ.ಪಿ. ಸಿಂಗ್ ಶನಿವಾರ ಹೇಳಿದರು.

ಎ.ಪಿ. ಸಿಂಗ್

‘ಸಿಂಧೂರ’ ಕಾರ್ಯಾಚರಣೆಯು ನಡೆದು ಮೂರು ತಿಂಗಳ ಬಳಿಕ, ಭಾರತವು ಇದೇ ಮೊದಲ ಬಾರಿಗೆ ಇಂಥದ್ದೊಂದು ಮಹತ್ವದ ಮಾಹಿತಿ ಯನ್ನು ಬಹಿರಂಗ ಪಡಿಸಿದೆ. ಬೆಂಗಳೂರಿನ ಎಚ್‌ಎಎಲ್ ನಲ್ಲಿ ಏರ್ ಚೀಫ್ ಮಾರ್ಷಲ್ ಎಲ್.ಎಂ. ಕಾತ್ರೆ ಅವರ ಸ್ಮರಣಾರ್ಥ ಆಯೋಜಿಸಿದ್ದ ಉಪನ್ಯಾಸ ಕಾರ್ಯಕ್ರಮ ದಲ್ಲಿ ಎ.ಪಿ. ಸಿಂಗ್ ಮಾತನಾಡಿದರು. ಭಾರತದ ವಾಯು ಸೇನೆಯು ನಡೆಸಿದ ಕಾರ್ಯಾಚರಣೆಯ ಉಪಗ್ರಹ ಚಿತ್ರಗಳನ್ನೂ ಪ್ರದರ್ಶಿಸಿದರು.

▶7

ಪಾಕ್‌ನಲ್ಲಿ ಯಾವುದೆಲ್ಲಾ ನಾಶ

- ಆರು ರೆಡಾರ್‌ಗಳು (ಇದರಲ್ಲಿ ಕೆಲವು ದೊಡ್ಡ ಗಾತ್ರದವು, ಕೆಲವು ಸಣ್ಣ ಗಾತ್ರದವು)
- ವಾಯು ದಾಳಿ ತಡೆ ವ್ಯವಸ್ಥೆ ಮತ್ತು ಸರ್ಗೋದಾ ಮತ್ತು ರಹೀಮ್‌ಯಾರ್ ಖಾನ್ ವಾಯುನೆಲೆಯಲ್ಲಿನ ರನ್‌ವೇ
- ಸುಕೂರ್, ಬೊಲಾರಿ ಮತ್ತು ಜಕೋಬಾಬಾದ್ ವಾಯುನೆಲೆಯ ಹ್ಯಾಂಗರ್

‘ರಾಜಕೀಯ ಇಚ್ಛಾಶಕ್ತಿ ಇತ್ತು’

‘ಸೇನಾ ಕಾರ್ಯಾಚರಣೆಗೆ ಯಾವುದೇ ರೀತಿಯ ನಿರ್ಬಂಧ ಇರಲಿಲ್ಲ ಮತ್ತು ಸ್ಪಷ್ಟ ನಿರ್ದೇಶನ ನೀಡಲಾಗಿತ್ತು. ರಾಜಕೀಯ ಇಚ್ಛಾಶಕ್ತಿ ಇದ್ದ ಕಾರಣಕ್ಕೆ ಈ ಕಾರ್ಯಾಚರಣೆ ಯಶಸ್ಸು ಕಂಡಿತು. ನಮಗೆ ಯಾವುದೇ ರೀತಿಯ ನಿರ್ಬಂಧ ಇತ್ತು ಎಂದರೆ, ಅದು ನಮಗೆ ನಾವೇ ಹಾಕಿಕೊಂಡಿದ್ದ ನಿರ್ಬಂಧವಾಗಿತ್ತು’ ಎಂದು ವಾಯುಸೇನೆ ಮುಖ್ಯಸ್ಥ ಏರ್ ಚೀಫ್ ಮಾರ್ಷಲ್ ಎ.ಪಿ. ಸಿಂಗ್ ಹೇಳಿದರು.

‘ಸಂಘರ್ಷವು ತೀವ್ರಗೊಳ್ಳಬಾರದು ಎನ್ನುವ ಕಾರಣಕ್ಕೆ ಕೆಲವು ಸ್ಥಳಗಳು ಅಥವಾ ಪ್ರದೇಶಗಳ ಮೇಲೆ ದಾಳಿ ನಡೆಸಬಾರದು ಎಂಬ ರೀತಿಯಲ್ಲಿ ಯಾವುದೇ ನಿರ್ಧಾರ ಕೈಗೊಂಡಿರಲಿಲ್ಲ. ನಮ್ಮ ಕಾರ್ಯಾಚರಣೆಯು ಹೀಗೆಯೇ ಇರಬೇಕು ಎಂದು ನಾವು ಯೋಜನೆ ರೂಪಿಸಿಕೊಂಡಿದ್ದೆವು. ಎಷ್ಟರ ಮಟ್ಟಿಗೆ ಸಂಘರ್ಷ ಮಾಡಬೇಕು, ಯಾವಾಗ ಹಿಂದೆ ಸರಿಯಬೇಕು ಎಂದು ನಾವೇ ಯೋಜನೆ ರೂಪಿಸಿಕೊಂಡಿದ್ದೆವು’ ಎಂದೂ ಹೇಳಿದರು.

ಪಾಲು ಹೆಚ್ಚಳಕ್ಕೆ ಬಲಗೈ ಒತ್ತಡ

ಮರು ಪರಿಶೀಲನೆ: ಸಂಪುಟ ಉಪ ಸಮಿತಿ ರಚಿಸಲು ಪಟ್ಟು

● ರಾಜೇಶ್ ರೈ ಚಟ್ಲ

ಒಳ ಮೀಸಲು

ಬೆಂಗಳೂರು: ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಕಲ್ಪಿಸಲು ನಿವೃತ್ತ ನ್ಯಾಯಮೂರ್ತಿ ಎಚ್‌.ಎನ್‌. ನಾಗಮೋಹನ್‌ದಾಸ್ ಆಯೋಗ ನೀಡಿರುವ ವರದಿಯಲ್ಲಿ ಶಿಫಾರಸು ಮಾಡಿರುವ ‘ಜಾತಿವಾರು ವರ್ಗೀಕರಣ’ವನ್ನು ಮರು ಪರಿಶೀಲಿಸಲು ರಾಜ್ಯ ಸರ್ಕಾರವು ಸಚಿವ ಸಂಪುಟ ಉಪ ಸಮಿತಿ ರಚಿಸುವಂತೆ ಒತ್ತಡ ಹೇರಲು ಬಲಗೈ ಸಮುದಾಯ ಮುಂದಾಗಿದೆ.

ಪರಿಶಿಷ್ಟ ಜಾತಿಯಲ್ಲಿ 101 ಮೂಲ ಜಾತಿಗಳಿವೆ. ಈ ಜಾತಿಗಳನ್ನು ಆಯೋಗವು ಐದು ಗುಂಪುಗಳಾಗಿ ವರ್ಗೀಕರಿಸಿದೆ. ಲಭ್ಯವಿರುವ ಶೇ 17 ಮೀಸಲಾತಿಯನ್ನು ಪ್ರವರ್ಗ ‘ಎ’ಗೆ ಶೇ 1 (ಒಟ್ಟು ಜಾತಿಗಳು 59 ಜಾತಿಗಳು), ಪ್ರವರ್ಗ ‘ಬಿ’ಗೆ ಶೇ 6 (18 ಜಾತಿಗಳು), ಪ್ರವರ್ಗ ‘ಸಿ’ಗೆ ಶೇ 5 (17 ಜಾತಿಗಳು), ಪ್ರವರ್ಗ ‘ಡಿ’ಗೆ ಶೇ 4 (4 ಜಾತಿಗಳು), ಪ್ರವರ್ಗ ‘ಇ’ಗೆ ಶೇ 1ರಂತೆ (3 ಜಾತಿಗಳು) ಹಂಚಿಕೆ ಮಾಡಿದೆ.

ಪರಿಶಿಷ್ಟ ಜಾತಿಯ ಕುಟುಂಬಗಳನ್ನು ಸಮೀಕ್ಷೆ ನಡೆಸಿ ಸಂಗ್ರಹಿಸಿದ ದತ್ತಾಂಶಗಳನ್ನು ವಿಶ್ಲೇಷಿಸಿದ ಆಯೋಗವು, ಪರಿಶಿಷ್ಟ ಜಾತಿಗಳಲ್ಲಿ ಸಮಾನ ಜಾತಿಯ ಉಪ ಜಾತಿಗಳ ಗುಂಪುಗಳನ್ನು ಒಟ್ಟುಗೂಡಿಸಿ ಗುಂಪುಗಳಾಗಿ ಮಾಡಿದೆ. ಶೈಕ್ಷಣಿಕ, ಆರ್ಥಿಕ, ಸಾಮಾಜಿಕ, ರಾಜಕೀಯ ಹಿಂದುಳಿದಿರುವಿಕೆ, ಸರ್ಕಾರಿ ಉದ್ಯೋಗದಲ್ಲಿ ಪ್ರಾತಿನಿಧ್ಯದ ಮಾನದಂಡಗಳನ್ನು ಅನುಸರಿಸಿ ಈ ವಿಂಗಡಣೆ ಮಾಡಿದೆ.

ಯಾವ ಪ್ರವರ್ಗದಲ್ಲಿ ಎಷ್ಟು ಜನಸಂಖ್ಯೆಯಿದೆ, ಪ್ರವರ್ಗದಲ್ಲಿರುವ ಜಾತಿಗಳ ಹಿಂದುಳಿದಿರುವಿಕೆ ಪರಿಗಣಿಸಿ, ಆದ್ಯತೆ ಮೇಲೆ ಆಯೋಗವು ಮೀಸಲಾತಿಯನ್ನು ಹಂಚಿಕೆ ಮಾಡಿದೆ.

▶7



> **ಆಯೋಗ ನೀಡಿರುವ ವರದಿಯಲ್ಲಿ ಒಂದು ಸಮುದಾಯವನ್ನು ಕುಗ್ಗಿಸುವ ಪ್ರಯತ್ನವಾಗಿದೆ. ಸಚಿವ ಸಂಪುಟ ಉಪ ಸಮಿತಿ ರಚಿಸಿ ತಪ್ಪುಗಳನ್ನು ಸರಿಪಡಿಸುವವರೆಗೆ ಈ ವರದಿಗೆ ಸರ್ಕಾರ ಅನುಮೋದನೆ ನೀಡಬಾರದು**
> **ಜ್ಞಾನಪ್ರಕಾಶ ಸ್ವಾಮೀಜಿ,** ಉರಿಲಿಂಗಪೆದ್ದಿ ಮಠ, ಮೈಸೂರು

10 ಅಡಿ ಅಗೆದರೂ ಸಿಗದ ಅವಶೇಷ

ಮಂಗಳೂರು: ಧರ್ಮಸ್ಥಳ ಗ್ರಾಮದಲ್ಲಿ ಹಿಂದೆ ನಡೆದಿದೆ ಎನ್ನಲಾದ ಅಪರಾಧ ಕೃತ್ಯಗಳ ಮೃತದೇಹಗಳನ್ನು ಹೂಳಲಾಗಿದೆ ಎಂಬ ದೂರಿಗೆ ಸಂಬಂಧಿಸಿ ಸಾಕ್ಷಿ ದೂರುದಾರ ತೋರಿಸಿದ ಹೊಸ ಜಾಗದಲ್ಲಿ ವಿಶೇಷ ತನಿಖಾ ತಂಡ (ಎಸ್‌ಐಟಿ) ಶನಿವಾರ ಶೋಧ ಕಾರ್ಯ ನಡೆಸಿದ್ದು, ಅಲ್ಲಿ ಮೃತದೇಹದ ಕುರುಹು ಸಿಕ್ಕಿಲ್ಲ.

ವಿವರ ▶5

ಸಂಧಿಲಿನ್
ಸಂಧಿಲಿನ್ ಹಚ್ಚಿ ನೋವಿಗೆ ವಿದಾಯ ಹೇಳಿ!
ಶೀಘ್ರ, ಪರಿಣಾಮಕಾರಿ
ತಯಾರಕರು
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಫಾರ್ಮಸಿ
SDM AYURVEDA PHARMACY
ISO / GMP CERTIFIED
ಕುತ್ಪಾಡಿ, ಉಡುಪಿ, ಕರ್ನಾಟಕ. M: 8970977513

Lilly A MEDICINE COMPANY
ನಿಮಗೆ ತಿಳಿದಿದೆಯೇ? ಬೊಜ್ಜು ನಿಮ್ಮ ಆರೋಗ್ಯಕ್ಕೆ ಗಂಭೀರ ಅಪಾಯಗಳನ್ನು ಹೆಚ್ಚಿಸಬಹುದು ಎಂದು[1,2]
ಬೊಜ್ಜು ಅಧಿಕ ರಕ್ತದೊತ್ತಡ, ಅಧಿಕ ಕೊಲೆಸ್ಟ್ರಾಲ್, ಹೃದ್ರೋಗ, ಮಧುಮೇಹ ಮತ್ತು ಕೆಲವು ರೀತಿಯ ಕ್ಯಾನ್ಸರ್‌ನಂತಹ ಗಂಭೀರ ಆರೋಗ್ಯ ಅಪಾಯಗಳನ್ನು ಉಂಟುಮಾಡಬಹುದು.[1,2]
ಈಗಲೇ ಕಾರ್ಯಪ್ರವೃತ್ತರಾಗುವ ಸಮಯ. ಇಂದೇ ವೈದ್ಯರೊಂದಿಗೆ ಮಾತನಾಡಿ!
References:
1. Greenway FL. Physiological adaptations to weight loss and factors favouring weight regain. Int J Obes (Lond). 2015;39(8):1188-1196. doi:10.1038/ijo.2015.59
2. Roh E, Choi KM. Hormonal gut-brain signalling for the treatment of obesity. Int J Mol Sci 2023;24(4):3384. doi:10.3390/ijms24043384
PP-MG-IN-0561

ಐಸಿಐಸಿಐ ಬ್ಯಾಂಕ್: ಖಾತೆಯಲ್ಲಿರಬೇಕು ಕನಿಷ್ಠ ₹50 ಸಾವಿರ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ/ಬೆಂಗಳೂರು: ಉಳಿತಾಯ ಖಾತೆಯಲ್ಲಿ ಇರಿಸಬೇಕಿರುವ ಕನಿಷ್ಠ ಮೊತ್ತವನ್ನು ಐಸಿಐಸಿಐ ಬ್ಯಾಂಕ್ ಹೆಚ್ಚು ಮಾಡಿದೆ. ಹೊಸ ನಿಯಮದ ಪ್ರಕಾರ ಐಸಿಐಸಿಐ ಬ್ಯಾಂಕ್‌ನ ಮಹಾನಗರ ಮತ್ತು ನಗರ ಪ್ರದೇಶಗಳ ಗ್ರಾಹಕರು ತಮ್ಮ ಖಾತೆಯಲ್ಲಿ ಇರಿಸಬೇಕಿರುವ ಕನಿಷ್ಠ ಮಾಸಿಕ ಸರಾಸರಿ ಮೊತ್ತ (ಎಂಎಂಎಬಿ) ₹50 ಸಾವಿರ ಆಗಿದೆ.

ಹೊಸ ನಿಯಮವು ಆಗಸ್ಟ್ 1ರ ನಂತರ ತೆರೆದ ಖಾತೆಗಳಿಗೆ ಅನ್ವಯ ಆಗುತ್ತದೆ. ಮಹಾನಗರ ಹಾಗೂ ನಗರ ಪ್ರದೇಶಗಳ ಗ್ರಾಹಕರು ಇದುವರೆಗೆ ತಮ್ಮ ಖಾತೆಗಳಲ್ಲಿ ಮಾಸಿಕ ಸರಾಸರಿ ಮೊತ್ತವಾಗಿ ₹10 ಸಾವಿರ ಇರಿಸಿದ್ದರೆ ಸಾಕಿತ್ತು. ಆಗಸ್ಟ್ 1ಕ್ಕೆ ಮೊದಲು ಖಾತೆ ತೆರೆದಿರುವ ಗ್ರಾಹಕರಿಗೆ ಹಳೆಯ ನಿಯಮವೇ ಅನ್ವಯ ಆಗುತ್ತದೆ.

ಅರೆ ನಗರ ಪ್ರದೇಶಗಳ ಗ್ರಾಹಕರು ಇರಿಸಬೇಕಿರುವ ಮಾಸಿಕ ಕನಿಷ್ಠ ಸರಾಸರಿ ಮೊತ್ತವನ್ನು ₹25 ಸಾವಿರಕ್ಕೆ, ಗ್ರಾಮೀಣ ಪ್ರದೇಶಗಳ ಗ್ರಾಹಕರಿಗೆ ಈ ಮೊತ್ತವನ್ನು ₹10 ಸಾವಿರಕ್ಕೆ ಹೆಚ್ಚು ಮಾಡಲಾಗಿದೆ.

▶6

ಚಿನಕುರುಳಿ ಪ್ರಕಾಶ್ ಶೆಟ್ಟಿ



NAAC GRADE A+ ACCREDITED UNIVERSITY
REVA UNIVERSITY Bengaluru, India
MASTER WHAT MATTERS WITH PURPOSE

Postgraduate Programmes:
M.Com (with Dual Specialisations)
• Accounting & Finance • Finance & Taxation • Taxation & Accounting • Banking & Human Resource • International Business & Human Resource
M.Tech.
• Computer Science &Engineering (Full-time/Part-time)
• VLSI & Embedded Systems (Full-time/Part-time)
• Digital Communications & Networking
• Computer Aided Structural Engineering
• Transportation Engineering & Management
• Construction Technology & Management
• Machine Design
• Power & Energy Systems
M.A.
• English • Journalism & Mass Communication
M.Arch.
• Digital Architecture
MPA | MCA
MBA (with Dual Specialisations)
• Finance • Marketing • Human Resource • Fintech & Business Analytics • Operations • International Business • Banking & Insurance • Healthcare Management • Strategy & Leadership • Entrepreneurship & Family Business Management • Sustainability & Business Innovation
M.Sc.
• Biotechnology • Chemistry • Mathematics • Physics • Microbial Technology • Bioinformatics • Biochemistry • Clinical Psychology • Applied Psychology • Data Science
LL.M
• Law • Criminology
PGCET Codes
M.Tech. (Full Time) - T964 | (Part Time) - T604
MBA - B260 | MCA - C466
Call 90211 90211
Apply Online @ reva.edu.in
OFFICE OF ADMISSIONS
REVA University, Rukmini Knowledge Park, Kattigenahalli, Yelahanka, Bengaluru, Karnataka 560064

ಇದೀಗ Lay's ಹೆಚ್ಚು ಚಿಪ್ಸ್‌ಗಳನ್ನು ಹೊಂದಿದೆ

ಪೊಟ್ಯಾಟೊ ಚಿಪ್ಸ್
Lay's ಎನ್ನುವುದು PepsiCo, Inc. ಕಂಪನಿಯ ನೋಂದಾಯಿತ ಟ್ರೇಡ್ ಮಾರ್ಕ್.
~ಹೇಳಿಕೆಗಳು ಆಂಧ್ರ ಪ್ರದೇಶ, ತೆಲಂಗಾಣ, ಕರ್ನಾಟಕ, ತಮಿಳುನಾಡು & ಕೇರಳಗಳಲ್ಲಿ ಆಯ್ದ Lay's ಪೊಟ್ಯಾಟೊ ಚಿಪ್ (ರೂ.10) ಗಳಲ್ಲಿ ಮಾತ್ರ ಲಭ್ಯವಿದೆ ಮತ್ತು Pecten & Pinna Insights Solutions Pvt Ltd 2025 ಮಾರ್ಚ್ 6ನೇ ಮತ್ತು 31ರ ನಡುವೆ (Lay's ಜೊತೆಗೆ ಹಂಚಿಕೊಂಡ 86% ಮಾರುಕಟ್ಟೆ ವ್ಯಾಪ್ತಿ) ನಡೆಸಿದ ಮಾರುಕಟ್ಟೆ ಸಮೀಕ್ಷೆಯನ್ನು ಆಧರಿಸಿ ನೀಡಲಾಗಿದೆ. ವಿವರಗಳಿಗಾಗಿ www.pepsnacks.com/lays/pos ನೋಡಿ.
#25g ಗ್ರಾಂಗೆ MRP ರೂ.10/- (ಎಲ್ಲಾ ತೆರಿಗೆಗಳನ್ನು ಒಳಗೊಂಡಿದೆ).

ಸೂರ್ಯೋದಯ: 6:07 ಸೂರ್ಯಾಸ್ತ : 6:44 ಚಂದ್ರೋದಯ: ರಾ. 6:57 ಚಂದ್ರಾಸ್ತ: ಬೆ. 5:54 | ಶನಿವಾರದ ಉಷ್ಣಾಂಶ : ಗರಿಷ್ಠ 29° ಕನಿಷ್ಠ 20°

ಭಾನುವಾರದ ಉಷ್ಣಾಂಶ 29° ಗರಿಷ್ಠ 20° ಕನಿಷ್ಠ ಸೋಮವಾರ 29° : 20° ಮಂಗಳವಾರ 29° : 20° ಬುಧವಾರ 29° : 20°

ಭಾನುವಾರ ● ಆಗಸ್ಟ್ 10, 2025

ಪ್ರಜಾವಾಣಿ

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಅಲ್ಲಲ್ಲಿ ಸಾಧಾರಣ ಮಳೆ ಸಾಧ್ಯತೆ

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಲ್ಲಿ ಕಾರ್ಮಿಕರು ಶನಿವಾರ ಸ್ವಚ್ಛತಾ ಕಾರ್ಯದಲ್ಲಿ ತೊಡಗಿದ್ದರು

10 ಸಾವಿರ ಪೊಲೀಸರ ನಿಯೋಜನೆ

ನಗರಕ್ಕೆ ಪ್ರಧಾನಿ ಮೋದಿ ಭೇಟಿ ಇಂದು: ಕಮಿಷನರ್ ನೇತೃತ್ವದಲ್ಲಿ ಭದ್ರತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ನಗರಕ್ಕೆ ಭೇಟಿ ನೀಡುತ್ತಿದ್ದು, ಭದ್ರತೆಗಾಗಿ 10 ಸಾವಿರ ಪೊಲೀಸರನ್ನು ಬಳಸಿಕೊಳ್ಳಲಾಗುತ್ತಿದೆ. ನಗರ ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಸಿಂಗ್ ನೇತೃತ್ವದಲ್ಲಿ ಭದ್ರತಾ ಕ್ರಮ ಕೈಗೊಳ್ಳಲಾಗಿದೆ.

ನಾಲ್ವರು ಜಂಟಿ ಪೊಲೀಸ್ ಕಮಿಷನರ್, 10 ಡಿಸಿಪಿಗಳು, 50 ಎಸಿಪಿಗಳು ಹಾಗೂ 200ಕ್ಕೂ ಹೆಚ್ಚು ಇನ್‌ಸ್ಪೆಕ್ಟರ್‌ಗಳು, 650ಕ್ಕೂ ಹೆಚ್ಚು ಪಿಎಸ್‌ಐಗಳನ್ನು ಭದ್ರತೆಗೆ ಬಳಸಿಕೊಳ್ಳಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

ನಗರ ಸಶಸ್ತ್ರ ಮೀಸಲು ಪಡೆ ಹಾಗೂ ಕೆಎಸ್‌ಆರ್‌ಪಿ ತುಕಡಿಗಳನ್ನೂ ಅಲ್ಲಲ್ಲಿ ನಿಯೋಜಿಸಲಾಗಿದೆ.

50 ಚೆಕ್‌ಪೋಸ್ಟ್ ಸ್ಥಾಪನೆ: ಜಯನಗರ ಮತ್ತು ಜೆಪಿ ನಗರದ ಬಳಿ 50 ಚೆಕ್‌ಪೋಸ್ಟ್‌ಗಳನ್ನು ಸ್ಥಾಪಿಸಲಾಗಿದೆ. ರಾಗಿಗುಡ್ಡ ಮೆಟ್ರೊ ನಿಲ್ದಾಣದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಹಳದಿ ಮಾರ್ಗ ಉದ್ಘಾಟಿಸಲಿದ್ದಾರೆ.

ನಗರ ಪೊಲೀಸ್ ಕಮಿಷನರ್ ಹಾಗೂ ಹಿರಿಯ ಅಧಿಕಾರಿಗಳು ರಾಗಿಗುಡ್ಡ ಮೆಟ್ರೊ ನಿಲ್ದಾಣಕ್ಕೆ ಶನಿವಾರ ಭೇಟಿ ನೀಡಿ ಭದ್ರತಾ ಕ್ರಮಗಳನ್ನು ಪರಿಶೀಲನೆ ನಡೆಸಿದರು.

ಸ್ಥಳದಲ್ಲಿ ಪೊಲೀಸ್ ವಾಹನಗಳು, ಆಂಬ್ಯುಲೆನ್ಸ್‌ಗಳು ಮತ್ತು ಅಗ್ನಿಶಾಮಕ ದಳದ ವಾಹನಗಳನ್ನು ಮುನ್ನೆಚ್ಚರಿಕಾ ಕ್ರಮವಾಗಿ ಮೆಟ್ರೊ ನಿಲ್ದಾಣ ಸುತ್ತಮುತ್ತ ಇರಿಸಲಾಗಿದೆ.

34 ನಾಕಾಬಂದಿ ರಚನೆ: ನಗರದ 34 ಕಡೆ ನಾಕಾಬಂದಿ ಸ್ಥಾಪಿಸಿ ಅನುಮಾನ ಬಂದ ವ್ಯಕ್ತಿಗಳು ಮತ್ತು ವಾಹನ ಸವಾರರನ್ನು ತಡೆದು ವಿಚಾರಣೆ ನಡೆಸಲಾಗುತ್ತಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಪೂರ್ವ ವಿಭಾಗದ ಡಿಸಿಪಿ ವಲಯದಲ್ಲಿ 6, ಕೇಂದ್ರ ವಿಭಾಗದಲ್ಲಿ 6, ಪಶ್ಚಿಮ ವಿಭಾಗದಲ್ಲಿ 10 ಮತ್ತು ಉತ್ತರ ವಿಭಾಗದಲ್ಲಿ 10 ನಾಕಾಬಂದಿ ನ್ನು ಸ್ಥಾಪನೆ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣಕ್ಕೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಭಾನುವಾರ ಭೇಟಿ ನೀಡುತ್ತಿದ್ದು ಪೊಲೀಸ್ ಭದ್ರತೆ ಹೆಚ್ಚಿಸಲಾಗಿದೆ ಚಿತ್ರಗಳು: ಎಂ.ಎಸ್.ಮಂಜುನಾಥ್

ಕೆಎಸ್‌ಆರ್: 2ನೇ ಪ್ರವೇಶದ್ವಾರ ಬಂದ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು–ಬೆಳಗಾವಿ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲಿಗೆ ಚಾಲನೆ ನೀಡಲು ಪ್ರಧಾನಿ ನರೇಂದ್ರ ಮೋದಿ ಅವರು ಆ.10ರಂದು ನಗರಕ್ಕೆ ಆಗಮಿಸುತ್ತಿರುವ ಕಾರಣ ಕೆಎಸ್‌ಆರ್ ರೈಲು ನಿಲ್ದಾಣದ ಎರಡನೇ ಪ್ರವೇಶದ್ವಾರವನ್ನು ತಾತ್ಕಾಲಿಕವಾಗಿ ಮುಚ್ಚಲು ನೈರುತ್ಯ ರೈಲ್ವೆ ನಿರ್ಧರಿಸಿದೆ. ಅಲ್ಲದೇ ಜನದಟ್ಟಣೆ ಕಡಿಮೆ ಮಾಡಲು ಹಲವು ರೈಲುಗಳ ಮಾರ್ಗ ಬದಲಾವಣೆ, ರದ್ದು, ವಿಳಂಬ ಸಂಚಾರಕ್ಕೆ ಕ್ರಮ ಕೈಗೊಂಡಿದೆ.

ಶನಿವಾರ ಸಂಜೆ 4ಕ್ಕೆ ಎರಡನೇ ಪ್ರವೇಶದ್ವಾರ ಮುಚ್ಚಲಾಗಿದೆ. ಆ.10ರಂದು ಮಧ್ಯಾಹ್ನ 2ರ ನಂತರ ತೆರೆಯಲಾಗುವುದು. ಅಲ್ಲಿವರೆಗೆ ಎಲ್ಲ ಪ್ಲಾಟ್‌ಫಾರ್ಮ್‌ಗಳನ್ನು ಪ್ರವೇಶಿಸಲು ಪ್ರಯಾಣಿಕರು ನಿಲ್ದಾಣದ ಮುಖ್ಯ ಪ್ರವೇಶ ದ್ವಾರವನ್ನು (ಮುಂಭಾಗ) ಬಳಸಬೇಕು ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ಕೋರಿದ್ದಾರೆ.

ರೈಲುಗಳ ಬದಲಾವಣೆ: ಆ.10ರಂದು ಕೆಎಸ್‌ಆರ್ ಬೆಂಗಳೂರು - ಅಶೋಕಪುರ- ಕೆಎಸ್‌ಆರ್ ಬೆಂಗಳೂರು, ಕೆಎಸ್‌ಆರ್ ಬೆಂಗಳೂರು - ತುಮಕೂರು–ಕೆಎಸ್‌ಆರ್ ಬೆಂಗಳೂರು, ಕೆಎಸ್‌ಆರ್ ಬೆಂಗಳೂರು - ಚನ್ನಪಟ್ಟಣ–ಕೆಎಸ್‌ಆರ್ ಬೆಂಗಳೂರು ರೈಲುಗಳನ್ನು ರದ್ದು ಮಾಡಲಾಗಿದೆ.

ಮಾರಿಕುಪ್ಪಂ ರೈಲು ಕಂಟೋನ್ಮೆಂಟ್ ರೈಲು ನಿಲ್ದಾಣದಲ್ಲಿಯೇ ಸಂಚಾರ ಅಂತ್ಯಗೊಳಿಸಲಿದೆ. ಅಲ್ಲಿಂದಲೇ ವಾಪಸ್ ಮಾರಿಕುಪ್ಪಂಗೆ ಹೊರಡಲಿದೆ. ಕುಪ್ಪಂ ರೈಲು ಕಂಟೋನ್ಮೆಂಟ್‌ನಿಂದ ಹೊರಡಲಿದೆ. ಮೈಸೂರು - ಕೆಎಸ್‌ಆರ್ ಬೆಂಗಳೂರು ಚಾಮುಂಡಿ ಎಕ್ಸ್‌ಪ್ರೆಸ್ ಕೆಂಗೇರಿಯಲ್ಲಿ ಸಂಚಾರ ಅಂತ್ಯಗೊಳ್ಳಲಿದೆ. ಬೆಂಗಳೂರು - ಮೈಸೂರು ರಾಜ್ಯ ರಾಣಿ ಎಕ್ಸ್‌ಪ್ರೆಸ್ ಕೆಂಗೇರಿಯಿಂದ ಆರಂಭಗೊಳ್ಳಲಿದೆ. ವೈಟ್‌ಫೀಲ್ಡ್ - ಕೆಎಸ್‌ಆರ್ ಬೆಂಗಳೂರು, ಕೆಎಸ್‌ಆರ್ ಬೆಂಗಳೂರು - ಬಂಗಾರಪೇಟೆ ರೈಲುಗಳು ಕಂಟೋನ್ಮೆಂಟ್‌ನಿಂದ ಹೊರಡಲಿವೆ. ಹಿಂದೂಪುರ - ಕೆಎಸ್‌ಆರ್ ಬೆಂಗಳೂರು ಯಲಹಂಕದಲ್ಲಿ ಕೊನೆಗೊಳ್ಳಲಿದೆ. ಕೆಎಸ್‌ಆರ್ ಬೆಂಗಳೂರು - ಜೋಲಾರಪೇಟೆ ರೈಲು ಕಂಟೋನ್ಮೆಂಟ್‌ನಲ್ಲಿ ಕೊನೆಗೊಳ್ಳಲಿದೆ. ಅರಸೀಕೆರೆ - ಕೆಎಸ್‌ಆರ್ ಬೆಂಗಳೂರು ಚಿಕ್ಕಬಾಣಾವರದಲ್ಲಿ ಕೊನೆಗೊಳ್ಳಲಿದೆ.

ಶಿವಮೊಗ್ಗ ಪಟ್ಟಣ - ಕೆಎಸ್‌ಆರ್ ಬೆಂಗಳೂರು, ಅಶೋಕಪುರಂ - ಕೆಎಸ್‌ಆರ್ ಬೆಂಗಳೂರು, ಎಂಜಿಆರ್ ಚೆನ್ನೈ ಸೆಂಟ್ರಲ್ - ಮೈಸೂರು ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲುಗಳು ಕ್ರಮವಾಗಿ 90 ನಿಮಿಷ, 150 ನಿಮಿಷ ಮತ್ತು 90 ನಿಮಿಷ ವಿಳಂಬವಾಗಿ ಹೊರಡುವಂತೆ ಮರು ನಿಗದಿಪಡಿಸಲಾಗಿದೆ.

ಅಶೋಕಪುರಂ - ಕೆಎಸ್‌ಆರ್ ಬೆಂಗಳೂರು ಮಾಲ್ಗುಡಿ ಎಕ್ಸ್‌ಪ್ರೆಸ್ ರೈಲು ಮಾರ್ಗ ಮಧ್ಯೆ 45 ನಿಮಿಷ, ಎಂಜಿಆರ್ ಚೆನ್ನೈ ಸೆಂಟ್ರಲ್ - ಮೈಸೂರು ಶತಾಬ್ದಿ ಎಕ್ಸ್‌ಪ್ರೆಸ್ ರೈಲು ಮಾರ್ಗಮಧ್ಯೆ 30 ನಿಮಿಷ ನಿಯಂತ್ರಣಗೊಳ್ಳಲಿದೆ. ಮೈಸೂರು - ಬೆಳಗಾವಿ ವಿಶ್ವಮಾನವ ಎಕ್ಸ್‌ಪ್ರೆಸ್ ರೈಲನ್ನು ಪಾಂಡವಪುರದಿಂದ ತಿಪಟೂರು ವರೆಗಿನ ನಿಲ್ದಾಣಗಳ ಬದಲಿಗೆ ಕೃಷ್ಣರಾಜನಗರ, ಹಾಸನ ಮತ್ತು ಅರಸೀಕೆರೆ ಮೂಲಕ ಸಂಚರಿಸಲಿದೆ.

ಮೋದಿ ಆಗಮನ: ಸಂಚಾರ ಮಾರ್ಗ ಬದಲಾವಣೆ

ಬೆಂಗಳೂರು: ‘ನಮ್ಮ ಮೆಟ್ರೊ’ದ ಹಳದಿ ಮಾರ್ಗದ ಉದ್ಘಾಟನೆಗೆ ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ನಗರಕ್ಕೆ ಆಗಮಿಸುತ್ತಿದ್ದು, ಹಲವು ಭಾಗಗಳಲ್ಲಿ ಸಂಚಾರ ಮಾರ್ಗ ಬದಲಾವಣೆ ಮಾಡಲಾಗಿದೆ.

ಜಯನಗರದ ಮಾರೇನಹಳ್ಳಿ ಮುಖ್ಯ ರಸ್ತೆಯಲ್ಲಿರುವ ರಾಗಿಗುಡ್ಡ ಮೆಟ್ರೊ ನಿಲ್ದಾಣ ಬಳಿ ಹಳದಿ ಮೆಟ್ರೊ ಮಾರ್ಗದ ಉದ್ಘಾಟನಾ ಕಾರ್ಯಕ್ರಮ ಭಾನುವಾರ ನಡೆಯಲಿದೆ. ಸಾರ್ವಜನಿಕರ ಸುಗಮ ಸಂಚಾರಕ್ಕಾಗಿ ಸಂಚಾರ ಮಾರ್ಪಾಡು ಮಾಡಲಾಗಿದೆ ಎಂದು ಸಂಚಾರ ವಿಭಾಗದ ಪೊಲೀಸರು ತಿಳಿಸಿದ್ದಾರೆ.

ಎಲ್ಲೆಲ್ಲಿ ವಾಹನ ಸಂಚಾರ ನಿರ್ಬಂಧ?:

- ನೈಸ್ ರಸ್ತೆ ಮಾರ್ಗವಾಗಿ ಎಲೆಕ್ಟ್ರಾನಿಕ್ ಸಿಟಿ ಟೋಲ್ ಕಡೆಗೆ ಹೋಗುವ ವಾಹನಗಳನ್ನು ಬೆಳಿಗ್ಗೆ 10ರಿಂದ ಮಧ್ಯಾಹ್ನ 2.30 ರವಗೆ ನಿರ್ಬಂಧಿಸಲಾಗಿದೆ.
- ಬನ್ನೇರುಘಟ್ಟ ರಸ್ತೆಯ ನೈಸ್ ಟೋಲ್‌ನಿಂದ ಎಲೆಕ್ಟ್ರಾನಿಕ್ ಸಿಟಿ ಟೋಲ್‌ವರೆಗೆ
- ಕನಕಪುರ ರಸ್ತೆಯ ನೈಸ್ ಟೋಲ್‌ನಿಂದ ಎಲೆಕ್ಟ್ರಾನಿಕ್ ಸಿಟಿ ಟೋಲ್ ಕಡೆಗೆ
- ನಾಯಂಡಹಳ್ಳಿಯ ನೈಸ್ ಟೋಲ್ ಕಡೆಯಿಂದ ಎಲೆಕ್ಟ್ರಾನಿಕ್ ಸಿಟಿ ಟೋಲ್ ಕಡೆಗೆ
- ಸೋಂಪುರ ನೈಸ್ ಟೋಲ್‌ನಿಂದ ಎಲೆಕ್ಟ್ರಾನಿಕ್ ಸಿಟಿ ಟೋಲ್ ಕಡೆಗೆ
- ಪಿಇಎಸ್ ಕಾಲೇಜು ನೈಸ್ ಟೋಲ್‌ನಿಂದ ಎಲೆಕ್ಟ್ರಾನಿಕ್ ಸಿಟಿ ಟೋಲ್
- ಕೆಂಗೇರಿ ನೈಸ್ ಟೋಲ್‌ನಿಂದ ಎಲೆಕ್ಟ್ರಾನಿಕ್ ಸಿಟಿ ಟೋಲ್ ಕಡೆಗೆ
- ಮಾಗಡಿ ರಸ್ತೆಯ ನೈಸ್ ಟೋಲ್‌ನಿಂದ ಎಲೆಕ್ಟ್ರಾನಿಕ್ ಸಿಟಿ ಟೋಲ್ ಕಡೆಗೆ
- ಮಾದಾವರ ರಸ್ತೆ ನೈಸ್ ಟೋಲ್‌ನಿಂದ ಎಲೆಕ್ಟ್ರಾನಿಕ್ ಸಿಟಿ ಟೋಲ್ ಕಡೆಗೆ

ಸಂಚಾರ ನಿರ್ಬಂಧ (ಬೆಳಿಗ್ಗೆ 9ರಿಂದ ಮಧ್ಯಾಹ್ನ 1ರ ವರೆಗೆ ಸಂಚಾರ ನಿರ್ಬಂಧ)

- ಕೆಎಸ್‌ಆರ್ ರೈಲು ನಿಲ್ದಾಣದಿಂದ ಖೋಡೆ ಕೆಳಸೇತುವೆ, ಖೋಡೆ ವೃತ್ತದಿಂದ ಮಹಾರಾಣಿ ಸೇತುವೆ ವರೆಗೆ
- ಶಾಂತಲಾ ಜಂಕ್ಷನ್ ಕಡೆಯಿಂದ ಖೋಡೆ ಜಂಕ್ಷನ್‌ವರೆಗೆ
- ಮೈಸೂರು ಬ್ಯಾಂಕ್ ಕಡೆಯಿಂದ ಚಾಲುಕ್ಯ ಸರ್ಕಲ್‌ವರೆಗೆ
- ಕಾಳಿದಾಸ ರಸ್ತೆ ಕನಕದಾಸ ಜಂಕ್ಷನ್ ಕಡೆಯಿಂದ ಸ್ವಾತಂತ್ರ್ಯ ಉದ್ಯಾನದ ವರೆಗೆ
- ಮೌರ್ಯ/ಸುಬ್ಬಣ್ಣ ಜಂಕ್ಷನ್‌ನಿಂದ ಸ್ವಾತಂತ್ರ್ಯ ಉದ್ಯಾನದ ವರೆಗೆ
- ಲಾಲ್‌ಬಾಗ್ ಮುಖ್ಯದ್ವಾರದಿಂದ ಲಾಲ್‌ಬಾಗ್ ಪಶ್ಚಿಮದ್ವಾರದ ವರೆಗೆ

ಪರ್ಯಾಯ ಮಾರ್ಗ

- ಎಲ್‌ಟಿಪಿ ರಸ್ತೆ, ಕಾಟನ್‌ಪೇಟೆ ಮುಖ್ಯರಸ್ತೆ, ಮೈಸೂರು ರಸ್ತೆ, ಮಾಗಡಿ ಮುಖ್ಯರಸ್ತೆ ಮೂಲಕ ಸಂಚರಿಸಬಹುದು
- ಎಲ್‌ಟಿಪಿ ರಸ್ತೆ ಮತ್ತು ಕಾಟನ್‌ಪೇಟೆ ಮುಖ್ಯರಸ್ತೆ ಮೂಲಕ ಸಂಚರಿಸಬಹುದು
- ಎಲ್‌ಟಿಪಿ ರಸ್ತೆ ಮತ್ತು ಕಾಟನ್‌ಪೇಟೆ ಮುಖ್ಯರಸ್ತೆ ಮೂಲಕ ಸಂಚರಿಸಬಹುದು
- ಕೆಜಿ ರಸ್ತೆ, ಮೈಸೂರು ಬ್ಯಾಂಕ್ ಜಂಕ್ಷನ್, ಸಾಗರ್ ಜಂಕ್ಷನ್, ಕೆಜಿ ಜಂಕ್ಷನ್, ಎಲೈಟ್, ಟಿಬಿ ರಸ್ತೆ, ರಾಜೀವ್ ಗಾಂಧಿ ಸರ್ಕಲ್ ಮೂಲಕ ಸಂಚರಿಸಬಹುದು
- ಕನಕದಾಸ ಜಂಕ್ಷನ್‌ನಲ್ಲಿ ಬಲಕ್ಕೆ ತಿರುವು ಪಡೆದು ಸಾಗರ ಜಂಕ್ಷನ್ ಕಡೆ ಸಂಚರಿಸಬಹುದು
- ಸುಬ್ಬಣ್ಣ ಜಂಕ್ಷನ್‌ನಿಂದ ಬಲ ತಿರುವು ಪಡೆದು ಆನಂದ್‌ರಾವ್ ಸರ್ಕಲ್ ಕಡೆಗೆ ಸಂಚರಿಸಬಹುದು
- ಲಾಲ್‌ಬಾಗ್ ಮುಖ್ಯದ್ವಾರದ ಮುಂದೆ ಎಡ ತಿರುವು ಅಥವಾ ಜೆ.ಸಿ ರಸ್ತೆಯಲ್ಲಿ ಬಲಕ್ಕೆ ತಿರುವು ಪಡೆದು ಸಂಚರಿಸಬಹುದು

ಚಿತ್ರಕಲಾ ಸ್ಪರ್ಧೆ: ಮೇಧಾ ಉಮೇಶ್ ವಿಜೇತ

ಮೇಧಾ ಉಮೇಶ್

ಬೆಂಗಳೂರು: ಮುಂಬೈನ ದಿ ಹೋಮಿ ಭಾಭಾ ಸೆಂಟರ್ ಫಾರ್ ಸೈನ್ಸ್ ಎಜುಕೇಷನ್ (ಎಚ್‌ಬಿಸಿಎಸ್‌ಇ) 9 ರಿಂದ 12 ನೇ ತರಗತಿಯ ಶಾಲಾ–ಕಾಲೇಜು ವಿದ್ಯಾರ್ಥಿಗಳಿಗಾಗಿ ‘ಕಾಸ್ಮಿಕ್ ಕ್ಯಾನ್ವಾಸ್’ ಶೀರ್ಷಿಕೆಯಡಿ ಆಯೋಜಿಸಿದ್ದ ರಾಷ್ಟ್ರ ಮಟ್ಟದ ಚಿತ್ರಕಲಾ ಸ್ಪರ್ಧೆಯಲ್ಲಿ ಮೇಧಾ ಉಮೇಶ್ ಎರಡನೇ ವಿಭಾಗದಲ್ಲಿ ವಿಜೇತರಾಗಿದ್ದಾರೆ.

ಅಧ್ಯಯನದಲ್ಲೂ ಮುಂದಿರುವ ಮೇಧಾ ಈ ಹಿಂದೆಯೂ ಚಿತ್ರಕಲೆ, ರಸಪ್ರಶ್ನೆ, ಭಾಷಣ, ಚರ್ಚಾ ಸ್ಪರ್ಧೆ, ಸಂಗೀತ ಹೀಗೆ ವಿವಿಧ ಸ್ಪರ್ಧೆಗಳಲ್ಲಿ ರಾಷ್ಟ್ರೀಯ, ಅಂತರಾಷ್ಟ್ರೀಯ ಸೇರಿದಂತೆ ವಿವಿಧ ಹಂತಗಳಲ್ಲಿ 300ಕ್ಕೂ ಅಧಿಕ ಪ್ರಶಸ್ತಿಗಳನ್ನು ಪಡದಿದ್ದಾರೆ.

‘ಆಗಸ್ಟ್ 11ರಿಂದ 21ರವರೆಗೆ ಮುಂಬೈನಲ್ಲಿ ನಡೆಯಲಿರುವ 18ನೇ ಇಂಟರ್‌ನ್ಯಾಷನಲ್ ಒಲಿಂಪಿಯಾಡ್ ಆನ್ ಆಸ್ಟ್ರೊನಮಿ ಆ್ಯಂಡ್ ಆಸ್ಟ್ರೊಫಿಸಿಕ್ಸ್(ಐಒಎಎ)–2025’ರ ಭಾಗವಾಗಿ ಮೂರು ವಿಭಾಗಗಳಲ್ಲಿ ಈ ಚಿತ್ರಕಲಾ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಎಚ್‌ಬಿಸಿಎಸ್‌ಇ, ಮುಂಬೈನ ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಫಂಡಮೆಂಟಲ್ ರೀಸರ್ಚ್‌ನ ಭಾಗವಾಗಿದೆ.

ನಮ್ಮ ಮೆಟ್ರೊ ಯಾವುದೇ ಪಕ್ಷದ ಸ್ವತ್ತಲ್ಲ: ರಾಮಲಿಂಗಾರೆಡ್ಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಮ್ಮ ಮೆಟ್ರೊ ಆರಂಭವಾಗಿದ್ದು ಯಾವಾಗ ಎಂಬ ಇತಿಹಾಸವೇ ಬಿಜೆಪಿಯವರಿಗೆ ಗೊತ್ತಿಲ್ಲ. ನಮ್ಮ ಮೆಟ್ರೊ ಜನರ ಸಂಸ್ಥೆಯೇ ಹೊರತು, ಯಾವುದೇ ಪಕ್ಷದ ಸ್ವತ್ತಲ್ಲ. ಆದರೆ, ಬಿಜೆಪಿಯವರಿಗೆ ಕೆಲಸಕ್ಕಿಂತ ಪ್ರಚಾರದ ಹುಚ್ಚು ಜಾಸ್ತಿ’ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಟೀಕಿಸಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, ‘ನಮ್ಮ ಮೆಟ್ರೊ ಯೋಜನೆಯಲ್ಲಿ ರಾಜ್ಯ ಸರ್ಕಾರದ ದೊಡ್ಡ ಪಾಲಿದೆ. ಈ ಯೋಜನೆಯ ಹಂತ 1ರಲ್ಲಿ ಕರ್ನಾಟಕ ಸರ್ಕಾರ ಶೇ 30 (ಜಮೀನೂ ಸೇರಿ), ಕೇಂದ್ರ ಶೇ 25, ಉಳಿದ ಶೇ 45ರಷ್ಟನ್ನು ಸಾಲದ ರೂಪದಲ್ಲಿ ಮೆಟ್ರೊ ಸಂಸ್ಥೆ ಪಡೆದಿದೆ. ಹಂತ 2ರಲ್ಲಿ ಕರ್ನಾಟಕ ಶೇ 30 ಮತ್ತು ಜಮೀನು ಜೊತೆಗೆ, ಇತರ ವೆಚ್ಚವನ್ನು ರಾಜ್ಯ ಸರ್ಕಾರ ಭರಿಸಿದೆ. ಇಲ್ಲಿ ಕೇಂದ್ರದ ಪಾಲು ಕೇವಲ ಶೇ 20. ಉಳಿದ ಶೇ 50ರಷ್ಟು ಮೊತ್ತವನ್ನು ಮೆಟ್ರೊ ಸಂಸ್ಥೆ ಸಾಲ ಪಡೆದಿದೆ’ ಎಂದರು.

ರಾಮಲಿಂಗಾ ರೆಡ್ಡಿ

‘ರಾಜ್ಯ ಸರ್ಕಾರದಿಂದ ಯೋಜನೆ ಅನುಷ್ಠಾನ ವಿಳಂಬವಾಗುತ್ತಿದೆ ಎಂದು ಆರೋಪಿಸುವ ಬಿಜೆಪಿ ನಾಯಕರು, ಯಾವ ಕಾರಣಕ್ಕೆ ವಿಳಂಬವಾಗುತ್ತಿದೆ ಎಂದು ಎಂದಾದರೂ ವಿಚಾರಿಸಿದ್ದಾರೆಯೇ? ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ಸಂಸದ ತೇಜಸ್ವಿ ಸೂರ್ಯ ಸೇರಿದಂತೆ ಅನೇಕರು ಇಡೀ ಮೆಟ್ರೊ ಯೋಜನೆಯನ್ನು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವೇ ಮಾಡಿರುವಂತೆ ಪ್ರಚಾರ ಪಡೆಯುತ್ತಿದ್ದಾರೆ. ಅಲ್ಲದೆ, ರಾಜ್ಯ ಸರ್ಕಾರದ ವಿರುದ್ಧ ಟೀಕೆ ಮಾಡುತ್ತಿದ್ದಾರೆ’ ಎಂದರು.

‘ಯೋಜನೆ ವಿಳಂಬದಿಂದಾಗಿ ಒಂದು ಕಿ.ಮೀಗೆ ₹400 ಕೋಟಿ ನಷ್ಟವಾಗಿದೆ’ ಎಂಬ ಬಿಜೆಪಿ ಆರೋಪಕ್ಕೆ ಉತ್ತರಿಸಿದ ಸಚಿವರು, ‘ರಾಜ್ಯ ಸರ್ಕಾರದ ಜೊತೆಗೆ ಕೇಂದ್ರ ಸರ್ಕಾರಕ್ಕೂ ಜವಾಬ್ದಾರಿ ಇದೆಯಲ್ಲವೇ? ಬೋಗಿಗಳು ಬರಲು ತಡ ಆಗಿರುವುದು ಯಾರಿಂದ? ಪರಿಸರ ಇಲಾಖೆಯ ಅನುಮತಿ ನೀಡುವವರು ಯಾರು? ಎಲ್ಲ ಅನುಮತಿಗಳನ್ನು ಕೇಂದ್ರ ಸರ್ಕಾರ ನೀಡಬೇಕಲ್ಲವೇ’ ಎಂದರು.

‘ರೈಲ್ವೆ ಇಲಾಖೆ ಎಲ್ಲ ಯೋಜನೆಗಳಲ್ಲಿ ರಾಜ್ಯ ಸರ್ಕಾರ ಜಮೀನು ನೀಡುವ ಜೊತೆಗೆ, ವೆಚ್ಚದ ಶೇ 50 ಪಾಲು ನೀಡುತ್ತಿದೆ. ಆದರೆ, ಬಾವುಟ ಹಾರಿಸಲು ದೆಹಲಿಯಿಂದ ಬರುತ್ತಾರೆ. ರಾಜ್ಯ ಸರ್ಕಾರಕ್ಕೆ ಆಹ್ವಾನವನ್ನೇ ನೀಡುವುದಿಲ್ಲ’ ಎಂದರು.

ಕೆಪಿಸಿಸಿ ಮಾಧ್ಯಮ ವಿಭಾಗದ ಮುಖ್ಯಸ್ಥ ರಮೇಶ್ ಬಾಬು, ಕಾಂಗ್ರೆಸ್ ಮುಖಂಡರಾದ ಕೃಷ್ಣಂ ರಾಜು ಇದ್ದರು.

‘ರಾಜ್ಯದ ಪಾಲೇ ಹೆಚ್ಚು’

‘ನಮ್ಮ ಮೆಟ್ರೊದ ಹಂತ 3ರಲ್ಲಿ ಕರ್ನಾಟಕ ಶೇ 20 ಅನುದಾನ, ಸಂಪೂರ್ಣ ಜಮೀನು ಮತ್ತು ಪುನರ್ವಸತಿ ವೆಚ್ಚ, ಕೇಂದ್ರ ಸರ್ಕಾರ ಶೇ 20, ಉಳಿದ ಶೇ 60 ಅನುದಾನವನ್ನು ಮೆಟ್ರೊ ಸಂಸ್ಥೆ ಸಾಲವಾಗಿ ಪಡೆದಿದೆ. ಈ ಸಾಲಕ್ಕೆ ರಾಜ್ಯ ಸರ್ಕಾರ ಖಾತರಿ ನೀಡಿದೆ’ ಎಂದು ರಾಮಲಿಂಗಾರೆಡ್ಡಿ ವಿವರಿಸಿದರು.

‘ಮೆಟ್ರೊ ಒಟ್ಟಾರೆ ಕಾಮಗಾರಿಗೆ ಈವರೆಗೆ ರಾಜ್ಯ ಸರ್ಕಾರ ₹ 24,064.30 ಕೋಟಿ ನೀಡಿದರೆ, ಕೇಂದ್ರ ಸರ್ಕಾರ ₹ 17,803.85 ಕೋಟಿ ನೀಡಿದೆ. ಮೆಟ್ರೊ ಸಂಸ್ಥೆ ₹ 43,5498.53 ಕೋಟಿ ಸಾಲ ಮಾಡಿದೆ’ ಎಂದರು.

ಮುಖ್ಯಾಂಶಗಳು

- ನಮ್ಮ ಮೆಟ್ರೊ ಇತಿಹಾಸವೇ ಬಿಜೆಪಿಗರಿಗೆ ಗೊತ್ತಿಲ್ಲ
- ಅವರಿಗೆ ಪ್ರಚಾರದ ಹುಚ್ಚು

‘ಕಾಡುವ ಕಿ.ರಂ’ ಕಾರ್ಯಕ್ರಮದಲ್ಲಿ ಪುರುಷೋತ್ತಮ ಬಿಳಿಮಲೆ

ಸಾಹಿತ್ಯ ಲೋಕದ ಜಂಗಮ ಕಿ.ರಂ.

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಾಹಿತ್ಯ, ಕಾವ್ಯ ಮತ್ತು ಸಂಸ್ಕೃತಿ ಚಿಂತನೆಯನ್ನು ಕಾವ್ಯಾಸಕ್ತರಿಗೆ, ವಿದ್ಯಾರ್ಥಿಗಳಿಗೆ ಪಸರಿಸಿದ ಕಿ.ರಂ. ಜಂಗಮನಂತೆ ಬದುಕಿದರು’ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ತಿಳಿಸಿದರು.

ಜನಸಂಸ್ಕೃತಿ ಪ್ರತಿಷ್ಠಾನ, ಬೆಂಗಳೂರು ಆರ್ಟ್ ಫೌಂಡೇಷನ್ ಮತ್ತು ಕಿ.ರಂ. ಪ್ರಕಾಶನದ ಸಹಯೋಗದಲ್ಲಿ ವಿಮರ್ಶಕ ಪ್ರೊ.ಕಿ.ರಂ.ನಾಗರಾಜ ಅವರ ನೆನಪಿನಲ್ಲಿ ಆಯೋಜಿಸಿದ್ದ ‘ಕಾಡುವ ಕಿ.ರಂ. ಅಹೋರಾತ್ರಿ’ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

‘ಕಿ.ರಂ. ಅವರು ಹೆಚ್ಚು ಬರೆಯದಿದ್ದರೂ ದಶಕಗಳ ಸಾಹಿತ್ಯಕ್ಕೆ ಬೇಕಾದ ಚಿಂತನೆ, ಹೊಸ ಹೊಳಹುಗಳನ್ನು ಬಿಟ್ಟು ಹೋಗಿದ್ದಾರೆ’ ಎಂದರು.

ಕಲಾವಿದ ಎಂ.ಎಸ್ ಮೂರ್ತಿ ‘ಹಳಗನ್ನಡ, ಹೊಸಗನ್ನಡ ಸಾಹಿತ್ಯಗಳೆರಡನ್ನು ಸಮನ್ವಯಗೊಳಿಸಿ ಹೊಸ ಒಳನೋಟಗಳನ್ನು ನೀಡಿದವರು ಕಿ.ರಂ. ಅವರ ಚಿಂತನೆಗಳು ಇಂದಿಗೂ ಜೀವಂತ’ ಎಂದು ಬಣ್ಣಿಸಿದರು.

ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾದ ಎಲ್.ಎನ್. ಮುಕುಂದರಾಜ್ ಕಾವ್ಯವಾಚನ ಮಾಡಿದರು. ಕಾರ್ಯಕ್ರಮದಲ್ಲಿ ‘ಕಾಡುವ ಕಿ.ರಂ. ಹೊಸ ಕವಿತೆ 2025’ ಪುಸ್ತಕ ಜನಾರ್ಪಣೆಗೊಳಿಸಲಾಯಿತು. ವಿವಿಧ ಕ್ಷೇತ್ರಗಳ ಗಣ್ಯರಿಗೆ ಕಿ.ರಂ. ಪ್ರಶಸ್ತಿ ನೀಡಿ ಗೌರವಿಸಲಾಯಿತು. ಆಲ್ಕೆರೆ ಶಿವಕುಮಾರ್ ಮತ್ತು ಸಂಗಡಿಗರು ಜನಪದ ಗಾಯನವನ್ನು ಪ್ರಸ್ತುತಪಡಿಸಿದರು

ಕಿ.ರಂ.ನಾಗರಾಜ ರಚನೆಯ ‘ನೀಗಿಕೊಂಡ’ ಸಂಸ ನಾಟಕ ಪ್ರದರ್ಶನಗೊಂಡಿತು. ನಂತರ ಅಹೋರಾತ್ರಿ ಚರ್ಚೆ, ಕವಿಗೋಷ್ಠಿ, ಜನಪದ ಕಾವ್ಯ ಗಾಯನ ನಡೆದವು.

‘ಕಾಡುವ ಕಿರಂ’ ಅಹೋರಾತ್ರಿ’ ಕಾರ್ಯಕ್ರಮದಲ್ಲಿ ಎಂ. ಗೋಪಾಲ್, ಎಸ್. ಶ್ರೀನಿವಾಸ ನಟೇಕರ್, ಕೂಡ್ಲೂರು ವೆಂಕಟಪ್ಪ, ಎಂ. ಉಷಾ, ಪ್ರೊ.ಎಂ.ಜಿ.ಚಂದ್ರಶೇಖರಯ್ಯ ಹಾಗೂ ಇ.ನಾರಾಯಣ್ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಪ್ರದೀಪ್ ಮಾಲ್ಗುಡಿ, ಅರುಣ್, ಕೆ.ಎನ್ ಕವನ , ಎಲ್ ಎನ್ ಮುಕುಂದರಾಜ್ ಎಂ. ಎಸ್ ಮೂರ್ತಿ ಕೋಟಿಗಾನಹಳ್ಳಿ ರಾಮಯ್ಯ, ನರಸಿಂಹಮೂರ್ತಿ ಮತ್ತು ಎಸ್ ಮಂಜುನಾಥ್ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ರಕ್ಷಾ ಬಂಧನ

ಪ್ರಜಾವಾಣಿ ಚಿತ್ರ: ಕಿಶೋರ್ ಕುಮಾರ್ ಬೋಳಾರ್

ರಕ್ಷಾ ಬಂಧನ ಹಬ್ಬದ ಪ್ರಯುಕ್ತ ಶ್ರೀನಿವಾಸ ನಗರದ ಮನೆಯೊಂದರಲ್ಲಿ ಬಾಲಕಿಯರು ಸಹೋದರರಿಗೆ ಶನಿವಾರ ರಾಖಿ ಕಟ್ಟಿ ಸಂಭ್ರಮಿಸಿದರು

ಕಪ್ಪುಪಟ್ಟಿಗೆ ಗುತ್ತಿಗೆದಾರ

ಬೆಂಗಳೂರು: ನಕಲಿ ಕಾಮಗಾರಿ ಪ್ರಮಾಣ ಪತ್ರ ಸಲ್ಲಿಸಿ 3ನೇ ದರ್ಜೆ ಗುತ್ತಿಗೆ ಪರವಾನಗಿ ಪಡೆದಿದ್ದ ವಿಷು ಸಿವಿಲ್ ಕನ್‌ಸ್ಟ್ರಕ್ಷನ್‌ನ ಎಂ. ಮನೋಜ್ ರೆಡ್ಡಿ ಅವರನ್ನು ಕಪ್ಪುಪಟ್ಟಿಗೆ ಸೇರಿಸಿ ಲೋಕೋಪಯೋಗಿ ಇಲಾಖೆ ಆದೇಶ ಹೊರಡಿಸಿದೆ.

ನೆಲಮಂಗಲ ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿ ಅವರಿಂದ ಕಾಮಗಾರಿ ಗುತ್ತಿಗೆ ಪ್ರಮಾಣ ಪತ್ರ ಪಡೆದಿರುವುದಾಗಿ ಮನೋಜ್ ರೆಡ್ಡಿ ಅವರು ಅರ್ಜಿಯಲ್ಲಿ ತಿಳಿಸಿ, ಸಲ್ಲಿಸಿರುತ್ತಾರೆ. ಈ ಬಗ್ಗೆ, ನೆಲಮಂಗಲ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಯವರಿಂದ ಮಾಹಿತಿ ಪಡೆದಾಗ, ‘ಗುತ್ತಿಗೆದಾರರಿಗೆ ಯಾವುದೇ ಪ್ರಮಾಣ ಪತ್ರ ನೀಡಿಲ್ಲ’ ಎಂದು ತಿಳಿದುಬಂದಿದೆ. ಆದ್ದರಿಂದ, ಮನೋಜ್ ರೆಡ್ಡಿ ಅವರ ಗುತ್ತಿಗೆ ನೋಂದಣಿಯನ್ನು ಐದು ವರ್ಷಕ್ಕೆ ಕಪ್ಪು ಪಟ್ಟಿಗೆ ಸೇರಿಸಲಾಗಿದೆ. ಸರ್ಕಾರಕ್ಕೆ ಅವರಿಂದ ಬಾಕಿ ಬರಬೇಕಾದಲ್ಲಿ ವಸೂಲಿ ಮಾಡಬೇಕು ಎಂದು ಇಲಾಖೆ ಬೆಂಗಳೂರು ವೃತ್ತದ ಅಧೀಕ್ಷಕ ಎಂಜಿನಿಯರ್ ಆದೇಶ ಹೊರಡಿಸಿದ್ದಾರೆ.

ನೈಋತ್ಯ ರೈಲ್ವೆ

ಇ–ಟೆಂಡರು ಸೂಚನೆ ಸಂ. CAO/CN/BNC/134/2025 ದಿನಾಂಕ: 04.08.2025

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಕಿಮೀ.59/800–900ರಲ್ಲಿ ಎಲ್‌ಸಿ ನಂ. 33ಕ್ಕೆ ಬದಲಾಗಿ ಪಿಬಿ ಎನ್‌ಹೆಚ್ ಕಡೆಗೆ +04x18.71 ಮೀ. ಪಿಎಸ್‌ಸಿ ಗಿರ್ಡರ್ ಮತ್ತು ಪಂಡಿತನಹಳ್ಳಿ ಕಡೆಗೆ 2x18.71 ಪಿಎಸ್‌ಸಿ ಗಿರ್ಡರ್ ಹಾಗೂ 1x30ಮೀ. ಕಾಂಪೋಸಿಟ್ ಗಿರ್ಡರ್ (ರೈಲ್ವೆ ಭಾಗ) ನಿಂದ ಸಬ್‌ವೇ (1x4.0x2.50ಮೀ. ಆರ್‌ಸಿಸಿ ಬಾಕ್ಸ್) ಸೇರಿದಂತೆ 2 ಲೇನ್ ಆರ್‌ಓಬಿ ಯ ನಿರ್ಮಾಣ ಮತ್ತು ಕ್ಯಾತಸಂದ್ರ ಮತ್ತು ಹಿರೇಹಳ್ಳಿ ನಿಲ್ದಾಣಗಳ ನಡುವಿನ ಆರ್‌ಓಬಿಯ ಎರಡೂ ಬದಿಗಳ ಮರ್ಜಿಂಗ್ ಲೆಂಗ್ತ್‌ಗಳಲ್ಲಿ ರೀಟೇನಿಂಗ್ ಗೋಡೆಯ ನಿರ್ಮಾಣ ಮತ್ತು ಎಲೆಕ್ಟ್ರಿಕಲ್ ಕೆಲಸಗಳು. (ಸಂಯುಕ್ತ ಕಾಮಗಾರಿ). (ಟೆಂಡರು ಉಲ್ಲೇಖ ಸಂ. ROB-LC33-KIAT-HHL)	ರೂ. 17,38,13,349/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 28.08.2025, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಇಂಜಿನಿಯರ್/ನಿರ್ಮಾಣ/ಕಾರ್ಯ/ಬೆಂಗಳೂರು ಕಂಟೋನ್ಮೆಂಟ್

PUB/367/AAF/PRB/SWR/2025-26

ಕಾಯ್ದಿರಿಸದ ಟಿಕೇಟುಗಳನ್ನು ಸುಲಭವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿರಿ

South Western Railway - SWR | SWRRLY | SWRAILWAYHQ | sw_railways

ನೈಋತ್ಯ ರೈಲ್ವೆ

ಇ–ಟೆಂಡರು ಸೂಚನೆ ಸಂ. CAO/CN/BNC/135/2025 ದಿನಾಂಕ: 06.08.2025

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಜುಮ್ಮಾಪುರ (75400) ರಿಂದ ಶೋರಾಪುರ (187100) ರ ನಡುವೆ ಅರಣ್ಯ ಶುಚಿಗೊಳಿಸುವಿಕೆ, ಮಣ್ಣಿನ ಕೆಲಸ, ರಚನೆಗಳನ್ನು ಕಿತ್ತು ಹಾಕುವುದು, ಆರ್‌ಟಿಸಿ ದಾಖಲೆಗಳು, ರೂಪಾಂತರ ಪ್ರತಿಗಳ ಸಂಗ್ರಹಣೆ/ತಯಾರಿಕೆಗಾಗಿ ಕರ್ನಾಟಕ ಸರ್ಕಾರೀ ಅಧಿಕಾರಿಗಳೊಂದಿಗೆ ಸಂಪರ್ಕ, ಭೂಮಿಯ ಸ್ವಾಧೀನ, ಗಡಿ ಕಂಬಗಳನ್ನು ಸರಿಪಡಿಸುವುದು ಮತ್ತು ಇತರ ಕೆಲಸಗಳನ್ನು ಮಾಡುವ ಮೂಲಕ ಸ್ಥಳ ತೆರವು ಕಾರ್ಯವನ್ನು ಕಾರ್ಯಗತಗೊಳಿಸುವುದು. (ಟೆಂಡರ್ ಉಲ್ಲೇಖ ಸಂಖ್ಯೆ: GDG-WD-62-R)	ರೂ. 9,84,43,135/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 28.08.2025, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಇಂಜಿನಿಯರ್/ನಿರ್ಮಾಣ/ಕಾರ್ಯ/ಬೆಂಗಳೂರು ಕಂಟೋನ್ಮೆಂಟ್

PUB/372/AAF/PRB/SWR/2025-26

ಕಾಯ್ದಿರಿಸದ ಟಿಕೇಟುಗಳನ್ನು ಸುಲಭವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿರಿ

South Western Railway - SWR | SWRRLY | SWRAILWAYHQ | sw_railways

ಪಂಜಾಬ್ ನ್ಯಾಷನಲ್ ಬ್ಯಾಂಕ್ punjab national bank

1ನೇ ಮಹಡಿ, ರಹೇಜ ಟವರ್, ನಂ.26–27, ಎಂ ಜಿ ರಸ್ತೆ, ಬೆಂಗಳೂರು–560001. ಇ–ಮೇಲ್: cobangeastgad@pnb.co.in, ಮೊ: 9945568435

ಸ್ಥಳಾವಕಾಶ ಬೇಕಾಗಿದೆ

ಪಂಜಾಬ್ ನ್ಯಾಷನಲ್ ಬ್ಯಾಂಕ್‌ಗೆ ಈ ಕೆಳಗಿನ ಸ್ಥಳಗಳಲ್ಲಿ ಗುತ್ತಿಗೆ/ಬಾಡಿಗೆ ಆಧಾರದ ಮೇಲೆ ನೆಲ ಮಹಡಿಯಲ್ಲಿ ಎಟಿಎಂ ಹೊಂದಿರುವ ಶಾಖೆಯನ್ನು ತೆರೆಯಲು ಸೂಕ್ತವಾದ ಸಿದ್ಧ–ನಿರ್ಮಿತ ಮತ್ತು ಉತ್ತಮವಾಗಿ ನಿರ್ಮಿಸಲಾದ ಹಾಲ್ ಮಾದರಿಯ ಕಟ್ಟಡದ ಅಗತ್ಯವಿದೆ.

ಕ್ರ.ಸಂ.	ಸ್ಥಳ	ಕಾರ್ಪೆಟ್ ಏರಿಯಾ (ಚ.ಅ.ಗಳಲ್ಲಿ)
1	ಕೃಷ್ಣರಾಜಪುರಂ, ಬೆಂಗಳೂರು	1600 ರಿಂದ 2000
2	ಕಾಡುಗೋಡಿ (ವೈಟ್‌ಫೀಲ್ಡ್), ಬೆಂಗಳೂರು	1600 ರಿಂದ 2000
3	ಕೊತ್ತನೂರು (ಜೆ ಪಿ ನಗರ 8ನೇ ಹಂತ) ಬೆಂಗಳೂರು	1600 ರಿಂದ 2000
4	ಹೆಸರಘಟ್ಟ, ಬೆಂಗಳೂರು	1200 ರಿಂದ 1600
5	ಹೆಣ್ಣೂರು ರಸ್ತೆ, ಬೆಂಗಳೂರು	1600 ರಿಂದ 2000
6	ದೊಡ್ಡಬಳ್ಳಾಪುರ	1200 ರಿಂದ 1600

ನೀಡಲಾಗುವ ಆವರಣಗಳು ಶಾಸನಬದ್ಧ ಅಧಿಕಾರಿಗಳಿಂದ ಎಲ್ಲಾ ಕ್ಲಿಯರೆನ್ಸ್ ಪ್ರಮಾಣಪತ್ರಗಳನ್ನು ಹೊಂದಿರಬೇಕು. ಆಸಕ್ತ ಮಾಲೀಕರು / ನೋಂದಾಯಿತ ಪವರ್ ಆಫ್ ಅಟಾರ್ನಿ ಹೊಂದಿರುವವರು ಬಯಸಿದ ಪ್ರದೇಶದಲ್ಲಿ ಅಂತಹ ಆವರಣಗಳನ್ನು ಹೊಂದಿರುವವರು, ದೀರ್ಘಾವಧಿಯ ಗುತ್ತಿಗೆ ಆಧಾರದ ಮೇಲೆ ತಮ್ಮ ಸುಲಭವಾಗಿ ಲಭ್ಯವಿರುವ ಆವರಣವನ್ನು 15 ವರ್ಷಗಳು ಅಥವಾ ಅದಕ್ಕಿಂತ ಹೆಚ್ಚಿನ ಅವಧಿಗೆ ಗುತ್ತಿಗೆ ನೀಡಲು ಸಿದ್ಧರಿದ್ದರೆ, ಬ್ಯಾಂಕಿನ ವೆಬ್‌ಸೈಟ್ www.pnbindia.in ನಲ್ಲಿ ಲಭ್ಯವಿರುವ ನಿಗದಿತ ಸ್ವರೂಪದಲ್ಲಿ ಅಥವಾ ಮೇಲಿನ ವಿಳಾಸದಿಂದ ಪಡೆದಿರುವ ತಮ್ಮ ಆಫರ್‌ಗಳನ್ನು ಕಚೇರಿ ಸಮಯದಲ್ಲಿ ಕಳುಹಿಸಬಹುದು. ಸರಿಯಾಗಿ ಮೊಹರು ಮಾಡಿ ಸಹಿ ಮಾಡಿದ ಸಂಪೂರ್ಣ ಭರ್ತಿ ಮಾಡಿದ ಆಫರ್‌ಗಳನ್ನು ಕೆಳಗೆ ಸಹಿ ಮಾಡಿದ ವಿಳಾಸಕ್ಕೆ 30.08.2025 ರಂದು ಅಥವಾ ಅದಕ್ಕೂ ಮೊದಲು (ಸಂಜೆ 05.00 ಗಂಟೆಯವರೆಗೆ) ತಲುಪಬೇಕು.

ಬ್ಯಾಂಕ್ ಯಾವುದೇ ಮಧ್ಯವರ್ತಿ ಶುಲ್ಕ (ಬ್ರೋಕರೇಜ್) ವನ್ನು ಪಾವತಿಸುವುದಿಲ್ಲ. ಯಾವುದೇ ಕಾರಣಗಳನ್ನು ನೀಡದೆ ತನ್ನ ಸ್ವಂತ ವಿವೇಚನೆಯಿಂದ ಯಾವುದೇ ಅಥವಾ ಎಲ್ಲಾ ಆಫರ್‌ಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿಕೊಂಡಿದೆ.

ದಿನಾಂಕ: 10.08.2025
ಸ್ಥಳ: ಬೆಂಗಳೂರು

ಸಹಿ/– ವೃತ್ತ ಮುಖ್ಯಸ್ಥರು
ಪಂಜಾಬ್ ನ್ಯಾಷನಲ್ ಬ್ಯಾಂಕ್

ಹೋಮಿ ಬಾಬಾ ವಿಜ್ಞಾನ ಶಿಕ್ಷಣ ಕೇಂದ್ರ

ಟಾಟಾ ಪ್ರಾಥಮಿಕ ಸಂಶೋಧನಾ ಸಂಸ್ಥೆ

ಖಗೋಳಶಾಸ್ತ್ರ, ಜೀವಶಾಸ್ತ್ರ, ರಸಾಯನಶಾಸ್ತ್ರ, ಭೌತಶಾಸ್ತ್ರ, ಕಿರಿಯ ವಿಜ್ಞಾನ ವಿಷಯದಲ್ಲಿ

ನ್ಯಾಷನಲ್ ಒಲಿಂಪಿಯಾಡ್ ಕಾರ್ಯಕ್ರಮ 2025–2026

ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಇಚ್ಛಿಸುವ ಎಲ್ಲಾ ವಿದ್ಯಾರ್ಥಿಗಳು, ಇಂಡಿಯನ್ ಅಸೋಸಿಯೇಶನ್ ಆಫ್ ಫಿಸಿಕ್ಸ್ ಟೀಚರ್ಸ್ (ಐಎಪಿಟಿ) ಇವರು ನವಂಬರ್ 22 ಮತ್ತು 23, 2025 ರಂದು ಕೈಗೊಳ್ಳುವ ನ್ಯಾಷನಲ್ ಸ್ಟ್ಯಾಂಡರ್ಡ್ ಎಕ್ಸಾಮಿನೇಶನ್ಸ್ (ಎನ್‌ಎಸ್‌ಇ) (ವಿಜ್ಞಾನ ವಿಷಯಗಳಿಗೆ) ಪರೀಕ್ಷೆಗೆ ಹಾಜರಾಗುವುದು ಕಡ್ಡಾಯ.

ಎನ್‌ಎಸ್‌ಇ ಪರೀಕ್ಷೆಯಲ್ಲಿನ ಪಡೆಯುವ ಫಲಿತಾಂಶವು ಇಂಟರ್‌ನ್ಯಾಷನಲ್ ಒಲಿಂಪಿಯಾಡ್ಸ್ 2026 ರಲ್ಲಿ ಪಾಲ್ಗೊಳ್ಳುವ ಮೊದಲ ಹೆಜ್ಜೆಯಾಗಿರುತ್ತದೆ.

ನೋಂದಣಿಗಾಗಿ:

ಎನ್‌ಎಸ್‌ಇ: https:/www.iapt.org.in (ಆಗಸ್ಟ್ 21–ಸೆಪ್ಟಂಬರ್ 14, 2025)

ಹೆಚ್ಚಿನ ವಿವರಗಳಿಗಾಗಿ ಭೇಟಿ ಕೊಡಿ: https://olympiads.hbcse.tifr.res.in

https:/www.iapt.org.in

cbc48143/12/0005/2526

ಶ್ರಾವಣ ಮಾಸದ ಪ್ರಯುಕ್ತ ರುದ್ರಾಕ್ಷಿ ಪ್ರದರ್ಶನ ಮತ್ತು ಮಾರಾಟ

ಬೆಂಗಳೂರಿನಲ್ಲಿ ಮಹಾ ರುದ್ರಾಕ್ಷ ಭವ್ಯ ಪ್ರದರ್ಶನ ಮತ್ತು ಮಾರಾಟ | ಆ. 10 ರಿಂದ ಆ. 18ರ ವರೆಗೆ ಮಾತ್ರ

ಬೆಂಗಳೂರು: ನಗರದ ಹೊಟೇಲ್ Hotel Le Foliage By TGI, ಮೆಟ್ರೋ ಪಿಲ್ಲರ್ ಎದುರಿಗೆ ನಂ.9, # 51, 46ನೇ ಕ್ರಾಸ್ 8 ಬ್ಲಾಕ್, ಸಿಆರ್ ಲೇಔಟ್, 1ನೇ ಹಂತ, ಜೆ.ಪಿ. ನಗರ, (sangeetha gadgets ಪಕ್ಕದಲ್ಲಿ) ಬೆಂಗಳೂರು, ಆಗಸ್ಟ್ 10 ರಿಂದ 18 ರವರೆಗೆ ಶ್ರಾವಣ ಮಾಸದ ಪ್ರಯುಕ್ತ ಪ್ರದರ್ಶನ ಹಾಗೂ ಮಾರಾಟ, ಈ ಶ್ರಾವಣ ಮಾಸದಲ್ಲಿ ರುದ್ರಾಕ್ಷಿಯನ್ನು ಧರಿಸುವ ಅವಕಾಶವನ್ನು ಕಳೆದುಕೊಳ್ಳಬೇಡಿ.

ಹೈದ್ರಾಬಾದ್ ಮೂಲದ ಇಂಡಸ್–ನೇಪಾಳ ರುದ್ರಾಕ್ಷ ಸಂಸ್ಥೆ ಆಯೋಜಿಸಿರುವ ನೇಪಾಳದ ರುದ್ರಾಕ್ಷಿಗಳ ಪ್ರದರ್ಶನ ಮತ್ತು ಮಾರಾಟ ಮೇಳವನ್ನು ಏರ್ಪಡಿಸಲಾಗಿದೆ ಎಂದು ಸಂಸ್ಥೆಯ ನಿರ್ದೇಶಕ ಡಾ. ನರೇಂದ್ರ ಕಾಶಿರೆಡ್ಡಿ ಯಾವ ರುದ್ರಾಕ್ಷಿಯನ್ನು ಯಾವಾಗ ಹಾಗೂ ಯಾರು ಧರಿಸಬೇಕು ಎಂಬುದರ ಬಗ್ಗೆ ಯಾವುದೇ ಪಂಚಾಂಗ ಮತ್ತು ಕಂಪ್ಯೂಟರ್ ಸಹಾಯವಿಲ್ಲದೆ, ವೇದ ಗಣಿತದ ಮೂಲಕ ಜನ್ಮರಾಶಿ, ಜನ್ಮನಕ್ಷತ್ರದ ಆಧಾರದ ಮೇಲೆ ತಿಳಿಸಲಾಗುವುದು. ಸಸ್ಯಾಹಾರಿ ಹಾಗೂ ಮಾಂಸಹಾರಿಗಳು ಧರಿಸಬಹುದು. ಮಳಿಗೆಯು ಬೆಳಗ್ಗೆ 10.30 ರಿಂದ ರಾತ್ರಿ 9 ರವರೆಗೆ ತೆರೆದಿರುತ್ತದೆ ಎಂದು ತಿಳಿಸಿದ್ದಾರೆ. ಸಂಪರ್ಕಿಸಿ: 7097296666

ADVT

‘ಕಾರ್ ಟಿ-ಸೆಲ್ ಥೆರಪಿ’ ಅಭಿವೃದ್ಧಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಿಂಪೋಮಾದಿಂದ (ರಕ್ತ ಕ್ಯಾನ್ಸರ್) ಬಳಲುತ್ತಿರುವ ರೋಗಿಗಳಿಗೆ ಇಮ್ಯುನೀಲ್ ಥೆರಪ್ಯೂಟಿಕ್ಸ್ ಸಂಸ್ಥೆಯು ದೇಶೀಯವಾಗಿ ‘ಕಾರ್ ಟಿ-ಸೆಲ್ ಥೆರಪಿ’ ಅಭಿವೃದ್ಧಿಪಡಿಸಿದೆ.

ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಇಮ್ಯುನೀಲ್ ಥೆರಪ್ಯೂಟಿಕ್ಸ್ ಮಂಡಳಿಯ ನಿರ್ದೇಶಕಿ ಕಿರಣ್ ಮಜುಂದಾರ್ ಷಾ, ‘ದೇಶದಲ್ಲಿ ಸಾಕಷ್ಟು ಜನರು ರಕ್ತದ ಕ್ಯಾನ್ಸರ್‌ನಿಂದ ಬಳಲುತ್ತಿದ್ದಾರೆ. ಮರುಕಳಿಸಬಹುದಾದ ಈ ಕ್ಯಾನ್ಸರ್‌ಗೆ ಶಾಶ್ವತ ಪರಿಹಾರವಾಗಿ ಕಾರ್ ಟಿ-ಸೆಲ್ ಥೆರಪಿಯನ್ನು 2022ರಲ್ಲಿ ಅಭಿವೃದ್ಧಿಪಡಿಸಲಾಗಿದೆ. ಈ ಥೆರಪಿಯಿಂದ ಏಳು ರಕ್ತದ ಕ್ಯಾನ್ಸರ್ ರೋಗಿಗಳು ಸಂಪೂರ್ಣ ಗುಣಮುಖರಾಗಿದ್ದಾರೆ’ ಎಂದು ಹೇಳಿದರು.

‘ವಯಸ್ಕ ರೋಗಿಗಳಿಗೆ ಈ ಥೆರಪಿ ಹೆಚ್ಚು ಪರಿಣಾಮಕಾರಿ. ರಕ್ತದ ಕ್ಯಾನ್ಸರ್ ಹೆಚ್ಚು ಆಕ್ರಮಣಕಾರಿ ರೂಪದಲ್ಲಿದ್ದರೂ ಈ ಥೆರಪಿ ಮೂಲಕ ಗುಣಪಡಿಸುವ ಪ್ರಮಾಣ ಜಾಸ್ತಿ. ಈವರೆಗೆ ರಕ್ತದ ಕ್ಯಾನ್ಸರ್‌ಗೆ ಇರುವ ಚಿಕಿತ್ಸೆಯ ಫಲಿತಾಂಶದ ಪ್ರಮಾಣ ಶೇ 70ಕ್ಕಿಂತ ಕಡಿಮೆಯಿದೆ. ಆದರೆ, ಕಾರ್ ಟಿ-ಸೆಲ್ ಥೆರಪಿಯ ಫಲಿತಾಂಶದ ಪ್ರಮಾಣ ಶೇ 83ರಷ್ಟಿದೆ. ಇಷ್ಟು ಪ್ರಮಾಣದ ಫಲಿತಾಂಶ ಹೊಂದಿರುವ ದೇಶದ ಮೊದಲ ಚಿಕಿತ್ಸೆ ಇದಾಗಿದೆ. ದೇಶದಲ್ಲಿ ಈಗ 50ಕ್ಕೂ ಹೆಚ್ಚು ರೋಗಿಗಳಿಗೆ ಈ ಚಿಕಿತ್ಸೆಯನ್ನು ನೀಡಲಾಗಿದೆ’ ಎಂದು ವಿವರಿಸಿದರು.

ಇಮ್ಯುನೀಲ್ ಥೆರಪ್ಯೂಟಿಕ್ಸ್ ಮಂಡಳಿಯ ನಿರ್ದೇಶಕ ಅಮಿತ್ ಮೂಕಿಮ್, ‘ಈ ವಿಧಾನದಲ್ಲಿ ರೋಗಿಯ ಬಿಳಿ ರಕ್ತಕಣವನ್ನು ಹೊರತೆಗೆದು, ಸಂಸ್ಕರಣೆ ಮಾಡಲಾಗುತ್ತದೆ. ಕ್ಯಾನ್ಸರ್ ಕೋಶಗಳನ್ನು ಗುರುತಿಸಿ, ನಾಶಗೊಳಿಸುವಂತೆ ಅದರ ವಂಶವಾಹಿಯಲ್ಲಿ ಬದಲಾವಣೆ ಮಾಡಲಾಗುತ್ತದೆ. ಹೀಗಾಗಿ, ಕ್ಯಾನ್ಸರ್ ಕೋಶವನ್ನು ಸಂಪೂರ್ಣ ನಾಶ ಮಾಡುವ ಶಕ್ತಿ ಈ ಥೆರಪಿಗಿದೆ. ಕ್ಯಾನ್ಸರ್ ಮರುಕಳಿಸುವ ಸಾಧ್ಯತೆಇರುವುದಿಲ್ಲ’ಎಂದುತಿಳಿಸಿದರು.

ಭಾನುವಾರ, ಆಗಸ್ಟ್ 10, 2025 | ₹ 7.00
● www.prajavani.net prajavani.net prajavani
ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ರಮೇಶ್ ಮಿಂಚು
ಕರ್ನಾಟಕದ ರಮೇಶ್ ಬೂದಿಹಾಳ ಅವರು ಚೆನ್ನೈನಲ್ಲಿ ನಡೆಯುತ್ತಿರುವ ಏಷ್ಯನ್ ಸರ್ಫಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಫೈನಲ್ ತಲುಪಿದರು. ಈ ಸಾಧನೆ ಮಾಡಿದ ಭಾರತದ ಮೊದಲ ಸರ್ಫರ್ ಎಂಬ ಹೆಗ್ಗಳಿಕೆಗೂ ಪಾತ್ರವಾದರು

ಉತ್ಖನನ
ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯು ಪ್ರಸಕ್ತ ಸಾಲಿನಲ್ಲಿ 22 ಸ್ಥಳಗಳಲ್ಲಿ ಉತ್ಖನನ ನಡೆಸುತ್ತಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ

'ಸಭಿಕರಾಗಿ' ವಿದ್ಯಾರ್ಥಿಗಳ ಬಳಕೆಗೆ ನಿರ್ಬಂಧ 5
'ಚರ್ಮ ವಾದ್ಯ ತಯಾರಕರ ನಿರ್ಲಕ್ಷ್ಯ' 5

ಹಳದಿ ಮಾರ್ಗ: ಇಂದು ಚಾಲನೆ

ಮೆಟ್ರೊ: ಕಿತ್ತಳೆ ಮಾರ್ಗಕ್ಕೆ ಪ್ರಧಾನಿ ಅಡಿಗಲ್ಲು
● ವಂದೇ ಭಾರತ್‌ಗೆ ಹಸಿರು ನಿಶಾನೆ

19.15 ಕಿ.ಮೀ.	16	3
ಹಳದಿ ಮಾರ್ಗದ ಉದ್ದ	ಮೆಟ್ರೊ ನಿಲ್ದಾಣಗಳ ಸಂಖ್ಯೆ	ಹಳದಿ ಮಾರ್ಗದಲ್ಲಿ ಸದ್ಯ ಸಂಚರಿಸಲಿರುವ ರೈಲುಗಳ ಸಂಖ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಹಿತಿ ತಂತ್ರಜ್ಞಾನ (ಐ.ಟಿ) ಹಬ್ ಆಗಿರುವ ಎಲೆಕ್ಟ್ರಾನಿಕ್ ಸಿಟಿಯನ್ನು ಸಂಪರ್ಕಿಸುವ ನಮ್ಮ ಮೆಟ್ರೊ ಹಳದಿ ಮಾರ್ಗಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಚಾಲನೆ ನೀಡಲಿದ್ದಾರೆ. ಹೊಸ ಮಾರ್ಗದಿಂದಾಗಿ, ನಗರದಲ್ಲಿ ಇಲ್ಲಿಯವರೆಗೆ 76.95 ಕಿ.ಮೀ. ಇದ್ದ ಮೆಟ್ರೊ ಜಾಲ 96 ಕಿ.ಮೀ.ಗೆ ವಿಸ್ತರಣೆಗೊಳ್ಳಲಿದೆ.

ಬೆಳಿಗ್ಗೆ 10ಕ್ಕೆ ಬೆಂಗಳೂರಿಗೆ ಬರಲಿರುವ ನರೇಂದ್ರ ಮೋದಿ ಅವರು 11ಕ್ಕೆ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಲ್ಲಿ ಬೆಳಗಾವಿ–ಬೆಂಗಳೂರು ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲಿಗೆ ಚಾಲನೆ ನೀಡಲಿದ್ದಾರೆ. ಇದೇ ಸಮಯದಲ್ಲಿ ಪಂಜಾಬಿನ ಅಮೃತಸರದಿಂದ ಜಮ್ಮು ಕಾಶ್ಮೀರದ ಕಟ್ರಾ ಮತ್ತು ಮಹಾರಾಷ್ಟ್ರದ ಪುಣೆ–ಅಜ್ನಿ (ನಾಗ್ಪುರ) ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲುಗಳಿಗೂ ಇಲ್ಲಿಂದಲೇ ವರ್ಚುವಲ್ ಆಗಿ ಚಾಲನೆ ನೀಡಲಿದ್ದಾರೆ.

ಕೆಎಸ್‌ಆರ್ ರೈಲು ನಿಲ್ದಾಣದಿಂದ ಆರ್.ವಿ. ರಸ್ತೆ ಮೆಟ್ರೊ ನಿಲ್ದಾಣಕ್ಕೆ ತೆರಳಲಿರುವ ಪ್ರಧಾನಿ, ಅಲ್ಲಿಂದ ಎಲೆಕ್ಟ್ರಾನಿಕ್ ಸಿಟಿವರೆಗೆ ಮೆಟ್ರೊದಲ್ಲಿ ಪ್ರಯಾಣಿಸಲಿದ್ದಾರೆ. ಎಲೆಕ್ಟ್ರಾನಿಕ್ ಸಿಟಿಯ ಐಐಐಟಿ ಆಡಿಟೋರಿಯಂನಲ್ಲಿ ಮಧ್ಯಾಹ್ನ 1ಕ್ಕೆ ಸಮಾರಂಭ ನಡೆಯಲಿದೆ.

ನಮ್ಮ ಮೆಟ್ರೊ ಹಳದಿ ಮಾರ್ಗಕ್ಕೆ ಪೂರೈಕೆಯಾಗಿರುವ ರೈಲು

ಅಂದಾಜು ₹15,610 ಕೋಟಿ ವೆಚ್ಚದಲ್ಲಿ ನಿರ್ಮಾಣಗೊಳ್ಳಲಿರುವ ಕೆಂಪಾಪುರ–ಜೆ.ಪಿ.ನಗರ 4ನೇ ಹಂತ ಹಾಗೂ ಹೊಸಹಳ್ಳಿ–ಕಡಬಗೆರೆ ನಡುವಿನ 'ನಮ್ಮ ಮೆಟ್ರೊ' 3ನೇ ಹಂತಕ್ಕೆ (ಕಿತ್ತಳೆ ಮಾರ್ಗ) ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ₹7,160 ಕೋಟಿ ವೆಚ್ಚದಲ್ಲಿ ನಿರ್ಮಾಣಗೊಂಡಿರುವ ಆರ್.ವಿ. ರಸ್ತೆ– ಬೊಮ್ಮಸಂದ್ರ 'ನಮ್ಮ ಮೆಟ್ರೊ' ಹಳದಿ ಮಾರ್ಗಕ್ಕೆ ಚಾಲನೆ ನೀಡಲಿದ್ದಾರೆ. ಬಳಿಕ ಮಧ್ಯಾಹ್ನ 1.30ರಿಂದ 2ರವರೆಗೆ ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡಲಿದ್ದಾರೆ.

ಭಾಗವಹಿಸುವ ಅತಿಥಿಗಳು: ರಾಜ್ಯಪಾಲ ಥಾವರಚಂದ್ ಗೆಹಲೋತ್, ಮುಖ್ಯಮಂತ್ರಿ ಸಿದ್ದರಾಮಯ್ಯ, ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವ ಮನೋಹರ್ ಲಾಲ್ ಖಟ್ಟರ್, ಕೇಂದ್ರ ಬೃಹತ್ ಕೈಗಾರಿಕಾ ಸಚಿವ ಎಚ್.ಡಿ. ಕುಮಾರಸ್ವಾಮಿ, ರೈಲ್ವೆ ಸಚಿವ ಅಶ್ವಿನಿ ವೈಷ್ಣವ್, ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ, ಕಾರ್ಮಿಕ ಮತ್ತು ಸಣ್ಣ ಉದ್ಯಮ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಂಸದ ತೇಜಸ್ವಿ ಸೂರ್ಯ, ಶಾಸಕ ಬಿ.ವೈ. ವಿಜಯೇಂದ್ರ.

ಹಳದಿ ಮಾರ್ಗದ ನಿಲ್ದಾಣಗಳು: ಬೊಮ್ಮಸಂದ್ರ, ಹೆಬ್ಬಗೋಡಿ, ಹುಸ್ಕೂರು ರಸ್ತೆ, ಇನ್ಫೊಸಿಸ್ ಫೌಂಡೇಷನ್ (ಕೋನಪ್ಪನ ಅಗ್ರಹಾರ), ಎಲೆಕ್ಟ್ರಾನಿಕ್ ಸಿಟಿ, ಬೆರಟೇನ ಅಗ್ರಹಾರ, ಹೊಸ ರಸ್ತೆ, ಸಿಂಗಸಂದ್ರ, ಕೂಡ್ಲು ಗೇಟ್, ಹೊಂಗಸಂದ್ರ, ಬೊಮ್ಮನಹಳ್ಳಿ, ಸೆಂಟ್ರಲ್ ಸಿಲ್ಕ್ ಬೋರ್ಡ್, ಬಿಟಿಎಂ ಲೇಔಟ್, ಜಯದೇವ ಆಸ್ಪತ್ರೆ, ರಾಗಿಗುಡ್ಡ, ಆರ್.ವಿ. ರಸ್ತೆ.

ರಾಜ್ಯದಲ್ಲಿ 11ನೇ ವಂದೇ ಭಾರತ್ ರೈಲು

ಬೆಳಗಾವಿ–ಬೆಂಗಳೂರು ನಡುವೆ ಸಂಚರಿಸಲಿರುವ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು

ರಾಜ್ಯದಲ್ಲಿ ಇಲ್ಲಿವರೆಗೆ 10 ವಂದೇ ಭಾರತ್ ರೈಲುಗಳು ಸಂಚರಿಸುತ್ತಿದ್ದು, ಪ್ರಧಾನಿಯವರು ಭಾನುವಾರ ಚಾಲನೆ ನೀಡಲಿರುವ ಬೆಳಗಾವಿ–ಬೆಂಗಳೂರು ವಂದೇ ಭಾರತ್ ರೈಲು 11ನೆಯದ್ದಾಗಿದೆ.

2022ರಲ್ಲಿ ಮೊದಲ ವಂದೇ ಭಾರತ್ ರಾಜ್ಯದಲ್ಲಿ ಸಂಚರಿಸಿತ್ತು. ಎರಡು ರೈಲುಗಳು ರಾಜ್ಯದ ಒಳಗೇ ಸಂಚರಿಸುತ್ತಿದ್ದರೆ, ಉಳಿದ 9 ರೈಲುಗಳು ರಾಜ್ಯದಿಂದ ಪಕ್ಕದ ರಾಜ್ಯಗಳಿಗೆ ಸಂಚರಿಸುತ್ತಿವೆ. ಬೆಳಗಾವಿ–ಬೆಂಗಳೂರು ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು ಧಾರವಾಡ, ಹುಬ್ಬಳ್ಳಿ, ಹಾವೇರಿ, ದಾವಣಗೆರೆ, ತುಮಕೂರು ಮತ್ತು ಯಶವಂತಪುರ ರೈಲು ನಿಲ್ದಾಣಗಳಲ್ಲಿ ನಿಲುಗಡೆ ಹೊಂದಿದೆ.

ಸದ್ಯ ಚಾಲಕ ಸಹಿತ ಸಂಚಾರ

ಹಳದಿ ಮಾರ್ಗದಲ್ಲಿ ಸಂಚರಿಸಲು ಚಾಲಕ ರಹಿತ ಎಂಜಿನ್ ಹೊಂದಿರುವ ಪ್ರೊಟೋಟೈಪ್ (ಮೂಲ ಮಾದರಿ) ಮೂರು ರೈಲುಗಳು ಈಗಾಗಲೇ ಬಂದಿವೆ. ಆದರೆ, ಪ್ರಧಾನಿ ಚಾಲನೆ ನೀಡಿದ ಬಳಿಕ ಚಾಲಕ ಸಹಿತ ಸಂಚಾರ ನಡೆಸಲಿವೆ. ಪ್ರತಿ 25 ನಿಮಿಷಕ್ಕೊಂದು ಟ್ರಿಪ್ ಇರಲಿದೆ.

'ನಮ್ಮ ಮೆಟ್ರೊ' ಇತರ ಮಾರ್ಗಗಳಲ್ಲಿ 'ಡಿಸ್ಟೆನ್ಸ್ ಟು ಗೊ' (ಡಿಟಿಜಿ) ವ್ಯವಸ್ಥೆಯ ಲೋಕೊ ಪೈಲಟ್ ಮೆಟ್ರೊಗಳೇ ಸಂಚರಿಸುತ್ತಿವೆ. ಹಳದಿ ಮಾರ್ಗದಲ್ಲಿ ಮಾತ್ರ ಚಾಲಕ ರಹಿತ ರೈಲು ಸಂಚರಿಸಲು, ಸಂವಹನ ಆಧಾರಿತ ರೈಲು ನಿಯಂತ್ರಣ ವ್ಯವಸ್ಥೆ (ಸಿಬಿಟಿಸಿ) ಅಳವಡಿಸಲಾಗಿದೆ. ಆರಂಭದಲ್ಲಿ ಲೋಕೊ ಪೈಲಟ್‌ಗಳನ್ನು (ಚಾಲಕರನ್ನು) ನಿಯೋಜಿಸಲಾಗುವುದು. ಯಾವುದೇ ಸಮಸ್ಯೆ ಉಂಟಾಗದಿರುವುದು ಖಾತ್ರಿಯಾದ ಮೇಲೆ ಲೋಕೊ ಪೈಲಟ್‌ಗಳಿಲ್ಲದೇ ಕಾರ್ಯಾಚರಣೆ ನಡೆಸಲಾಗುವುದು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಕನ್ನಡದಲ್ಲಿಯೇ ಮೋದಿ ಮಾಹಿತಿ

ವಂದೇ ಭಾರತ್, ಮೆಟ್ರೊ ರೈಲುಗಳಿಗೆ ಚಾಲನೆ ನೀಡಲು ಬೆಂಗಳೂರಿಗೆ ಆಗಮಿಸುತ್ತಿರುವ ಬಗ್ಗೆ ನರೇಂದ್ರ ಮೋದಿ ಅವರು 'ಎಕ್ಸ್' ಖಾತೆಯಲ್ಲಿ ಕನ್ನಡದಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ.

'ಆಗಸ್ಟ್ 10ರಂದು ಬೆಂಗಳೂರಿನ ಜನರೊಂದಿಗೆ ಇರಲು ಎದುರು ನೋಡುತ್ತಿದ್ದೇನೆ. ಸಂಪರ್ಕವನ್ನು ಸುಧಾರಿಸುವ ಮೂರು ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲುಗಳಿಗೆ ಕೆಎಸ್‌ಆರ್ ರೈಲು ನಿಲ್ದಾಣದಿಂದ ಹಸಿರು ನಿಶಾನೆ ತೋರಿಸಲಾಗುವುದು. ಬೆಂಗಳೂರು ನಗರದ ಮೂಲ ಸೌಕರ್ಯ ಹೆಚ್ಚಿಸಲು, ಬೆಂಗಳೂರು ಮೆಟ್ರೊ ಹಳದಿ ಮಾರ್ಗವನ್ನು ಉದ್ಘಾಟಿಸಲಾಗುವುದು. ಮೆಟ್ರೊ ಮೂರನೇ ಹಂತಕ್ಕೆ ಶಂಕುಸ್ಥಾಪನೆ ನೆರವೇರಿಸಲಾಗುವುದು. ನಗರದಲ್ಲಿ ಸಾರ್ವಜನಿಕ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಲಾಗುವುದು' ಎಂದು ತಿಳಿಸಿದ್ದಾರೆ.

ನರೇಂದ್ರ ಮೋದಿ

ಐಲೇಸಾ ಐಲೇಸಾ....

ಪಿಟಿಐ ಚಿತ್ರ

'ವಿಶ್ವ ಮೂಲ ನಿವಾಸಿಗಳ ದಿನ'ದ ಅಂಗವಾಗಿ ಮುಂಬೈನ ಆರೆ ಕಾಲೊನಿಯಲ್ಲಿ ಬುಡಕಟ್ಟು ಸಮುದಾಯದ ಜನರು ಸಾಂಪ್ರದಾಯಿಕ ನೃತ್ಯ ಮಾಡಿ ಶನಿವಾರ ಸಂಭ್ರಮಿಸಿದರು

₹1,064 ಕೋಟಿ ಮೊತ್ತದ ಅಡಿಕೆ ಆಮದು: ಕೇಂದ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: 2025-26ನೇ ಆರ್ಥಿಕ ವರ್ಷದಲ್ಲಿ ಹತ್ತು ರಾಷ್ಟ್ರಗಳಿಂದ ₹1,064 ಕೋಟಿ ಮೊತ್ತದ ಅಡಿಕೆ ಆಮದು ಮಾಡಿಕೊಳ್ಳಲಾಗಿದೆ ಎಂದು ಕೇಂದ್ರ ವಾಣಿಜ್ಯ ಹಾಗೂ ಕೈಗಾರಿಕಾ ಸಚಿವಾಲಯ ತಿಳಿಸಿದೆ.

ಲೋಕಸಭೆಯಲ್ಲಿ ಉಡುಪಿ-ಚಿಕ್ಕಮಗಳೂರು ಸಂಸದ ಕೋಟ ಶ್ರೀನಿವಾಸ ಪೂಜಾರಿ ಕೇಳಿರುವ ಪ್ರಶ್ನೆಗೆ ಇಲಾಖೆಯ ರಾಜ್ಯ ಸಚಿವ ಜಿತಿನ್ ಪ್ರಸಾದ್ ಈ ಉತ್ತರ ನೀಡಿದ್ದಾರೆ.

ಅಂತಹ ಆಮದಿನ ಪರಿಣಾಮವಾಗಿ ದೇಶೀಯ ಮಾರುಕಟ್ಟೆಯಲ್ಲಿ ಅಡಿಕೆ ಬೆಲೆಯ ಮೇಲೆ ಪ್ರತಿಕೂಲ ಪರಿಣಾಮ ಬೀರಿದೆಯೇ ಎಂಬ ಪ್ರಶ್ನೆಗೆ ಉತ್ತರಿಸಿರುವ ಸಚಿವರು, ಪರಿಣಾಮ ಬೀರಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಶಿರಸಿ ಮಾರುಕಟ್ಟೆಯಲ್ಲಿ 2024ರ ಜನವರಿಯಿಂದ ಜೂನ್ ಅವಧಿಯಲ್ಲಿ ಕ್ವಿಂಟಲ್ ಅಡಿಕೆಗೆ ₹36,316 ದರ ಇತ್ತು. ಈ ವರ್ಷ ಜನವರಿಯಿಂದ ಜೂನ್ ಅವಧಿಯಲ್ಲಿ ಬೆಲೆ ₹37,856ಕ್ಕೆ ಏರಿದೆ ಎಂದು ಉದಾಹರಣೆ ನೀಡಿದ್ದಾರೆ.

ಕಳೆದ ಮೂರು ಹಣಕಾಸು ವರ್ಷಗಳಲ್ಲಿ ಅಡಿಕೆ ಆಮದು ಮೌಲ್ಯ ನಿರಂತರವಾಗಿ ಕಡಿಮೆಯಾಗುತ್ತಿದೆ ಎಂದೂ ಉತ್ತರ ನೀಡಿದ್ದಾರೆ. ಅಡಿಕೆಯನ್ನು ಮುಖ್ಯವಾಗಿ ಶ್ರೀಲಂಕಾ, ಮ್ಯಾನ್ಮಾರ್, ಇಂಡೊನೇಷ್ಯಾ, ಬಾಂಗ್ಲಾದೇಶ, ಯುಎಇ, ನೇಪಾಳ, ಒಮಾನ್, ಮಲೇಷ್ಯಾ, ಸಿಂಗಪುರ ಮತ್ತು ಥಾಯ್ಲೆಂಡ್‌ನಿಂದ ಆಮದು ಮಾಡಿಕೊಳ್ಳಲಾಗುತ್ತಿದೆ. ಆದರೆ, ಬಹುಪಾಲು ಅಡಿಕೆ ಆಮದು ಆಗುತ್ತಿರುವುದು ಶ್ರೀಲಂಕಾ, ಮ್ಯಾನ್ಮಾರ್, ಇಂಡೊನೇಷ್ಯಾದಿಂದ ಎಂದು ವಿವರಿಸಿದ್ದಾರೆ.

ಅಡಿಕೆ ಮಂಡಳಿ ಸ್ಥಾಪನೆ ಇಲ್ಲ

ಅಡಿಕೆ ಕೃಷಿ ಪ್ರದೇಶ ವಿಸ್ತರಣೆ ಹಾಗೂ ಬೆಳೆಗಾರರ ಸಮಸ್ಯೆಗಳಿಗೆ ಸ್ಪಂದಿಸುವ ಸಲುವಾಗಿ ಕರ್ನಾಟಕದಲ್ಲಿ ಪ್ರತ್ಯೇಕ ಅಡಿಕೆ ಮಂಡಳಿ ಸ್ಥಾಪಿಸುವ ಪ್ರಸ್ತಾವ ಕೇಂದ್ರ ಸರ್ಕಾರದ ಮುಂದಿಲ್ಲ ಎಂದು ಸಚಿವರು ಪುನರುಚ್ಚರಿಸಿದ್ದಾರೆ. ಕಾಫಿ ಮಂಡಳಿ, ರಬ್ಬರ್ ಮಂಡಳಿ, ಟೀ ಮಂಡಳಿ ಮುಂತಾದವುಗಳ ಮಾದರಿಯಲ್ಲಿ ಅಡಿಕೆ ಮಂಡಳಿ ಸ್ಥಾಪಿಸುವ ಪ್ರಸ್ತಾವ ಇದೆಯೇ ಎಂದು ರಾಜ್ಯಸಭಾ ಸದಸ್ಯ ಡಿ.ವೀರೇಂದ್ರ ಹೆಗ್ಗಡೆ ಅವರು ರಾಜ್ಯಸಭೆಯಲ್ಲಿ ಪ್ರಶ್ನೆ ಕೇಳಿದ್ದರು.

ಅಡಿಕೆ ಆಮದು ಪ್ರಮಾಣ

ವರ್ಷ	ಮೊತ್ತ (₹ಕೋಟಿಗಳಲ್ಲಿ)
2021-22	789
2022-23	2,261
2023-24	1,296
2024-25	1,256
2025-26	1,064

ಎಲೆಚುಕ್ಕಿ ರೋಗ ನಿರ್ವಹಣೆಗೆ ₹37 ಕೋಟಿ: ಅಡಿಕೆಯ ಎಲೆ ಚುಕ್ಕೆ ರೋಗ ನಿರ್ವಹಿಸಲು 2024-25ರಲ್ಲಿ ರಾಜ್ಯಕ್ಕೆ ₹37 ಕೋಟಿ ಮಂಜೂರು ಮಾಡಿರುವುದಾಗಿ ಕೇಂದ್ರ ಸರ್ಕಾರ ತಿಳಿಸಿದೆ.

ಕೆರೆಗಳ 'ಬಫರ್ ವಲಯ' ಕಡಿತ: ಸರ್ಕಾರಕ್ಕೆ ಎನ್‌ಜಿಟಿ ನೋಟಿಸ್

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದಲ್ಲಿ ಕೆರೆಗಳ ಬಫರ್ ವಲಯ ಕಡಿತ ಮಾಡಲು ಸಚಿವ ಸಂಪುಟ ತೀರ್ಮಾನಿಸಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ) ಪ್ರಧಾನ ಪೀಠ ನೋಟಿಸ್ ನೀಡಿದೆ.

ಜುಲೈ 28ರಂದು ಮಾಧ್ಯಮವೊಂದರಲ್ಲಿ ಪ್ರಕಟವಾದ ವರದಿ ಸಂಬಂಧ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿರುವ ನ್ಯಾಯಮೂರ್ತಿ ಪ್ರಕಾಶ್ ಶ್ರೀವಾಸ್ತವ ಹಾಗೂ ಎ.ಸೆಂಥಿಲ್ ವೇಲ್ ಅವರ ಪೀಠವು, ಪರಿಸರ ಇಲಾಖೆ ಕಾರ್ಯದರ್ಶಿ, ಕರ್ನಾಟಕ ಸರೋವರ ಸಂರಕ್ಷಣಾ ಪ್ರಾಧಿಕಾರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯನ್ನು ಪ್ರತಿವಾದಿಗಳನ್ನಾಗಿ ಮಾಡಿದೆ. ಪ್ರಕರಣವನ್ನು ದಕ್ಷಿಣ ವಲಯ ಪೀಠಕ್ಕೆ ವರ್ಗಾಯಿಸುವ ಪ್ರಧಾನ ಪೀಠವು ಮುಂದಿನ ವಿಚಾರಣೆಯನ್ನು ಸೆಪ್ಟೆಂಬರ್ 26ಕ್ಕೆ ನಿಗದಿಪಡಿಸಿದೆ.

ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನ ಮಂತ್ರಿಗಳು

ನಮ್ಮ ಮೆಟ್ರೋ namma metro

ಆಧುನಿಕ ನಗರಕ್ಕೆ ನವಪೀಳಿಗೆಯ ಸಂಚಾರ ಸೌಲಭ್ಯ

ರೂ.22,800 ಕೋಟಿ ಮೌಲ್ಯದ
ಮೆಟ್ರೋ ಯೋಜನೆಗಳ ಕೊಡುಗೆ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

ಮೂರು ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲುಗಳಿಗೆ ಚಾಲನೆ

ಬೆಂಗಳೂರು ಮೆಟ್ರೋ ಹಳದಿ ಮಾರ್ಗದ ಉದ್ಘಾಟನೆ
(ಆರ್.ವಿ.ರಸ್ತೆಯಿಂದ ಬೊಮ್ಮಸಂದ್ರದವರೆಗೆ)

ಬೆಂಗಳೂರು ಮೆಟ್ರೋ ಹಂತ-3ರ ಶಂಕುಸ್ಥಾಪನೆ

ಇವರಿಂದ:
ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನ ಮಂತ್ರಿಗಳು

- ಬೆಂಗಳೂರು – ಬೆಳಗಾವಿ ವಂದೇ ಭಾರತ್ ರೈಲು
- ಅಮೃತ್‌ಸರ್ – ಶ್ರೀ ಮಾತಾ ವೈಷ್ಣೋದೇವಿ ಕತ್ರಾ ವಂದೇ ಭಾರತ್ ರೈಲು
- ನಾಗಪುರ್ (ಅಜ್ನಿ) – ಪುಣೆ ವಂದೇ ಭಾರತ್ ರೈಲು
  - ಅತ್ಯಧಿಕ ವೇಗದ ರೈಲುಗಳೊಡನೆ ಪ್ರಾದೇಶಿಕ ಸಂಪರ್ಕಗಳ ಹೆಚ್ಚಳ
  - ಪ್ರವಾಸೋದ್ಯಮಕ್ಕೆ ಉತ್ತೇಜನ: ಬೆಂಗಳೂರು – ಬೆಳಗಾವಿ ಮಾರ್ಗ
  - ಧಾರ್ಮಿಕ ಕ್ಷೇತ್ರಗಳಿಗೆ ಸಂಪರ್ಕ: ಅಮೃತ್‌ಸರ್ – ಕತ್ರಾ ಮಾರ್ಗ
  - ವಿದ್ಯಾರ್ಥಿಗಳು ಮತ್ತು ವೃತ್ತಿಪರರಿಗೆ ಅನುಕೂಲ: ನಾಗಪುರ್ – ಪುಣೆ ಮಾರ್ಗ

- ಶಂಕುಸ್ಥಾಪನೆ – ಬೆಂಗಳೂರು ಮೆಟ್ರೋ ಹಂತ–3– ಜೆ.ಪಿ.ನಗರದಿಂದ ಕೆಂಪಾಪುರದವರೆಗೆ ಮತ್ತು ಹೊಸಹಳ್ಳಿಯಿಂದ ಕಡಬಗೆರೆವರೆಗೆ (44.65 ಕಿ.ಮೀ. ರೂ.15,611 ಕೋಟಿ)
  - ದೈನಂದಿನ ಪ್ರಯಾಣಿಕರ ಸಂಖ್ಯೆ : 6.35 ಲಕ್ಷ
  - ವಸತಿ ಪ್ರದೇಶಗಳು, ಕೈಗಾರಿಕಾ ಪ್ರದೇಶ, ವಾಣಿಜ್ಯ ಮತ್ತು ಶಿಕ್ಷಣ ಕೇಂದ್ರಗಳಿಗೆ ಅಡಚಣೆರಹಿತ ಪ್ರಯಾಣದ ಅನುಕೂಲ
  - ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ನೇರ ಸಂಪರ್ಕ ಸೌಲಭ್ಯ

- ಉದ್ಘಾಟನೆ – ಬೆಂಗಳೂರು ಮೆಟ್ರೋ ಹಳದಿ ಮಾರ್ಗ – ಆರ್.ವಿ.ರಸ್ತೆಯಿಂದ ಬೊಮ್ಮಸಂದ್ರದವರೆಗೆ (19.15 ಕಿ.ಮೀ. ರೂ.7,160 ಕೋಟಿ)
  - ಐಟಿ ಕಾರಿಡಾರ್‌ಗಳಿಂದ ಬೊಮ್ಮಸಂದ್ರ ಕೈಗಾರಿಕಾ ಪ್ರದೇಶಕ್ಕೆ ಸಂಪರ್ಕ ಸೌಲಭ್ಯ
  - ಸಂಚಾರ ದಟ್ಟಣೆಯನ್ನು ಕಡಿಮೆ ಗೊಳಿಸುವುದು
  - ಪ್ರತಿದಿನ ಪ್ರಯಾಣದ ಅವಧಿಯನ್ನು 2 ಗಂಟೆ ಕಡಿಮೆಗೊಳಿಸುವುದು
  - ದೈನಂದಿನ ಪ್ರಯಾಣಿಕರ ಅಂದಾಜು ಪ್ರಮಾಣ ಸಂಖ್ಯೆ : 8.5 ಲಕ್ಷದಿಂದ 12.5 ಲಕ್ಷ

ದಿನಾಂಕ: 10ನೇ ಆಗಸ್ಟ್, 2025 (ಭಾನುವಾರ) ಸಮಯ: ಬೆಳಿಗ್ಗೆ 11.00 ಗಂಟೆಗೆ

ಘನ ಉಪಸ್ಥಿತಿ

ಶ್ರೀ ಥಾವರ್ ಚಂದ್ ಗೆಹ್ಲೋಟ್
ಸನ್ಮಾನ್ಯ ರಾಜ್ಯಪಾಲರು
ಕರ್ನಾಟಕ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ

ಶ್ರೀ ಮನೋಹರ್ ಲಾಲ್
ಮಾನ್ಯ ವಸತಿ ಮತ್ತು ನಗರ ವ್ಯವಹಾರಗಳ
ಹಾಗೂ ವಿದ್ಯುತ್ ಸಚಿವರು, ಭಾರತ ಸರ್ಕಾರ

ಶ್ರೀ ಹೆಚ್.ಡಿ.ಕುಮಾರಸ್ವಾಮಿ
ಮಾನ್ಯ ಬೃಹತ್ ಕೈಗಾರಿಕೆ ಮತ್ತು
ಉಕ್ಕು ಸಚಿವರು, ಭಾರತ ಸರ್ಕಾರ

ಶ್ರೀ ಅಶ್ವಿನಿ ವೈಷ್ಣವ್
ಮಾನ್ಯ ರೈಲ್ವೆ, ಮಾಹಿತಿ ಮತ್ತು ಪ್ರಸಾರ, ವಿದ್ಯುನ್ಮಾನ,
ಹಾಗೂ ಮಾಹಿತಿ ತಂತ್ರಜ್ಞಾನ ಸಚಿವರು, ಭಾರತ ಸರ್ಕಾರ

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು,
ಕರ್ನಾಟಕ

ಶ್ರೀ ವಿ. ಸೋಮಣ್ಣ
ಮಾನ್ಯ ಜಲಶಕ್ತಿ ಮತ್ತು ರೈಲ್ವೆ ಖಾತೆ
ರಾಜ್ಯ ಸಚಿವರು, ಭಾರತ ಸರ್ಕಾರ

ಸುಶ್ರೀ ಶೋಭಾ ಕರಂದ್ಲಾಜೆ
ಮಾನ್ಯ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ದಿಮೆಗಳು ಹಾಗೂ ಕಾರ್ಮಿಕ
ಮತ್ತು ಉದ್ಯೋಗ ಖಾತೆ ರಾಜ್ಯ ಸಚಿವರು, ಭಾರತ ಸರ್ಕಾರ

'ಡಿಡಿ ನ್ಯೂಸ್' ನಲ್ಲಿ ಕಾರ್ಯಕ್ರಮದ ನೇರ ಪ್ರಸಾರ ವೀಕ್ಷಿಸಿ
ಕಾರ್ಯಕ್ರಮವನ್ನು ನಮ್ಮ ಮೆಟ್ರೋದ 'ಯೂಟ್ಯೂಬ್' ಮತ್ತು 'ಫೇಸ್‌ಬುಕ್' ಚಾನೆಲ್‌ನಲ್ಲಿ ನೇರ ಪ್ರಸಾರ ಮಾಡಲಾಗುವುದು.

ಚಿಟಿಕೆ ಸುದ್ದಿ

ಕಬಿನಿ ಹಿನ್ನೀರು 5 ರಣಹದ್ದು ಸಾವು

ಎಚ್.ಡಿ.ಕೋಟೆ (ಮೈಸೂರು ಜಿಲ್ಲೆ): ತಾಲ್ಲೂಕಿನ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಗುಂಡ್ರೆ ವನ್ಯಜೀವಿ ವಲಯದ ಕಬಿನಿ ಹಿನ್ನೀರಿನ ಅರಣ್ಯ ಪ್ರದೇಶದಲ್ಲಿ ಅಳಿವಿನಂಚಿನಲ್ಲಿರುವ 5 ರಣಹದ್ದುಗಳು ಹಾಗೂ 1 ಸಾಕು ನಾಯಿ ಮೃತಪಟ್ಟಿದೆ. ಅರಣ್ಯ ಸಿಬ್ಬಂದಿ ಬೋಟ್ ಮೂಲಕ ಗಸ್ತು ನಡೆಸುತ್ತಿದ್ದಾಗ ತೀರದಲ್ಲಿ ನಾಯಿ ಕಳೇಬರ ಕಂಡುಬಂದಿದೆ. ಕಳೇಬರ ತಿಂದು ರಣಹದ್ದುಗಳು ಸತ್ತಿರಬಹುದು ಎಂದು ಶಂಕಿಸಲಾಗಿದೆ.

‘ಕಳೇಬರಗಳ ಮಾದರಿಗಳನ್ನು ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ’ ಎಂದು ಬಂಡೀಪುರ ಪಶು ವೈದ್ಯಾಧಿಕಾರಿ ಡಾ.ವಾಸಿಮ್ ತಿಳಿಸಿದ್ದಾರೆ.

ವಿಲೇವಾರಿಗೆ ಔಷಧಿ ಸಂಗ್ರಹಣೆ: ಆರೋಗ್ಯ ಸಚಿವರ ಸ್ಪಷ್ಟನೆ

ಸಂಕೇಶ್ವರ (ಬೆಳಗಾವಿ): ‘ಗೋಕಾಕ್‌ನ ಉಗ್ರಾಣದಲ್ಲಿ ₹ 97 ಲಕ್ಷ ಮೌಲ್ಯದ ಅವಧಿ ಮೀರಿದ್ದ ಔಷಧಿಗಳನ್ನು, ವಿಲೇವಾರಿ ಮಾಡಲು ಒಂದೆಡೆ ಸಂಗ್ರಹಿಸಲಾಗಿತ್ತೆ ಹೊರತು ರೋಗಿಗಳಿಗೆ ವಿತರಿಸಲು ಅಲ್ಲ’ ಎಂದು ಆರೋಗ್ಯ ಸಚಿವ ದಿನೇಶ ಗುಂಡೂರಾವ್ ಶನಿವಾರ ತಿಳಿಸಿದರು.

ದಿನೇಶ ಗುಂಡೂರಾವ್

ಅವಧಿ ಮೀರಿದ ಔಷಧ ಸಂಗ್ರಹ ಕುರಿತ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ ಅವರ ಹೇಳಿಕೆಗೆ ಸಚಿವರು, ‘2 ವರ್ಷಕ್ಕೊಮ್ಮೆ ಅವಧಿ ಮೀರಿದ ಔಷಧ ವಿಲೇ ಮಾಡಲಿದ್ದು, ಪ್ರತ್ಯೇಕ ಇಡಲಾಗುತ್ತದೆ’ ಎಂದರು.

‘ರಾಷ್ಟ್ರೀಯ ಆರೋಗ್ಯ ಮಿಷನ್ ಅಭಿಯಾನದಡಿ ರಾಜ್ಯದಲ್ಲಿ ಎಂಬಿಬಿಎಸ್ ಮತ್ತು ಹಾಗೂ ಎಂ.ಡಿ ಪದವಿ ಪೂರ್ಣಗೊಳಿಸಿದ ವೈದ್ಯರನ್ನು ಕ್ರಮವಾಗಿ ₹75 ಸಾವಿರ, ₹ 1.40 ಲಕ್ಷಕ್ಕೆ ವೇತನ ಪರಿಷ್ಕರಿಸಿ, ಇದೇ ತಿಂಗಳು ನೇಮಕಾತಿ ಮಾಡಲಾಗುವುದು’ ಎಂದು ಹೇಳಿದರು.

ಮತ್ತಿನಲ್ಲಿ ಠಾಣೆಗೆ ನುಗ್ಗಿ ಗಲಾಟೆ ಪ್ರಕರಣ ದಾಖಲು

ಗದಗ: ಐಪಿಎಸ್ ಅಧಿಕಾರಿ ಸಹೋದರನೊಬ್ಬ ಕುಡಿದ ಮತ್ತಿನಲ್ಲಿ ಪೊಲೀಸ್ ಠಾಣೆಗೆ ನುಗ್ಗಿ, ಪೊಲೀಸರನ್ನು ಅವಾಚ್ಯವಾಗಿ ನಿಂದಿಸಿದ ಘಟನೆ ಬೆಟಗೇರಿ ಪೊಲೀಸ್ ಠಾಣೆಯಲ್ಲಿ ನಡೆದಿದೆ.

ಬೆಂಗಳೂರಿನಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಐಪಿಎಸ್ ಅಧಿಕಾರಿಯೊಬ್ಬರ ಸಹೋದರ ಅಕ್ಷತ್ ಹದ್ದಣ್ಣವರ, ಆತನ ಸ್ನೇಹಿತ ಶಂಕರಗೌಡನಿಂದ ರಂಪಾಟ ನಡೆಸಿದ್ದು, ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಕುಡಿದ ಮತ್ತಿನಲ್ಲಿ ಪೊಲೀಸ್ ವಾಹನ ನಿಲ್ಲಿಸುವ ಸ್ಥಳದಲ್ಲಿ ಕಾರು ನಿಲುಗಡೆ ಮಾಡಿ, ಬಳಿಕ ಠಾಣೆಗೆ ನುಗ್ಗಿ ವಾಗ್ವಾದ ನಡೆಸಿ, ನಿಂದಿಸಿರುವುದು ವಿಡಿಯೊದಲ್ಲಿದೆ.

‘ಆಗಸ್ಟ್ 5ರಂದು ಘಟನೆ ನಡೆದಿದೆ. ಈ ಸಂಬಂಧ ವಿವಿಧ ಸೆಕ್ಷನ್‌ಗಳಡಿ ಪ್ರಕರಣ ದಾಖಲಿಸಿ, ತನಿಖೆ ಕೈಗೊಳ್ಳಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಎಸ್‌ಇಪಿ ವರದಿ ಪರಿಶೀಲನೆಗೆ ಸಮಿತಿ

ಸರ್ಕಾರ ನಿರ್ಧಾರ • ಸಚಿವರು, ಅಧಿಕಾರಿಗಳು, ಶಿಕ್ಷಣ ತಜ್ಞರನ್ನೊಳಗೊಂಡ ಸಮಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಶಿಕ್ಷಣ ನೀತಿ ಆಯೋಗ ಸಲ್ಲಿಸಿದ ವರದಿಯ (ಎಸ್‌ಇಪಿ) ಶಿಫಾರಸುಗಳ ಪರಿಶೀಲನೆಗೆ ಉನ್ನತ ಶಿಕ್ಷಣ, ಶಾಲಾ ಶಿಕ್ಷಣ ಸಚಿವರು, ಅಧಿಕಾರಿಗಳು ಹಾಗೂ ಶಿಕ್ಷಣ ತಜ್ಞರನ್ನು ಒಳಗೊಂಡ ಸಮಿತಿ ರಚಿಸಲು ಸರ್ಕಾರ ಮುಂದಾಗಿದೆ.

ರಾಷ್ಟ್ರೀಯ ಹೊಸ ಶಿಕ್ಷಣ ನೀತಿ (ಎನ್‌ಇಪಿ) ಬದಲಿಗೆ ಪ್ರತ್ಯೇಕ ರಾಜ್ಯ ಶಿಕ್ಷಣ ನೀತಿ ರಚಿಸಲು ರಾಜ್ಯ ಸರ್ಕಾರ ಪ್ರೊ.ಸುಖದೇವ್ ಥೋರಟ್ ಅಧ್ಯಕ್ಷತೆಯಲ್ಲಿ 2023ರ ನವೆಂಬರ್‌ನಲ್ಲಿ ರಾಜ್ಯ ಶಿಕ್ಷಣ ನೀತಿ ಆಯೋಗ ರಚಿಸಲಾಗಿತ್ತು. ಆಯೋಗವು 379 ತಜ್ಞರನ್ನು ಒಳಗೊಂಡ 35 ಕಾರ್ಯಪಡೆಗಳನ್ನು ರಚಿಸಿ, 22 ತಿಂಗಳಲ್ಲಿ ಸಿದ್ಧಪಡಿಸಿದ 2,197 ಪುಟಗಳ ಅಂತಿಮ ವರದಿಯನ್ನು ಶುಕ್ರವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಲ್ಲಿಸಿತ್ತು.

ಆಯೋಗವು 2024ರ ಮಾರ್ಚ್‌ನಲ್ಲಿ ಸಲ್ಲಿಸಿದ್ದ ಮಧ್ಯಂತರ ವರದಿಯಲ್ಲಿ ಉನ್ನತ ಶಿಕ್ಷಣಕ್ಕೆ ಒತ್ತು ನೀಡಿತ್ತು. ಮಧ್ಯಂತರ ವರದಿಯ ಶಿಫಾರಸಿನಂತೆ ಎನ್‌ಇಪಿಯಲ್ಲಿ ಇದ್ದ ನಾಲ್ಕು ವರ್ಷಗಳ ಪದವಿ, ಬಹುಪ್ರವೇಶ–ನಿರ್ಗಮನವನ್ನು 2024–25ನೇ ಸಾಲಿನಿಂದಲೇ ರದ್ದು ಮಾಡಿ, ಮತ್ತೆ ಹಿಂದಿನಂತೆ ಮೂರು ವರ್ಷಗಳ ಪದವಿ, ಎರಡು ವರ್ಷಗಳ ಸ್ನಾತಕೋತ್ತರ ಪದವಿ ಕೋರ್ಸ್‌ಗಳಿಗೆ ಅವಕಾಶ ನೀಡಲಾಗಿತ್ತು. ಅಂತಿಮ ವರದಿಯಲ್ಲಿ ಆಯೋಗವು ಶಾಲಾ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿದೆ. ಶಾಲಾ ಶಿಕ್ಷಣ, ಉನ್ನತ ಶಿಕ್ಷಣ ಹಾಗೂ ವೃತ್ತಿ ಶಿಕ್ಷಣಕ್ಕೆ ಸಂಬಂಧಿಸಿ 97 ಪ್ರಮುಖ ಶಿಫಾರಸುಗಳನ್ನು ಮಾಡಿದೆ.

‘ಎಸ್‌ಇಪಿ ಆಯೋಗ ಸಲ್ಲಿಸಿದ ವರದಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಮ್ಮುಖದಲ್ಲಿ ಸ್ವೀಕರಿಸಲಾಗಿದೆ. ಮುಖ್ಯಮಂತ್ರಿಯವರ ಜತೆ ಚರ್ಚಿಸಿದ ನಂತರ ವರದಿಯಲ್ಲಿನ ಶಿಫಾರಸುಗಳ ಪರಿಶೀಲನೆಗೆ ಸಮಿತಿ ರಚಿಸುವ ಚಿಂತನೆ ನಡೆದಿದೆ’ ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಮಾಹಿತಿ ನೀಡಿದರು.

ಪ್ರಮುಖ ಅಂಶಗಳು

- ವಲಸೆ ಹೋಗುವ ಮಕ್ಕಳಿಗೆ ಪ್ರತ್ಯೇಕ ವಸತಿ ಶಾಲೆ
- ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ಪುನರ್‌ರಚನೆ
- ಉತ್ತರ ಪತ್ರಿಕೆಗಳ ಮೌಲ್ಯಮಾಪನ ಬಲಗೊಳಿಸುವುದು
- ಶಿಕ್ಷಣಕ್ಕಾಗಿ ಸರ್ಕಾರೇತರ ಸಂಸ್ಥೆಗಳಿಂದ ನಿಧಿ ಸಂಗ್ರಹ
- ಅಗತ್ಯವಿಲ್ಲದ ವಿಶ್ವ ವಿದ್ಯಾಲಯಗಳ ಸ್ಥಾಪನೆಗೆ ತಡೆ

ಖಾಸಗಿ ಶಾಲೆಗಳ ವಿರೋಧ

ರಾಜ್ಯ ಶಿಕ್ಷಣ ನೀತಿಯ ಶಿಫಾರಸುಗಳಿಗೆ ಕರ್ನಾಟಕ ಖಾಸಗಿ ಶಾಲಾ ಆಡಳಿತ ಮಂಡಳಿಗಳ ಸಂಘ ವಿರೋಧ ವ್ಯಕ್ತಪಡಿಸಿದೆ.

ರಾಜ್ಯ ಸರ್ಕಾರ ವರದಿಯನ್ನು ಜಾರಿಗೊಳಿಸಿದರೆ ರಾಜ್ಯ ಶಿಕ್ಷಣ ವ್ಯವಸ್ಥೆ 25 ವರ್ಷಗಳಷ್ಟು ಹಿಂದಕ್ಕೆ ಹೋಗುತ್ತದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಸ್ಪರ್ಧಿಸಬೇಕಾದ ಮಕ್ಕಳು ಸಂಕುಚಿತ ಶಿಕ್ಷಣ ವ್ಯವಸ್ಥೆಗೆ ಸಿಲುಕುವ ಅಪಾಯವಿದೆ. ದ್ವಿಭಾಷಾ ನೀತಿಯ ಹೇರಿಕೆ ಹಿಂದಿಗಷ್ಟೇ ಅಲ್ಲ, ಕನ್ನಡಕ್ಕೂ ಸಂಚಕಾರ ತರುವ ಸಾಧ್ಯತೆ ಇದೆ ಎಂದು ಸಂಘದ ಸಂಚಾಲಕ ಡಿ. ಶಶಿಕುಮಾರ್ ಹೇಳಿದ್ದಾರೆ.

ರಾಜ್ಯ ಪಠ್ಯಕ್ರಮ ಅನುಸರಿಸುವ ಶಾಲೆಗಳು ಕನ್ನಡವನ್ನು ಪ್ರಥಮ ಭಾಷೆಯಾಗಿ, ಇಂಗ್ಲಿಷ್ ಮತ್ತು ಹಿಂದಿಯನ್ನು ದ್ವಿತೀಯ ಹಾಗೂ ತೃತೀಯ ಭಾಷೆಯಾಗಿ ಅನುಸರಿಸುತ್ತಿವೆ. ತ್ರಿಭಾಷಾ ಸೂತ್ರವಿದ್ದರೆ ಎಲ್ಲರಿಗೂ ಅನುಕೂಲವಾಗುತ್ತದೆ. ಕನ್ನಡ ಕಡ್ಡಾಯ ಇರುವಾಗ ತ್ರಿಭಾಷಾ ಸೂತ್ರದಿಂದ ಮಕ್ಕಳಿಗೆ ಯಾವುದೇ ಸಮಸ್ಯೆ ಇಲ್ಲ. ಸಿಬಿಎಸ್‌ಇ, ಐಸಿಎಸ್‌ಇ ಶಾಲೆಗಳು, ನವೋದಯ, ಕೇಂದ್ರೀಯ ವಿದ್ಯಾಲಯ, ಸೇನಾ ಶಾಲೆಗಳ ಮಕ್ಕಳು ಮೂರೂ ಭಾಷೆಗಳಲ್ಲೂ ಪ್ರಭುತ್ವ ಸಾಧಿಸುತ್ತಾರೆ. ರಾಷ್ಟ್ರ ಮಟ್ಟ, ಪ್ರಾದೇಶಿಕ ಮಟ್ಟದಲ್ಲಿ ಅವರಿಗೆ ಹೆಜ್ಜೆ ಗುರುತು ಮೂಡಿಸಲು ಇರುವ ವಿಪುಲ ಅವಕಾಶಗಳನ್ನು ರಾಜ್ಯದ ಮಕ್ಕಳು ಕಳೆದುಕೊಳ್ಳುತ್ತಾರೆ ಎಂದಿದ್ದಾರೆ.

ಚರ್ಚೆಗೆ ಅರುಣ್ ಶಹಾಪುರ ಆಗ್ರಹ

ರಾಜ್ಯದ ಶಿಕ್ಷಣ ನೀತಿಯ ವರದಿಯನ್ನು ಸಾರ್ವಜನಿಕ ಚರ್ಚೆ ನೀಡಬೇಕು. ಶಿಫಾರಸುಗಳ ಕುರಿತು ಸ್ಪಷ್ಟ ಅಭಿಪ್ರಾಯ ಸಂಗ್ರಹಿಸಬೇಕು ಎಂದು ವಿಧಾನ ಪರಿಷತ್ ಮಾಜಿ ಸದಸ್ಯ ಅರುಣ್ ಶಹಾಪುರ ಒತ್ತಾಯಿಸಿದ್ದಾರೆ.

ಆಯೋಗ ಸಲ್ಲಿಸಿದ ಸಂಪೂರ್ಣ ವರದಿಯನ್ನು ಬಹಿರಂಗಪಡಿಸಬೇಕು. ಶಿಕ್ಷಣ ತಜ್ಞರು, ಶಿಕ್ಷಣ ಕ್ಷೇತ್ರದ ಪಾಲುದಾರರ ಮಧ್ಯೆ ಚರ್ಚೆಗೆ ಅವಕಾಶ ಕಲ್ಪಿಸಬೇಕು. ರಾಜ್ಯ ಶಿಕ್ಷಣ ನೀತಿಯ ಅಂಶಗಳಲ್ಲಿ ರಾಜಕೀಯ ನಿರೂಪಣೆ ರೂಪಿಸುವ ಹುನ್ನಾರ ಅಡಗಿದೆ. ರಾಜ್ಯದ ಹಿತ, ನೈಜ ಶಿಕ್ಷಣ, ವಿದ್ಯಾರ್ಥಿ ಹಿತದ ಪಾಲನೆಯ ಭರವಸೆಯನ್ನು ಸರ್ಕಾರ ನೀಡಬೇಕು. ಗೌಪ್ಯ ಕಾರ್ಯಸೂಚಿ ಇಲ್ಲದ, ರಾಜಕೀಯ ಹೊರತಾದ ಶಿಕ್ಷಣ ನೀತಿ ಜಾರಿಗೊಳಿಸಬೇಕು ಎಂದು ಆಗ್ರಹಿಸಿದ್ದಾರೆ.

ಕೊಪ್ಪಳ ತಾಲ್ಲೂಕಿನ ಹಿರೇಸಿಂಧೋಗಿ ಬಳಿ ಮೆಕ್ಕೆಜೋಳ ಬೆಳೆ ಮುಳುಗಿದೆ (ಎಡಚಿತ್ರ). ಗದಗ ಜಿಲ್ಲೆಯ ಉಳ್ಳಟ್ಟಿಶ್ಯಾಬಳ ಮಧ್ಯೆ ಹರಿಯುತ್ತಿದ್ದ ಹಳ್ಳ ದಾಟಿಕೊಂಡು ವಿದ್ಯಾರ್ಥಿಗಳು ಸಾಗಿದರು –ಪ್ರಜಾವಾಣಿ ಚಿತ್ರಗಳು

ಕಲ್ಯಾಣ ಕರ್ನಾಟಕ: ವಿವಿಧ ನದಿಗಳಲ್ಲಿ ಹೆಚ್ಚಿದ ಹರಿವು, ಜಮೀನು ಜಲಾವೃತ

ಭಾರಿ ಮಳೆ: ಉಕ್ಕಿ ಹರಿದ ನದಿಗಳು

ಪ್ರಜಾವಾಣಿ ವಾರ್ತೆ

ಕಲಬುರಗಿ: ಕಲ್ಯಾಣ ಕರ್ನಾಟಕದ ಕಲಬುರಗಿ, ಬೀದರ್, ಯಾದಗಿರಿ, ರಾಯಚೂರು, ಕೊಪ್ಪಳ ಜಿಲ್ಲೆಗಳಲ್ಲಿ ಶನಿವಾರ ಭಾರಿ ಮಳೆ ಸುರಿದಿದೆ. ನದಿಗಳು ಉಕ್ಕಿ ಹರಿಯುತ್ತಿದ್ದು, ಜಲಾಶಯಗಳಿಂದ ನೀರಿನ ಹೊರಹರಿವಿನ ಪ್ರಮಾಣ ಹೆಚ್ಚಿದ್ದು, ಪ್ರವಾಹ ಪರಿಸ್ಥಿತಿ ಎದುರಾಗಿದೆ.

ಕಲಬುರಗಿ ನಗರದಲ್ಲಿ ಸಂಜೆ ಬಿರುಸಿನ ಮಳೆ ಸುರಿಯಿತು. ಜಿಲ್ಲೆಯ ಚಿಂಚೋಳಿ ತಾಲ್ಲೂಕಿನಲ್ಲಿ ಮುಲ್ಲಾಮಾರಿ ಮತ್ತು ಉಪನದಿಗಳು ತುಂಬಿ ಹರಿದಿವೆ.

ಕೊಪ್ಪಳ ಜಿಲ್ಲೆಯಲ್ಲಿ ಮಳೆ ಬಿರುಸು ಪಡೆದಿದೆ. ಕೊಪ್ಪಳ ತಾಲ್ಲೂಕಿನ ಹಿರೇಹಳ್ಳ ಜಲಾಶಯಕ್ಕೆ ಸಾಕಷ್ಟು ಪ್ರಮಾಣದಲ್ಲಿ ನೀರು ಬಂದಿದ್ದು, ಹೊರಗೆ ನೀರು ಹರಿಸಿದ್ದರಿಂದ ಬೆಳೆಗಳು ಕೊಚ್ಚಿ ಹೋಗಿವೆ.

ತಾಲ್ಲೂಕಿನ ಹಿರೇಸಿಂಧೋಗಿ ಹಾಗೂ ಮುದ್ಲಾಪುರ ಬಳಿ ಮೆಕ್ಕಜೋಳ ಬೆಳೆದಿದ್ದ ಹೊಲಗಳಿಗೆ ನೀರು ನುಗ್ಗಿತು. ಹೊಲಗಳಿಗೆ ನುಗ್ಗಿದ ಕಳೆ ತೆಗೆದು ಹಾಕಲು ರೈತರು ಸಾಕಷ್ಟು ಶ್ರಮಿಸಿದರು. ಮಳೆ ಹೆಚ್ಚಳವಾಗಿದ್ದರಿಂದ ಯೂರಿಯಾ ರಸಗೊಬ್ಬರಕ್ಕೆ ಬೇಡಿಕೆ ಹೆಚ್ಚಾಗಿದೆ.

ಯಾದಗಿರಿ ಜಿಲ್ಲೆಯಲ್ಲಿ ಜಿಲ್ಲೆಯಾದ್ಯಂತ ಮೂರು ದಿನಗಳಿಂದ ಮಳೆ ಆಗಾಗ ಸುರಿಯುತ್ತಿದೆ. ಶನಿವಾರ ಬೆಳಿಗ್ಗೆಯಿಂದಲೇ ಜಿಟಿಜಿಟಿ ಮಳೆ ಸುರಿದಿದ್ದು, ಮಧ್ಯಾಹ್ನ ಜೋರಾಯಿತು.

ರಾಯಚೂರು, ಸಿಂಧನೂರು ಹಾಗೂ ದೇವದುರ್ಗ ತಾಲ್ಲೂಕಿನಲ್ಲಿ ಸಾಧಾರಣ ಮಳೆಯಾಗಿದೆ.

ಕಿತ್ತೂರು ಕರ್ನಾಟಕ ಭಾಗದಲ್ಲಿ ಮಳೆ ಬಿರುಸು

ಹುಬ್ಬಳ್ಳಿ: ವಿಜಯಪುರ, ಬೆಳಗಾವಿ, ಗದಗ, ಬಳ್ಳಾರಿ, ಧಾರವಾಡ ಜಿಲ್ಲೆಯಲ್ಲಿ ಶನಿವಾರ ಭಾರಿ ಮಳೆ ಸುರಿಯಿತು. ಅನೇಕ ಕಡೆ ಬೆಳೆ ಹಾನಿ, ಅಲ್ಲಲ್ಲಿ ಮನೆಗಳು ಕುಸಿದಿವೆ.

ವಿಜಯಪುರ ನಗರ, ಜಿಲ್ಲೆಯ ಬಸವನ ಬಾಗೇವಾಡಿ, ತಾಳಿಕೋಟೆ, ನಾಲತವಾಡ ಪಟ್ಟಣದಲ್ಲಿ ತಗ್ಗು ಪ್ರದೇಶದಲ್ಲಿ ನೀರು ನಿಂತು, ಸಮಸ್ಯೆಯಾಯಿತು. ಡೋಣಿ ನದಿ ಪ್ರವಾಹದಿಂದ ಮುಳುಗಡೆಯಾಗಿದ್ದ ತಾಳಿಕೋಟೆ–ವಿಜಯಪುರ ನಡುವಿನ ಸಂಪರ್ಕ ಸೇತುವೆ ಆವರಿಸಿದ್ದ ನೀರಿನ ಪ್ರಮಾಣ ಕಡಿಮೆಯಾಗಿದೆ. ವಾಹನಗಳ ಸಂಚಾರಕ್ಕೆ ಮುಕ್ತವಾಗಿದೆ.

ಬೆಳಗಾವಿ ಜಿಲ್ಲೆಯಲ್ಲಿ ಉಗರಗೋಳ–ಯಲ್ಲಮ್ಮನಗುಡ್ಡ ಮಾರ್ಗದ ರಸ್ತೆಯಲ್ಲಿ ಶನಿವಾರ ವಾಹನಗಳ ಸಂಚಾರ ಯಥಾಸ್ಥಿತಿಯಲ್ಲಿತ್ತು. ಯಲ್ಲಮ್ಮನ ಗುಡ್ಡದ ರೇಣುಕಾದೇವಿ ದೇವಸ್ಥಾನದ ಪ್ರಾಂಗಣಕ್ಕೆ ನೀರು ನುಗ್ಗಿ ಕಾಗದಪತ್ರ, ದಾಖಲೆಗಳು ನಾಶವಾಗಿವೆ. ಅಲ್ಲಲ್ಲಿ ಮನೆಗಳಿಗೆ ಅಲ್ಪಸ್ವಲ್ಪ ಹಾನಿಯಾಗಿದೆ.

ಬಳ್ಳಾರಿ ನಗರ, ಜಿಲ್ಲೆಯ ಸಂಡೂರು, ಸಿರುಗುಪ್ಪ, ಕುರುಗೋಡು, ಕಂಪ್ಲಿಯಲ್ಲಿ ಉತ್ತಮ ಮಳೆಯಾಯಿತು. ಜಮೀನುಗಳು ಜಲಾವೃತವಾಗಿದ್ದು, ಕೆರೆಕುಂಟೆಗಳು ಭರ್ತಿಯಾಗಿವೆ. ಸಂಡೂರು ತಾಲ್ಲೂಕಿ ನಾರಿಹಳ್ಳ ಜಲಾಶಯ ತುಂಬಿದ್ದು, ನೀರು ಹೊರಗೆ ಬಿಡಲಾಗುತ್ತಿದೆ.

ಗದಗ ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ಮಳೆಯಿಂದ ಬೆಳೆಗಳಿಗೆ ಹಾನಿಯಾಗಿದೆ. ರೋಣ ತಾಲ್ಲೂಕಿನ ಬಾಸಲಾಪೂರ ಗ್ರಾಮದ ವ್ಯಾಪ್ತಿಯಲ್ಲಿನ ನೀರಾವರಿ ಕಾಲುವೆ ಒಡೆದು ರೈತರ ಜಮೀನುಗಳಲ್ಲಿ ನೀರು ನುಗ್ಗಿತು. ಅಪಾರ ಪ್ರಮಾಣದಲ್ಲಿ ಬೆಳೆ ನಷ್ಟ ಉಂಟಾಯಿತು.

ಲಕ್ಷ್ಮೇಶ್ವರ, ಮುಂಡರಗಿ, ನರಗುಂದ ತಾಲ್ಲೂಕಿನಲ್ಲಿ ಜಮೀನು ಜಲಾವೃತಗೊಂಡಿದೆ. ಹೆಸರು, ಜೋಳ, ಶೇಂಗಾ, ಈರುಳ್ಳಿ, ಮೆಣಸಿನಕಾಯಿ ಬೆಳೆಗಳಿಗೆ ಹಾನಿಯಾಗಿದೆ. ಧಾರವಾಡ ಜಿಲ್ಲೆಯ ನವಲಗುಂದ ತಾಲ್ಲೂಕಿನಲ್ಲಿ 28 ಮನೆಗಳಿಗೆ ಭಾಗಶಃ ಹಾನಿ ಆಗಿದೆ.

ರಾಜ್ಯದ ಹಲವೆಡೆ ಇಂದು ಭಾರಿ ಮಳೆ ಸಾಧ್ಯತೆ

ಬೆಂಗಳೂರು: ರಾಜ್ಯದ ಹಲವು ಜಿಲ್ಲೆಗಳಲ್ಲಿ ಭಾನುವಾರ ಭಾರಿ ಮಳೆಯಾಗುವ ಬಗ್ಗೆ ಮುನ್ಸೂಚನೆ ನೀಡಿರುವ ಹವಾಮಾನ ಇಲಾಖೆ, 28 ಜಿಲ್ಲೆಗಳಿಗೆ ‘ಯೆಲ್ಲೊ ಅಲರ್ಟ್’ ನೀಡಿದೆ.

ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ ಹೊರತುಪಡಿಸಿ ಉಳಿದ ಜಿಲ್ಲೆಗಳಲ್ಲಿ ಭಾರಿ ಗಾಳಿ ಸಹಿತ ಜೋರು ಮಳೆಯಾಗುವ ಸಾಧ್ಯತೆ ಇದೆ.

ಭಾರಿ ಮಳೆಯ ಮುನ್ಸೂಚನೆ ನೀಡಲಾದ ಜಿಲ್ಲೆಗಳಲ್ಲಿ ಹಲವೆಡೆ ಗಂಟೆಗೆ 30 ರಿಂದ 40 ಕಿ.ಮೀ. ವೇಗದಲ್ಲಿ ಗಾಳಿ ಬೀಸಬಹುದು. ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣ ಇರಲಿದೆ. ಗುಡುಗು ಹಾಗೂ ಭಾರಿ ಗಾಳಿ ಸಹಿತ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ. ಪ್ರತಿ ಗಂಟೆಗೆ 30 ರಿಂದ 40 ಕಿ.ಮೀ ವೇಗದಲ್ಲಿ ಗಾಳಿ ಬೀಸಲಿದೆ ಎಂದು ತಿಳಿಸಿದೆ.

ಶನಿವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡಂತೆ ಕಳೆದ 24 ಗಂಟೆಗಳಲ್ಲಿ ಗದಗ ಜಿಲ್ಲೆಯ ನರಗುಂದದಲ್ಲಿ 10 ಸೆಂ.ಮೀ ಮಳೆಯಾಗಿದೆ. ಕೊಪ್ಪಳ ಜಿಲ್ಲೆಯ ಕುಕನೂರಿನಲ್ಲಿ 9 ಸೆಂ.ಮೀ, ವಿಜಯಪುರ, ಕೋಲಾರ, ಯಾದಗಿರಿ ಜಿಲ್ಲೆಯ ಹುಣಸಗಿಯಲ್ಲಿ ತಲಾ 7 ಸೆಂ.ಮೀ. ಮಳೆ ದಾಖಲಾಗಿದೆ.

ಚನ್ನಪಟ್ಟಣ ನದಿಯಂತಾದ ರಾಷ್ಟ್ರೀಯ ಹೆದ್ದಾರಿ

ಚನ್ನಪಟ್ಟಣ: ನಗರ ವ್ಯಾಪ್ತಿಯಲ್ಲಿ ಶನಿವಾರ ಸಂಜೆ ಧಾರಾಕಾರ ಮಳೆ ಸುರಿದಿದ್ದು, ಬೆಂಗಳೂರು–ಮೈಸೂರು ಹೆದ್ದಾರಿ ಸೇರಿ ಬಹುತೇಕ ರಸ್ತೆಗಳು ಹೊಳೆಯಂತಾಗಿದ್ದವು.

ಸಂಜೆ 4ಕ್ಕೆ ಆರಂಭವಾದ ಮಳೆ ತಾಸಿಗೂ ಹೆಚ್ಚು ಮುಂದುವರೆಯಿತು. ಗುಡುಗು, ಮಿಂಚು, ಗಾಳಿ ಆರ್ಭಟ ಇರಲಿಲ್ಲ. ಈ ವರ್ಷದಲ್ಲಿ ಸುರಿದ ದೊಡ್ಡ ಮಳೆ ಇದಾಗಿದೆ.

ರೈಲು ನಿಲ್ದಾಣದ ಬಳಿ ಚರಂಡಿ ಉಕ್ಕಿ ರೈಲ್ವೆ ನಿಲ್ದಾಣದ ಒಳಗೆ ನುಗ್ಗಿತು. ಹಳಿಗಳ ಮೇಲೆ ನೀರು ಸಂಗ್ರಹವಾಗಿ ಕೆರೆಯಂತಾಯಿತು. ಇದರಿಂದ ರೈಲುಗಳು ನಿಧಾನವಾಗಿ ಚಲಿಸಿದವು.

ಗಾಂಧಿ ಭವನ, ಪಕ್ಕದ ಪೆಟ್ರೋಲ್ ಬಂಕ್, ರೇಷ್ಮೆ ಮಾರುಕಟ್ಟೆ, ತಾಲ್ಲೂಕು ಪಂಚಾಯತಿ ಹಾಗೂ ತಾಲ್ಲೂಕು ಕಚೇರಿ ಆವರಣಕ್ಕೂ ನುಗ್ಗಿತು. ಅಂಗಡಿಯ ವಸ್ತುಗಳು ತೇಲಾಡಿದವು.

ಹೆದ್ದಾರಿಯಲ್ಲಿ ಬೈಕ್, ಕಾರು, ಬಸ್ ಹಾಗೂ ಇತರ ವಾಹನಗಳು ಸಾಲುಗಟ್ಟಿ ನಿಂತಿದ್ದವು. ಬೈಕ್, ಕಾರುಗಳು ನೀರಿನಲ್ಲಿ ಮುಳುಗಿದ್ದವು.

ಜೋರು ಮಳೆ

ನಾಗಮಂಗಲ ವರದಿ (ಮಂಡ್ಯ): ತಾಲ್ಲೂಕಿನಾದ್ಯಂತ ಶನಿವಾರ ಧಾರಾಕಾರ ಮಳೆ ಸುರಿಯಿತು. ಕೆರೆ ಕಟ್ಟೆಗಳು ತುಂಬಿ ಹರಿದವು.

ಶ್ರೀರಂಗಪಟ್ಟಣ, ಕೆ.ಆರ್.ಪೇಟೆ, ಸಂತೆಬಾಚಹಳ್ಳಿ, ಮಂಡ್ಯದಲ್ಲೂ ಉತ್ತಮ ಮಳೆಯಾಗಿದೆ.

ಮೈಸೂರಿನಲ್ಲಿ ಸಂಜೆ 7 ಗಂಟೆಯ ನಂತರ ಅರ್ಧ ಗಂಟೆಗೂ ಹೆಚ್ಚು ಕಾಲ ಮಳೆಯಾಯಿತು.

ಸುದ್ದಿ 2 ನಿಮಿಷ

ತುಂಗಭದ್ರಾ ಅಣೆಕಟ್ಟೆ: ಗೇಟ್ ಕೊಚ್ಚಿಹೋಗಿ ವರ್ಷ, ಆಗಿಲ್ಲ ಕೆಲಸ

ಹೊಸಪೇಟೆ (ವಿಜಯನಗರ): ತುಂಗಭದ್ರಾ ಅಣೆಕಟ್ಟೆಯ 19ನೇ ಕ್ರೆಸ್ಟ್‌ಗೇಟ್ ನೀರಿನಲ್ಲಿ ಕೊಚ್ಚಿಹೋಗಿ ಭಾನುವಾರಕ್ಕೆ (ಆ. 10) 1 ವರ್ಷ. ಈವರೆಗೆ ಹೊಸ ಗೇಟ್ ಅಳವಡಿಸಲಾಗಿಲ್ಲ.

72 ವರ್ಷ ಹಳೆಯ ಅಣೆಕಟ್ಟೆಯ ಪೂರ್ಣ ಸಾಮರ್ಥ್ಯವಾದ 1,633 ಅಡಿಯಷ್ಟು ಮಟ್ಟಕ್ಕೆ ನೀರು ಸಂಗ್ರಹಿಸಿದ್ದ ದಿನವೇ (ಜಲಾಶಯದಲ್ಲಿ 105.78 ಟಿಎಂಸಿ ಅಡಿ) ಗೇಟ್ ಕೊಚ್ಚಿ ಹೋಗಿತ್ತು. ಬಳಿಕ ಒಂದು ವಾರದೊಳಗೆ ತಾತ್ಕಾಲಿಕ ಸ್ಟಾಪ್‌ಲಾಗ್ ಗೇಟ್ ಕೂರಿಸಿ ನೀರು ಪೋಲಾಗುವುದನ್ನು ತಪ್ಪಿಸಲಾಯಿತು. ಕಾಯಂ ಕ್ರೆಸ್ಟ್ ಗೇಟ್ ಈವರೆಗೆ ಅಳವಡಿಸಲಾಗಿಲ್ಲ.

‘ಮಳೆಗಾಲಕ್ಕೆ ಮೊದಲೇ ಗೇಟ್ ಕೂರಿಸಬೇಕಿತ್ತು. ಕ್ರೆಸ್ಟ್‌ಗೇಟ್ ನಿರ್ಮಾಣವಾಗದೆ, ಪೂರ್ಣ ಪ್ರಮಾಣದಲ್ಲಿ ನೀರು ಸಂಗ್ರಹಿಸಿ ಇಡುತ್ತಿಲ್ಲ. ಈ ಬಾರಿ ಉತ್ತಮ ಮಳೆ ಆಗಿದ್ದರೂ, ಎರಡನೇ ಬೆಳೆಗೆ ನೀರು ಸಿಗುವುದು ಕಷ್ಟ’ ಎಂದು ರೈತ ಮುಖಂಡ ರುದ್ರಪ್ಪ ಹೇಳಿದರು.

ಕೃಷ್ಣ ಮಠ: ಕಾಷ್ಠ ಯಾಳಿ ಉದ್ಘಾಟನೆ

ಉಡುಪಿ: ‘ದೇಶ ಹಲವು ಸವಾಲುಗಳನ್ನು ಎದುರಿಸುತ್ತಿರುವ ಇಂದಿನ ಸಂದರ್ಭದಲ್ಲಿ ದೇಶ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರನ್ನು ಹರಸು ಎಂದು ದೇವರಲ್ಲಿ ಬೇಡಿಕೊಳ್ಳುತ್ತೇನೆ’ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಶನಿವಾರ ಹೇಳಿದರು.

ಕೃಷ್ಣ ಮಠದ ಸುತ್ತುಪೌಳಿಗೆ ಅಳವಡಿಸಿರುವ ಕರಾವಳಿಯ ಮೂಲ ವಾಸ್ತುಶೈಲಿಯ ಕಾಷ್ಠ ಯಾಳಿಯನ್ನು ಉದ್ಘಾಟಿಸಿದ ಬಳಿಕ ಸಭಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಯುವಜನರಿಗಾಗಿ ದೇಶದ ಪ್ರಗತಿಗಾಗಿ ಪ್ರತಿಯೊಬ್ಬರು ಪ್ರಾರ್ಥಿಸಬೇಕು. ಪರ್ಯಾಯ ಪುತ್ತಿಗೆ ಮಠಾಧೀಶ ಸುಗುಣೇಂದ್ರ ತೀರ್ಥ ಸ್ವಾಮೀಜಿ ಅವರು ಶ್ರೀಕೃಷ್ಣನ ಸಂದೇಶವನ್ನು ಜಗತ್ತಿಗೆ ಪಸರಿಸುವ ಮೂಲಕ ಉದಾತ್ತ ಕಾರ್ಯ ಮಾಡುತ್ತಿದ್ದಾರೆ’ ಎಂದು ಸಚಿವರು ಹೇಳಿದರು.

ಪರ್ಯಾಯ ಪುತ್ತಿಗೆ ಮಠಾಧೀಶ ಸುಗುಣೇಂದ್ರ ತೀರ್ಥ ಸ್ವಾಮೀಜಿ, ಕಿರಿಯ ಯತಿ ಸುಶ್ರೀಂದ್ರ ತೀರ್ಥ ಸ್ವಾಮೀಜಿ, ಅದಮಾರು ಮಠಾಧೀಶ ವಿಶ್ವಪ್ರಿಯ ತೀರ್ಥ ಸ್ವಾಮೀಜಿ, ರಾಜ್ಯಸಭಾ ಸದಸ್ಯೆ ಸುಧಾಮೂರ್ತಿ, ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ದಿನೇಶ್ ಕುಮಾರ್, ಸಂಸದ ಕೋಟ ಶ್ರೀನಿವಾಸ ಪೂಜಾರಿ, ಶಾಸಕ ಯಶ್‌ಪಾಲ್ ಸುವರ್ಣ ಅವರಿದ್ದರು.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	124.28	7,761	6,582
ಹಾರಂಗಿ	2,859	2,855.87	1,975	1,637
ಕಬಿನಿ	2,284.00	2,281.79	4,557	5,350
ಹೇಮಾವತಿ	2,922	2,922	7,908	7,850
ಲಿಂಗನಮಕ್ಕಿ	1,819	1,811.95	11,224	7,560
ಸೂಪಾ (ಮೀ)	564	551.64	3,291.77	2,484.10
ಮಾಣಿ	595	590.77	710	710
ತುಂಗಭದ್ರಾ	1,633	1,626.06	38,774	38,569
ಮಲಪ್ರಭಾ	2,079.5	2,076	3,191	194
ಘಟಪ್ರಭಾ	2175	2,172.25	3,582	2,794
ಭದ್ರಾ *	186	183.2	6,934	5,214
ಆಲಮಟ್ಟಿ (ಮೀ)	519.6	519.42	31,134	42,870
ನಾರಾಯಣಪುರ (ಮೀ)	492.25	492.10	20,000	11,000

* ನೆಲಮಟ್ಟದಿಂದ

ಸಹಪಾಠಿಗಳ ಕಿರುಕುಳ: ಆತ್ಮಹತ್ಯೆ

ಗುಳೇದಗುಡ್ಡ (ಬಾಗಲಕೋಟೆ ಜಿಲ್ಲೆ): ಸಹಪಾಠಿಗಳು ಕಿರುಕುಳ ನೀಡಿದ್ದಾರೆಂದು ಪತ್ರ ಬರೆದಿಟ್ಟು, ಇಲ್ಲಿನ ಭಂಡಾರಿ ಮತ್ತು ರಾಠಿ ಕಾಲೇಜಿನ ಬಿಎ ಅಂತಿಮ ಪದವಿ ವಿದ್ಯಾರ್ಥಿನಿ ಅಂಜಲಿ ಮುಂಡಾಸ್ (21) ಶುಕ್ರವಾರ ಮನೆಯಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಅಂಜಲಿ ಮುಂಡಾಸ

‘ಕಿರುಕುಳ ವಿಷಯ ಗಮನಕ್ಕೆ ಬಂದಿಲ್ಲ. ಅಂತಹ ವಿದ್ಯಾರ್ಥಿಗಳ ಪ್ರವೇಶ ರದ್ದುಪಡಿಸಿ, ಶಿಸ್ತು ಕ್ರಮ ತೆಗೆದುಕೊಳ್ಳಲಾಗುವುದು’ ಎಂದು ಪ್ರಾಚಾರ್ಯ ಪ್ರೊ.ಎನ್.ವೈ.ಬಡನ್ನವರ ತಿಳಿಸಿದರು.

‘ಆರೋಪಿತ ವಿದ್ಯಾರ್ಥಿಗಳು ನಾಪತ್ತೆಯಾಗಿದ್ದು, ಶೋಧ ನಡೆದಿದೆ. ಪ್ರಕರಣದ ಕುರಿತು ತನಿಖೆ ನಡೆದಿದೆ. ತಪ್ಪಿತಸ್ಥರಿಗೆ ಶಿಕ್ಷೆಯಾಗಲಿದೆ’ ಎಂದು ಪಿಎಸ್‌ಐ ಸಿದ್ದಣ್ಣ ಯಡಹಳ್ಳಿ ಹೇಳಿದರು.

ಹಳೇ ವಿದ್ಯಾರ್ಥಿಗಳಿಂದ ನೆರವಿನಹಸ್ತ • ಆದಾಯದ ಶೇ 10ರಷ್ಟನ್ನು ಮೀಸಲಿಡಲು ನಿರ್ಧಾರ

ಬಡ ವಿದ್ಯಾರ್ಥಿಗಳ ನೆರವಿಗಾಗಿ ಪ್ರತಿಷ್ಠಾನ

• ಸಿದ್ದಯ್ಯ ಹಿರೇಮಠ

ದಾವಣಗೆರೆ: ಕುಗ್ರಾಮದಲ್ಲಿ ಉದ್ಯೋಗ ಮೇಳ ಆಯೋಜಿಸಿ 400ಕ್ಕೂ ಅಧಿಕ ಗ್ರಾಮೀಣ ಯುವಕ–ಯುವತಿಯರು ಜೀವನದಲ್ಲಿ ನೆಲೆ ಕಂಡುಕೊಳ್ಳಲು ನೆರವಾಗಿದ್ದ ಈ ಊರಿನ ಪ್ರಾಥಮಿಕ ಶಾಲೆಯ ಹಳೆಯ ವಿದ್ಯಾರ್ಥಿಗಳು ಇದೀಗ ಮತ್ತೊಂದು ಸಾಹಸಕ್ಕೆ ಕೈಹಾಕಿದ್ದಾರೆ.

1995–96ನೇ ಸಾಲಿನಲ್ಲಿ ಜಿಲ್ಲೆಯ ಹರಿಹರ ತಾಲ್ಲೂಕಿನ ಭಾನುವಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿನ, 7ನೇ ತರಗತಿ ಉತ್ತೀರ್ಣರಾಗಿರುವ 66 ಜನ ಹಳೆಯ ವಿದ್ಯಾರ್ಥಿಗಳು ಇದೀಗ ‘ಸ್ನೇಹಸಂಭ್ರಮ ಚಾರಿಟಿ ಫೌಂಡೇಷನ್’ ಸ್ಥಾಪಿಸುವ ಮೂಲಕ ತಮ್ಮೂರು ಸೇರಿದಂತೆ ಸುತ್ತಮುತ್ತಲ ಹತ್ತಾರು ಹಳ್ಳಿಗಳ ಯುವಕ–ಯುವತಿಯರ ಶಿಕ್ಷಣ, ಉದ್ಯೋಗ ಪಡೆಯಲು ಸಹಾಯಹಸ್ತ ಚಾಚಲು ಮುಂದಾಗಿದ್ದಾರೆ.

ನೌಕರಿಯಲ್ಲಿ ಇರುವವರು ಮಾಸಿಕ ಸಂಬಳದಲ್ಲಿ ಹಾಗೂ ಕೃಷಿಕರು, ವ್ಯಾಪಾರಿಗಳು ವಾರ್ಷಿಕ ಆದಾಯದ ಶೇ 10ರಷ್ಟನ್ನು ಸೇವೆಗೆ ಮೀಸಲಿಡಲು ನಿರ್ಧರಿಸಿ ಆರಂಭದಲ್ಲಿ ₹ 5 ಲಕ್ಷ ಕಲೆಹಾಕಿದ್ದಾರೆ. 11 ಮಂದಿ ಹಳೆಯ ವಿದ್ಯಾರ್ಥಿಗಳು ಇದರ ರೂವಾರಿಗಳಾಗಿದ್ದಾರೆ.

ದಾವಣಗೆರೆ ಜಿಲ್ಲೆಯ ಭಾನುವಳ್ಳಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ‘ಸ್ನೇಹ ಸಂಭ್ರಮ ಚಾರಿಟಿ ಫೌಂಡೇಷನ್’ಗೆ ಚಾಲನೆ ನೀಡಿದ ನಿವೃತ್ತ ಶಿಕ್ಷಕರು

ಮುಖ್ಯಾಂಶಗಳು

- ಬಡ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್
- ವ್ಯಕ್ತಿತ್ವ ವಿಕಸನ ಶಿಬಿರ ಆಯೋಜನೆ
- ತಜ್ಞರಿಂದ ಕೌಶಲಾಭಿವೃದ್ಧಿ ತರಬೇತಿ

ಫೆಬ್ರುವರಿಯಲ್ಲಿ 32 ಉದ್ಯೋಗದಾತ ಕಂಪನಿಗಳನ್ನು ಕರೆಸಿ ತಮ್ಮೂರು ಭಾನುವಳ್ಳಿಯಲ್ಲೇ ‘ಉದ್ಯೋಗ ಮೇಳ’ ಆಯೋಜಿಸಿ 417 ಉದ್ಯೋಗಾಕಾಂಕ್ಷಿಗಳಿಗೆ ನೆರವಾಗಿದ್ದು, ಏಪ್ರಿಲ್ ತಿಂಗಳಲ್ಲಿ ಆರೋಗ್ಯ ಉಚಿತ ತಪಾಸಣೆ, ಚಿಕಿತ್ಸೆ, ರಕ್ತದಾನ ಶಿಬಿರ ಏರ್ಪಡಿಸಿದ್ದರು.

‘ಗ್ರಾಮೀಣ ಮಕ್ಕಳಲ್ಲಿ ಕೌಶಲ ವೃದ್ಧಿ, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅವರನ್ನು ಅಣಿಗೊಳಿಸುವುದು, ನೈತಿಕತೆ ರೂಢಿಸಿಕೊಳ್ಳುವಂತೆ ಪ್ರೇರೇಪಿಸಬೇಕು ಎಂದೇ ಈ ಪ್ರತಿಷ್ಠಾನ ಸ್ಥಾಪಿಸಿ ನೋಂದಣಿ ಮಾಡಲಾಗಿದೆ’ ಎಂದು ಪ್ರತಿಷ್ಠಾನದ ಅಧ್ಯಕ್ಷ, ದಾವಣಗೆರೆಯ ಜಿ.ಎಂ. ಯೂನಿವರ್ಸಿಟಿಯ ತರಬೇತಿ ಮತ್ತು ಉದ್ಯೋಗ ವಿಭಾಗದ ನಿರ್ದೇಶಕ ತೇಜಸ್ವಿ ಕಟ್ಟೀಮನಿ ‘ಪ್ರಜಾವಾಣಿ’ಗೆ ತಿಳಿಸಿದರು.

‘ಪ್ರತಿಷ್ಠಾನದಲ್ಲಿ ಆರು ಜನ ನಿರ್ದೇಶಕರು, ಅಧ್ಯಕ್ಷ, ಉಪಾಧ್ಯಕ್ಷ, ಕಾರ್ಯದರ್ಶಿ, ಖಜಾಂಚಿ ಸೇರಿ 11 ಜನ ಸಕ್ರಿಯವಾಗಿರುವರು’ ಎಂದರು.



ನಮಗೆ ಕಲಿಸಿದ ಗುರುಗಳೇ ಈ ಪ್ರತಿಷ್ಠಾನಕ್ಕೆ ಚಾಲನೆ ನೀಡಿದ್ದಾರೆ. ನಮ್ಮ ಬ್ಯಾಚ್‌ನ 66 ಸದಸ್ಯರಲ್ಲದೇ ಶಾಲೆಯ ಒಟ್ಟು 108 ಜನ ಹಳೆಯ ವಿದ್ಯಾರ್ಥಿಗಳು ಪ್ರತಿಷ್ಠಾನದ ಕಾರ್ಯಕ್ಕೆ ಕೈಜೋಡಿಸಲಿದ್ದಾರೆ

ತೇಜಸ್ವಿ ಕಟ್ಟೀಮನಿ, ಅಧ್ಯಕ್ಷ, ಸ್ನೇಹ ಸಂಭ್ರಮ ಚಾರಿಟಿ ಪ್ರತಿಷ್ಠಾನ

ಒಳ್ಳೆ ಸುದ್ದಿ

ಒಕ್ಕಲಿಗರ ಅವಹೇಳನ ಸೀತಾರಾಮು ಉಚ್ಚಾಟನೆ

ಪ್ರಜಾವಾಣಿ ವಾರ್ತೆ

ಮೈಸೂರು: ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ, ಕೆಪಿಸಿಸಿ ವಕ್ತಾರರಾಗಿದ್ದ ಜಿ.ವಿ. ಸೀತಾರಾಮು ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ಆರು ವರ್ಷಗಳವರೆಗೆ ಉಚ್ಚಾಟಿಸಲಾಗಿದೆ.

ಅವರು ಒಕ್ಕಲಿಗ ಸಮುದಾಯದ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿದ್ದ ಆಡಿಯೊ ಸಾಮಾಜಿಕ ಮಾಧ್ಯಮದಲ್ಲಿ ಹರಿಡಿತ್ತು. ಅದನ್ನು ಖಂಡಿಸಿ ಸಮಾಜದವರು ಎಚ್.ಡಿ. ಕೋಟೆಯಲ್ಲಿ ಪ್ರತಿಭಟಿಸಿ ಕ್ರಮಕ್ಕೆ ಒತ್ತಾಯಿಸಿದ್ದರು. ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ಕೂಡ ದಾಖಲಾಗಿದೆ. ಹೀಗಾಗಿ, ಶಿಸ್ತುಕ್ರಮ ಜರುಗಿಸುವಂತೆ ಅಲ್ಲಿನ ಎರಡು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು ಹಾಗೂ ಶಾಸಕ ಅನಿಲ್ ಚಿಕ್ಕಮಾದು ಕೋರಿದ್ದರು. ಅದನ್ನು ಆಧರಿಸಿ ಗ್ರಾಮಾಂತರ ಜಿಲ್ಲಾ ಘಟಕದ ಅಧ್ಯಕ್ಷ ಬಿ.ಜೆ. ವಿಜಯ್‌ಕುಮಾರ್ ಕೆಪಿಸಿಸಿ ಅಧ್ಯಕ್ಷರಿಗೆ ಪತ್ರ ಬರೆದಿದ್ದರು.

ಅದನ್ನು ಆಧರಿಸಿ ಕೆಪಿಸಿಸಿ ಶಿಸ್ತುಪಾಲನಾ ಸಮಿತಿ ಕ್ರಮ ಕೈಗೊಂಡಿದೆ. ಸೀತಾರಾಮು ಸಿ.ಎಂ ಸಿದ್ದರಾಮಯ್ಯ ಅವರ ಆಪ್ತವಲಯದಲ್ಲಿ ಗುರುತಿಸಿಕೊಂಡಿದ್ದಾರೆ.

ತಿರಂಗಾ ಯಾತ್ರೆ...

ಪ್ರಜಾವಾಣಿ ಚಿತ್ರ

ಹುಬ್ಬಳ್ಳಿಯಲ್ಲಿ ಶನಿವಾರ ಚಿನ್ಮಯ ಕಾಲೇಜು ವಿದ್ಯಾರ್ಥಿಗಳು 150 ಅಡಿ ಉದ್ದದ ಬೃಹತ್ ರಾಷ್ಟ್ರ ಧ್ವಜವನ್ನು ಪ್ರದರ್ಶಿಸಿದರು

ಮುಂಬೈ: ವಿಮಾನಗಳ ಹಾರಾಟದಲ್ಲಿ ವ್ಯತ್ಯಯ

ಮುಂಬೈ: ಇಲ್ಲಿನ ಛತ್ರಪತಿ ಶಿವಾಜಿ ಮಹಾರಾಜ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಶನಿವಾರ ಡೇಟಾ ನೆಟ್‌ವರ್ಕ್ ಸ್ಥಗಿತಗೊಂಡಿದ್ದರಿಂದ ಚೆಕ್ ಇನ್ ವ್ಯವಸ್ಥೆಯಲ್ಲಿ ತೊಂದರೆ ಕಾಣಿಸಿಕೊಂಡು, ಹಲವು ವಿಮಾನಗಳ ಹಾರಾಟದಲ್ಲಿ ವ್ಯತ್ಯಯ ಉಂಟಾಯಿತು.

ತಾಂತ್ರಿಕ ಸಮಸ್ಯೆ ಉಂಟಾಗಿರುವುದನ್ನು ವಿಮಾನ ನಿಲ್ದಾಣ ಹಾಗೂ ಏರ್‌ಲೈನ್ಸ್‌ನ ಅಧಿಕಾರಿಗಳು ಖಚಿತಪಡಿಸಿದ್ದಾರೆ.

‘ನಾವು ಈಗ ಇಡೀ ವಿಮಾನ ನಿಲ್ದಾಣದಲ್ಲಿ ನೆಟ್‌ವರ್ಕ್ ವೈಫಲ್ಯ ಸಮಸ್ಯೆ ಎದುರಿಸುತ್ತಿದ್ದು, ಸಮಸ್ಯೆ ಬಗೆಹರಿಸಲು ತಂಡವು ನಿರಂತರ ಪ್ರಯತ್ನಿಸುತ್ತಿದೆ. ಆದರೂ, ಅಡಚಣೆಯನ್ನು ಕಡಿಮೆ ಮಾಡಲು ಮ್ಯಾನುವಲ್ ಕಾರ್ಯಾಚರಣೆ ವ್ಯವಸ್ಥೆ ಅಳವಡಿಸಿಕೊಂಡಿದ್ದು, ಪ್ರಯಾಣಿಕರು ತಾಳ್ಮೆ ವಹಿಸಬೇಕು’ ಎಂದು ವಿಮಾನ ನಿಲ್ದಾಣವು ಬಿಡುಗಡೆಗೊಳಿಸಿದ ಪ್ರಕಟಣೆಯಲ್ಲಿ ತಿಳಿಸಿದೆ.

ಚಿಟಿಕೆ ಸುದ್ದಿ

₹25 ಕೋಟಿ ಮೌಲ್ಯದ ಕಿರು ಅರಣ್ಯ ವಶಕ್ಕೆ

ಆನೇಕಲ್ ತಾಲ್ಲೂಕಿನ ಬನ್ನೇರುಘಟ್ಟ ಸಮೀಪದ ಭೂತಾನಹಳ್ಳಿಯಲ್ಲಿ ಒತ್ತುವರಿಯಾಗಿದ್ದ ಕಿರು ಅರಣ್ಯ ಪ್ರದೇಶವನ್ನು ತೆರವುಗೊಳಲಾಯಿತು

ಆನೇಕಲ್: ತಾಲ್ಲೂಕಿನ ಬನ್ನೇರುಘಟ್ಟ ಸಮೀಪದ ಭೂತಾನಹಳ್ಳಿಯಲ್ಲಿ ಒತ್ತುವರಿಯಾಗಿದ್ದ ಅಂದಾಜು ₹25ಕೋಟಿ ಮೌಲ್ಯದ ಕಿರು ಅರಣ್ಯ ಪ್ರದೇಶವನ್ನು ಅರಣ್ಯ ಇಲಾಖೆ ವಶಕ್ಕೆ ಪಡೆದಿದೆ.

ಸರ್ವೆ ನಂ.67ರಲ್ಲಿನ ಕಿರು ಅರಣ್ಯ ಪ್ರದೇಶದ ಪೈಕಿ ಐದು ಎಕರೆ ಅರಣ್ಯ ಜಮೀನು ಒತ್ತುವರಿಯಾಗಿತ್ತು. ಬೆಂಗಳೂರು ನಗರ ವಿಭಾಗದ ಅಧಿಕಾರಿಗಳು ಶನಿವಾರ ಕಾರ್ಯಾಚರಣೆ ನಡೆಸಿ ಒತ್ತುವರಿ ತೆರವುಗೊಳಿಸಿದರು. ಕಿರು ಅರಣ್ಯದಲ್ಲಿ ಸಸಿಗಳನ್ನು ನೆಟ್ಟಿದ್ದಾರೆ.

11ರಂದು ಮುನೇಶ್ವರಸ್ವಾಮಿ ಮೂರ್ತಿ ಪ್ರತಿಷ್ಠಾಪನೆ

ಬೆಂಗಳೂರು: ಜಯನಗರ 2ನೇ ಬಡಾವಣೆಯ ಟಿ.ಮರಿಯಪ್ಪ ರಸ್ತೆಯಲ್ಲಿರುವ ಮಿಟ್ಟ ಮರದ ನೂತನ ಮುನೇಶ್ವರಸ್ವಾಮಿ ದೇವಸ್ಥಾನದ ಮಹಾ ಕುಂಭಾಭಿಷೇಕ ಪೂಜಾ ಕಾರ್ಯಕ್ರಮ ಶುಕ್ರವಾರದಿಂದ (ಆ.8)ಆರಂಭವಾಗಿದ್ದು 11ನೇ ತಾರೀಖಿನವರೆಗೂ ನಡೆಯಲಿದೆ.

ಆಗಸ್ಟ್ 11, ಸೋಮವಾರದಂದು ಬೆಳಿಗ್ಗೆ 9.30ಕ್ಕೆ 6 ಅಡಿ ಎತ್ತರದ ಕೃಷ್ಣಶಿಲೆಯಿಂದ ಕೆತ್ತಿರುವ ಮುನೇಶ್ವರ ಸ್ವಾಮಿ ಮೂರ್ತಿಯ ಪ್ರತಿಷ್ಠಾಪನಾ ಕಾರ್ಯಕ್ರಮ ನಡೆಯಲಿದೆ. ಅಯೋಧ್ಯೆಯ ಶ್ರೀರಾಮಲಲ್ಲಾ ಮೂರ್ತಿಯನ್ನು ಕೆತ್ತಿರುವ ಮೈಸೂರಿನ ಶಿಲ್ಪಿ ಅರುಣ್ ಯೋಗಿರಾಜ್ ಅವರು ಈ ಮೂರ್ತಿಯನ್ನು ಕೆತ್ತಿದ್ದಾರೆ.

ಈ ವಿಶಿಷ್ಟ ದೇವಾಲಯದ ಮಹಾ ಕುಂಭಾಭಿಷೇಕ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಾರಿಗೆ ಮತ್ತು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ, ತಿರುಪತಿ ತಿರುಮಲ ಟ್ರಸ್ಟ್ ಅಧ್ಯಕ್ಷ ಬಿ.ಆರ್. ನಾಯ್ಡು, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಚ್.ಎಂ. ರೇವಣ್ಣ, ಶಿಲ್ಪಿ ಅರುಣ್ ಯೋಗಿರಾಜ್ ಮತ್ತು ಗಣ್ಯರು ಭಾಗವಹಿಸಲಿದ್ದಾರೆ ಎಂದು ದೇವಸ್ಥಾನ ಸಮಿತಿ ಪ್ರಕಟಣೆಯಲ್ಲಿ ತಿಳಿಸಿದೆ.

ಕುಸಿದು ಬಿದ್ದು ಯುವತಿ ಸಾವು

ಬೆಂಗಳೂರು: ಶಾಂತಿನಗರದ ಬಿಎಂಟಿಸಿ ಬಸ್ ನಿಲ್ದಾಣದ ಬಳಿ ಸುಮಾರು 23 ವರ್ಷದ ಯುವತಿ ಅನುಮಾನಾಸ್ಪದವಾಗಿ ಮೃತಪಟ್ಟಿದ್ದಾರೆ.

ಶಾಂತಿನಗರದ ಸ್ಮಶಾನದ ಸಮೀಪದಲ್ಲಿರುವ ಬಸ್ ನಿಲ್ದಾಣದ ಬಳಿ ನಿಂತಿದ್ದ ಯುವತಿ ಏಕಾಏಕಿ ಕುಸಿದು ಬಿದ್ದು ಮೃತಪಟ್ಟಿದ್ದಾರೆ. ಸಾರ್ವಜನಿಕರು 112ಗೆ ಕರೆ ಮಾಡಿ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಬಂದ ಪೊಲೀಸರು, ಆಂಬುಲೆನ್ಸ್‌ಗೆ ಕರೆ ಮಾಡಿದ್ದರು. ಅಷ್ಟರಲ್ಲಿ ಯುವತಿ ಮೃತಪಟ್ಟಿದ್ದು ಗೊತ್ತಾಗಿತ್ತು ಎಂದು ಮೂಲಗಳು ತಿಳಿಸಿವೆ.

ಅತ್ಯಾಚಾರ: ಆಟೊ ಚಾಲಕ ಬಂಧನ

ಬಂಗಾರಪೇಟೆ: ಪಟ್ಟಣದ ಹೊರ ವಲಯದಲ್ಲಿ ಶುಕ್ರವಾರ ಸಂಜೆ ಜಾರ್ಖಂಡ್ ಮೂಲದ 22 ವರ್ಷದ ಯುವತಿ ಮೇಲೆ ಆಟೊ ಚಾಲಕನೊಬ್ಬ ಅತ್ಯಾಚಾರ ಎಸಗಿದ್ದಾನೆ.

ಅತ್ಯಾಚಾರ ಆರೋಪಿ ಆಟೊ ಚಾಲಕ ಮಹೇಶ್ (32) ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ. ನರಸಾಪುರ ಕೈಗಾರಿಕೆ ಪ್ರದೇಶ ಖಾಸಗಿ ಕಂಪನಿಯೊಂದರಲ್ಲಿ ಯುವತಿ ಕೆಲಸ ಮಾಡುತ್ತಿದ್ದಳು.

‘ಭೈರವಿ ರಾಗಕ್ಕೆ ಎದ್ದು ನಿಂತಿದ್ದ ಹುಲ್ಲು’

‘ಕಾದಂಬರಿಯಾದ ಸಂಗೀತ’ ಗೋಷ್ಠಿಯಲ್ಲಿ ಶಾಸ್ತ್ರೀಯ ಸಂಗೀತದ ವಿವಿಧ ಆಯಾಮ ಅನಾವರಣ

• ವರುಣ ಹೆಗಡೆ

ಬೆಂಗಳೂರು: ಶಾಸ್ತ್ರೀಯ ಸಂಗೀತಕ್ಕೆ ಸಸ್ಯ–ಪ್ರಾಣಿಗಳೂ ಸ್ಪಂದಿಸಿ ಮೈಮರೆಯುತ್ತವೆ. ಆದರೆ, ಸಾವಿರಾರು ವರ್ಷಗಳ ಇತಿಹಾಸ ಹೊಂದಿರುವ ಈ ಸಂಗೀತ ಪ್ರಕಾರ ಅಳಿದು ಹೋಗುತ್ತಿದೆಯೆ? ಏಕೆ ತಾನು ಹಾಕಿಕೊಂಡ ಚೌಕಟ್ಟನ್ನು ಮೀರಿ ಹೊರಬರುತ್ತಿಲ್ಲ?

ಇಂತಹ ಪ್ರಶ್ನೆಗಳಿಗೆ ಉತ್ತರ ಒದಗಿಸಿದ್ದು ಬುಕ್ ಬ್ರಹ್ಮ ಸಾಹಿತ್ಯ ಉತ್ಸವದ ಎರಡನೇ ದಿನವಾದ ಶನಿವಾರ ನಡೆದ ‘ಕಾದಂಬರಿಯಾದ ಸಂಗೀತ’ ಗೋಷ್ಠಿ. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಶಾಸ್ತ್ರೀಯ ಸಂಗೀತವು ಅವಗಣಿಸಲ್ಪಟ್ಟಿರುವ ಬಗ್ಗೆ ಆರಂಭವಾದ ಈ ಚರ್ಚೆ, ಶಾಸ್ತ್ರೀಯ ಸಂಗೀತದ ಶಕ್ತಿ ಹಾಗೂ ಈ ಪ್ರಕಾರದ ಕಲಿಕೆಯ ಬಗ್ಗೆ ಹೊರಳಿತು. ಗೋಷ್ಠಿಯಲ್ಲಿ ಪಾಲ್ಗೊಂಡಿದ್ದ ಸಂಗೀತಗಾರ ಪ್ರವೀಣ್ ಗೋಡ್ಖಿಂಡಿ ಹಾಗೂ ಲೇಖಕ ಶ್ರೀಶ ಜೋಶಿ ಅವರು ಶಾಸ್ತ್ರೀಯ ಸಂಗೀತದ ವಿವಿಧ ಆಯಾಮಗಳನ್ನು ಪರಿಚಯಿಸಿದರೆ, ಸಾಹಿತಿ ಬಾಳಾಸಾಹೇಬ ಲೋಕಾಪುರ ಅವರು ಗೋಷ್ಠಿಯನ್ನು ನಿರ್ವಹಿಸಿದರು.

ಗೋಷ್ಠಿಯಲ್ಲಿ ಪ್ರವೀಣ್ ಗೋಡ್ಖಿಂಡಿ ಮಾತನಾಡಿದರು. ಶ್ರೀಶ ಜೋಶಿ ಮತ್ತು ಬಾಳಾಸಾಹೇಬ ಲೋಕಾಪುರ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಶಾಸ್ತ್ರೀಯ ಸಂಗೀತದ ಮಹತ್ವ ವಿವರಿಸುತ್ತಲೇ ಘಟನೆಯೊಂದನ್ನು ಸ್ಮರಿಸಿಕೊಂಡ ಶ್ರೀಶ ಜೋಶಿ, ‘ಪ್ರತಿಯೊಂದು ಸ್ವರವೂ ನಿಗದಿತ ಸಮಯದಲ್ಲಿ ಜಾಗೃತಗೊಳಿಸುವ ಶಕ್ತಿ ಹೊಂದಿದೆ. ಸಂಗೀತದಲ್ಲಿ ಸಮಯ ಚಕ್ರ ಮುಖ್ಯ ಮತ್ತು ಪರಿಣಾಮಕಾರಿ. 1989ರಲ್ಲಿ ಹರಿಪ್ರಸಾದ್ ಚೌರಾಸಿಯಾ ಅವರು ಬೆಳಿಗ್ಗೆ ಮೂರು ಗಂಟೆ ವೇಳೆಗೆ ಭೈರವಿ ರಾಗದಲ್ಲಿ ಕೊಳಲು ನುಡಿಸಿದರು. ಈ ರಾಗದ ಪ್ರಭಾವದಿಂದ ಮಲಗಿದ್ದ ಹುಲ್ಲು ಎದ್ದು ನಿಂತಿದ್ದನ್ನು ಕಣ್ಣಾರೆ ಕಂಡಿದ್ದೇವೆ’ ಎಂದು ವಿವರಿಸಿದರು.

ಸಂಗೀತದ ಈ ಶಕ್ತಿಗೆ ಸಹಮತ ವ್ಯಕ್ತ ಪಡಿಸುತ್ತಲೇ ಮಾತು ಮುಂದುವರಿಸಿದ ಪ್ರವೀಣ್ ಗೋಡ್ಖಿಂಡಿ, ‘ಪ್ರಸಿದ್ಧ ಸಂಗೀತಗಾರರನ್ನು ಕಛೇರಿ ನಡೆಸಲು ಆಹ್ವಾನಿಸಿದರೆ, ಅವರು ವೇದಿಕೆ ಮೇಲೆ ಸಿದ್ಧತೆ ಮಾಡಿಕೊಳ್ಳಲು ಅರ್ಧಗಂಟೆಯಷ್ಟು ಸಮಯ ಬೇಕಾಗುತ್ತದೆ. ಸಂಗೀತಗಾರ ಶಿವಕುಮಾರ್ ಶರ್ಮಾ ಅವರು ಸಂತೂರ್‌ನ ನೂರು ತಂತಿಗಳನ್ನು ಸರಿಯಾಗಿ ಜೋಡಿಸಿಕೊಳ್ಳಲು 45 ತೆಗೆದುಕೊಂಡಿದ್ದರು. ಆ ವೇಳೆಗೆ ಕಛೇರಿ ಮುಗಿಯಿತೆಂದು ಭಾವಿಸಿದ ಪ್ರೇಕ್ಷಕರು ಚಪ್ಪಾಳೆ ತಟ್ಟಿದ್ದರು’ ಎಂದು ಸ್ಮರಿಸಿಕೊಂಡ ಅವರು, ‘ಸಂಗೀತ ಕಛೇರಿ ನೀಡಲು ಸಾಕಷ್ಟು ಪೂರ್ವಸಿದ್ಧತೆ ಬೇಕಾಗುತ್ತದೆ. ಈ ಪ್ರಕಾರದಲ್ಲಿ ಮನೋರಂಜನೆಗಿಂತ ಆತ್ಮರಂಜನೆ ಮುಖ್ಯ’ ಎಂದು ಅಭಿಪ್ರಾಯಪಟ್ಟರು.

ಅ.ನ.ಕೃಷ್ಣರಾಯ ಅವರು ‘ಸಂಧ್ಯಾ ರಾಗ’ ಕಾದಂಬರಿಯಲ್ಲಿ ಶಾಸ್ತ್ರೀಯ ಸಂಗೀತ ಪ್ರಕಾರವು ಅಳಿದು ಹೋಗುತ್ತಿರುವ ಬಗ್ಗೆ ಉಲ್ಲೇಖಿಸಿದ್ದರು ಎಂದು ಬಾಳಾಸಾಹೇಬ ಲೋಕಾಪುರ ಸ್ಮರಿಸಿಕೊಂಡರು. ಇದಕ್ಕೆ ಪ್ರತಿಕ್ರಿಯಿಸಿದ ಗೋಡ್ಖಿಂಡಿ, ‘ಈ ಪೀಳಿಗೆಯ ಬುದ್ಧಿಮಟ್ಟ ಅತ್ಯುತ್ತಮವಾಗಿದೆ. ಉತ್ಕೃಷ್ಟ ಸಂಗೀತಗಾರರು ಹೊರ ಹೊಮ್ಮುವುದರಲ್ಲಿ ಸಂಶಯವಿಲ್ಲ. ಜನಸಂಖ್ಯೆ ಆಧರಿಸಿದರೆ ಈ ಪ್ರಕಾರ ಸಾಕಷ್ಟು ಬೆಳೆದಿದೆ ಎನ್ನಲು ಸಾಧ್ಯವಿಲ್ಲ. ಎಲ್ಲ ವರ್ಗದವರನ್ನು ತಲುಪಬೇಕೆಂಬ ಉದ್ದೇಶದಿಂದಲೇ ಈಗಿನ ಕಲಾವಿದರು ಪ್ರೇಕ್ಷಕರ ಜತೆಗೆ ಸಂಪರ್ಕ ಸಾಧಿಸುತ್ತಿದ್ದಾರೆ’ ಎಂದು ವಿವರಿಸಿದರು.

ಇಂದು ಸಾಹಿತ್ಯ ಉತ್ಸವಕ್ಕೆ ತೆರೆ

ಮೂರು ದಿನಗಳ ಸಾಹಿತ್ಯ ಉತ್ಸವಕ್ಕೆ ಭಾನುವಾರ ತೆರೆ ಬೀಳಲಿದೆ. ಬೆಳಿಗ್ಗೆ 8.30ರಿಂದ ಗಣಪತಿ ಭಟ್ ಹಾಸಣಗಿ, ವ್ಯಾಸಮೂರ್ತಿ ಕಟ್ಟಿ ಮತ್ತು ಶ್ರೀಧರ್ ಮಾಂಡ್ರೆ ಅವರಿಂದ ‘ಬೆಳಗಿನ ಗಾಯನ’ ಶೀರ್ಷಿಕೆಯಡಿ ಹಿಂದೂಸ್ತಾನಿ ಸಂಗೀತ ಕಛೇರಿ ನಡೆಯಲಿದೆ. ಮಧ್ಯಾಹ್ನ 2 ಗಂಟೆಗೆ ಬಿ ಸ್ಟುಡಿಯೊ ‘ರಾಮೇಶ್ವರಂ ಕಾಕುಲ’ ಹಾಗೂ ಸಂಜೆ 6.30ಕ್ಕೆ ಬೆಂಗಳೂರು ಕ್ಲಬ್ ಫಾರ್ ಕಥಕಳಿ ಆ್ಯಂಡ್ ದಿ ಆರ್ಟ್ಸ್ ಸಂಸ್ಥೆಯಿಂದ ‘ದುರ್ಯೋಧನ ವಧಂ’ ಕಲಾ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ.

‘ಮುಖಾಮುಖಿ’ ವೇದಿಕೆಯಲ್ಲಿ ಸಾಹಿತ್ಯ ಕ್ಷೇತ್ರದ ಪ್ರಮುಖರ ಜತೆಗೆ ಸಂವಾದ ನಡೆಸುವ ಅವಕಾಶವೂ ಇದ್ದು, ಬಾನು ಮುಷ್ತಾಕ್, ದಾಮೋದರ್ ಮೌಜೊ, ಎನ್.ಎಸ್. ಮಾಧವನ್, ಕೆ.ಆರ್. ಮೀರಾ, ಲಕ್ಷ್ಮಣ್ ಗಾಯಕ್ವಾಡ್, ನೇಮಿಚಂದ್ರ, ಪೆರುಮಾಳ್ ಮುರುಗನ್, ಮಕರಂದ ಸಾಠೆ, ವಸುಧೇಂದ್ರ, ಶರಣಕುಮಾರ ಲಿಂಬಾಳೆ, ಜೋಗಿ ಹಾಗೂ ಕೊಳಕಲೂರಿ ಎನೋಚ್ ಪಾಲ್ಗೊಳ್ಳುತ್ತಾರೆ.

‘ಧರ್ಮಸ್ಥಳದ ಘನತೆ ಕುಗ್ಗಿಸಲು ಯತ್ನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಧರ್ಮಕ್ಕೆ ಪ್ರತಿರೂಪವಾಗಿರುವ ಧರ್ಮಸ್ಥಳಕ್ಕೆ ಪಟ್ಟಭದ್ರ ಹಿತಾಸಕ್ತಿಗಳು ಹಾಗೂ ಹಿಂದೂ ವಿರೋಧಿ ಶಕ್ತಿಗಳು ಅಪಪ್ರಚಾರವೆಸಗುವ ಮೂಲಕ ಕ್ಷೇತ್ರದ ಗೌರವ ಹಾಗೂ ಘನತೆಯನ್ನು ಕುಗ್ಗಿಸಲೆತ್ನಿಸುತ್ತಿರುವುದು ಅಕ್ಷಮ್ಯ ಅಪರಾಧ ಎಂದು ವಿಶ್ವ ಹಿಂದೂ ಪರಿಷದ್ ಪ್ರಾಂತ ಅಧ್ಯಕ್ಷ ದೀಪಕ್ ರಾಜ್ ಗೋಪಾಲ್ ತಿಳಿಸಿದ್ದಾರೆ.

ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ಅವರು, ‘ಧರ್ಮಸ್ಥಳದ ಮಂಜುನಾಥ ಸ್ವಾಮಿ ದೇವಾಲಯವು, ದೇಶದ ಧಾರ್ಮಿಕ ಶ್ರದ್ಧಾ ಕೇಂದ್ರಗಳ ಪೈಕಿ ಒಂದಾಗಿದೆ. ಕೋಟ್ಯಂತರ ಭಕ್ತರು ನಿತ್ಯ ದೇವರ ದರ್ಶನ ಪಡೆಯುತ್ತಾರೆ’ ಎಂದಿದ್ದಾರೆ.

‘2012ರಲ್ಲಿ ನಡೆದ ಸೌಜನ್ಯಾಳ ಹತ್ಯೆಗೆ ಸಂಬಂಧಿಸಿ ಸಮಗ್ರವಾದ ಪಾರದರ್ಶಕ ತನಿಖೆ ನಡೆದು ಅಪರಾಧಿಗಳಿಗೆ ಕಠಿಣ ಶಿಕ್ಷೆಯಾಗಬೇಕು ಎಂದು ಪರಿಷತ್ ಆಗ್ರಹಿಸುತ್ತಲೇ ಬಂದಿದೆ. ಇದರ ನಡುವೆ ಅನಾಮಿಕನೊಬ್ಬ, ‘ತಾನು 10-20 ವರ್ಷಗಳ ಹಿಂದೆ ನೂರಾರು ಹೆಣಗಳನ್ನು ಧರ್ಮಸ್ಥಳದ ಕಾಡುಗಳಲ್ಲಿ ಹೂತಿದ್ದೇನೆ’ ಎಂಬ ಹೇಳಿಕೆಯನ್ನು ಆಧರಿಸಿ ಕ್ಷೇತ್ರದ ಘನತೆಗೆ ಹಾಗೂ ಹಿಂದೂ ಧಾರ್ಮಿಕ ನಂಬಿಕೆಗೆ ಚ್ಯುತಿ ತರುವ ಸಂಚನ್ನು ವ್ಯವಸ್ಥಿತವಾಗಿ ಮಾಡಲಾಗುತ್ತಿದೆ’ ಎಂದರು.

‘ಕ್ಷೇತ್ರದ ವಿರುದ್ಧ ಷಡ್ಯಂತ್ರ ಮಾಡಿ ಸನಾತನ ಧರ್ಮದೊಳಗೆ ಬಿರುಕು ಮೂಡಿಸಲು ಯತ್ನಿಸುತ್ತಿರುವವರ ವಿರುದ್ಧ ಕೂಡಲೇ ಕಾನೂನು ಕ್ರಮ ಕೈಗೊಳ್ಳಬೇಕು. ಇತ್ತೀಚೆಗೆ ನಡೆಯುತ್ತಿರುವ ಎಲ್ಲಾ ಘಟನೆಗಳ ಸಮಗ್ರ ತನಿಖೆ ನಡೆಸಿ, ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗಬೇಕು’ ಎಂದು ಆಗ್ರಹಿಸಿದ್ದಾರೆ.

ಹಿಂದೂ ಧಾರ್ಮಿಕ ಕೇಂದ್ರಗಳ ವಿರುದ್ಧ ಪಿತೂರಿ ಮಾಡುವ ಎಲ್ಲಾ ಶಕ್ತಿಗಳ ವಿರುದ್ಧ ಎಲ್ಲಾ ರೀತಿಯ ಹೋರಾಟ ಮಾಡಲು ಸಿದ್ಧ ಎಂದು ಪರಿಷತ್ತಿನ ನಿಕಟಪೂರ್ವ ಪ್ರಾಂತ ಕಾರ್ಯಾಧ್ಯಕ್ಷ ಎಂ.ಬಿ. ಪುರಾಣಿಕ್ ತಿಳಿಸಿದ್ದಾರೆ.

ಹಲ್ಲೆ ಖಂಡಿಸಿ ಪ್ರತಿಭಟನೆ

ಧರ್ಮಸ್ಥಳದಲ್ಲಿ ಮಾಧ್ಯಮ ಪ್ರತಿನಿಧಿಗಳ ಮೇಲೆ ನಡೆದ ಹಲ್ಲೆಯನ್ನು ಖಂಡಿಸಿ ದಲಿತ ಸಂಘಟನೆಗಳ ಒಕ್ಕೂಟದಿಂದ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಶನಿವಾರ ಪ್ರತಿಭಟನೆ ನಡೆಯಿತು.

ಪ್ರಕರಣವೊಂದರ ಸಂಬಂಧ ಧರ್ಮಸ್ಥಳದಲ್ಲಿ ಎಸ್‌ಐಟಿ ತನಿಖೆ ನಡೆಯುತ್ತಿದೆ. ಈ ನಡುವೆ ಕಾನೂನು ಸುವ್ಯವಸ್ಥೆಗೆ ಧಕ್ಕೆ ತರುವ ಕೆಲಸ ಮಾಡಲಾಗಿದೆ ಎಂದು ಪ್ರತಿಭಟನಕಾರರು ಆಕ್ರೋಶ ಹೊರಹಾಕಿದರು. ಹಲ್ಲೆ ಘಟನೆಯನ್ನು ಒಕ್ಕೂಟವು ತೀವ್ರ ಖಂಡಿಸುತ್ತದೆ. ಅಲ್ಲದೇ ಆರೋಪಿಗಳನ್ನು ಬಂಧಿಸಬೇಕು ಎಂದು ಆಗ್ರಹಿಸಿದರು.

ಇಕೆಬಾನ

ಪ್ರಜಾವಾಣಿ ಚಿತ್ರ

ತೋಟಗಾರಿಕೆ ಇಲಾಖೆಯು ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಹಮ್ಮಿಕೊಂಡಿರುವ ಫಲಪುಷ್ಪ ಪ್ರದರ್ಶನದಲ್ಲಿ ಮಹಿಳೆಯರು ಶನಿವಾರ ಇಕೆಬಾನ ವೀಕ್ಷಿಸಿದರು

ಸಿಎಂಆರ್ ವಿ.ವಿ.ಗೆ ‘ನ್ಯಾಕ್ ಎ’ ಮಾನ್ಯತೆ

ಬೆಂಗಳೂರು: ನಗರದ ಸಿಎಂಆರ್ ವಿಶ್ವವಿದ್ಯಾಲಯಕ್ಕೆ ‘ನ್ಯಾಕ್ ಎ ಗ್ರೇಡ್ ಮಾನ್ಯತೆ’ ಲಭಿಸಿದೆ. ನ್ಯಾಷನಲ್ ಅಸೆಸ್ಮೆಂಟ್ ಆ್ಯಂಡ್ ಅಕ್ರಿಡೇಷನ್ ಕೌನ್ಸಿಲ್(ನ್ಯಾಕ್), ಮೊದಲ ಅವಧಿಯಲ್ಲಿ 5 ವರ್ಷಗಳಿಗೆ ‘ನ್ಯಾಕ್ ಎ’ ಮಾನ್ಯತೆಯನ್ನು ನೀಡಿದೆ.

ನ್ಯಾಕ್ ‘ಎ’ ಮಾನ್ಯತೆ ಮತ್ತು ಮನ್ನಣೆ ಕುರಿತು ಮಾತನಾಡಿದ ಸಿಎಂಆರ್ ವಿಶ್ವವಿದ್ಯಾಲಯದ ಕುಲಪತಿ ಎಚ್.ಬಿ. ರಾಘವೇಂದ್ರ ‘ಈ ಸಾಧನೆಗೆ ಆಡಳಿತ ಮಂಡಳಿಯ ಸಮರ್ಪಣಾ ಮನೋಭಾವ ಮತ್ತು ಸಮರ್ಥ ನಾಯಕತ್ವ, ನುರಿತ ಅಧ್ಯಾಪಕರು ಮತ್ತು ಸಿಬ್ಬಂದಿ ವರ್ಗ, ಪ್ರತಿಭಾವಂತ ವಿದ್ಯಾರ್ಥಿಗಳು, ಹಳೆಯ ವಿದ್ಯಾರ್ಥಿಗಳ ಶೈಕ್ಷಣಿಕ ಪರಿಶ್ರಮ ಈ ಸಾಧನೆಗೆ ಕಾರಣ’ ಎಂದು ಹೇಳಿದರು.

ಮೌಲ್ಯಾಧಾರಿತ ಶಿಕ್ಷಣವನ್ನು ನೀಡುವ ಮೂಲಕ ದೇಶಕ್ಕೆ ಸಮರ್ಥ ಸಂಪನ್ಮೂಲರಾಗಬಲ್ಲ ವೃತ್ತಿಪರ ವಿದ್ಯಾರ್ಥಿ ಸಮುದಾಯವನ್ನು ಸೃಷ್ಟಿಸುವ ನಿಟ್ಟಿನಲ್ಲಿ ಸಿಎಂಆರ್ ವಿಶ್ವವಿದ್ಯಾಲಯ ಶ್ರಮಿಸುತ್ತಿದೆ. ನ್ಯಾಕ್ ಎ ಮಾನ್ಯತೆ ಪಡೆದಿರುವುದು ಹೆಮ್ಮೆಯ ಸಾಧನೆಯಾಗಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ನ್ಯಾಕ್ ಮಾನದಂಡಗಳು ಎಲ್ಲಾ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿನ ಶೈಕ್ಷಣಿಕ ಗುಣಮಟ್ಟ ಹಾಗೂ ನಿರ್ವಹಣಾ ಸಾಮರ್ಥ್ಯವನ್ನು ಕಾಪಾಡಿಕೊಂಡು ಸದಾ ಮುನ್ನಡೆಯುವಂತೆ ಪ್ರೇರೇಪಿಸುತ್ತವೆ. ಈ ನಿಟ್ಟಿನಲ್ಲಿ ಸಿಎಂಆರ್ ವಿಶ್ವವಿದ್ಯಾಲಯ ಸದಾ ಆತ್ಮವಿಶ್ವಾಸ ಮತ್ತು ಸಮರ್ಪಣಾ ಮನೋಭಾವದಿಂದ ಮುನ್ನಡೆಯಲು ಬದ್ಧವಾಗಿದೆ ಎಂದರು.

‘ಧ್ರುವ ವಿರುದ್ಧದ ಹಣ ವಂಚನೆ ಆರೋಪ ಸುಳ್ಳು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟ ಧ್ರುವ ಸರ್ಜಾ ಅವರ ವಿರುದ್ಧದ ಹಣ ವಂಚನೆ ಆರೋಪದಲ್ಲಿ ಹುರುಳಿಲ್ಲ ಎಂದು ಅವರ ಆಪ್ತ ಅಶ್ವಿನ್ ಹೇಳಿದ್ದಾರೆ.

‘ಜಗ್ಗುದಾದ’ ಸಿನಿಮಾ ನಿರ್ದೇಶಕ, ನಿರ್ಮಾಪಕ ರಾಘವೇಂದ್ರ ಹೆಗಡೆ ಎಂಬುವವರು ಮುಂಬೈನ ಅಂಬೋಲಿ ಪೊಲೀಸ್ ಠಾಣೆಯಲ್ಲಿ ಧ್ರುವ ಸರ್ಜಾ ಅವರ ವಿರುದ್ಧ ವಂಚನೆ ದೂರು ನೀಡಿದ್ದು, ಈ ದೂರು ಆಧರಿಸಿ ಎಫ್‌ಐಆರ್ ದಾಖಲಾಗಿದೆ.

ಧ್ರುವ ಸರ್ಜಾ

ಈ ಬಗ್ಗೆ ಪ್ರತಿಕ್ರಿಯೆ ನೀಡಿರುವ ಅಶ್ವಿನ್, ‘2018ರಲ್ಲಿ ರಾಘವೇಂದ್ರ ಹೆಗಡೆ ಅವರ ‘ಆರ್‌ಎಚ್ ಎಂಟರ್‌ಟೇನ್ಮೆಂಟ್’ ಹಾಗೂ ‘ನಂದಿನಿ ಎಂಟರ್‌ಪ್ರೈಸಸ್’ನಿಂದ ಒಟ್ಟು ₹3.10 ಕೋಟಿ ಮುಂಗಡ ಹಣ ನೀಡಿರುತ್ತಾರೆ. ಈ ಪೈಕಿ ಆರ್‌ಎಚ್ ಎಂಟರ್‌ಟೇನ್ಮೆಂಟ್ ₹2.90 ಕೋಟಿ ನೀಡಿರುತ್ತದೆ. ಇದಾಗಿ ಒಂದು ವರ್ಷದೊಳಗೆ ನಾವು ನಮ್ಮ ಖಾತೆಯಿಂದ ₹20 ಲಕ್ಷವನ್ನು ನಂದಿನಿ ಎಂಟರ್‌ಪ್ರೈಸಸ್‌ಗೆ ಹಿಂದಿರುಗಿಸಿದ್ದೆವು. ಮುಂಗಡ ನೀಡುವಾಗ ಮೂರು ತಿಂಗಳಲ್ಲಿ ಸೈನಿಕನ ಕಥೆ ಇರುವ ಸಿನಿಮಾ ಸಿದ್ಧಪಡಿಸಿಕೊಂಡು ಬರುತ್ತೇನೆ ಎಂದಿದ್ದರು. ಅವರ ಕಚೇರಿ ಮುಂಬೈನಲ್ಲಿದೆ. ನಾವು ಕೇಳಿದಾಗಲೆಲ್ಲ ಕಥೆ ಸಿದ್ಧಪಡಿಸುತ್ತಿದ್ದೇನೆ ಎನ್ನುತ್ತಿದ್ದ ಅವರು, ಸುಮಾರು ನಾಲ್ಕೂವರೆ ವರ್ಷಗಳ ಬಳಿಕ ಎಂದರೆ 2023ರಲ್ಲಿ ಇ–ಮೇಲ್ ಮೂಲಕ ಸಿನಿಮಾದ ಮೊದಲಾರ್ಧದ ಕಥೆ ಕಳುಹಿಸಿದ್ದರು. ಆ ಸಂದರ್ಭದಲ್ಲಿ ಮತ್ತೆ ಮೂರು ತಿಂಗಳು ಸಮಯ ಕೇಳುತ್ತಾರೆ. ನಮ್ಮನ್ನು ಭೇಟಿ ಮಾಡಲು ಸಾಧ್ಯವಾಗುತ್ತಿಲ್ಲ ಎನ್ನುವ ಆರೋಪ ಸುಳ್ಳು. ಈ ರೀತಿ ಇದ್ದಿದ್ದರೆ ಅಷ್ಟು ವರ್ಷಗಳ ಬಳಿಕ ಏಕೆ ಕಥೆ ಕಳುಹಿಸಬೇಕಿತ್ತು’ ಎಂದು ಪ್ರಶ್ನಿಸಿದ್ದಾರೆ.

‘ಒಂದು ದಿನ ಅವರು ಬಂದು ಸಿನಿಮಾದ ಬಜೆಟ್ ಹೆಚ್ಚಾಗಲಿದೆ. ಕನ್ನಡದಲ್ಲಿ ಸದ್ಯ ವಹಿವಾಟು ಆಗುತ್ತಿಲ್ಲ, ತೆಲುಗು ಅಥವಾ ಹಿಂದಿಯಲ್ಲಿ ಮಾಡಿ. ಕನ್ನಡದಲ್ಲಿ ಡಬ್ ಮಾಡೋಣ ಎಂದಿದ್ದರು. ಇದಕ್ಕೆ ಧ್ರುವ ಸರ್ಜಾ ಅವರು ಒಪ್ಪಿರಲಿಲ್ಲ. ಕನ್ನಡದಲ್ಲೂ ಒಳ್ಳೆಯ ಸಿನಿಮಾ ಮಾಡಿದರೆ ವಹಿವಾಟು ಖಂಡಿತಾ ನಡೆಯುತ್ತದೆ ಎಂದು ಧ್ರುವ ಹೇಳಿದ್ದರು. ಹೀಗಿದ್ದರೂ ಅವರು ಗೊಂದಲದಲ್ಲೇ ಇದ್ದರು. ಇನ್ನೊಮ್ಮೆ ಬಂದು ನಾನು ಮಾಡಬೇಕಾದ ಕಥೆ ‘ಅಮರನ್’ ಎಂಬ ಸಿನಿಮಾವಾಗಿ ಬಂದಾಗಿದೆ. ನಿಮ್ಮ ಬಳಿಯೇ ನಿರ್ದೇಶಕರು, ಬರಹಗಾರರು ಇದ್ದರೆ ಹೇಳಿ ಎಂದಿದ್ದರು. ಜೂನ್ 28ರಂದು ಬೆಂಗಳೂರಿನಲ್ಲಿ ಭೇಟಿಯಾಗಿ ಅಕ್ಟೋಬರ್‌ನಿಂದ ಡೇಟ್ಸ್ ಕೊಡಿ, ತೆಲುಗಿನಲ್ಲಿ ಸಿನಿಮಾ ಮಾಡೋಣ ಎಂದಿದ್ದರು. ಕನ್ನಡದಲ್ಲೇ ಮಾಡೋಣ ಎಂದು ಆಗಲೂ ಧ್ರುವ ಹೇಳಿದ್ದರು’ ಎಂದು ಅಶ್ವಿನ್ ಮಾಹಿತಿ ನೀಡಿದರು.

‘ಜುಲೈ 10ಕ್ಕೆ ಅಂಬೋಲಿ ಪೊಲೀಸ್ ಠಾಣೆಯಿಂದ ನಮಗೆ ನೋಟಿಸ್ ಬಂದಿತ್ತು. ನಮಗೆ ₹3.10 ಕೋಟಿ ಕೊಡಬೇಕು, ಅದು ಈಗ ಬಡ್ಡಿ ಎಲ್ಲಾ ಸೇರಿ ₹9.58 ಕೋಟಿ ಆಗಿದೆ. ಇದನ್ನು ವಾಪಸ್ ಕೊಡಬೇಕು ಎಂದು ಅದರಲ್ಲಿ ಉಲ್ಲೇಖಿಸಿದ್ದರು. ಅವರಿಗೆ ಕರೆ ಮಾಡಿದರೂ ಸ್ವೀಕರಿಸಲಿಲ್ಲ. ಅವರಿಗೇ ಸಿನಿಮಾ ಮಾಡಲು ಇಷ್ಟವಿರಲಿಲ್ಲ. ನಾವೇನು ಅವರ ಬಳಿ ಸಾಲ ಪಡೆದಿಲ್ಲ. ಅವರು ಸಿನಿಮಾಗೆ ಮುಂಗಡ ನೀಡಿದ್ದರು. ನಾವು ಸಿನಿಮಾ ಮಾಡಲ್ಲ ಎಂದೂ ಹೇಳಿಲ್ಲ. ದುಡ್ಡು ವಾಪಸ್ ಕೊಡಲ್ಲ ಎಂದಿಲ್ಲ. ಅವರು ಅದನ್ನು ಕೇಳಿಯೆ ಇಲ್ಲ. ನಾವು ಮುಂದೆ ಕಾನೂನು ಪ್ರಕಾರವೇ ಹೆಜ್ಜೆ ಇಡಲಿದ್ದೇವೆ’ ಎಂದಿದ್ದಾರೆ ಅಶ್ವಿನ್.

ಸೋಲದೇವನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು

ರೌಡಿಶೀಟರ್ ಕೊಲೆ: ಮೂವರ ಸೆರೆ

ಪ್ರಜಾವಾಣಿ ವಾರ್ತೆ

ಪ್ರತಾಪ್

ಪೀಣ್ಯ ದಾಸರಹಳ್ಳಿ: ಚಿಕ್ಕಬಾಣಾವರದ ಮಾರುತಿನಗರದ ಬಾರ್ ಎದುರು ಶುಕ್ರವಾರ ತಡರಾತ್ರಿ ನಡೆದ ಗಲಾಟೆಯಲ್ಲಿ ರೌಡಿಶೀಟರ್ ಪ್ರತಾಪ್ (27) ಅವರನ್ನು ದುಷ್ಕರ್ಮಿಗಳು ಕೊಲೆ ಮಾಡಿದ್ದಾರೆ.

ಕೊಲೆ ಪ್ರಕರಣದ ಸಂಬಂಧ ಅಕ್ಷಯ್, ತೇಜಸ್, ಲಿಖಿತ್ ಎಂಬುವವರನ್ನು ಸೋಲದೇವನಹಳ್ಳಿ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

‘ಹೆಸರಘಟ್ಟ ಮುಖ್ಯರಸ್ತೆಯಲ್ಲಿರುವ ಗುರು ಕೃಪಾ ಬಾರ್ ಅನ್ನು ಶುಕ್ರವಾರ ರಾತ್ರಿ 11ರ ಸುಮಾರಿಗೆ ಸಿಬ್ಬಂದಿ ಬಂದ್ ಮಾಡಿದ್ದರು. ಬಂದ್ ಆಗಿದ್ದ ಬಾರ್ ಎದುರು ಪ್ರತಾಪ್ ನಿಂತಿದ್ದರು. ಸ್ಥಳಕ್ಕೆ ಬಂದಿದ್ದ ಆರೋಪಿಗಳು, ಮದ್ಯ ಬೇಕೆಂದು ವಿಚಾರಿಸಿದ್ದರು. ಬಾರ್ ಬಂದ್ ಆಗಿದ್ದು, ಸ್ಥಳದಿಂದ ಹೋಗುವಂತೆ ಆರೋಪಿಗಳಿಗೆ ಪ್ರತಾಪ್ ಸೂಚಿಸಿದ್ದರು. ಆ ವೇಳೆ ಮಾತಿಗೆ ಮಾತು ಬೆಳೆದು ಎರಡು ಗುಂಪುಗಳ ಮಧ್ಯೆ ಗಲಾಟೆ ಆಗಿತ್ತು’ ಎಂದು ಪೊಲೀಸರು ಹೇಳಿದರು.

‘ಸ್ಥಳದಿಂದ ಆರೋಪಿಗಳು ಕೆಬ್ಬೆಪಾಳ್ಯದ ಮನೆಗೆ ತೆರಳಿದ್ದರು. ಸ್ವಲ್ಪ ಸಮಯದ ಬಳಿಕ ಡ್ರಾಗರ್ ಹಿಡಿದು ಸ್ಥಳಕ್ಕೆ ಆರೋಪಿಗಳು ಬಂದಿದ್ದರು. ಅಷ್ಟರಲ್ಲಿ ಪ್ರತಾಪ್ ಅವರು ಬೈಕ್‌ನಲ್ಲಿ ಮನೆಯತ್ತ ತೆರಳುತ್ತಿದ್ದರು. ಬೈಕ್ ಅನ್ನು ಅಡ್ಡಗಟ್ಟಿ, ಪ್ರತಾಪ್ ಅವರ ಹೊಟ್ಟೆಯ ಭಾಗಕ್ಕೆ ಚುಚ್ಚಿದ್ದರು. ಮಾಹಿತಿ ತಿಳಿದು ಸ್ಥಳಕ್ಕೆ ಬಂದ ಹೊಯ್ಸಳ ಸಿಬ್ಬಂದಿ ಪ್ರತಾಪ್ ಅವರನ್ನು ಆಸ್ಪತ್ರೆಗೆ ದಾಖಲಿಸಿದ್ದರು. ಆಸ್ಪತ್ರೆಯಲ್ಲಿ ಪ್ರತಾಪ್ ಮೃತಪಟ್ಟಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮೃತದೇಹದ ಮರಣೋತ್ತರ ಪರೀಕ್ಷೆ ನಡೆಸಿ ಕುಟುಂಬದವರಿಗೆ ಹಸ್ತಾಂತರ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು. ಸೋಲದೇವನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜಿಲೆಟಿನ್ ಕಡ್ಡಿ ಪತ್ತೆ ಪ್ರಕರಣ: ಮತ್ತೆ ಮೂವರ ಬಂಧನ

ಬೆಂಗಳೂರು: ಕಲಾಸಿಪಾಳ್ಯ ಬಸ್ ನಿಲ್ದಾಣದಲ್ಲಿ ಜಿಲೆಟಿನ್ ಹಾಗೂ ಡಿಟೊನೇಟರ್ ಪತ್ತೆಯಾಗಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಮತ್ತೆ ಮೂವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದು, ಪ್ರಕರಣದಲ್ಲಿ ಬಂಧಿತರ ಸಂಖ್ಯೆ 6ಕ್ಕೆ ಏರಿಕೆಯಾಗಿದೆ.

ಕೋಲಾರದ ಶಿವಕುಮಾರ್, ನವೀನ್ ಸೇರಿದಂತೆ ಮೂವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಪ್ರಕರಣದಲ್ಲಿ 22 ಜೀವಂತ ಜಿಲೆಟಿನ್ ಕಡ್ಡಿಗಳು ಹಾಗೂ 30 ಎಲೆಕ್ಟ್ರಿಕ್ ಡಿಟೊನೇಟರ್‌ಗಳನ್ನು ವಶಕ್ಕೆ ಪಡೆಯಲಾಗಿತ್ತು. ಆರೋಪಿಗಳು ಕೋಲಾರದಿಂದ ಜಿಲೆಟಿನ್, ಡಿಟೊನೇಟರ್ ಸೇರಿ ಮತ್ತಿತರ ಸ್ಫೋಟಕ ಸಾಮಗ್ರಿಗಳನ್ನು ವಾಹನಗಳಲ್ಲಿ ಸಾಗಿಸುತ್ತಿದ್ದರು. ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಕ್ವಾರಿ, ಕೊಳವೆಬಾವಿ ಕೊರೆಸಲು ಅಗತ್ಯವಿರುವ ಕಡೆಗಳಲ್ಲಿ ಸ್ಫೋಟಕಗಳನ್ನು ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದರು ಎಂದು ಪೊಲೀಸರು ತಿಳಿಸಿದರು.

ಅಪರಾಧ ಸುದ್ದಿ

ಜುಲೈ 23ರಂದು ಮಧ್ಯಾಹ್ನ ಕಲಾಸಿಪಾಳ್ಯದ ಶೌಚಾಲಯದ ಬಳಿ ಜಿಲೆಟಿನ್, ಡಿಟೊನೇಟರ್ ಪತ್ತೆಯಾಗಿದ್ದವು. ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದ್ದ ಕಲಾಸಿಪಾಳ್ಯ ಠಾಣೆಯ ಪೊಲೀಸರು ಈ ಹಿಂದೆ ಗಣೇಶ್, ಶಿವ ಹಾಗೂ ಮುನಿಯಪ್ಪ ಎಂಬುವರನ್ನು ಬಂಧಿಸಿದ್ದರು.

ಅಪಘಾತ: ಪತ್ನಿ ಸಾವು, ಪತಿಗೆ ಗಾಯ

ಲಗ್ಗೆರೆ ಸೇತುವೆಯಲ್ಲಿ ದ್ವಿಚಕ್ರ ವಾಹನ ಹಾಗೂ ಲಾರಿ ನಡುವೆ ಶುಕ್ರವಾರ ಮಧ್ಯಾಹ್ನ ಸಂಭವಿಸಿದ ಅಪಘಾತದಲ್ಲಿ ಪತ್ನಿ ಮೃತಪಟ್ಟು, ಪತಿ ಗಾಯಗೊಂಡಿದ್ದಾರೆ.

ಮಲ್ಲೇಶ್ವರದ ನಿವಾಸಿ ಗೀತಾ (23) ಮೃತಪಟ್ಟವರು. ಪತಿ ಸುನಿಲ್ ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಮೂರು ತಿಂಗಳ ಹಿಂದೆ ಸುನಿಲ್ ಹಾಗೂ ಗೀತಾ ಮದುವೆ ಆಗಿದ್ದರು. ವರಮಹಾಲಕ್ಷ್ಮಿ ಹಬ್ಬದ ನಿಮಿತ್ತ ಶುಕ್ರವಾರ ಮಧ್ಯಾಹ್ನ ಲಗ್ಗೆರೆಯಲ್ಲಿರುವ ಅಕ್ಕನ ಮನೆಗೆ ಸುನಿಲ್ ಅವರು ಪತ್ನಿಯನ್ನು ದ್ವಿಚಕ್ರ ವಾಹನದಲ್ಲಿ ಕರೆಕೊಂಡು ಹೋಗುತ್ತಿದ್ದರು. ಲಗ್ಗೆರೆಯ ಸೇತುವೆಯ ಬಳಿ ಲಾರಿಯೊಂದು ವೇಗವಾಗಿ ಬಂದು ದ್ವಿಚಕ್ರ ವಾಹನಕ್ಕೆ ಡಿಕ್ಕಿಯಾಗಿದೆ. ಡಿಕ್ಕಿಯ ರಭಸಕ್ಕೆ ಗೀತಾ ಅವರು ರಸ್ತೆಯ ಮೇಲೆ ಬಿದ್ದು ಗಂಭೀರವಾಗಿ ಗಾಯಗೊಂಡು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಗೀತಾ

ಚನ್ನಪಟ್ಟಣದಲ್ಲಿ ನೆಲಸಿದ್ದ ಗೀತಾ ಅವರ ಅಜ್ಜಿ ರಾಕಮ್ಮ (65), ಮೊಮ್ಮಗಳ ಸಾವಿನ ಸುದ್ದಿ ತಿಳಿದು ಶನಿವಾರ ಮಧ್ಯಾಹ್ನ ಹೃದಯಾಘಾತದಿಂದ ಮೃತಪಟ್ಟಿದ್ದಾರೆ.

ಪತಿಯ ಗೋಳಾಟ: ಸ್ಥಳದಲ್ಲೇ ಮೃತಪಟ್ಟ ಪತ್ನಿಯ ಮೃತದೇಹವನ್ನು ಹಿಡಿದು ಪತಿ ಗೋಳಾಟ ನಡೆಸಿದ ದೃಶ್ಯವು ಮನಕಲಕುವಂತೆ ಇತ್ತು. ರಾಜಾಜಿನಗರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಯುವತಿ ಮೇಲೆ ಬಾಲಕ ಅತ್ಯಾಚಾರ

ಕೆಜಿಎಫ್: 17 ವರ್ಷದ ಬಾಲಕನೊಬ್ಬ ತನಗಿಂತ ಒಂದು ವರ್ಷ ದೊಡ್ಡವಳಾದ ಯುವತಿ ಮೇಲೆ ಎಂಟು ತಿಂಗಳಿಂದ ಅತ್ಯಾಚಾರ ಎಸಗಿದ್ದು, ಯುವತಿ ಗರ್ಭಿಣಿಯಾಗಿದ್ದಾಳೆ.

ಯುವತಿ ತಾಯಿ ನೀಡಿದ ದೂರಿನ ಮೇರೆಗೆ ಊರಿಗಾಂ ಪೊಲೀಸ್ ಠಾಣೆಯಲ್ಲಿ ಶನಿವಾರ ಪ್ರಕರಣ ದಾಖಲಾಗಿದೆ.

ಪತ್ರಿಕಾ ಪ್ರಕಟಣೆ

ದಿನಾಂಕ: 07.08.2025 ರಿಂದ 18.08.2025ರ ವರೆಗೆ ಸ್ವಾತಂತ್ರ್ಯೋತ್ಸವದ ಅಂಗವಾಗಿ **ವೀರ ರಾಣಿ ಕಿತ್ತೂರು ಚೆನ್ನಮ್ಮ** ಮತ್ತು **ಕ್ರಾಂತಿ ವೀರ ಸಂಗೊಳ್ಳಿ ರಾಯಣ್ಣ** ವಿಷಯಾಧಾರಿತ **218**ನೇ ಫಲಪುಷ್ಪ ಪ್ರದರ್ಶನವನ್ನು ಲಾಲ್‌ಬಾಗ್‌ನಲ್ಲಿ ಹಮ್ಮಿಕೊಳ್ಳಲಾಗಿದ್ದು, ಸಾರ್ವಜನಿಕರಿಗೆ ಅನುಕೂಲವಾಗುವಂತೆ ತೋಟಗಾರಿಕೆ ಇಲಾಖೆಯ ಕ್ಯೂಆರ್ (QR) ಕೋಡ್ ಬಳಸಿ (https://hasiru.karnataka.gov.in/flowershow/login.aspx)ನಲ್ಲಿ ಟಿಕೆಟ್ ಬುಕಿಂಗ್ ಮಾಡುವ ವ್ಯವಸ್ಥೆಯನ್ನು ಕಲ್ಪಿಸಲಾಗಿದ್ದು. ಸಾರ್ವಜನಿಕರು ಇದರ ಸದುಪಯೋಗವನ್ನು ಉಪಯೋಗಿಸಿಕೊಂಡು ಆನ್ ಲೈನ್ (ONLINE) ನಲ್ಲಿ ಟಿಕೆಟ್ ಬುಕಿಂಗ್ ಮಾಡಿಕೊಂಡು ಲಾಲ್ ಬಾಗ್ ದ್ವಾರಗಳಲ್ಲಿ ಸಾಲುಗಳಲ್ಲಿ ನಿಲ್ಲುವುದನ್ನು ತಪ್ಪಿಸಬಹುದಾಗಿರುತ್ತದೆ.

ನಗರದಲ್ಲಿ ಕೆಲವೆಡೆ ಬಿರುಸಿನ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವು ಪ್ರದೇಶಗಳಲ್ಲಿ ಶನಿವಾರ ಗಾಳಿ, ಮಳೆ ಸುರಿದು ವಾತಾವರಣ ತಂಪಾಯಿತು.

ಬೆಂಗಳೂರು ಉತ್ತರ ತಾಲ್ಲೂಕಿನ ಚೊಕ್ಕಸಂದ್ರ, ಬಾಗಲಕುಂಟೆ ಭಾಗದಲ್ಲಿ 4 ಸೆಂ.ಮೀಗೂ ಅಧಿಕ ಮಳೆಯಾಗಿದೆ. ತಗ್ಗು ಪ್ರದೇಶಗಳಲ್ಲಿ ನೀರು ನಿಂತಿದೆ. ಚಿಕ್ಕಬಾಣಾವರ ಭಾಗದಲ್ಲಿ (ರೈಲ್ವೆ ಕೆಳಸೇತುವೆ) ಪ್ರದೇಶದಲ್ಲಿ ನೀರು ನಿಂತು, ದ್ವಿಚಕ್ರ ವಾಹನ ಸವಾರರು ಪರದಾಡುವಂತಾಯಿತು.

ದೊಡ್ಡಬಿದರಕಲ್ಲು, ವಿದ್ಯಾರಣ್ಯಪುರಂ, ಪೀಣ್ಯ ಕೈಗಾರಿಕಾ ಪ್ರದೇಶ, ನಾಗಪುರ, ಮಾದಾವರ, ಸೋಲದೇವನಹಳ್ಳಿ, ಎಂಟನೇ ಮೈಲಿ, ದಾಸರಹಳ್ಳಿ, ಹೆಸರಘಟ್ಟ ರಸ್ತೆ, ಸುಂಕದಕಟ್ಟೆ ಭಾಗದಲ್ಲಿ ಹೆಚ್ಚು ಮಳೆಯಾಗಿದೆ. ಕೆಲವೆಡೆ ತುಂತುರು ಮಳೆ ಸುರಿಯತೊಡಗಿತು.

ವಿಜಯನಗರ, ರಾಜಾಜಿನಗರ, ಎಂ.ಜಿ. ರಸ್ತೆ, ಮಲ್ಲೇಶ್ವರಂ, ಚಂದ್ರಾಲೇಔಟ್, ಮಾಗಡಿ ರಸ್ತೆ, ದೀಪಾಂಜಲಿ ನಗರ, ಮೈಸೂರು ರೋಡ್, ನಾಗರಭಾವಿ, ಮೂಡಲಪಾಳ್ಯ, ಗೋವಿಂದರಾಜನಗರ, ರಾಜರಾಜೇಶ್ವರಿ ನಗರ ಸೇರಿ ಹಲವೆಡೆ ಉತ್ತಮ ಮಳೆಯಾಗಿದೆ.

ಮಧ್ಯಾಹ್ನದಿಂದಲೇ ಮೋಡ ಕವಿದ ವಾತಾವರಣ ಇತ್ತು, ಸಂಜೆ ಗುಡುಗು ಸಹಿತ ಹಲವೆಡೆ ಮಳೆ ಸುರಿಯಿತು. ಕೆಲವರು ಕೊಡೆ ಹಿಡಿದು ರಸ್ತೆಯಲ್ಲಿ ಸಾಗಿದರೆ, ಮತ್ತೆ ಕೆಲವರು ತೊಯ್ದುಕೊಂಡು ಹೋದರು.

ಮಳೆಯೊಂದಿಗೆ ಗಾಳಿ ವೇಗವೂ ಹೆಚ್ಚಾಗಿದ್ದು, ಕೆಲವು ಪ್ರದೇಶಗಳಲ್ಲಿ ಮರದ ಕೊಂಬೆಗಳು ಬಿದ್ದಿವೆ. ಕೆಲವು ರಸ್ತೆಗಳಲ್ಲಿ ಮಳೆ ನೀರು ತುಂಬಿಕೊಂಡಿದ್ದು, ಟ್ರಾಫಿಕ್ ಹೆಚ್ಚಾಗಿದೆ. ಇದರಿಂದ ವಾಹನ ಸವಾರರು ಪರದಾಡುವಂತಾಗಿದೆ. ರಾತ್ರಿ ಹಲವೆಡೆ ಮಳೆ ಬಿರುಸು ಪಡೆಯಿತು.

ಮಳೆ: ಎಲ್ಲಿ ಎಷ್ಟು?

ಪ್ರದೇಶ	ಪ್ರಮಾಣ (ಸೆಂ.ಮೀ)
ಚೊಕ್ಕಸಂದ್ರ	4.6
ಬಾಗಲಕುಂಟೆ	3.5
ಪೂರ್ವ ಬಾಣಸವಾಡಿ	3.4
ವಿ.ನಾಗೇನಹಳ್ಳಿ	3.2
ಯಲಹಂಕ	3.0
ಹೊರಮಾವು	2.7

ದರ ನಿಗದಿಗೆ ಅಧಿಕಾರಿಗಳ ತಂಡ ರಚನೆ

ಪಿಆರ್‌ಆರ್–1 ಯೋಜನೆ ಭೂ ಸ್ವಾಧೀನ: ಎರಡು ದಿನ ಸಂಧಾನ ಸೂತ್ರದ ಸಭೆ

• ಕೆ.ಎಸ್.ಸುನಿಲ್

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಉದ್ದೇಶಿತ ಪೆರಿಫೆರಲ್ ವರ್ತುಲ ರಸ್ತೆ–ಪಿಆರ್‌ಆರ್1 (ಬೆಂಗಳೂರು ಬ್ಯುಸಿನೆಸ್ ಕಾರಿಡಾರ್) ಯೋಜನೆಗೆ ಸ್ವಾಧೀನಪಡಿಸಿ ಕೊಳ್ಳಲು ಉದ್ದೇಶಿಸಿರುವ ಜಮೀನುಗಳಿಗೆ ದರ ನಿಗದಿ ಸಂಬಂಧ ಭೂ ಮಾಲೀಕರೊಂದಿಗೆ ಸಂಧಾನ ಸೂತ್ರದ ಸಭೆ ಆಯೋಜಿಸಿದೆ.

ಯೋಜನೆಗಾಗಿ ಸ್ವಾಧೀನ ಪಡಿಸಿಕೊಳ್ಳುವ ಜಮೀನಿನ ಭೂ ಮಾಲೀಕರೊಂದಿಗೆ ಚರ್ಚಿಸಿ ದರ ನಿಗದಿ ಮಾಡಲು ಎಂಟು ಮಂದಿ ವಿಶೇಷ ಭೂಸ್ವಾಧೀನಾಧಿಕಾರಿಗಳ ತಂಡವನ್ನು ಪ್ರಾಧಿಕಾರ ರಚಿಸಿದೆ. ಈ ತಂಡವು ಆಗಸ್ಟ್ 11 ಮತ್ತು 12 ರಂದು 66 ಗ್ರಾಮಗಳ ವ್ಯಾಪ್ತಿಯ ಭೂ ಮಾಲೀಕರ ಅಹವಾಲು ಆಲಿಸಲಿದೆ.

ಈ ಹಿಂದೆ ಅಧಿಕಾರಿಗಳು, ಯೋಜನೆಗೆ ಜಮೀನು ಬಿಟ್ಟುಕೊಡಲಿರುವ ಹಳ್ಳಿಗಳಿಗೆ ತೆರಳಿ ರೈತರನ್ನು ಮನವೊಲಿಸಲು ಸಂಧಾನ ಸಭೆ ನಡೆಸಿದ್ದರೂ ಪ್ರಯೋಜನವಾಗಿರಲಿಲ್ಲ. 2013ರ ಭೂಸ್ವಾಧೀನ ಕಾಯ್ದೆ ಅನ್ವಯ ಪರಿಹಾರ ನಿಗದಿ ಮಾಡಬೇಕು ಎಂದು ರೈತರು ಪಟ್ಟು ಹಿಡಿದರು. ಆದರೆ, ಪ್ರಾಧಿಕಾರ ಮಾತ್ರ ಭೂ ಸ್ವಾಧೀನ ಕಾಯ್ದೆ 1894ರ ಅನ್ವಯ ಸಂಧಾನ ಸೂತ್ರದ ಮೂಲಕ ಪರಿಹಾರ ನಿಗದಿಗೆ ಆದೇಶ ಮಾಡಿದ್ದರಿಂದ ಭೂ ಪರಿಹಾರ ಕಗ್ಗಂಟಾಗಿಯೇ ಉಳಿದಿತ್ತು.

ಕೆಲವು ಅಧಿಕಾರಿಗಳು ರೈತರನ್ನು ಬೆದರಿಸಿ ಸಂಧಾನ ಸೂತ್ರದ ಪತ್ರಕ್ಕೆ ಸಹಿ ಮಾಡಿಸಿಕೊಂಡಿದ್ದಾರೆ ಎಂದು ಭೂ ಮಾಲೀಕರು ಆರೋಪಿಸಿದರು. ಈ ಬೆಳವಣಿಗೆ ನಡುವೆಯೇ ದರ ನಿಗದಿಗಾಗಿ ವಿಶೇಷ ತಂಡ ರಚಿಸಿದ್ದು, ಜಮೀನು ಮಾಲೀಕರಿಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಲು ಅವಕಾಶ ನೀಡಲಾಗಿದೆ.

ಎಲ್ಲೆಲ್ಲಿ ಸಭೆ?: ಆಗಸ್ಟ್ 11 ರಂದು ಬೆಂಗಳೂರು ಪೂರ್ವದ ವರ್ತೂರು ನಾಡ ಕಚೇರಿ, ಬ್ಯಾಲಕೆರೆ ಗ್ರಾಮ ಪಂಚಾಯಿತಿ ಕಚೇರಿ, ಅವಲಹಳ್ಳಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಆವರಣ, ಚೀಮಸಂದ್ರದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಆವರಣ, ಬಿದರೇನ ಅಗ್ರಹಾರದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಆವರಣ, ಶೀಗೆಹಳ್ಳಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಆವರಣ ಹಾಗೂ ಕಾಡುಗೋಡಿಯ ಬಿಬಿಎಂಪಿ ಕಚೇರಿ ಆವರಣದಲ್ಲಿ ಸಭೆ ನಡೆಯಲಿದೆ.

ಚಿಕ್ಕಸಂದ್ರ, ನಾಗೊಂಡನಹಳ್ಳಿ, ಹಗದೂರು, ಖಾನೆಕಂದಾಯ, ವಾಲೇಪುರ, ಬೆಳ್ಳಂದೂರು, ಅಮಾನಿಕೆರೆ, ಸೊರಹುಣಸೆ, ವರ್ತೂರು, ಗುಂಜೂರು, ಕಸಘಟ್ಟಪುರ, ಬ್ಯಾಲಕೆರೆ, ಮಾವಳ್ಳಿಪುರ, ಜಾರಕಬಂಡೆ ಕಾವಲ್, ಅವಲಹಳ್ಳಿ, ಚೀಮಸಂದ್ರ, ಅವಲಹಳ್ಳಿ, ದೊಡ್ಡಬನಹಳ್ಳಿ, ಬಿದರೇನ ಅಗ್ರಹಾರ, ಕನ್ನಮಂಗಲ, ಶೀಗೇಹಳ್ಳಿ, ಚಿಕ್ಕಬನಹಳ್ಳಿ, ಕುಂಬೇನ ಅಗ್ರಹಾರ, ಕಾಡುಗೋಡಿ, ಕೆಂಪಾಪುರ, ಕಾಳತಮ್ಮನಹಳ್ಳಿ, ಸೋಲದೇವನಹಳ್ಳಿ, ಚಿಕ್ಕಬಾಣಾವರ, ತಿರುಮೇನಹಳ್ಳಿ, ಚೊಕ್ಕನಹಳ್ಳಿ, ನರೇಶ್ವರ ನಾಗೇನಹಳ್ಳಿ, ಕೊತ್ತನೂರು, ಭೈರತಿ, ಚಳ್ಳಘಟ್ಟ, ದೊಡ್ಡಗುಬ್ಬಿ ಗ್ರಾಮಗಳ ಜಮೀನು ಮಾಲೀಕರು ಭಾಗವಹಿಸಬಹುದು.

ಆಗಸ್ಟ್ 12 ರಂದು ಯಲಹಂಕದ ಮಿನಿ ವಿಧಾನಸೌಧ, ಹುಸ್ಕೂರು ಕಂದಾಯ ನಿರೀಕ್ಷಕರ ಕಚೇರಿ, ರಾಂಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣ, ಬಿದರಹಳ್ಳಿಯ ಗ್ರಾಮ ಪಂಚಾಯಿತಿ ಕಚೇರಿ ಹತ್ತಿರ, ಬೆಂಗಳೂರು ಉತ್ತರ ತಾಲ್ಲೂಕಿನ ಮಾದನಾಯಕನಹಳ್ಳಿ ನಾಡಕಚೇರಿ, ಉತ್ತರ ತಾಲ್ಲೂಕಿನ ದಾಸನಪುರ ಹೋಬಳಿಯ ಆಲೂರು ಗ್ರಾಮ ಪಂಚಾಯಿತಿ ಕಚೇರಿ ಹಾಗೂ ಕೊಡತಿ ಗ್ರಾಮದ ಅಂಬೇಡ್ಕರ್ ಸಮುದಾಯ ಭವನದಲ್ಲಿ ಸಭೆ ನಡೆಯಲಿದೆ.

ಹಾರೋಹಳ್ಳಿ, ಕಂಚೇನಹಳ್ಳಿ, ವಾಸುದೇವಪುರ, ಮಂಚೇನಹಳ್ಳಿ, ವಡೇರಪುರ, ವೆಂಕಟಾಲ, ಕಟ್ಟಿಗೇನಹಳ್ಳಿ, ಕೋಗಿಲು, ಅಗ್ರಹಾರ, ಗಟ್ಟಿಹಳ್ಳಿ, ಹುಸ್ಕೂರು, ಗುಳಿಮಂಗಲ, ಸಿಂಗೇನ ಅಗ್ರಹಾರ, ಚಿಕ್ಕನಾಗಮಂಗಲ, ಕಮ್ಮಸಂದ್ರ, ಹೆಬ್ಬಗೋಡಿ, ಬಿಳಿಶಾವಲೆ, ರಾಂಪುರ, ವಡೇರಹಳ್ಳಿ, ಅದೂರು, ಬಿದರಹಳ್ಳಿ, ಹಿರಂಡಹಳ್ಳಿ, ಮಾದನಾಯಕನಹಳ್ಳಿ, ಹನುಮಂತಸಾಗರ, ತಮ್ಮೇನಹಳ್ಳಿ, ಕುದುರೆಗೆರೆ, ಕಾಚಮಾರನಹಳ್ಳಿ, ಸೂಲಿಕುಂಟೆ, ಚೊಕ್ಕಸಂದ್ರ, ಕೊಡತಿ, ಅವಲಹಳ್ಳಿ ರೈತರು ಭಾಗವಹಿಸಬಹುದು.

‘ಪಿಆರ್‌ಆರ್ ಯೋಜನೆಗೆ ಜಮೀನು ನೀಡುವ ಭೂ ಮಾಲೀಕರಿಗೆ ಕೇಂದ್ರ ಸರ್ಕಾರದ 2013ರ ಭೂಸ್ವಾಧೀನ ಕಾಯ್ದೆ ಅಡಿ ಪರಿಹಾರ ನಿಗದಿ ನೀಡಬೇಕು. ಈ ಕಾಯ್ದೆ ಪ್ರಕಾರ ಮಾರುಕಟ್ಟೆ ಬೆಲೆಗಿಂತ ಎರಡು ಪಟ್ಟು ಪರಿಹಾರ ನೀಡುವುದರ ಜತೆಗೆ ಪುನರ್ವಸತಿ ಕಲ್ಪಿಸಬೇಕಾಗುತ್ತದೆ. ಆದರೆ, ಬಿಡಿಎ ಇದಕ್ಕೆ ಒಪ್ಪಿಕೊಂಡಿಲ್ಲ. ಹಾಗಾಗಿ ನಮಗೆ ನಿರಾಕ್ಷೇಪಣಾ (ಎನ್‌ಒಸಿ) ಪತ್ರ ಕೊಡಲಿ’ ಎಂದು ಜಮೀನು ಮಾಲೀಕರು ಆಗ್ರಹಿಸಿದ್ದಾರೆ.

ಮುಖ್ಯಾಂಶಗಳು

- ಆಗಸ್ಟ್ 11, 12 ರಂದು 66 ಗ್ರಾಮಗಳ ವ್ಯಾಪ್ತಿಯ ಭೂ ಮಾಲೀಕರ ಅಹವಾಲು ಸ್ವೀಕಾರ
- ಪರಿಹಾರ– ಪಟ್ಟು ಸಡಿಲಿಸದ ರೈತರು

ಸಂಧಾನ ಸೂತ್ರ ಸಭೆಗೆ ವಿರೋಧ

‘ಪಿಆರ್‌ಆರ್–1 ಯೋಜನೆಗೆ 2007ರಲ್ಲಿ ಅಂತಿಮ ಅಧಿಸೂಚನೆ ಹೊರಡಿಸಲಾಯಿತು. 18 ವರ್ಷ ಕಳೆದರೂ ಯೋಜನೆ ಅನುಷ್ಠಾನ ಗೊಂಡಿಲ್ಲ. 2013ರ ಭೂ ಸ್ವಾಧೀನ ಕಾಯ್ದೆ ಅನ್ವಯ ಮಾರುಕಟ್ಟೆ ಬೆಲೆ ನೀಡಲು ಸಾಧ್ಯವಿಲ್ಲ ಎಂದು ಬಿಡಿಎ ಹೇಳಿದೆ. ಹಾಗಾಗಿ ಬಿಡಿಎ ಅಧಿಕಾರಿಗಳ ಸಂಧಾನ ಸೂತ್ರದ ಸಭೆಗೆ ನಮ್ಮ ವಿರೋಧ ಇದೆ. ರಾಜಕಾರಣಿಗಳ ರೆಸಾರ್ಟ್‌ಗೆ ರೈತರನ್ನು ಕರೆಸಿಕೊಂಡು ಬೆದರಿಸಿ ಸಂಧಾನ ಸೂತ್ರದ ಪತ್ರಕ್ಕೆ ಅಧಿಕಾರಿಗಳು ಸಹಿ ಹಾಕಿಸಿಕೊಳ್ಳುತ್ತಿದ್ದಾರೆ. ಸಹಿ ಹಾಕದಿದ್ದರೆ ನ್ಯಾಯಾಲಯಗಳಲ್ಲಿ ಅಲೆದಾಡಿ ಪರಿಹಾರ ಪಡೆದುಕೊಳ್ಳಬೇಕಾಗುತ್ತದೆ ಎಂದು ಬೆದರಿಸುತ್ತಿರುವುದು ಗಮನಕ್ಕೆ ಬಂದಿದೆ’ ಎಂದು ಪಿಆರ್‌ಆರ್ ರೈತ ಹಾಗೂ ನಿವೇಶನದಾರರ ಸಂಘದ ಅಧ್ಯಕ್ಷ ಮಾವಳ್ಳಿಪುರ ಶ್ರೀನಿವಾಸ್ ತಿಳಿಸಿದ್ದಾರೆ.

‘ಬಿಡಿಎ ತೆಗೆದುಕೊಂಡಿರುವ ತೀರ್ಮಾನ ಕೇಂದ್ರದ 2013ರ ಭೂ ಸ್ವಾಧೀನ ಕಾಯ್ದೆ ನಿಯಮಗಳಿಗೆ ವಿರುದ್ಧವಾಗಿದೆ. ಪಿಆರ್‌ಆರ್ ಯೋಜನೆ ವಿರುದ್ಧ ರೈತರು ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದು, ವಿಚಾರಣೆ ಹಂತದಲ್ಲಿದೆ’ ಎಂದು ಸಂಘದ ಜಂಟಿ ಕಾರ್ಯದರ್ಶಿ ವೆಂಕಟೇಶ್, ಖಜಾಂಚಿ ನರಸಿಂಹಮೂರ್ತಿ ಹೇಳಿದ್ದಾರೆ.

ನಾಗಮೋಹನ್ ದಾಸ್ ವರದಿ ಅಂಗೀಕಾರಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ‘ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ನೀಡುವ ಸಂಬಂಧ ನಾಗಮೋಹನ್ ದಾಸ್ ಸಲ್ಲಿಸಿರುವ ವರದಿಯನ್ನು ರಾಜ್ಯ ಸರ್ಕಾರ ಅಂಗೀಕರಿಸಬೇಕು. ಇಲ್ಲದಿದ್ದರೆ ಸರ್ಕಾರದ ವಿರುದ್ಧ ಉಗ್ರ ಹೋರಾಟ ನಡೆಸಲಾಗುವುದು’ ಎಂದು ಬಿಜೆಪಿ ಪರಿಶಿಷ್ಟ ಮೋರ್ಚಾ ರಾಜ್ಯ ಉಪಾಧ್ಯಕ್ಷ ಹೂಡಿ ಎಚ್.ವಿ.ಮಂಜುನಾಥ್ ಎಚ್ಚರಿಸಿದರು.

ಈ ಕುರಿತು ನಡೆದ ಸಭೆಯಲ್ಲಿ ಮಾತನಾಡಿದ ಅವರು, ‘ನಾಗಮೋಹನ್ ದಾಸ್ ನೇತೃತ್ವದ ಆಯೋಗ ನ್ಯಾಯ ಸಮ್ಮತವಾದ ಸಮೀಕ್ಷೆ ನಡೆಸಿ ರಾಜ್ಯ ಸರ್ಕಾರಕ್ಕೆ ವರದಿ ಸಲ್ಲಿಸಿದೆ. ಆದರೆ, ಸರ್ಕಾರ ವರದಿ ಜಾರಿಗೆ ಮೀನಮೇಷ ಎಣಿಸುತ್ತಿದೆ. ಇದಕ್ಕೆ ಕಾರಣ ಗೊತ್ತಾಗುತ್ತಿಲ್ಲ’ ಎಂದು ಹೇಳಿದರು.

‘ಈಗಾಗಲೇ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ ತೆಗೆದುಕೊಳ್ಳುವುದಾಗಿ ಮುಖ್ಯಮಂತ್ರಿ ತಿಳಿಸಿದ್ದಾರೆ. ಈಗ 16ರಂದು ಮತ್ತೊಂದು ವಿಶೇಷ ಸಂಪುಟ ಸಭೆ ಕರೆಯುತ್ತಿದ್ದಾರೆ. ಸರ್ಕಾರ ಪದೇ ಪದೇ ಮಾತು ತಪ್ಪುವ ಕೆಲಸ ಮಾಡುತ್ತಿದೆ’ ಎಂದು ದೂರಿದರು.

ಕಾಂತರಾಜ ಆಯೋಗದ ವರದಿಯಂತೆ ನಾಗಮೋಹನ್ ದಾಸ್ ವರದಿಯನ್ನೂ ಜಾರಿಗೊಳಿಸದೆ ಕಾಲಹರಣ ಮಾಡಬಾರದು. ಆದಷ್ಟು ಬೇಗ ವರದಿಯನ್ನು ಜಾರಿಗೊಳಿಸಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ರಾಜ್ಯದಾದ್ಯಂತ ಹೋರಾಟ ಮಾಡುತ್ತೇವೆ’ ಎಂದು ಎಚ್ಚರಿಸಿದರು. ಸಭೆಯಲ್ಲಿ ವಕೀಲರಾದ ವಿಕ್ರಮ್, ಕೃಷ್ಣಮೂರ್ತಿ, ಕನ್ನೆಲಿ ಕೆ.ಎಂ. ಸುರೇಶ್, ರಾಜಶೇಖರ್, ಸಂಜಯ್ ಇತರರು ಇದ್ದರು.

ಮತ ಕಳವು ಮಾಡಿಯೇ ಗೆದ್ದ ಕಾಂಗ್ರೆಸ್: ರಮೇಶ್

ಪ್ರಜಾವಾಣಿ ವಾರ್ತೆ

ರಮೇಶ್ ಗೌಡ

ಬೆಂಗಳೂರು: ಕೇಂದ್ರ ಸರ್ಕಾರದ ವಿರುದ್ಧ ಮತ ಕಳವು ಆರೋಪ ಮಾಡುತ್ತಿರುವ ಕಾಂಗ್ರೆಸ್ ಪಕ್ಷ ಹಿಂದಿನಿಂದಲೂ ಅದೇ ವೃತ್ತಿ ಮಾಡಿಕೊಂಡು ಬಂದಿದೆ ಎಂದು ಜೆಡಿಎಸ್ ನಗರ ಘಟಕದ ಅಧ್ಯಕ್ಷ ಎಚ್.ಎಂ. ರಮೇಶ್ ಗೌಡ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, 2023ರ ವಿಧಾನಸಭೆ, ಮೂರು ಕ್ಷೇತ್ರಗಳ ಉಪ ಚುನಾವಣೆಯಲ್ಲೂ ಮತ ಕಳವು ಮಾಡಿಯೇ ಕಾಂಗ್ರೆಸ್ ಗೆಲುವು ಸಾಧಿಸಿದೆ. ಮಹದೇವಪುರ ಕ್ಷೇತ್ರದಲ್ಲಿ ಮತ ಕಳವು ಮಾಡಲಾಗಿದೆ ಎಂಬ ರಾಹುಲ್ ಗಾಂಧಿ ಆರೋಪ ಸುಳ್ಳು ಎಂದರು.

ವಿಧಾನಸಭೆ ಚುನಾವಣೆಯಲ್ಲಿ ರಾಮನಗರ, ಮಾಗಡಿ, ಕುಣಿಗಲ್ ಸೇರಿ ಹಲವು ವಿಧಾನಸಭಾ ಕ್ಷೇತ್ರಗಳಲ್ಲಿ ‘ಗಿಫ್ಟ್ ಕೂಪನ್’ ಹಂಚಿ, ಇತರೆ ಕ್ಷೇತ್ರಗಳಲ್ಲಿ ಗ್ಯಾರಂಟಿ ಯೋಜನೆಯ ಕಾರ್ಡ್‌ಗಳನ್ನು ಬಳಸಿಕೊಂಡು ಕಾಂಗ್ರೆಸ್ ಗೆಲುವು ಸಾಧಿಸಿತ್ತು. ಉಪ ಚುನಾವಣೆಯ ಸಮಯದಲ್ಲೇ ಗೃಹಲಕ್ಷ್ಮಿ ಯೋಜನೆ ಬಾಕಿ ಹಣ ಜಮೆ ಮಾಡಿ ಮಹಿಳೆಯರ ಮತ ಪಡೆದಿತ್ತು ಎಂದು ದೂರಿದರು.

‘ಜೆಡಿಎಸ್ ಹಾಗೂ ಬಿಜೆಪಿ ಒಟ್ಟಾಗಿ ಲೋಕಸಭೆ ಚುನಾವಣೆ ಎದುರಿಸಿದವು. ಆದರೆ, ಎಲ್ಲಾ ಕ್ಷೇತ್ರಗಳನ್ನು ಗೆಲ್ಲಲು ಆಗಲಿಲ್ಲ. ಆದರೂ, ಚುನಾವಣಾ ಆಯೋಗವನ್ನು ದೂರಲಿಲ್ಲ. ವಿಧಾನಸಭೆ ಚುನಾವಣೆಯಲ್ಲಿ ಕೆಪಿಸಿಸಿ ಅಧ್ಯಕ್ಷರು 136 ಸ್ಥಾನ ಗೆಲ್ಲುತ್ತೇವೆ ಎಂದು ಹೇಳಿದ್ದರು. ಅಷ್ಟು ಕರಾರುವಕ್ಕಾಗಿ ಸಂಖ್ಯೆ ಹೇಳಿದ್ದಾರೆ ಎಂದರೆ ಮತ ಕಳವು ಮಾಡಿರುವ ಅನುಮಾನವಿದೆ’ ಎಂದರು.

ಕೆಪಿಸಿಸಿ ಕಚೇರಿಯಲ್ಲಿ ನಡೆದ‘ಕ್ವಿಟ್ ಇಂಡಿಯಾ’ ದಿನಾಚರಣೆ ಕಾರ್ಯಕ್ರಮದಲ್ಲಿ ಮಹಾತ್ಮಾ ಗಾಂಧೀಜಿಯವರ ಭಾವಚಿತ್ರಕ್ಕೆ ರಾಣಿ ಸತೀಶ್, ಸಲೀಂ ಅಹ್ಮದ್, ಬಿ.ಕೆ. ಹರಿಪ್ರಸಾದ್, ಜಿ.ಸಿ. ಚಂದ್ರಶೇಖರ್ ಅವರು ಪುಷ್ಪನಮನ ಸಲ್ಲಿಸಿದರು

‘ಮತ ಕಳವು ತಡೆಯಲು ಕಾವಲು ಸಮಿತಿ ರಚಿಸಬೇಕು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಚುನಾವಣೆಯಲ್ಲಿ ಮತ ಕಳ್ಳತನ ತಡೆಯಲು ಬೂತ್ ಮಟ್ಟದಲ್ಲಿ ‘ಕಾವಲು ಸಮಿತಿ’ ಹೆಸರಿನಲ್ಲಿ 10-15 ಜನರ ತಂಡ ರಚಿಸಬೇಕು’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರಿಗೆ ಆಹಾರ ಸಚಿವ ಕೆ.ಎಚ್. ಮುನಿಯಪ್ಪ ಸಲಹೆ ನೀಡಿದರು.

ಕೆಪಿಸಿಸಿ ಕಚೇರಿಯಲ್ಲಿ ಶನಿವಾರ ನಡೆದ ‘ಕ್ವಿಟ್ ಇಂಡಿಯಾ’ ದಿನಾಚರಣೆಯಲ್ಲಿ ಮಾತನಾಡಿದ ಅವರು, ‘ಚುನಾವಣೆಯಲ್ಲಿ ಮತ ಕಳ್ಳತನ ಹೇಗೆ ನಡೆಯುತ್ತಿದೆ ಎಂಬುದನ್ನು ರಾಹುಲ್ ಗಾಂಧಿಯವರು ಸವಿಸ್ತಾರವಾಗಿ ಹೇಳಿದ್ದಾರೆ. ಬಿಜೆಪಿಯವರು ನಡೆಸುವ ಅಕ್ರಮಗಳನ್ನು ತಡೆಯಲು ನಾವು ಮುಂದಾಗಿದ್ದೇವೆ. ಇದನ್ನು ಎದುರಿಸಲು ಪಕ್ಷ ಸಿದ್ಧತೆ ಮಾಡಿಕೊಳ್ಳಬೇಕು’ ಎಂದರು.

‘ಮುಂಬರುವ ತಾಲ್ಲೂಕು, ಜಿಲ್ಲಾ ಪಂಚಾಯಿತಿ, ಮಹಾನಗರ ಪಾಲಿಕೆ ಚುನಾವಣೆಗಳಲ್ಲಿ ನಡೆಯುವ ಅಕ್ರಮಗಳ ಮೇಲೆ ಕಣ್ಣಿಡಲು ಕಾವಲು ಸಮಿತಿಗಳು ಸಹಕಾರಿ ಆಗಲಿವೆ. ಬಿಜೆಪಿ ದೇಶದ ಸ್ವತಂತ್ರ ಸಂಸ್ಥೆಗಳನ್ನು ದುರ್ಬಲಕೆ ಮಾಡುತ್ತಿದೆ. ಪ್ರಜಾಪ್ರಭುತ್ವವನ್ನು ಉಳಿಸಲು ನಾವು ಹೊಸ ರೂಪುರೇಷೆ ಸಿದ್ಧಪಡಿಸಬೇಕಿದೆ’ ಎಂದರು.

ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್, ‘ದೇಶಪ್ರೇಮದ ಬಗ್ಗೆ ಮಾತನಾಡುವ ಬಿಜೆಪಿಯವರು, ಸ್ವಾತಂತ್ರ್ಯ ಪೂರ್ವದಲ್ಲೇ ಕಾಂಗ್ರೆಸ್ ಅನ್ನು ಮುಗಿಸಲು ಯತ್ನಿಸಿದ್ದರು. ನಮ್ಮ ಸ್ವಾತಂತ್ರ್ಯ ಹೋರಾಟಕ್ಕೆ ಅವಕಾಶ ನೀಡಬಾರದೆಂದು ಸಾವರ್ಕರ್ ಅವರು ಬ್ರಿಟಿಷರಿಗೆ ಪತ್ರ ಬರೆದಿದ್ದರು. ಇಂಥವರು ನಮಗೆ ದೇಶಭಕ್ತಿಯ ಪಾಠ ಮಾಡುತ್ತಿದ್ದಾರೆ’ ಎಂದು ಟೀಕಿಸಿದರು.

‘ತ್ರಿವರ್ಣ ಧ್ವಜವನ್ನೇ ವಿರೋಧಿಸಿದವರು, ಈಗ ಹಿಂಬಾಗಿಲಿನಿಂದ ಅಧಿಕಾರಕ್ಕೆ ಬಂದು ದಬ್ಬಾಳಿಕೆ ನಡೆಸುತ್ತಿದ್ದಾರೆ. ಸಂವಿಧಾನ ಮತ್ತು ತ್ರಿವರ್ಣ ಧ್ವಜವನ್ನು ನಾಶ ಮಾಡಲು ಬಿಜೆಪಿ ಹೊರಟಿದೆ. ಪ್ರಾಣ ಕೊಟ್ಟಾದರೂ ಅವರ ಡನ್ನೂ ಉಳಿಸಿಕೊಳ್ಳುತ್ತೇವೆ’ ಎಂದರು.

> **ಮತ ಕಳ್ಳತನ ತಡೆಯಲು ನಾವು ಐದು ಸಮಿತಿಗಳನ್ನು ರಚಿಸಿದ್ದೇವೆ. ಈ ಸಮಿತಿಗಳು ಮುಂದಿನ ದಿನಗಳಲ್ಲಿ ಎಲ್ಲ ಕ್ಷೇತ್ರಗಳಲ್ಲಿ ಚುನಾವಣಾ ಅಕ್ರಮಗಳ ಮೇಲೆ ಕಣ್ಣಿಡಲಿದೆ**
> **ಜಿ.ಸಿ. ಚಂದ್ರಶೇಖರ್**
> ಕೆಪಿಸಿಸಿ ಕಾರ್ಯಾಧ್ಯಕ್ಷ

> **ಕೇವಲ ಅಧಿಕಾರ ಹಿಡಿಯುವುದಷ್ಟೇ ಅಲ್ಲ, ಸಾಂವಿಧಾನಿಕ ಸಂಸ್ಥೆಗಳನ್ನು ಹಿಡಿತಕ್ಕೆ ತೆಗೆದುಕೊಳ್ಳುವ ಮೂಲಕ ಸಾಂವಿಧಾನಿಕ ವಿರೋಧಿ ನಡೆಯನ್ನು ಪ್ರದರ್ಶಿಸಲು ಬಿಜೆಪಿ ಹೊರಟಿದೆ**
> **ಸಲೀಂ ಅಹ್ಮದ್,** ವಿಧಾನ ಪರಿಷತ್‌ನ ಸರ್ಕಾರಿ ಮುಖ್ಯ ಸಚೇತಕ

ಒಳಮೀಸಲಾತಿ: ಆತಂಕ ಬೇಡ

ಯಾವ ಸಮುದಾಯಕ್ಕೆ ಅನ್ಯಾಯವಾಗಲು ಬಿಡಲ್ಲ: ಸಚಿವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿಯವರಿಗೆ ಒಳ ಮೀಸಲಾತಿ ನೀಡುವ ಸಂಬಂಧ ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್ ನೇತೃತ್ವದ ಆಯೋಗ ಸರ್ಕಾರಕ್ಕೆ ಸಲ್ಲಿಸಿರುವ ವರದಿ ಬಗ್ಗೆ ಸಚಿವ ಸಂಪುಟ ಸಭೆಯಲ್ಲಿ ವಿಸ್ತೃತ ಚರ್ಚೆ ನಡೆದಿದ್ದು, ಮುಖ್ಯಮಂತ್ರಿ ಯಾವ ಸಮುದಾಯಕ್ಕೂ ಅನ್ಯಾಯವಾಗಲು ಬಿಡುವುದಿಲ್ಲ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ತಂಗಡಗಿ ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ರವೀಂದ್ರ ಕಲಾಕ್ಷೇತ್ರದಲ್ಲಿ ಶನಿವಾರ ಆಯೋಜಿಸಿದ್ದ ನುಲಿಯ ಚಂದಯ್ಯ ಜಯಂತಿಯನ್ನು ಉದ್ಘಾಟಿಸಿ ಮಾತನಾಡಿದರು.

‘ಭೋವಿ, ಕೊರಮ, ಕೊರಚ ಹಾಗೂ ಲಂಬಾಣಿ ಸಮುದಾಯಗಳೊಂದಿಗೆ ನಾನಿದ್ದೇನೆ. ನಾವು ಒಂದೇ ತಕ್ಕಡಿಯಲ್ಲಿದ್ದೇವೆ. ಒಳ ಮೀಸಲಾತಿ ವಿಚಾರವಾಗಿ ಯಾವ ಸಮುದಾಯದವರು ಕೂಡ ಆತಂಕಪಡುವ ಅಗತ್ಯವಿಲ್ಲ’ ಎಂದರು.

ಕಳೆದ ವರ್ಷದ ಜಯಂತಿ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೊರಮ - ಕೊರಚ ಸಮುದಾಯದ ಅಭಿವೃದ್ಧಿಗೆ ಪ್ರತ್ಯೇಕ ನಿಗಮ ಸ್ಥಾಪನೆ ಹಾಗೂ ಸಮುದಾಯ ಭವನ ನಿರ್ಮಾಣಕ್ಕೆ 100*200 ಅಳತೆಯ ನಿವೇಶನವನ್ನು ಉಚಿತವಾಗಿ ನೀಡುವ ಭರವಸೆ ನೀಡಿದ್ದರು. ಈ ಬಗ್ಗೆ ಮುಖ್ಯಮಂತ್ರಿ ಗಮನಕ್ಕೆ ಮತ್ತೊಮ್ಮೆ ತಂದು ಭರವಸೆ ಈಡೇರಿಸುವ ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದು ತಿಳಿಸಿದರು.

ಸಮುದಾಯಕ್ಕೆ ವಿಧಾನ ಪರಿಷತ್ ಸದಸ್ಯ ಸ್ಥಾನ ಕೇಳುವುದರಲ್ಲಿ ತಪ್ಪಿಲ್ಲ. ಸಮುದಾಯ ಸಂಘಟನೆಯಾಗಿ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಬೇಕು ಎಂದರು.

ಬಾಗಲಕೋಟೆ ಜಿಲ್ಲೆಯಲ್ಲಿರುವ ಶಹನಾಯಿ ವಾದಕ ಸನಾದಿ ಅಪ್ಪಣ್ಣ ಅವರ ಸಮಾಧಿಯನ್ನು ಅಭಿವೃದ್ಧಿಪಡಿಸಿ, ಪ್ರವಾಸಿ ತಾಣವಾಗಿಸಲು ಕ್ರಮ ಕೈಗೊಳ್ಳಲಾಗಿದೆ. ಈ ಸಂಬಂಧ ಬಾಗಲಕೋಟೆ ಜಿಲ್ಲಾಧಿಕಾರಿಗೆ ಪತ್ರ ಬರೆದಿದ್ದು, ಮರು ಪ್ರಸ್ತಾವನೆ ಸಲ್ಲಿಸುವಂತೆ ಸೂಚಿಸಲಾಗಿದೆ ಎಂದು ತಿಳಿಸಿದರು.

ನುಲಿಯ ಚಂದಯ್ಯ ಅವರು ಕಾಯಕಯೋಗಿ. ಅವರು ಬಾಳಿದ ಬಾಳು, ಬೋಧಿಸಿದ ನೀತಿ, ರಚಿಸಿದ ವಚನಗಳು ಸರ್ವಕಾಲಕ್ಕೂ ಸರ್ವ ಸ್ಥಳಕ್ಕೂ ಸಲ್ಲುವಂತಹದು. ಕಾಯಕ ಹಾಗೂ ದಾಸೋಹದ ತತ್ವವನ್ನು ನುಲಿಯ ಚಂದಯ್ಯ ಪ್ರತಿಪಾದಿಸಿದ್ದರು. ಅವರ ತತ್ವ, ಚಿಂತನೆಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಮೂಲಕ ಸನ್ಮಾರ್ಗದಲ್ಲಿ ನಡೆಯಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಜಿ. ಚಂದ್ರಣ್ಣ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಂ. ವೆಂಕಟೇಶ್, ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಜಿ. ಪಲ್ಲವಿ, ವಿಜಯನಗರ ಶ್ರೀಕೃಷ್ಣ ದೇವರಾಯ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಎಂ.ಮುನಿರಾಜು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಕೆ.ಎಂ.ಗಾಯತ್ರಿ ಹಾಜರಿದ್ದರು.

ನಗರದಲ್ಲಿ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಚಿವ ಶಿವರಾಜ ಎಸ್ ತಂಗಡಗಿ ಅವರು ನುಲಿಯ ಚಂದಯ್ಯ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ಪಲ್ಲವಿ, ಗಾಯತ್ರಿ, ಚಂದ್ರಣ್ಣ ಇದ್ದಾರೆ

‘₹1.50 ಲಕ್ಷ ಕೋಟಿ ತಲುಪಿದ ರಕ್ಷಣಾ ಉತ್ಪಾದನೆ’

ನವದೆಹಲಿ (ಪಿಟಿಐ): ಭಾರತದ ರಕ್ಷಣಾ ವಲಯದ ಉತ್ಪಾದನೆ ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ಏರಿಕೆ ಕಂಡಿದ್ದು, 2024–25ನೇ ಸಾಲಿನಲ್ಲಿ ₹ 1,50,590 ಕೋಟಿಗೆ ತಲುಪಿದೆ ಎಂದು ರಕ್ಷಣಾ ಸಚಿವ ರಾಜನಾಥ ಸಿಂಗ್ ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಬಾಕಿ ಬಿಲ್: ಗುತ್ತಿಗೆದಾರರೊಂದಿಗೆ ಸಚಿವ ಸತೀಶ್ ಜಾರಕಿಹೊಳಿ ಸಭೆ

ಬೆಂಗಳೂರು: ಬಾಕಿ ಬಿಲ್‌ಗಳಿಗೆ ಹಣ ಬಿಡುಗಡೆ ಸೇರಿದಂತೆ ವಿವಿಧ ವಿಚಾರಗಳನ್ನು ಆಲಿಸಲು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರು ರಾಜ್ಯ ಗುತ್ತಿದಾರರ ಸಂಘದ ಪದಾಧಿಕಾರಿಗಳೊಂದಿಗೆ ಸಭೆ ನಡೆಸಿದರು.

ಇಲಾಖೆಯಲ್ಲಿ ₹ 9 ಸಾವಿರ ಕೋಟಿ ಬಿಲ್ ಪಾವತಿ ಬಾಕಿ ಇದೆ. ಹಂತ ಹಂತವಾಗಿ ಹಣ ಬಿಡುಗಡೆ ಮಾಡಬೇಕು. 2017–20ರ ಅವಧಿಯಲ್ಲಿ ಕೈಗೊಂಡ ಕಾಮಗಾರಿಗಳಿಗೆ ವ್ಯಾಟ್, ಜಿಎಸ್‌ಟಿಯ ಶೇ 12 ವ್ಯತ್ಯಾಸದ ಶೇ 8 ಜಿಎಸ್‌ಟಿ ಹಣವನ್ನು ಕೊಡಬೇಕು ಎಂದು ಮುಖ್ಯಮಂತ್ರಿ ಆದೇಶ ನೀಡಿದ್ದರೂ ಬಿಡುಗಡೆಯಾಗಿಲ್ಲ ಎಂದು ಸಂಘದ ಅಧ್ಯಕ್ಷ ಆರ್. ಮಂಜುನಾಥ್ ಸಚಿವರ ಗಮನಕ್ಕೆ ತಂದರು.

ಪ್ರತಿ 10 ವರ್ಷಕ್ಕೊಮ್ಮೆ ಗುತ್ತಿಗೆದಾರರ ಪರವಾನಗಿಯನ್ನು ನವೀಕರಿಸಲು ಹಿಂದಿನ ಸಭೆಯಲ್ಲಿ ತೀರ್ಮಾನಿಸಿದ್ದರೂ ಕಾರ್ಯರೂಪಕ್ಕೆ ಬಂದಿಲ್ಲ. ಟೆಂಡರ್ ನಿಯಮಗಳಲ್ಲಿ ವಿಧಿಸುತ್ತಿರುವ ಷರತ್ತು ಸಡಿಲಗೊಳಿಸಲು ಸರ್ಕಾರದ ಮಟ್ಟದಲ್ಲಿ ಹಲವು ಸಭೆ ನಡೆಸಿದರೂ ಪ್ರಯೋಜನವಾಗಿಲ್ಲ. ಲೈನ್ ಆಫ್ ಕ್ರೆಡಿಟ್ ನೀಡುವಲ್ಲಿ ವಿವಿಧ ಬ್ಯಾಂಕ್‌ಗಳು ಹಿಂದೇಟು ಹಾಕುತ್ತಿರುವುದರಿಂದ ಇದನ್ನು ರದ್ದು ಮಾಡಬೇಕು. ಟೆಂಡರ್ ಪ್ರಕ್ರಿಯೆ ಮುಗಿದ ನಂತರ ಎಫ್ಎಸ್‌ಡಿ ಮೊತ್ತದ ಶೇ 5ರ ಬದಲಾಗಿ ಶೇ 3 ಮೊತ್ತವನ್ನು ಪಕ್ಕದ ರಾಜ್ಯಗಳು ವಿಮೆ ಅಥವಾ ಎಸ್‌ಬಿಐ ಬಾಂಡ್ ಎಂದು ಪರಿಗಣಿಸುತ್ತಿವೆ. ಅದೇ ಮಾದರಿಯನ್ನು ಇಲ್ಲಿಯೂ ತರಬೇಕು ಎಂದು ಮನವಿ ಮಾಡಿದರು.

ಒಟ್ಟು 16 ಬೇಡಿಕೆಗಳನ್ನು ಸಲ್ಲಿಸಲಾಯಿತು. ಕಾಲಮಿತಿಯಲ್ಲಿ ಎಲ್ಲ ಸಮಸ್ಯೆಗಳನ್ನು ಬಗೆಹರಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವ ಸತೀಶ್ ಜಾರಕಿಹೊಳಿ ಭರವಸೆ ನೀಡಿದರು.

ಇಲಾಖೆಯ ಪ್ರಧಾನ ಕಾರ್ಯದರ್ಶಿ ಆಮ್ಲನ್ ಆದಿತ್ಯ ಬಿಸ್ವಾಸ್, ಕಾರ್ಯದರ್ಶಿ ಸಿ. ಸತ್ಯನಾರಾಯಣ, ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

ರಾಜ್ಯ ಶಿಕ್ಷಣ ನೀತಿ ಜಾರಿ ಮಾಡಿ: ಬಿಳಿಮಲೆ ಸಲಹೆ

ಬೆಂಗಳೂರು: ರಾಜ್ಯ ಶಿಕ್ಷಣ ನೀತಿಯನ್ನು ಜಾರಿ ಮಾಡಿ ದ್ವಿಭಾಷಾ ನೀತಿಯನ್ನು ಚಾಲ್ತಿಗೆ ತರಬೇಕು ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಸಲಹೆ ನೀಡಿದರು.

ಬನವಾಸಿ ಬಳಗ ಶನಿವಾರ ಏರ್ಪಡಿಸಿದ್ದ ‘ತ್ರಿಭಾಷಾ ನೀತಿ ಸಾಕು-ಎರಡು ನುಡಿ ಕಲಿಕೆ ಬೇಕು’ ಕಿರುಹೊತ್ತಿಗೆ ಜನಾರ್ಪಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ರಾಜ್ಯ ಶಿಕ್ಷಣ ನೀತಿಯ ಅಂತಿಮ ವರದಿ ಇನ್ನೂ ನಮ್ಮ ಕೈಗೆ ಬಂದಿಲ್ಲ. ಅದನ್ನು ಓದುವುದಕ್ಕೂ ಮೊದಲೇ ತೆಗೆದು ಮೂಲೆಗೆ ಹಾಕಬೇಕು ಎಂದು ಮಾತನಾಡಿದರೆ ಅದರ ನಷ್ಟ ನಮಗೆ. ಸಾಮಾಜಿಕ ಜಾಲತಾಣಗಳಲ್ಲಿ ಗೊಂದಲ ಮೂಡಿಸಲಾಗುತ್ತಿದೆ ಹೀಗೆ ಮಾಡಿದರೆ ಸರ್ಕಾರ ಸುಲಭವಾಗಿ ತೆಗೆದು ಬಿಡುತ್ತದೆ. ಹಾಗೇನಾದರೂ ಆದರೆ ಇನ್ನೊಂದು ಶಿಕ್ಷಣ ನೀತಿ ರೂಪಿಸಲು ಕನಿಷ್ಠ 25 ವರ್ಷ ಬೇಕು ಎಂದು ತಿಳಿಸಿದರು.

‘ಸದ್ಯ ನಮ್ಮ ಮುಂದೆ ರಾಷ್ಟ್ರೀಯ ಶಿಕ್ಷಣ ನೀತಿ ಹಾಗೂ ರಾಜ್ಯ ಶಿಕ್ಷಣ ನೀತಿಗಳಿವೆ. ಎರಡು ನೀತಿಗಳಿಂದಾಗಿ ಶಿಕ್ಷಕರು ಗೊಂದಲಕ್ಕೀಡಾಗಿದ್ದಾರೆ. ಗೊಂದಲ ಪರಿಹಾರವಾಗುವಂತೆ ಮಾಡಬೇಕು. ಕೇಂದ್ರ ಸರ್ಕಾರ 1968ರಿಂದ ಇಲ್ಲಿಯವರೆಗೂ ತ್ರಿಭಾಷಾ ಸೂತ್ರದ ವಿಶ್ಲೇಷಣೆಯನ್ನು ನೀಡಿಲ್ಲ. ಅದನ್ನು ಕೇಳುವುದು ನಮ್ಮ ಹಕ್ಕು. ತ್ರಿಭಾಷಾದಿಂದ ಯಾರಿಗೆ ಏನು ಲಾಭ ಆಗಿದೆ? ರಾಜ್ಯಕ್ಕೆ ಆದ ನಷ್ಟ, ಲಾಭಗಳ ಬಗ್ಗೆ ಪಟ್ಟಿಯನ್ನು ಕೊಡಬೇಕು. ಕನ್ನಡದವರು ತ್ರಿಭಾಷಾವನ್ನು ಅಳವಡಿಸಿಕೊಂಡು ಬಂದಿರುವುದರಿಂದ ಇದೀಗ, ರಾಜ್ಯಕ್ಕೆ ಮಾತೃಭಾಷೆಯೇ ಇಲ್ಲದ ಪರಿಸ್ಥಿತಿ ಬಂದಿದೆ’ ಎಂದು ಬೇಸರ ವ್ಯಕ್ತಪಡಿಸಿದರು.

ಕರ್ನಾಟಕವನ್ನು ಸಶಕ್ತ ಹಾಗೂ ಸಮಗ್ರವಾದ ಪ್ರಗತಿಪರ ರಾಜ್ಯವನ್ನು ಕಟ್ಟಬೇಕಾದಲ್ಲಿ ರಾಜ್ಯ ಭಾಷೆಯನ್ನು ಕಲಿಯಬೇಕು. ರಾಜ್ಯ ಶಿಕ್ಷಣ ನೀತಿಯಲ್ಲಿರುವ ಗೊಂದಲಗಳನ್ನು ಬಗೆಹರಿಸಿಕೊಳ್ಳಬೇಕು. ಅನಗತ್ಯವಾದ ಉದ್ವೇಗವನ್ನು ತೋರಿಸುವ ಅವಶ್ಯಕತೆ ಇಲ್ಲ. ಕನ್ನಡದ ವಿವೇಕ ಮುಸುಕಾಗದೇ ಉಳಿಯಬೇಕೆಂದರೆ, ಬೇರೆ ಭಾಷೆಗಳ ಆಕ್ರಮಣವನ್ನು ತಡೆಯಲೇಬೇಕು ಎಂದು ಹೇಳಿದರು.

ಸಾಹಿತಿ ಹಂ.ಪ. ನಾಗರಾಜಯ್ಯ, ಬನವಾಸಿ ಬಳಗದ ಆನಂದ್ ಭಾಗವಹಿಸಿದ್ದರು.

ವ್ಯಾಪಕ ಭ್ರಷ್ಟಾಚಾರಕ್ಕೆ ಮನುಷ್ಯರ ದುರಾಸೆಯೇ ಕಾರಣ ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ

15 ಸಾಧಕರಿಗೆ ‘ಬಸವ ಪುರಸ್ಕಾರ’ ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಸವ ಪರಿಷತ್ ನೀಡುವ 2025ನೇ ಸಾಲಿನ ‘ಬಸವ ಪುರಸ್ಕಾರ’ ಪ್ರಶಸ್ತಿಯನ್ನು ಇಸ್ರೊ ಮಾಜಿ ಅಧ್ಯಕ್ಷ ಎ.ಎಸ್. ಕಿರಣ್ ಕುಮಾರ್ ಸೇರಿ ವಿವಿಧ ಕ್ಷೇತ್ರಗಳ 15 ಸಾಧಕರಿಗೆ ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ನಿವೃತ್ತ ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ ಶನಿವಾರ ಪ್ರದಾನ ಮಾಡಿದರು.

ಪರಿಸರ ಕ್ಷೇತ್ರದಿಂದ ಅಲ್ಮಿತ್ರಾ ಪಟೇಲ್, ನ್ಯಾಯಾಂಗ ಕ್ಷೇತ್ರದಿಂದ ರವಿವರ್ಮ ಕುಮಾರ್, ಶಿಕ್ಷಣ ಹಾಗೂ ಸಹಕಾರ ಕ್ಷೇತ್ರದಿಂದ ಎಸ್. ಆರ್.ಪಾಟೀಲ, ಸಹಕಾರ ಮಹಿಳಾ ಸಬಲೀಕರಣ ಕ್ಷೇತ್ರದಿಂದ ಎಂ.ಎನ್. ರಾಜೇಂದ್ರ ಕುಮಾರ್, ರಂಗಭೂಮಿ ಹಾಗೂ ಚಲನಚಿತ್ರ ಕ್ಷೇತ್ರದಿಂದ ಉಮಾಶ್ರೀ, ಸಮಾಜ ಸೇವೆ ಹಾಗೂ ಉದ್ಯಮ ಕ್ಷೇತ್ರದಿಂದ ಮಾನಂದಿ ರಮೇಶ್, ಬಸವರಾಜ ಎಸ್. ದೇಶಮುಖ, ವಿ.ಎಸ್.ವಿ. ಪ್ರಸಾದ್, ಎಸ್.ಪಿ. ದಯಾನಂದ್, ಬಸವರಾಜ ಧನ್ನೂರ, ಉದ್ಯಮ ಹಾಗೂ ಶಿಕ್ಷಣ ಕ್ಷೇತ್ರದಿಂದ ಶಾಮನೂರು ಎಸ್. ಗಣೇಶ್, ಶಿಕ್ಷಣ ಹಾಗೂ ಸಮಾಜ ಸೇವೆ ಕ್ಷೇತ್ರದಿಂದ ಬಸವರಾಜ್ ಎಸ್. ದೇಶಮುಖ, ವೈದ್ಯಕೀಯ ಕ್ಷೇತ್ರದಿಂದ ಡಾ. ನಾಗರಾಜಯ್ಯ ಎನ್., ಸಮಾಜ ಸೇವೆ ಕ್ಷೇತ್ರದಿಂದ ರವಿಕುಮಾರ ಸ್ವಾಮಿ ಹಿರೇಮಠ, ಸಾಹಿತ್ಯ ಮತ್ತು ಸರ್ಕಾರಿ ಸೇವೆ ಕ್ಷೇತ್ರದಿಂದ ಬಸವರಾಜ ಯಲಿಗಾರ ಅವರು ಪ್ರಶಸ್ತಿ ಸ್ವೀಕರಿಸಿದರು.

ಪ್ರಶಸ್ತಿ ಸ್ವೀಕರಿಸಿದ ಮಾತನಾಡಿದ ಎ.ಎಸ್. ಕಿರಣ್ ಕುಮಾರ್, ಬಸವ ಪರಿಷತ್ ವಿವಿಧ ಕ್ಷೇತ್ರಗಳ ಸಾಧಕರನ್ನು ಆಯ್ಕೆ ಮಾಡಿದ ಪ್ರಕ್ರಿಯೆಯೇ ಕುತೂಹಲ ಮೂಡಿಸುತ್ತದೆ. ಯಾವುದೇ ಅಪಸ್ವರಕ್ಕೆ ಆಸ್ಪದ ಇಲ್ಲದಂತೆ ಆಯ್ಕೆ ಮಾಡುವುದೇ ಇಂದು ಸವಾಲಿನ ಕೆಲಸ. ಅಂತಹ ಕಾರ್ಯವನ್ನು ಅಚ್ಚುಕಟ್ಟಾಗಿ ಮಾಡಿದೆ. ಪ್ರಶಸ್ತಿ ನೀಡುವ ಮೂಲಕ ಎಲ್ಲರ ಜವಾಬ್ದಾರಿ ಮತ್ತಷ್ಟು ಹೆಚ್ಚಿಸಿದೆ ಎಂದರು.

ಬಸವ ಪರಿಷತ್ ಅಧ್ಯಕ್ಷೆ ರೇಖಾ ಮಹಾಂತೇಶ್ ಹಿರೇಮಠ, ಗೌರವಾಧ್ಯಕ್ಷೆ ಎಂ.ಪಿ. ಉಮಾದೇವಿ ಉಪಸ್ಥಿತರಿದ್ದರು.

ಬಸವ ಪರಿಷತ್ ನೀಡುವ 'ಬಸವ ಪುರಸ್ಕಾರ' ಪ್ರಶಸ್ತಿಯನ್ನುಇಸ್ರೊ ಮಾಜಿ ಅಧ್ಯಕ್ಷ ಎ.ಎಸ್‌ಕಿರಣ್ ಕುಮಾರ್ ಅವರಿಗೆ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ನಿವೃತ್ತ ನ್ಯಾಯಮೂರ್ತಿ ಎನ್‌ಸಂತೋಷ್ ಹೆಗ್ಡೆ ಅವರು ಶನಿವಾರ ಪ್ರದಾನ ಮಾಡಿದರು ಪ್ರಜಾವಾಣಿ ಚಿತ್ರ

‘ಭ್ರಷ್ಟಾಚಾರಕ್ಕೆ ಕಾಯಕ ಸಂಸ್ಕೃತಿಯೇ ಮದ್ದು’

ವಸ್ತುಗಳನ್ನು ಅತಿಯಾಗಿ ಪ್ರೀತಿಸುವ ಭೌತಿಕ ಜೀವನ ಅವಾಂತರಕ್ಕೆ ದಾರಿ ಮಾಡಿಕೊಡುತ್ತದೆ. ಮನುಷ್ಯ ಸಂಬಂಧಗಳಿಗೆ ಬೆಲೆ ಕೊಡುವುದನ್ನು ಕಲಿತಾಗ ಜೀವನ ಪ್ರೀತಿ ಹುಟ್ಟುತ್ತದೆ ಎಂದು ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಹೇಳಿದರು.

ದುರಾಸೆ ಬಿಟ್ಟು ಪ್ರಾಮಾಣಿಕವಾಗಿ ದುಡಿದು ತಿನ್ನುವ ಶರಣರ ಕಾಯಕ ಸಂಸ್ಕೃತಿ ಅಳವಡಿಸಿಕೊಂಡರೆ ಭ್ರಷ್ಟಾಚಾರ ತನ್ನಿಂದ ತಾನಾಗಿಯೇ ಕೊನೆಗೊಳ್ಳುತ್ತದೆ.

ದೇಶದಲ್ಲಿ ತಾಂಡವಾಡುತ್ತಿರುವ ವ್ಯಾಪಕ ಭ್ರಷ್ಟಾಚಾರಕ್ಕೆ ಮನುಷ್ಯರ ಅತಿಯಾದ ದುರಾಸೆಯೇ ಕಾರಣ. ಮೊದಲು ಸರ್ಕಾರಿ ನೌಕರಿಯೊಂದು ಸಿಕ್ಕರೆ ಸಾಕು ಎನ್ನುವ ಜನರು ನಂತರ ವೈಭೋಗದ ಜೀವನಕ್ಕೆ ಬಿದ್ದು ಲಂಚ, ಭ್ರಷ್ಟಾಚಾರದಲ್ಲಿ ತೊಡಗುತ್ತಾರೆ. ಭ್ರಷ್ಟಾಚಾರಕ್ಕೆ ಕಾಯಕ ಸಂಸ್ಕೃತಿಯೇ ಮದ್ದು ಎಂದರು.

ನಗರದಲ್ಲಿ ಇಂದು

‘ಆರ್.ಕೆ. ಪದ್ಮನಾಭರ ಕಾದಂಬರಿಗಳಲ್ಲಿ ಕರ್ನಾಟಕ ಸಂಗೀತದ ಅನುರಣನ’: ಉದ್ಘಾಟನೆ: ಆರ್.ಕೆ. ಪದ್ಮನಾಭ, ಅಧ್ಯಕ್ಷತೆ: ಬೆಂ.ಶ್ರೀ. ರವೀಂದ್ರ, ಅತಿಥಿಗಳು: ಎನ್.ಎಸ್. ಶ್ರೀಧರ ಮೂರ್ತಿ, ಶಾಂತಾ ನಾಗಮಂಗಲ, ಗಿರಿಜಾ ರಾವ್, ಬಿ.ಎಸ್. ಚಂದ್ರಶೇಖರ್, ರಂಜನೀ ಕೀರ್ತಿ, ಜಿ.ಎನ್. ನರಸಿಂಹಮೂರ್ತಿ, ಆಯೋಜನೆ: ಶ್ರೀಮದ್ವಾದಿರಾಜ ಆರಾಧನಾ ಟ್ರಸ್ಟ್ (ಶಾರದಾ ಕಲಾಕೇಂದ್ರ) ಮತ್ತು ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ, ಸ್ಥಳ: ಪತ್ತಿ ಸಭಾಂಗಣ, ಎನ್.ಆರ್. ಕಾಲೊನಿ, ಬಸವನಗುಡಿ, ಬೆಳಿಗ್ಗೆ 10.

ಗಾಯತ್ರಿ ಪ್ರತಿಪತ್ ಯಜ್ಞ ಹಾಗೂ ಜ್ಞಾನದೀಪಿಕಾ ಸ್ಮರಣಿಕೆ: ಸಾನ್ನಿಧ್ಯ: ಮಧುಸೂದನಾನಂದಪುರಿ ಸ್ವಾಮೀಜಿ, ಅಧ್ಯಕ್ಷತೆ: ಸೀತಾರಾಮ್ ಟಿ.ಜಿ, ಆಯೋಜನೆ: ಜ್ಞಾನಭಾರತಿ ಧಾರ್ಮಿಕ ಸಭಾ, ಸ್ಥಳ: ಜ್ಞಾನ ಗಣಪತಿ ಕಲಾಭವನ, ಮರಿಯಪ್ಪನ ಪಾಳ್ಯ, ಬೆಳಿಗ್ಗೆ 8:30

‘ವೆಲ್‌ನೆಸ್ ಆನ್ ವೀಲ್ಸ್’ ಆರೋಗ್ಯ ವಾಹನ ಸಮರ್ಪಣೆ: ಆಯೋಜನೆ: ರೋಟರಿ ಕಬ್ಬನ್ ಪಾರ್ಕ್, ಸ್ಥಳ: ಸುಚಿತ್ರಾ ಸಿನಿಮಾ ಮತ್ತು ಸಾಂಸ್ಕೃತಿಕ ಅಕಾಡೆಮಿ, ಬಿ.ವಿ. ಕಾರಂತ ರಸ್ತೆ, ಬೆಳಿಗ್ಗೆ 9

ಡಾ. ಎಚ್.ಕೆ. ರಂಗನಾಥ್ ಸೆಂಟಿನೆರಿ ಸೆಲೆಬ್ರೇಷನ್: ಉದ್ಘಾಟನೆ: ಎಚ್.ಎನ್. ಸುರೇಶ್, ಭಾಗವಹಿಸುವವರು: ಆರ್. ಗಣೇಶ್, ಶರತ್ ಆರ್. ಪ್ರಭಾತ್, ಶುಭಾ ಸಂತೋಷ್, ಆಯೋಜನೆ: ಭಾರತೀಯ ವಿದ್ಯಾ ಭವನ ರಂಗ ಸಂಘ, ನವಚೇತನ ಟ್ರಸ್ಟ್ ಮತ್ತು ಕಲಾಗಂಗೋತ್ರಿ, ಸ್ಥಳ: ಕೆ.ಆರ್.ಜಿ ಹಾಲ್, ಭಾರತೀಯ ವಿದ್ಯಾ ಭವನ, ಬೆಳಿಗ್ಗೆ 9

ಗುರುಸ್ಮೃತಿ–ಆರ್.ಆರ್. ಕೇಶವಮೂರ್ತಿ ಮ್ಯೂಸಿಕ್ ಫೆಸ್ಟಿವಲ್, ಆಯೋಜನೆ: ಸ್ವರ ಸೌರಭ ಅಕಾಡೆಮಿ ಆಫ್ ಮ್ಯೂಸಿಕ್, ಸ್ಥಳ: ಚೌಡಯ್ಯ ಮೆಮೋರಿಯಲ್ ಹಾಲ್, ಬೆಳಿಗ್ಗೆ 10

ವಾರ್ಷಿಕೋತ್ಸವ ಹಾಗೂ ಅಭಿನಂದನಾ ಕಾರ್ಯಕ್ರಮ: ಆಯೋಜನೆ: ಶ್ರೀ ಮಾತೃಛಾಯಾ ಟ್ರಸ್ಟ್, ಸ್ಥಳ: ಶ್ರೀಕೃಷ್ಣಾಶ್ರಯ ಧಾಮ, ಮಾತೃಛಾಯಾ ಟ್ರಸ್ಟ್, ಅಗರ. ಬೆಳಿಗ್ಗೆ 10

ಉಪನ್ಯಾಸ-ಸನ್ಮಾನ- ಸಂಗೀತ: ಅಧ್ಯಕ್ಷತೆ: ಕೊಡಕ್ಕಲ್ ಶಿವಪ್ರಸಾದ್, ಆಯೋಜನೆ: ಕ.ವಿ.ಪ್ರ.ನಿ.ನಿ. ಲೆಕ್ಕಾಧಿಕಾರಿಗಳ ಸಂಘ, ಆನಂದರಾವ್ ವೃತ್ತ, ಸ್ಥಳ: ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘದ ಬೆಳ್ಳಿ ಭವನ, ಬೆಳಿಗ್ಗೆ 10

ಅಡ್ವೊಕಥಾನ್ ಎಂಬ ನಡಿಗೆ ಹಾಗೂ ಓಟ 2025: ಆಯೋಜನೆ: ಜಸ್ಟಿಟಿಯಾ, ಸ್ಥಳ: ಫ್ರೀಡಂ ಪಾರ್ಕ್, ಬೆಳಿಗ್ಗೆ 10

ಕರ್ನಾಟಕ ಕೈಲಾಸ ಮಾನಸ ಸರೋವರ ಯಾತ್ರಿಕರ ಸ್ವಾಗತ ಮತ್ತು ಅಭಿನಂದನೆ: ಅಧ್ಯಕ್ಷತೆ: ಪ್ರಭಾಕರ.ಆರ್, ಅತಿಥಿಗಳು: ರವಿ ಸುಬ್ರಹ್ಮಣ್ಯ, ಮಹೇಂದ್ರ ಮುನೋತ್, ಆಯೋಜನೆ: ಕರ್ನಾಟಕ ಕೈಲಾಸ ಮಾನಸ ಸರೋವರ ಯಾತ್ರಿಕರ ಸಂಘ, ಸ್ಥಳ: ಸ್ವಾಮಿ ವಿವೇಕಾನಂದ ಎಜುಕೇಷನಲ್ ಸೊಸೈಟಿ, ಹನುಮಂತನಗರ, ಬೆಳಿಗ್ಗೆ 10

ಪತ್ತೇದಾರಿ ಸಾಹಿತಿ ಎನ್. ನರಸಿಂಹಯ್ಯರ ಜನ್ಮ ಶತಮಾನ ವರ್ಷಾಚರಣೆ ಕಾರ್ಯಕ್ರಮ–19: ಶ್ರಾವಣ ಮಾಸದ ಕವಿಗೋಷ್ಠಿ–ಗೀತ ಗಾಯನ–ಪ್ರಶಸ್ತಿ ಪ್ರದಾನ: ಪ್ರಶಸ್ತಿ ಪ್ರದಾನ: ವಿ. ಮಲ್ಲಿಕಾರ್ಜುನಯ್ಯ, ಅಧ್ಯಕ್ಷತೆ: ಕಿಶೋರ್ ಗಾಯಕವಾಡ್, ಅತಿಥಿಗಳು: ರತ್ನಾರಾವ್, ಬಿ.ಎನ್. ಮಹದೇವ್, ನಾಗೇಶ್. ಡಿ. ಪಾಟಕ್, ಕುವರ ಯಲ್ಲಪ್ಪ, ಆಯೋಜನೆ: ಸಮ್ಮಿಲನ, ಸ್ಥಳ: ಕೆನ್ ಕಲಾಶಾಲೆ, ಶೇಷಾದ್ರಿಪುರ, ಬೆಳಿಗ್ಗೆ 10:30

ಸುವರ್ಣ ಸಂಭ್ರಮ–2025: ಉದ್ಘಾಟನೆ: ಸಿದ್ಧರಾಮಯ್ಯ, ಅಧ್ಯಕ್ಷತೆ: ಬಿ.ಕೆ. ಹರಿಪ್ರಸಾದ್, ಆಶೀರ್ವಚನ: ವಿಖ್ಯಾತಾನಂದ ಸ್ವಾಮೀಜಿ, ಪುಸ್ತಕ ಬಿಡುಗಡೆ: ಡಿ.ಕೆ. ಶಿವಕುಮಾರ್, ಸ್ಮರಣ ಸಂಚಿಕೆ ಬಿಡುಗಡೆ: ಯು.ಟಿ. ಖಾದರ್, ಆಯೋಜನೆ: ಬಿಲ್ಲವ ಅಸೋಸಿಯೇಶನ್ ಬೆಂಗಳೂರು, ಸ್ಥಳ: ವೈಟ್‌ಪೆಟಲ್ಸ್ ಸಭಾಂಗಣ, ಅರಮನೆ ಮೈದಾನ, ಬೆಳಿಗ್ಗೆ 10.30

ವಚನ ಶ್ರಾವಣ–2025: ಅಧ್ಯಕ್ಷತೆ: ಎಸ್. ಪಿನಾಕಪಾಣಿ, ಅತಿಥಿ: ಸುರೇಶ್, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ರಂಗಸ್ವಾಮಿ–ಮಂಜುನಾಥರ ಮನೆಯಂಗಳ, ಚಿಕ್ಕಬಾಣಾವರ. ಬೆಳಿಗ್ಗೆ 10.30

2024ನೇ ಸಾಲಿನ ರಾಜ್ಯ ಮಟ್ಟದ ಶೈಕ್ಷಣಿಕ ಕಾರ್ಯಾಗಾರ ಹಾಗೂ ಮಹಾಸಭೆ: ಉದ್ಘಾಟನೆ: ಮಧು ಬಂಗಾರಪ್ಪ, ಅಧ್ಯಕ್ಷತೆ: ಪುಟ್ಟಣ್ಣ, ಉಪಸ್ಥಿತಿ: ಬಸವರಾಜ ಎಸ್. ಹೊರಟ್ಟಿ, ಆಯೋಜನೆ: ಕರ್ನಾಟಕ ರಾಜ್ಯ ಪ್ರೌಢಶಾಲಾ ಸಹಶಿಕ್ಷಕರ ಸಂಘ, ಸ್ಥಳ: ಶಿಕ್ಷಕರ ಸದನ, ಕೆ.ಜಿ. ರಸ್ತೆ, ಬೆಳಿಗ್ಗೆ 11

ಜಪಾನ್ ಫೆಸ್ಟಿವಲ್: ಆಯೋಜನೆ: ಕಲಾ ಕಾಬೆ, ಸ್ಥಳ: ಎಕ್ಯಾ ಸ್ಕೂಲ್ ಬೈರತಿ, ಹೆಣ್ಣೂರು–ಬಾಗಲೂರು ರಸ್ತೆ, ಬೆಳಿಗ್ಗೆ 11

ಶಿವದಾಸ್ ಘೋಷ್‌ರ 49ನೇ ಸ್ಮರಣದಿನ: ಆಯೋಜನೆ: ಸೋಷಿಯಲಿಸ್ಟ್ ಯುನಿಟಿ ಸೆಂಟರ್ ಆಫ್ ಇಂಡಿಯಾ ಕಮ್ಯುನಿಸ್ಟ್, ಸ್ಥಳ: ಗಾಂಧಿಭವನದ ಕಸ್ತೂರಬಾ ಸಭಾಂಗಣ, ಬೆಳಿಗ್ಗೆ 11.15

ಲಯನ್ಸ್ ಕ್ಲಬ್ 317ಎಫ್ ಕ್ಯಾಬಿನೆಟ್ ಪ್ರಸೆಂಟೇಶನ್: ಆಕಾಶ್ ಎ. ಸುವರ್ಣ, ಸ್ಥಳ: ಬಂಟ್ಸ್ ಸಂಘ, ವಿಜಯನಗರ, ಮಧ್ಯಾಹ್ನ 3

ಭಾವಾಭಿಯಾನ- ಸಂಗೀತ ಕಾರ್ಯಕ್ರಮ: ಅಧ್ಯಕ್ಷತೆ: ಕಾ.ವೆಂ. ಶ್ರೀನಿವಾಸಮೂರ್ತಿ, ಆಯೋಜನೆ: ಸುಗಮ ಸಂಗೀತ ಸಂಸ್ಥೆಗಳ ಒಕ್ಕೂಟ, ಮಂದಾರ ಗಾಯನ ಚೇತನ ಟ್ರಸ್ಟ್, ಸ್ಥಳ: ಕುವೆಂಪು ಸಭಾಂಗಣ, ಚಾಮರಾಜಪೇಟೆ, ಮಧ್ಯಾಹ್ನ 3.30

ನಾಟಕ ಪ್ರದರ್ಶನ: ‘ಛತ್ರಪತಿ ಶಿವಾಜಿ’, ನಿರ್ದೇಶನ: ವಿಜಯ್‌ಕುಮಾರ್ ಕೊಡಿಯಾಲ್‌ಬೈಲ್, ಆಯೋಜನೆ: ಸಂಪಾಜೆ ರಂಗ ಸಂಗಮ, ಸ್ಥಳ: ರವೀಂದ್ರ ಕಲಾಕ್ಷೇತ್ರ ಜೆ. ಸಿ. ರಸ್ತೆ, ಸಂಜೆ 5.45

ರಾಘವೇಂದ್ರ ಸ್ವಾಮಿಗಳ 354ನೇ ಆರಾಧನಾ ಮಹೋತ್ಸವದ ಪ್ರಯುಕ್ತ ದಾಸವಾಣಿ: ಕಾರ್ಯಕ್ರಮ ನೀಡುವವರು: ರಮ್ಯಾ ಸುಧೀರ್, ಆಯೋಜನೆ ಮತ್ತು ಸ್ಥಳ: ಉತ್ತರಾದಿ ಮಠ, ಸಹಕಾರ ನಗರ, ಸಂಜೆ 5.30

ಶ್ರೀ ರಾಘವೇಂದ್ರ ಸ್ವಾಮಿಗಳ 354ನೇ ಆರಾಧನಾ ಮಹೋತ್ಸವ: ಅಖಿಲ ಭಾರತ ಸಂಗೀತ ನೃತ್ಯ ಕಲಾವಿದರ ಸಂಘದಿಂದ ವಾದ್ಯನಾದ, ಆಯೋಜನೆ: ಶ್ರೀ ರಾಘವೇಂದ್ರ ಸೇವಾ ಸಮಿತಿ ಟ್ರಸ್ಟ್, ಸ್ಥಳ: ಶ್ರೀ ಗುರುರಾಜ ಸಭಾ ಭವನ, ಕೆಂಗೇರಿ ಉಪನಗರ, ಸಂಜೆ 6

ರಾಘವೇಂದ್ರ ಸ್ವಾಮಿಗಳ ಆರಾಧನೆ ಪ್ರಯುಕ್ತ ಹರಿದಾಸವಾಣಿ: ಗಾಯನ: ದಿವ್ಯಾ ಗಿರಿಧರ್, ನಂದಿನಿ ಗುಜಾರ್, ಕೀ-ಬೋರ್ಡ್: ಜಯರಾಮಾಚಾರ್, ತಬಲಾ: ರಾಜೇಂದ್ರ ನಾಕೋಡ್, ಕೊಳಲು: ಶಿವಲಿಂಗ್ ರಾಜಪೂರ್, ರಿದಂ ಪ್ಯಾಡ್: ಪದ್ಮನಾಭ ಕಾಮತ್.

ರಾಘವೇಂದ್ರ ಸ್ವಾಮಿಗಳ 354ನೇ ಆರಾಧನಾ ಮಹೋತ್ಸವದ ಪ್ರಯುಕ್ತ ದಾಸಲಹರಿ: ಮಾಲ ವೆಂಕಟೇಶ್, ಸ್ಫೂರ್ತಿ ಗುರುಪ್ರಸಾದ್, ಆಯೋಜನೆ ಮತ್ತು ಸ್ಥಳ: ಶೇಷಾದ್ರಿಪುರ ರಾಘವೇಂದ್ರ ಸ್ವಾಮಿಗಳ ಮಠ, ರಾತ್ರಿ 7

ರಾಘವೇಂದ್ರ ಸ್ವಾಮಿಗಳ 354ನೇ ಆರಾಧನಾ ಮಹೋತ್ಸವದ ಪ್ರಯುಕ್ತ ಹರಿದಾಸ ಮಂಜರಿ: ಗಾಯನ: ರೂಪಶ್ರೀ ಪ್ರಭಂಜನ, ಹಾರ್ಮೋನಿಯಂ: ಪಂಚಾಕ್ಷರಿ ಹಿರೇಮಠ್, ತಬಲಾ: ದತ್ತಾ ಜೋಶಿ, ಆಯೋಜನೆ ಮತ್ತು ಸ್ಥಳ: ವ್ಯಾಸರಾಜ ಮಠ (ಸೋಸಲೆ), ರಾಜಾಜಿನಗರ 2ನೇ ಹಂತ, ಸಂಜೆ 7

ಆಯೋಜನೆ, ಮತ್ತು ಸ್ಥಳ: ರಾಘವೇಂದ್ರ ಸ್ವಾಮಿಗಳ ಮಠ, ಬೆಮೆಲ್ ಲೇಔಟ್, ರಾಜರಾಜೇಶ್ವರಿನಗರ, ಸಂಜೆ 6.30

ಬಾಯ್ ತುಂಬ ನಕ್ಬಿಡಿ–ನಾಟಕ: ರಚನೆ: ನಾಗವೇಣಿ ರಂಗನ್, ನಿರ್ದೇಶನ: ವನಿತಾ ರಂಗಾಯಣ, ತಂಡ: ಅಂತರಂಗ ಬಹಿರಂಗ, ಆಯೋಜನೆ: ಅಖಿಲ ಭಾರತೀಯ ಸಾಹಿತ್ಯ ಪರಿಷತ್, ಸ್ಥಳ: ಅಶ್ವಥ್ ಕಲಾಭವನ, ಎನ್.ಆರ್. ಕಾಲೊನಿ, ಬಸವನಗುಡಿ, ಸಂಜೆ 4 ಮತ್ತು 7

ಕೊಳಲು ವಾದನ: ಕಲಾವಿದರು: ಪ್ರತೀಕ್ ಆಚಾರ್ಯ, ಶರತ್ ಚಂದ್ರ, ಚಿರಾಗ್ ಎಸ್. ರಾವ್, ಮೃದಂಗ: ಸಮರ್ಥ್, ಆಯೋಜನೆ: ರಾಘವೇಂದ್ರ ಸೇವಾ ಸಮಿತಿ, ಗೋಕುಲ ಧ್ವನಿ ತಂಡ, ಸ್ಥಳ: ರಾಘವೇಂದ್ರ ಸ್ವಾಮಿಗಳ ಮಠ, ರಾಷ್ಟ್ರೀಯ ವಿದ್ಯಾಲಯ ರಸ್ತೆ, ಜಯನಗರ, ಸಂಜೆ 6.30

‘ಹರಿದಾಸರು ಕಂಡ ರಾಯರು’–ಧಾರ್ಮಿಕ ಪ್ರವಚನ: ಚಂದ್ರಶೇಖರ ಆಚಾರ್ಯ, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸ್ವಾಮಿಗಳ ಮಠ, ಸುಧೀಂದ್ರನಗರ, ಮಲ್ಲೇಶ್ವರ, ಸಂಜೆ 6.30

Government of India · Government of Karnataka · ನಮ್ಮ ಮೆಟ್ರೋ namma metro · Indian Railways

ಶ್ರೀ ನರೇಂದ್ರ ಮೋದಿ
ಗೌರವಾನ್ವಿತ ಪ್ರಧಾನಮಂತ್ರಿ

ವಿಕಸಿತ ಭಾರತಕ್ಕೆ ಆಧುನಿಕ ಸಂಪರ್ಕ

ಬೆಂಗಳೂರಿನ ಜನತೆಗೆ ಸುಮಾರು ರೂ. 22,800 ಕೋಟಿ ಮೌಲ್ಯದ ಮೆಟ್ರೋ ಯೋಜನೆಗಳ ಉಡುಗೊರೆ

3 ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲುಗಳಿಗೆ ಹಸಿರು ನಿಶಾನೆ

ಬೆಂಗಳೂರು ಮೆಟ್ರೋ ಹಳದಿ ಮಾರ್ಗ ಉದ್ಘಾಟನೆ
(ಆರ್.ವಿ. ರಸ್ತೆ – ಬೊಮ್ಮಸಂದ್ರ)

ಬೆಂಗಳೂರು ಮೆಟ್ರೋ ಹಂತ –3ಕ್ಕೆ ಶಿಲಾನ್ಯಾಸ

ಗೌರವಾನ್ವಿತ ಪ್ರಧಾನ ಮಂತ್ರಿ
ಶ್ರೀ ನರೇಂದ್ರ ಮೋದಿ
ಅವರಿಂದ

ಭಾನುವಾರ, 10 ಆಗಸ್ಟ್, 2025
ಸಮಯ: ಬೆಳಿಗ್ಗೆ 11:00

ಮೂರು ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲುಗಳಿಗೆ ಹಸಿರು ನಿಶಾನೆ

ಬೆಂಗಳೂರು–ಬೆಳಗಾವಿ ವಂದೇ ಭಾರತ್ ರೈಲು
ಅಮೃತಸರ – ಶ್ರೀ ಮಾತಾ ವೈಷ್ಣೋದೇವಿ ಕತ್ರಾ ವಂದೇ ಭಾರತ್ ರೈಲು
ನಾಗಪುರ (ಅಜ್ನಿ) – ಪುಣೆ ವಂದೇ ಭಾರತ್ ರೈಲು

- ಸೆಮಿ–ಹೈ ಸ್ಪೀಡ್ ರೈಲುಗಳೊಂದಿಗೆ ಉತ್ತಮ ಪ್ರಾದೇಶಿಕ ಸಂಪರ್ಕ
- ಪ್ರವಾಸೋದ್ಯಮಕ್ಕೆ ಉತ್ತೇಜನ: ಬೆಂಗಳೂರು – ಬೆಳಗಾವಿ ಮಾರ್ಗ
- ಧಾರ್ಮಿಕ ತಾಣಗಳಿಗೆ ಸಂಪರ್ಕ: ಅಮೃತಸರ – ಕತ್ರಾ ಮಾರ್ಗ
- ವಿದ್ಯಾರ್ಥಿಗಳು ಮತ್ತು ವೃತ್ತಿಪರರಿಗೆ ಪ್ರಯೋಜನಕಾರಿ: ನಾಗಪುರ – ಪುಣೆ ಮಾರ್ಗ
- ಸ್ವಯಂಚಾಲಿತ ಬಾಗಿಲುಗಳು, ಆರಾಮದಾಯಕ ಆಸನಗಳು ಮತ್ತು ಜಿಪಿಎಸ್ ಆಧಾರಿತ ಪ್ರಯಾಣಿಕರ ಮಾಹಿತಿ ವ್ಯವಸ್ಥೆ

ಶಿಲಾನ್ಯಾಸ: ಬೆಂಗಳೂರು ಮೆಟ್ರೋ ಹಂತ–3 – ಜೆಪಿ ನಗರದಿಂದ ಕೆಂಪಾಪುರ ಮತ್ತು ಹೊಸಹಳ್ಳಿಯಿಂದ ಕಡಬಗೆರೆ (44.65 ಕಿ.ಮೀ, ರೂ. 15,600+ ಕೋಟಿ)

- ದೈನಂದಿನ ಪ್ರಯಾಣಿಕರ ಸಂಖ್ಯೆ ಹೆಚ್ಚಳ: 6.35 ಲಕ್ಷ
- ವಸತಿ, ಕೈಗಾರಿಕೆ, ವಾಣಿಜ್ಯ ಮತ್ತು ಶೈಕ್ಷಣಿಕ ಕೇಂದ್ರಗಳಿಗೆ ಸುಲಭ ಪ್ರವೇಶ
- ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ನೇರ ಸಂಪರ್ಕ

ಬೆಂಗಳೂರು ಮೆಟ್ರೋ ಹಳದಿ ಮಾರ್ಗ – ಆರ್.ವಿ. ರಸ್ತೆಯಿಂದ ಬೊಮ್ಮಸಂದ್ರ (19.15 ಕಿ.ಮೀ., ರೂ. 77,160 ಕೋಟಿ) ಉದ್ಘಾಟನೆ

- ಐಟಿ ಕಾರಿಡಾರ್‌ಗಳಿಂದ ಬೊಮ್ಮಸಂದ್ರ ಕೈಗಾರಿಕಾ ಕೇಂದ್ರಕ್ಕೆ ಸಂಪರ್ಕ
- ಹೊಸೂರು ರಸ್ತೆ ಮತ್ತು ಹೊರ ವರ್ತುಲ ರಸ್ತೆಯಲ್ಲಿ ದಟ್ಟಣೆ ಕಡಿತ
- ಅಂದಾಜು ದೈನಂದಿನ ಪ್ರಯಾಣಿಕರ ಸಂಖ್ಯೆ 8.5 ಲಕ್ಷದಿಂದ 12.5 ಲಕ್ಷಕ್ಕೆ ಹೆಚ್ಚಳ
- ಪ್ರಯಾಣದ ಸಮಯದಲ್ಲಿ ದಿನಕ್ಕೆ 2 ಗಂಟೆ ಕಡಿತ

ಕಳೆದ 11 ವರ್ಷಗಳಲ್ಲಿ ಭಾರತದ ಅಭೂತಪೂರ್ವ ಮೆಟ್ರೋ ಬೆಳವಣಿಗೆಯ ಕಥೆ

• 1,055 ಕಿಮೀ ಮಾರ್ಗಗಳು – ವಿಶ್ವದ 3 ಅತಿದೊಡ್ಡ ಮೆಟ್ರೋ ಮತ್ತು ಆರ್.ಆರ್.ಟಿ.ಎಸ್. • ಜಾಲ 2014 ರಿಂದ 800 ಕಿಮೀ ಹೊಸ ಜಾಲವನ್ನು ಸೇರಿಸಲಾಗಿದೆ.
• 2014 ರಿಂದ ಮೆಟ್ರೋ ರೈಲು ನಗರಗಳ ಸಂಖ್ಯೆ 5 ರಿಂದ 24ಕ್ಕೆ ಏರಿದೆ – ಮತ್ತು ಹೆಚ್ಚಾಗುತ್ತಿದೆ
• ಸ್ವೀಡನ್‌ನಂತಹ ದೇಶಗಳ ಜನಸಂಖ್ಯೆಗೆ ಸಮಾನವಾದ 1.1 ಕೋಟಿ ದೈನಂದಿನ ಪ್ರಯಾಣಿಕರ ಸಂಖ್ಯೆ • ವಂದೇ ಭಾರತ್ ಮತ್ತು ನಮೋ ಭಾರತ್ – ಪ್ರಯಾಣ ಕ್ರಾಂತಿ
• ಕೇವಲ 1 ವರ್ಷದಲ್ಲಿ ರೂ. 1 ಲಕ್ಷ ಕೋಟಿ+ ಯೋಜನೆಗಳಿಗೆ ಅನುಮೋದನೆ • 2014 ರಿಂದ ಮೆಟ್ರೋ ಬಜೆಟ್ 6 ಪಟ್ಟು ಹೆಚ್ಚಳ – ಅಂದಾಜು ರೂ. 35,000 ಕೋಟಿ
• ಪ್ರತಿ ತಿಂಗಳು 6 ಕಿ.ಮೀ ಹೊಸ ಮೆಟ್ರೋ – ಅದ್ಭುತ ಬೆಳವಣಿಗೆ • 2014 ರಿಂದ ರೂ. 3.2 ಲಕ್ಷ ಕೋಟಿ ಮೌಲ್ಯದ 36 ಮೆಗಾ ಯೋಜನೆಗಳಿಗೆ ಅನುಮೋದನೆ

ಘನ ಉಪಸ್ಥಿತಿ

ಶ್ರೀ ಥಾವರಚಂದ್ ಗೆಹ್ಲೋಟ್
ಗೌರವಾನ್ವಿತ ರಾಜ್ಯಪಾಲರು, ಕರ್ನಾಟಕ

ಶ್ರೀ ಸಿದ್ದರಾಮಯ್ಯ
ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ

ಶ್ರೀ ಮನೋಹರ್ ಲಾಲ್
ಮಾನ್ಯ ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳು ಮತ್ತು ವಿದ್ಯುತ್ ಸಚಿವರು

ಶ್ರೀ ಹೆಚ್.ಡಿ. ಕುಮಾರಸ್ವಾಮಿ
ಮಾನ್ಯ ಕೇಂದ್ರ ಬೃಹತ್ ಕೈಗಾರಿಕೆ ಮತ್ತು ಉಕ್ಕು ಸಚಿವರು

ಶ್ರೀ ಅಶ್ವಿನಿ ವೈಷ್ಣವ್
ಮಾನ್ಯ ಕೇಂದ್ರ ರೈಲ್ವೆ, ವಾರ್ತಾ ಮತ್ತು ಪ್ರಸಾರ, ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವರು

ಶ್ರೀ ವಿ.ಸೋಮಣ್ಣ
ಮಾನ್ಯ ಕೇಂದ್ರ ಜಲಶಕ್ತಿ ಮತ್ತು ರೈಲ್ವೆ ರಾಜ್ಯ ಸಚಿವರು

ಶ್ರೀಮತಿ ಶೋಭಾ ಕರಂದ್ಲಾಜೆ
ಮಾನ್ಯ ಕೇಂದ್ರ ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉದ್ಯಮಗಳು ಹಾಗೂ ಕಾರ್ಮಿಕ ಮತ್ತು ಉದ್ಯೋಗ ರಾಜ್ಯ ಸಚಿವರು

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿಗಳು ಕರ್ನಾಟಕ

ಡಾ.ಸಿ.ಎನ್.ಮಂಜುನಾಥ್
ಮಾನ್ಯ ಸಂಸದರು ಬೆಂಗಳೂರು (ಗ್ರಾಮೀಣ)

ಶ್ರೀ ತೇಜಸ್ವಿ ಸೂರ್ಯ
ಮಾನ್ಯ ಸಂಸದರು ಬೆಂಗಳೂರು (ದಕ್ಷಿಣ)

'ಡಿಡಿ ನ್ಯೂಸ್' ನಲ್ಲಿ ಕಾರ್ಯಕ್ರಮದ ನೇರಪ್ರಸಾರವನ್ನು ವೀಕ್ಷಿಸಿ

ಈ ಕಾರ್ಯಕ್ರಮವು ನಮ್ಮ ಮೆಟ್ರೋದ 'ಯೂಟ್ಯೂಬ್' ಮತ್ತು 'ಫೇಸ್‌ಬುಕ್' ಚಾನೆಲ್‌ನಲ್ಲಿ ನೇರ ಪ್ರಸಾರವಾಗುತ್ತದೆ.

CBC 44101/13/0008/2526

ಮಹದೇವಪುರದ 'ಮತ' ಮಹಾತ್ಮೆ

ಒಂದನೇ ಪುಟದಿಂದ...

ಆ 80ರಲ್ಲಿ ಎಷ್ಟು ಮತದಾರರು ಸಿಗಬಹುದು ಎಂದು ಎದುರು ನೋಡುತ್ತಾ ಮುನಿರೆಡ್ಡಿ ಗಾರ್ಡನ್‌ನ 35ನೇ ನಂಬರ್‌ನ ಮನೆಗೆ ಭೇಟಿ ನೀಡಿದಾಗ, ಮನೆ ಬಾಗಿಲಿಗೆ ಬೀಗ ಹಾಕಲಾಗಿತ್ತು. '35' ಎಂಬ ನಂಬರ್ ಕಾಣದೇ ಇರುವ ಹಾಗೆ ಪರದೆ ಹಾಕಲಾಗಿತ್ತು. ಅಲ್ಲೇ ನಲ್ಲಿ ನೀರಿನಲ್ಲಿ ಕೊಡ ತುಂಬಿಸಿಕೊಳ್ಳುತ್ತಿದ್ದ ಕಮಲಮ್ಮ ಅವರು, 'ಈ ಮನೆಯಲ್ಲಿ 80 ಮಂದಿ ಇರಲು ಸಾಧ್ಯವೇ' ಎಂದು ಮರುಪ್ರಶ್ನೆ ಹಾಕಿದರು.

35ನೇ ನಂಬರ್‌ನ ಮನೆಗೆ ಅಂಟಿಕೊಂಡೇ ಇರುವ ಮನೆಯ ನಿಯಾಮಿ ಸೂತ್ರದಾರ್ ಅವರಿಗೆ ಮತದಾರರ ಪಟ್ಟಿಯನ್ನು ತೋರಿಸಿದಾಗ, 'ನಾನು ಇಲ್ಲಿ 5 ವರ್ಷದಿಂದ ಇದ್ದೇನೆ. ಈ 80ರಲ್ಲಿ ಒಬ್ಬರನ್ನೂ ನಾನು ನೋಡಿಲ್ಲ' ಎಂದರು. ಅಲ್ಲೇ ಪಕ್ಕದ ಅಪಾರ್ಟ್‌ಮೆಂಟ್‌ನ ಫ್ಲ್ಯಾಟ್‌ನ ನಿವಾಸಿ ಮಲ್ಲಿಕಾರ್ಜುನ, 'ನಾವು 8 ವರ್ಷದಿಂದ ಇಲ್ಲಿದ್ದೇವೆ. ಇವರಲ್ಲಿ ಯಾರೊಬ್ಬರನ್ನು ನೋಡಿದ ನೆನಪು ನನಗೆ ಇಲ್ಲ' ಎಂದರು.

ಪಾರ್ಟ್ ನಂಬರ್ 173ರ ಮತಗಟ್ಟೆ ಅಧಿಕಾರಿ (ಬಿಎಲ್‌ಒ) ಮುನಿರತ್ನಮ್ಮ ಅವರನ್ನು ಮಾತನಾಡಿಸಿದಾಗ, '80 ಮಂದಿ ಮತದಾರರಲ್ಲಿ ಯಾರೂ ಆ ಮನೆಯಲ್ಲಿ ಈಗ ಇಲ್ಲ. ಅವರು ಬೇರೆ ಕಡೆ ಹೋಗಿದ್ದಾರೆ. 80ರಲ್ಲಿ ಕನ್ನಡದವರು ಐದಾರು ಮಂದಿ ಹೊರತುಪಡಿಸಿ, ಉಳಿದವರೆಲ್ಲರೂ ಉತ್ತರ ಭಾರತದ ರಾಜ್ಯಗಳವರು. 80 ಮತದಾರರ ಪೈಕಿ ಬಹುತೇಕ ಮಂದಿ ಚುನಾವಣೆ ಸಂದರ್ಭದಲ್ಲಿ ಬಂದು ಮತಹಾಕಿ ಹೋಗುತ್ತಾರೆ' ಎಂದರು.

ಈ ಬಗ್ಗೆ ಮತ್ತಷ್ಟು ಪ್ರಶ್ನಿಸಿದಾಗ, '80ಕ್ಕೆ 80 ಮಂದಿಯೂ ಬಂದು ಮತಹಾಕಿದ್ದಾರೆ ಎಂದು ನಾನು ಹೇಳುವುದಿಲ್ಲ. ಆದರೆ ಅವರಲ್ಲಿ ಬಹುತೇಕ ಮಂದಿ ಮತಹಾಕಿದ್ದಾರೆ. ಇದಕ್ಕೆ ದಾಖಲೆ ಬೇಕಿದ್ದರೆ ಸಂಬಂಧಿತ ಚುನಾವಣಾ ಅಧಿಕಾರಿಗಳನ್ನೇ ಕೇಳಬೇಕು' ಎಂದರು.

'ಈ ಸುದ್ದಿ ಬಹಿರಂಗವಾದ ನಂತರ ನಾನು ಸ್ಥಳ ಪರಿಶೀಲನೆ ನಡೆಸಿದ್ದೇನೆ. 80ರಲ್ಲಿ ಐದು ಮಂದಿ ಕನ್ನಡಿಗರ ಸಂಪರ್ಕ ಸಂಖ್ಯೆ ಸಿಕ್ಕಿದೆ. ಉಳಿದವರು ಉತ್ತರ ಭಾರತೀಯರಾಗಿದ್ದು, ಅವರ ಸಂಪರ್ಕ ಸಂಖ್ಯೆ ಅಥವಾ ಈಗಿನ ವಿಳಾಸ ಸಿಕ್ಕಿಲ್ಲ. ಈ ಬಗ್ಗೆ ಸಾಕ್ಷ್ಯ ಸಮೇತ ಮೇಲಧಿಕಾರಿಗಳಿಗೆ ವರದಿ ಸಲ್ಲಿಸಿದ್ದೇನೆ' ಎಂದರು.

ಮುನಿರೆಡ್ಡಿ ಗಾರ್ಡನ್‌ನ ಈ ವಠಾರದಲ್ಲಿ ಇಂತಹ 35 ಸಣ್ಣ ಮನೆಗಳಿದ್ದು, 80 ಮತದಾರರು ನೋಂದಣಿ ಆಗಿರುವ 35ನೇ ನಂಬರ್‌ನ ಮನೆಯು ಇದೇ ಓಣಿಯಲ್ಲಿದೆ

ಪ್ರಜಾವಾಣಿ ಚಿತ್ರ: ರಂಜು ಪಿ

'ಶಿಫ್ಟೆಡ್ ಎಂದು ವರದಿ ನೀಡಿದ್ದೆ'

ಒಂದನೇ ಪುಟದಿಂದ...

ಹಿಂದಿನ ಬಿಬಿಎಂಪಿ ವ್ಯಾಪ್ತಿಯಲ್ಲಿ, ಬಿಬಿಎಂಪಿಯ ಕಂದಾಯ ವಿಭಾಗದ ಟಿಐ ಮತ್ತು ಆರ್‌ಐಗಳು ಮೇಲ್ವಿಚಾರಕರು ಆಗಿದ್ದರು. ಅವರು ಈ ಅರ್ಜಿಗಳನ್ನು ಎಡಿಎಒ (ಹೆಚ್ಚುವರಿ ಚುನಾವಣಾಧಿಕಾರಿ) ವಿಲೇವಾರಿ ಮಾಡಬೇಕಾಗುತ್ತದೆ.

'ಮತದಾರರನ್ನು ಪಟ್ಟಿಯಿಂದ ತೆಗೆದುಹಾಕುವ ಅಥವಾ ಉಳಿಸುವ ಅಧಿಕಾರ ಎಡಿಎಒಗಳಿಗೆ ಮಾತ್ರವೇ ಇರುತ್ತದೆ. ಬಿಎಲ್‌ಒ ಶಿಫ್ಟೆಡ್ ಎಂದು ಅರ್ಜಿ ನೀಡಿದ್ದರೆ, ಎಡಿಎಒ ಅದನ್ನು ಡಿಲೀಟ್ ಮಾಡಬೇಕು ಅಥವಾ ತಿರಸ್ಕರಿಸಬೇಕು. ಎಡಿಎಒ ಅರ್ಜಿಗಳನ್ನು ವಿಲೇವಾರಿ ಮಾಡದೆ, ತಮ್ಮ ಬಳಿ ಇರಿಸಿಕೊಂಡಿರುವ ಕಾರಣಕ್ಕೇ 80 ಮಂದಿಯ ಹೆಸರೂ ಅದೇ ವಿಳಾಸದಲ್ಲಿ ಉಳಿದಿರುವ ಸಾಧ್ಯತೆ ಇದೆ. ಇದರ ಹೊಣೆ ಎಡಿಎಒ ಅವರೇ ಹೊರಬೇಕಾಗುತ್ತದೆ' ಎಂದು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಎಡಿಎಒ ಒಬ್ಬರು ಅಭಿಪ್ರಾಯಪಡುತ್ತಾರೆ.

'ಕೆಲಸಗಾರರಲ್ಲಿ ಒಬ್ಬರಿಗೂ ಮತದಾರರ ಚೀಟಿ ಇಲ್ಲ'

ಮಹದೇವಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿರುವ ವೈಟ್‌ಫೀಲ್ಡ್‌ನ '153 ದಿ ಬಿಯರ್ ಸ್ಟ್ರೀಟ್' ಪಬ್‌ನ ವಿಳಾಸದಲ್ಲಿ ಒಟ್ಟು 53 ಮತದಾರರ ಹೆಸರು ನೋಂದಣಿಯಾಗಿದೆ. ಮತದಾರರ ಸೇವಾ ಪೋರ್ಟಲ್‌ನಲ್ಲಿ ಅಷ್ಟೂ ಮಂದಿಯ ಎಪಿಕ್ ಚಾಲ್ತಿಯಲ್ಲಿವೆ.

ಈ ಬಗ್ಗೆ '153 ದಿ ಬಿಯರ್ ಸ್ಟ್ರೀಟ್'ನ ವ್ಯವಸ್ಥಾಪಕ ಶಿವರಾಜ್ ಅವರನ್ನು ಪ್ರಶ್ನಿಸಿದಾಗ, 'ಈ ಹಿಂದೆ ಪಬ್‌ನ ಮಾಲೀಕರು ಬೇರೆ ಇದ್ದರು. ಜನವರಿಯಿಂದ ನಾವು ನಡೆಸುತ್ತಿದ್ದೇವೆ. ಮತದಾರರ ಪಟ್ಟಿಯಲ್ಲಿ ಇರುವ 53 ಜನರ ಚಿತ್ರವನ್ನೂ ನಾನು ನೋಡಿದ್ದೇನೆ. ಅವರಲ್ಲಿ ಒಬ್ಬರೂ ನನಗೆ ಗೊತ್ತಿಲ್ಲ ಮತ್ತು ಯಾರೊಬ್ಬರೂ ಈಗ ನಮ್ಮ ಪಬ್‌ನಲ್ಲಿ ಕೆಲಸ ಮಾಡುತ್ತಿಲ್ಲ ಬಿಎಲ್‌ಒಗಳಿಗೆ ಈ ಬಗ್ಗೆ ಮಾಹಿತಿ ನೀಡಿದ್ದೇವೆ' ಎಂದರು.

'ಈಗ ನಮ್ಮ ಬಹುತೇಕ ಕೆಲಸಗಾರರು ಪಶ್ಚಿಮ ಬಂಗಾಳ, ಬಿಹಾರ, ಅಸ್ಸಾಂನವರು. ಅವರಲ್ಲಿ ಒಬ್ಬರ ಬಳಿಯೂ ಬೆಂಗಳೂರಿನ ಮತದಾರರ ಚೀಟಿ ಇಲ್ಲ. ಆ ಎಲ್ಲರ ಮತದಾರರ ಚೀಟಿ ಅವರವರ ರಾಜ್ಯದಲ್ಲೇ ಇದೆ. ಇದನ್ನು ನಾನೇ ಖುದ್ದಾಗಿ ಪರಿಶೀಲಿಸಿದ್ದೇನೆ' ಎಂದು ಮಾಹಿತಿ ನೀಡಿದರು.

'ಒಂದೇ ಮನೆಯಲ್ಲಿ ಜೋಶಿ, ಮೊಗವೀರ, ಶೆಟ್ಟಿ, ಹುಸೇನ್'

ಗರಿಷ್ಠ ಇಬ್ಬರು ವಾಸಿಸುವಂತಹ ಗೂಡಿನಂತಹ ಒಂದು ಮನೆಯಲ್ಲಿ ಎಷ್ಟೆಲ್ಲಾ ಜಾತಿ ಮತ್ತ ಧರ್ಮದ ಮತದಾರರು ಇರಲು ಸಾಧ್ಯ? ಅಂತರ್ಜಾತಿ ಮತ್ತು ಅಂತರ್ಧರ್ಮೀಯ ವಿವಾಹವಾಗಿದ್ದರೆ ಎರಡು ಜಾತಿ/ಧರ್ಮದ ಜನರು ಒಂದು ಮನೆಯಲ್ಲಿರಬಹುದು. ಆದರೆ ಮುನಿರೆಡ್ಡಿ ಗಾರ್ಡನ್‌ನ 35ನೇ ನಂಬರ್‌ನ ಮನೆಯಲ್ಲಿ ಹಿಂದೂ–ಮುಸ್ಲಿಮರು ಮತ್ತು ಬೇರೆ–ಬೇರೆ ಹತ್ತಾರು ಜಾತಿಯ ಜನರು ವಾಸಿಸುತ್ತಿದ್ದಾರೆ ಎನ್ನುತ್ತದೆ ಚುನಾವಣಾ ಆಯೋಗದ ಮತದಾರರ ಪಟ್ಟಿ.

ಈ ಮನೆಯಲ್ಲಿ ಉತ್ತರ ಭಾರತದ ಬಲರಾಮ್ ಮಂಡಲ್, ಕರ್ನಾಟಕದ ಶ್ರೀನಿವಾಸ ಶೆಟ್ಟಿ ಮತ್ತು ಮಂದಾರ ಶೆಟ್ಟಿ, ಭೀಮ್ ಮಹದ್ದೂರ್ ಚಾಂದ್, ಗಣೇಶ್ ಮೊಗವೀರ, ಸುಲೇಖಾ ಬಚ್ಚ ಮೊಗವೀರ, ಅಬೀದ್ ಹುಸೇನ್, ಮಂಜುನಾಥ್ ನಾಯಕ್, ರಾಘವೇಂದ್ರ ಪೂಜಾರಿ, ಬಂಗಾರೇಶ್ವರ ಹೆಗ್ಡೆ, ದಯಾನಂದ ಜೋಶಿ ಇದ್ದಾರೆ ಎನ್ನುತ್ತದೆ ಮತದಾರರ ಪಟ್ಟಿ.

'ರಾಹುಲ್‌ರಿಂದ ಕಾಂಗ್ರೆಸ್‌ಗೆ ಭವಿಷ್ಯವಿಲ್ಲ'

ಬೆಂಗಳೂರು: ರಾಹುಲ್ ಗಾಂಧಿ ಲೋಕಸಭೆ ವಿರೋಧ ಪಕ್ಷದ ನಾಯಕ ಆಗಿರುವವರೆಗೆ ಕಾಂಗ್ರೆಸ್‌ಗೆ ಭವಿಷ್ಯವಿಲ್ಲ. ಅವರಿಗೆ ರಚನಾತ್ಮಕತೆಯ ಅರಿವಿಲ್ಲ ಎಂದು ಬಿಜೆಪಿ ಶಾಸಕ ಎಸ್.ಸುರೇಶ್ ಕುಮಾರ್ ದೂರಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿರೋಧ ಪಕ್ಷದ ನಾಯಕರಾಗಿ ರಾಹುಲ್ ಮುಂದುವರಿಯುವುದು ಕಾಂಗ್ರೆಸ್‌ಗೆ ಅಷ್ಟೇ ಅಲ್ಲ, ದೇಶಕ್ಕೂ ಹಾನಿ. ಲೋಕಸಭೆಯಲ್ಲಿ ರಾಮ್ ಸುಭಾಸ್ ಸಿಂಗ್, ವೈ.ಬಿ. ಚವ್ಹಾಣ್, ಸಿ.ಎಂ. ಸ್ಟೀಫನ್, ಜಗಜೀವನ್ ರಾಮ್, ರಾಜೀವ್ ಗಾಂಧಿ, ಎಲ್. ಕೆ. ಅಡ್ವಾಣಿ, ಅಟಲ್ ಬಿಹಾರಿ ವಾಜಪೇಯಿ, ನರಸಿಂಹರಾವ್, ಶರದ್ ಪವಾರ್, ಸುಷ್ಮಾ ಸ್ವರಾಜ್ ಮೊದಲಾದವರು ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡಿದ್ದಾರೆ. ಅವರ ಸಾಮರ್ಥ್ಯ, ತಿಳಿವಳಿಕೆ, ವಿಶ್ವಾಸಾರ್ಹತೆ, ದೇಶಕ್ಕೆ, ಆಳುವ ಪಕ್ಷಕ್ಕೆ ನೀಡುತ್ತಿದ್ದ ಮಾರ್ಗದರ್ಶನ ಅನನ್ಯವಾಗಿತ್ತು. ರಾಹುಲ್ ಅಂಥವರು ನಾಯಕರಾಗಿರುವುದು ಲೋಕಸಭೆಯ ದುರದೃಷ್ಟ ಎಂದರು.

ಕಳವು ಮಾಡಿ ಗೆದ್ದಿದ್ದು ಸಿದ್ದರಾಮಯ್ಯ: ಶೆಟ್ಟರ್

ಬೆಳಗಾವಿ: 'ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪರ್ಧಿಸಿದ್ದ ಬಾದಾಮಿ ಕ್ಷೇತ್ರದಲ್ಲಿ 3,000 ಮತಗಳನ್ನು ಖರೀದಿಸಿ, ಗೆಲ್ಲಿಸಿದ್ದಾಗಿ ಅವರ ಸಹರ್ತಿಗಳೇ ಹೇಳಿದ್ದಾರೆ. ಈ ಬಗ್ಗೆ ಸಿ.ಎಂ ಬಾಯಿ ಬಿಚ್ಚಬೇಕು' ಎಂದು ಸಂಸದ ಜಗದೀಶ ಶೆಟ್ಟರ್ ಸವಾಲು ಹಾಕಿದರು.

'ಆಗ ಸಿದ್ದರಾಮಯ್ಯ ಅವರೊಂದಿಗೆ ಇದ್ದ ಸಿ.ಎಂ. ಇಬ್ರಾಹಿಂ ಹಾಗೂ ಬಿ.ಬಿ. ಚಿಮ್ಮನಕಟ್ಟಿ ಸೇರಿ ಸಾಲ ಮಾಡಿ ಮತ ಖರೀದಿಸಿದ್ದರು. ಇದನ್ನು ಖುದ್ದಾಗಿ ಇಬ್ರಾಹಿಂ ಅವರೇ ಹೇಳಿದ್ದಾರೆ. ಮತಗಳ್ಳತನದ ಬಗ್ಗೆ ಬಾಯಿ ಬಡಿದುಕೊಳ್ಳುತ್ತಿರುವ ಸಿದ್ದರಾಮಯ್ಯ ಏನು ಹೇಳುತ್ತಾರೆ' ಎಂದು ಅವರು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

ಕಾಂಗ್ರೆಸ್ ವಿರುದ್ಧ ರಾಜಣ್ಣ ಅಸಮಾಧಾನ

ತುಮಕೂರು: 'ಲೋಕಸಭೆ ಚುನಾವಣೆ ಯಲ್ಲಿ ಮತಕಳವು ನಡೆದಿರು ವುದು ನಿಜ. ಆದರೆ, ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿ ಇದ್ದಾಗಲೇ ಮತದಾರರ ಪಟ್ಟಿ ಸಿದ್ಧಪಡಿಸಲಾಗಿದೆ. ಆಗ ಎಲ್ಲರೂ ಕಣ್ಣುಮುಚ್ಚಿ ಕುಳಿತಿದ್ದರೇ' ಎಂದು ಸಚಿವ ಕೆ.ಎನ್. ರಾಜಣ್ಣ ಪ್ರಶ್ನಿಸಿದ್ದಾರೆ.

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಮತ ಕಳವು ವಿಚಾರ ಮಾತನಾಡಲು ಹೋದರೆ ಮಾತನಾಡಬೇಕಾಗುತ್ತದೆ. ಅದು ಬೇರೆ, ಬೇರೆ ಆಗುತ್ತದೆ' ಎಂದು ಹೇಳಿದರು.

'ಇಷ್ಟೆಲ್ಲ ಅಕ್ರಮ ನಡೆಯುತ್ತಿದ್ದರೂ ನೋಡಿಕೊಂಡು ಸುಮ್ಮನೆ ಇದ್ದೇವಲ್ಲ ಎಂಬ ಬಗ್ಗೆ ನಾಚಿಕೆ ಆಗಬೇಕು. ಆಗ ಸುಮ್ಮನೆ ಇದ್ದು, ಈಗ ಕೇಳುತ್ತಿದ್ದೇವೆ. ರಾಹುಲ್ ಗಾಂಧಿ ನೇತೃತ್ವದಲ್ಲಿ ಮುಂದೆ ಎಚ್ಚರಿಕೆಯಿಂದ ಇರುತ್ತೇವೆ' ಎಂದರು.

'ಪರಮೇಶ್ವರ ಅವರಿಗೆ ಸಿ.ಎಂ ಸ್ಥಾನ ನೀಡಬೇಕು' ಎಂದು ವಿವಿಧ ಮಠಾಧೀಶರ ಹೇಳಿಕೆಗೆ ಅವರು, 'ಸ್ವಾಮೀಜಿಗಳು ಹೇಳಿದಂತೆ ನಡೆಯುವಂತಿದ್ದರೆ ರಾಜಕಾರಣಿಗಳು ಏಕೆ ಇರಬೇಕು. ಎಲ್ಲ ಸ್ವಾಮೀಜಿಗಳು ಸೇರಿ ತೀರ್ಮಾನಿಸ ಬಹುದಿತ್ತಲ್ಲವೆ? ಸ್ವಾಮೀಜಿಗಳು ಹೇಳಿದಂತೆ ರಾಜಕಾರಣ ಮಾಡಲಾಗುತ್ತದೆ? ಎಂದು ಕುಟುಕಿದರು.

ಕಾನೂನು ಇಲಾಖೆ ಪರಿಶೀಲನೆ

ಇಲಾಖೆಯ ಸಲಹೆ ಆಧರಿಸಿ ಮುಂದಿನ ತೀರ್ಮಾನ: ಮುಖ್ಯಮಂತ್ರಿ

ಪ್ರಜಾವಾಣಿ ವಾರ್ತೆ

ಮೈಸೂರು: 'ಲೋಕಸಭೆ ಚುನಾವಣೆಯಲ್ಲಿ ಮತಗಳ್ಳತನ ನಡೆದಿರುವ ಬಗ್ಗೆ ಕಾನೂನು ಇಲಾಖೆ ಪರಿಶೀಲಿಸಲಿದೆ. ಇಲಾಖೆಯು ನೀಡುವ ಶಿಫಾರಸಿನ ಅನ್ವಯ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಶನಿವಾರ ಇಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ತ್ವರಿತವಾಗಿ ಪರಿಶೀಲಿಸಿ ವರದಿ ನೀಡಲು ಅಡ್ವೊಕೇಟ್ ಜನರಲ್ ಅವರಿಗೆ ಸೂಚಿಸಲಾಗುವುದು. ಆದರೆ, ಮತದಾರರ ಪಟ್ಟಿ ಕುರಿತು ಚುನಾವಣಾ ಆಯೋಗಕ್ಕೆ ಮಾತ್ರ ಸಂಪೂರ್ಣ ಅಧಿಕಾರವಿದೆ' ಎಂದರು.

'ಮತಗಳ್ಳತನ ಕುರಿತು ಬಿಜೆಪಿಯವರು ತಪ್ಪು ಮಾಡಿ ಈಗ ಸುಳ್ಳು ಹೇಳುತ್ತಿದ್ದಾರೆ. ಕಳೆದ ಚುನಾವಣೆಯಲ್ಲಿ ನಾವು ರಾಜ್ಯದಲ್ಲಿ ಹದಿನಾರು ಸ್ಥಾನ ಗೆಲ್ಲುವೆವು ಎಂದು ಆಂತರಿಕ ಸಮೀಕ್ಷೆ ತಿಳಿಸಿತ್ತು. ಗೆದ್ದದ್ದು 9 ಮಾತ್ರ. ರಾಹುಲ್ ಗಾಂಧಿ ಸಾಕ್ಷಿ ಸಮೇತ ಎಲ್ಲ ವಿಚಾರ ತಿಳಿಸಿದ್ದಾರೆ. ಈ ದಾಖಲೆಗಳು ಚುನಾವಣಾ ಆಯೋಗದ ಬಳಿ ಲಭ್ಯವಿವೆ. ಒಂದೇ ಸಣ್ಣ ಕೊಠಡಿಯಲ್ಲಿ 80 ಜನ ವಾಸಿಸಲು ಸಾಧ್ಯವೇ' ಎಂದು ಪ್ರಶ್ನಿಸಿದರು.

ಚುನಾವಣಾ ಆಯೋಗದ ಬಗ್ಗೆ ಜನರಲ್ಲಿ ವಿಶ್ವಾಸ ಮೂಡಿಸಲು ನ್ಯಾಯಾಂಗದ ಮಧ್ಯಪ್ರವೇಶ ಕುರಿತು ಪ್ರತಿಕ್ರಿಯಿಸಿ, 'ಚುನಾವಣೆಗಳಲ್ಲಿ, ಇವಿಎಂಗಳಲ್ಲಿ, ಮತದಾರರ ಪಟ್ಟಿಗಳಲ್ಲಿ ಕೈವಾಡ ನಡೆಯುತ್ತಿದೆ ಎಂದು ನಾವು ಮೊದಲಿನಿಂದಲೂ ಹೇಳುತ್ತಾ ಬಂದಿದ್ದೇವೆ' ಎಂದರು.

ಮುಖ್ಯಾಂಶಗಳು

- ಪರಿಶೀಲನೆಗೆ ಅಡ್ವೊಕೇಟ್ ಜನರಲ್‌ಗೆ ಸೂಚನೆ
- ಚುನಾವಣೆ ಆಯೋಗದಲ್ಲಿ ದಾಖಲೆಗಳು ಲಭ್ಯ
- ಸಿ.ಎಂ.ಇಬ್ರಾಹಿಂ ಹೇಳಿಕೆ: ಏನೂ ಗೊತ್ತಿಲ್ಲ

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮತದಾರರ ಪಟ್ಟಿಯಲ್ಲಿನ ದೋಷ ಕುರಿತು ಚುನಾವಣೆ ಆಯುಕ್ತರ ಮತ್ತು ಕೇಂದ್ರ ಸರ್ಕಾರದ ಚುನಾವಣೆ ನೀತಿ ಖಂಡಿಸಿ ಅಂಕಿಅಂಶಗಳ ಮೂಲಕ ಸಾಬೀತು ಮಾಡಿ, ಪ್ರತಿಭಟಿಸಿದ್ದು ಸರಿಯಿದೆ

ದಿನೇಶ ಗುಂಡೂರಾವ್, ಆರೋಗ್ಯ ಸಚಿವ

'ಬಾದಾಮಿ ಕ್ಷೇತ್ರ: ಮತ ಖರೀದಿ ಬಗ್ಗೆ ತಿಳಿದಿಲ್ಲ'

'ಸಿದ್ದರಾಮಯ್ಯ ಅವರು ಬಾದಾಮಿ ಕ್ಷೇತ್ರದಲ್ಲಿ ಮೂರು ಸಾವಿರ ಮತ ಖರೀದಿಸಿಯೇ ಗೆದ್ದದ್ದು' ಎಂಬ ಸಿ.ಎಂ. ಇಬ್ರಾಹಿಂ ಹೇಳಿಕೆಗೆ, 'ಇಬ್ರಾಹಿಂ ನಮ್ಮ ಪಕ್ಷದವರಲ್ಲ. ನಾನು ನಾಮಪತ್ರ ಸಲ್ಲಿಸಲು ಹಾಗೂ ಪ್ರಚಾರಕ್ಕಾಗಿ ಬಾದಾಮಿಗೆ ಹೋಗಿದ್ದೆ. ಅದು ಬಿಟ್ಟರೆ ಏನೂ ಗೊತ್ತಿಲ್ಲ. ನಾನು 1600 ಮತಗಳಿಂದ ಗೆದ್ದಿದ್ದೆ. ಈ ವಿಚಾರ ನನಗೆ ಹೊಸದು ಎಂದರು.

'ವರುಣ ಕ್ಷೇತ್ರದ ಚುನಾವಣೆಯಲ್ಲಿ ಸತ್ತವರೆಲ್ಲಾ ಮತ ಹಾಕಿ ಗೆಲ್ಲಿಸಿದರು ಎಂದು ನಾನು ಹೇಳಿಲ್ಲ. ಒಂದು ವೇಳೆ ಸತ್ತವರ ಹೆಸರಲ್ಲಿ ಮತ ಚಲಾವಣೆ ಆಗಿದ್ದರೆ ಅದಕ್ಕೆ ಆಯೋಗ ನೇರ ಹೊಣೆ. ಪೀಟರ್ ಅಂತಹವರು ಅಲ್ಲಿ ಚುನಾವಣಾ ವೀಕ್ಷಕರಾಗಿ ಇರದಿದ್ದರೆ ನನ್ನ ಸೋಲಿಸುತ್ತಿದ್ದರು' ಎಂದರು.

ದೂರಿನ ದಾಖಲೆ ಸಲ್ಲಿಸಲು ಡಿಕೆಶಿಗೆ ಪತ್ರ ಬರೆದ ಚುನಾವಣಾಧಿಕಾರಿ

ಬೆಂಗಳೂರು: ಮತ ಕಳವು ಪ್ರಕರಣ ಕುರಿತು ಆ.8ರಂದು ಸಲ್ಲಿಸಿದ ದೂರಿಗೆ ಪೂರಕವಾದ ದಾಖಲೆಗಳನ್ನು ಸಲ್ಲಿಸುವಂತೆ ರಾಜ್ಯ ಮುಖ್ಯ ಚುನಾವಣಾಧಿಕಾರಿಯು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರನ್ನು ಕೋರಿದ್ದಾರೆ.

ಈ ಕುರಿತು ಶಿವಕುಮಾರ್ ಅವರಿಗೆ ಪತ್ರ ಬರೆದಿರುವ ರಾಜ್ಯ ಮುಖ್ಯಚುನಾವಣಾಧಿಕಾರಿ ವಿ. ಅನ್ಬುಕುಮಾರ್, ಚುನಾವಣಾ ಮತದಾರರ ಪಟ್ಟಿ, ಮತ ಕಳವು ಆರೋಪಗಳ ಕುರಿತು ಮುಖ್ಯ ಚುನಾವಣಾಧಿಕಾರಿ ಕಚೇರಿಗೆ ಆ. 5ರಂದು ಕೆಪಿಸಿಸಿ ಬರೆದ ಪತ್ರ, ಆ. 8ರಂದು ತಾವು ಸಲ್ಲಿಸಿದ ದೂರಿಗೆ ಪೂರಕವಾಗಿ ಅಗತ್ಯ ದಾಖಲೆಗಳನ್ನು ಸಲ್ಲಿಸುವಂತೆ ಮನವಿ ಮಾಡಿದ್ದಾರೆ.

ದೂರಿನ ಮೇರೆಗೆ ಕ್ರಮ ಕೈಗೊಳ್ಳಲು, 1960ರ ಮತದಾರರ ನೋಂದಣಿ ನಿಯಮಗಳ ಪ್ರಕಾರ ಘೋಷಣೆ ಹಾಗೂ ಪ್ರತಿಜ್ಞಾ ಪತ್ರದೊಂದಿಗೆ ಅಗತ್ಯ ದಾಖಲೆಗಳನ್ನು ಸಲ್ಲಿಸಬೇಕು ಎಂದು ಹೇಳಿದ್ದಾರೆ.

ಆಯೋಗದ ವಿರುದ್ಧದ ಆರೋಪಕ್ಕೆ ಬಿಜೆಪಿ ವಾಗ್ದಾಳಿ

ರಾಹುಲ್ ರಾಜೀನಾಮೆಗೆ ಆಗ್ರಹ

ನವದೆಹಲಿ (ಪಿಟಿಐ): 'ಚುನಾವಣಾ ಆಯೋಗದ ಮೇಲೆ ನಂಬಿಕೆ ಇಲ್ಲದಿದ್ದರೆ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ನೈತಿಕ ನೆಲೆಗಟ್ಟಿನಲ್ಲಿ ಲೋಕಸಭಾ ಸದಸ್ಯತ್ವಕ್ಕೆ ರಾಜೀನಾಮೆ ಸಲ್ಲಿಸಲಿ' ಎಂದು ಬಿಜೆಪಿ ರಾಷ್ಟ್ರೀಯ ವಕ್ತಾರ ಗೌರವ್ ಭಾಟಿಯಾ ಒತ್ತಾಯಿಸಿದ್ದಾರೆ.

'ಮತ ಕಳ್ಳತನ' ಆರೋಪಕ್ಕೆ ಸಂಬಂಧಿಸಿದಂತೆ ರಾಹುಲ್ ಗಾಂಧಿ ಇದುವರೆಗೆ ಚುನಾವಣಾ ಆಯೋಗಕ್ಕೆ ಲಿಖಿತ ಘೋಷಣೆ ಸಲ್ಲಿಸದಿರುವ ಬಗ್ಗೆಯೂ ಅವರು ಸುದ್ದಿಗೋಷ್ಠಿಯಲ್ಲಿ ವಾಗ್ದಾಳಿ ನಡೆಸಿದರು.

ಚುನಾವಣಾ ಆಯೋಗ ಮತ್ತು ಚುನಾವಣೆಯಲ್ಲಿ ನಂಬಿಕೆ ಇಲ್ಲದಿದ್ದರೆ ರಾಜ್ಯಸಭೆ ಮತ್ತು ಲೋಕಸಭೆಯ ಸದಸ್ಯತ್ವಕ್ಕೆ ರಾಜೀನಾಮೆ ಸಲ್ಲಿಸುವಂತೆ ಸೋನಿಯಾ ಗಾಂಧಿ ಹಾಗೂ ಸಂಸದೆ ಪ್ರಿಯಾಂಕಾ ಗಾಂಧಿ ಅವರನ್ನೂ ಭಾಟಿಯಾ ಒತ್ತಾಯಿಸಿದ್ದಾರೆ. ಕಾಂಗ್ರೆಸ್ ಆಡಳಿತವಿರುವ ಕರ್ನಾಟಕ, ತೆಲಂಗಾಣ ಮತ್ತು ಹಿಮಾಚಲಯ ಪ್ರದೇಶದ ಮುಖ್ಯಮಂತ್ರಿಗಳೂ ರಾಜೀನಾಮೆ ನೀಡಲಿ. ಯಾಕೆಂದರೆ ಅವರಿಗೂ ಚುನಾವಣಾ ಆಯೋಗದ ಮೇಲೆ ನಂಬಿಕೆ ಇಲ್ಲ' ಎಂದು ಅವರು ಹೇಳಿದ್ದಾರೆ.

'ಮತ ಕಳ್ಳತನಕ್ಕೆ ಸಂಬಂಧಿಸಿದಂತೆ ಮಾಧ್ಯಮ ಮುಂದೆ ಆಧಾರ ರಹಿತ ಆರೋಪ ಮಾಡಿರುವ ರಾಹುಲ್, ಸಾಂವಿಧಾನಿಕ ಸಂಸ್ಥೆಯಾದ ಚುನಾವಣಾ ಆಯೋಗವು ದಾಖಲೆ ಕೇಳಿದಾಗ ಲಿಖಿತ ಘೋಷಣೆ ಸಲ್ಲಿಸಲು ನಿರಾಕರಿಸುತ್ತಿರುವುದೇ' ಎಂದು ಭಾಟಿಯಾ ಪ್ರಶ್ನಿಸಿದರು.

'ಆಯೋಗದ ಮೇಲೆ ನಿಮಗೆ ನಂಬಿಕೆ ಇಲ್ಲದಿದ್ದರೆ ಮೊದಲು ನೀವು ಲೋಕಸಭಾ ಸದಸ್ಯತ್ವಕ್ಕೆ ರಾಜೀನಾಮೆ ಕೊಡಿ. ನಂತರ ಸುಪ್ರೀಂಕೋರ್ಟ್, ಹೈಕೋರ್ಟ್, ಜನರ ಬಳಿಗೆ ಹೋಗಿ' ಎಂದು ಭಾಟಿಯಾ ಹೇಳಿದರು.

'ಮತ ಕಳವು: ಸಮಗ್ರ ತನಿಖೆ ನಡೆಸಿ'

ಶರದ್ ಪವಾರ್

ನಾಗಪುರ (ಪಿಟಿಐ): ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಮಾಡಿರುವ 'ಮತ ಕಳವು' ಆರೋಪದ ಕುರಿತು ಚುನಾವಣಾ ಆಯೋಗವು ಸಮಗ್ರ ತನಿಖೆ ನಡೆಸಬೇಕು ಎಂದು ಎನ್‌ಸಿಪಿ (ಎಸ್‌ಪಿ) ಮುಖ್ಯಸ್ಥ ಶರದ್ ಪವಾರ್ ಒತ್ತಾಯಿಸಿದ್ದಾರೆ.

'ಮತ ಕಳವು ಕುರಿತ ರಾಹುಲ್ ಗಾಂಧಿ ಅವರು ಮಂಡಿಸಿರುವ ವಿವರಗಳು ಉತ್ತಮ ಸಂಶೋಧನೆಯಿಂದ ಕೂಡಿವೆ. ಚುನಾವಣಾ ಪ್ರಕ್ರಿಯೆಯ ಸಮಗ್ರತೆ ಹಾಗೂ ಅದರ ಕಾವಲುಗಾರನ ಕುರಿತು ಜನರಿಗೆ ಮೂಡಿರುವ ಅನುಮಾನಗಳನ್ನು ಹೋಗಲಾಡಿಸುವ ಅಗತ್ಯವಿದೆ. ತನಿಖೆಯಿಂದ ಸತ್ಯಾಂಶ ಹೊರ ಬರಲಿದೆ ಎಂಬ ಭರವಸೆ ಇದೆ' ಎಂದು ಸುದ್ದಿಗಾರರಿಗೆ ಶನಿವಾರ ತಿಳಿಸಿದ್ದಾರೆ.

'ಚುನಾವಣಾ ಆಯೋಗವು ರಾಹುಲ್ ಗಾಂಧಿ ಅವರಿಂದ ಪ್ರತ್ಯೇಕ ಪ್ರಮಾಣಪತ್ರವನ್ನು ಕೇಳಬಾರದು. ಅವರು ಈ ಬಗ್ಗೆ ಸಂಸತ್ತಿನಲ್ಲೂ ಹೇಳಿದ್ದರು' ಎಂದು

ಮುಖ್ಯಾಂಶಗಳು

- ಆಯೋಗಕ್ಕೆ ಲಿಖಿತ ಘೋಷಣೆ ಸಲ್ಲಿಸದಿರುವುದಕ್ಕೆ ಆಕ್ಷೇಪ
- ಕರ್ನಾಟಕ, ತೆಲಂಗಾಣ, ಹಿಮಾಚಲಪ್ರದೇಶದ ಮುಖ್ಯಮಂತ್ರಿಗಳ ರಾಜೀನಾಮೆಗೆ ಒತ್ತಾಯ

ಗುಂಡಣ್ಣ

25 ವರ್ಷಗಳ ಹಿಂದೆ

ಗುರುವಾರ, 10-8-2000

- **ವೀರಪ್ಪನ್ ಕಳುಹಿಸಿರುವ ಹೊಸ ಕ್ಯಾಸೆಟ್ ಚೆನ್ನೈಗೆ**

ಚೆನ್ನೈ, ಆಗಸ್ಟ್ 9 (ಪಿಟಿಐ)– ಇಡೀ ಕರ್ನಾಟಕವೇ ತುದಿಗಾಲ ಮೇಲೆ ಡಾ.ರಾಜ್ ಬಿಡುಗಡೆಗೆ ಕಾಯುತ್ತಿದ್ದರೂ ಈ ಬಗ್ಗೆ ಯಾವ ಕಾತುರವನ್ನೂ ತೋರಿಸದಿರುವ ವೀರಪ್ಪನ್ ಹೊಸ ಬೇಡಿಕೆಗಳ ಇನ್ನೊಂದು ಕ್ಯಾಸೆಟ್ ಕಳುಹಿಸಿದ್ದಾನೆ. ಈ ಕ್ಯಾಸೆಟ್ ಬುಧವಾರ ಮಧ್ಯರಾತ್ರಿ ಇಲ್ಲವೇ ಗುರುವಾರ ಬೆಳಗಿನ ಜಾವ ಚೆನ್ನೈ ತಲುಪುವ ನಿರೀಕ್ಷೆ ಇದೆ. ಈ ಮೊದಲು ತಾನು ಕಳುಹಿಸಿದ್ದ ಬೇಡಿಕೆಗಳು ಅದಕ್ಕೆ ಕರ್ನಾಟಕ, ತಮಿಳ್ನಾಡು ಸರ್ಕಾರಗಳು ನೀಡಿದ ಒಪ್ಪಿಗೆ ಯಾವುದರ ಬಗೆಗೂ ವೀರಪ್ಪನ್ ಪ್ರತಿಕ್ರಿಯೆ ಸೂಚಿಸಿಲ್ಲ.

75 ವರ್ಷಗಳ ಹಿಂದೆ

ಗುರುವಾರ, 10-8-1950

- **ಬಂಗಾಳದ ಬಗ್ಗೆ ವಿಲಕ್ಷಣ ವಾದ ವಿನಾಶಕಾರಕ**

ದೆಹಲಿ ಆಗಸ್ಟ್ 9– 'ಬಂಗಾಳ ಸಮಸ್ಯೆಯ ಪರಿಹಾರಕ್ಕೆ ವಿಭಜನೆಯನ್ನು ರದ್ದುಗೊಳಿಸಬೇಕು. ಪಾಕಿಸ್ತಾನವು ಭಾರತಕ್ಕೆ ಭೂ ಪ್ರದೇಶವನ್ನು ಬಿಟ್ಟುಕೊಡಬೇಕು. ಪ್ರಜೆಗಳ ವರ್ಗಾವಣೆ ನಡೆಯಬೇಕು ಎಂಬ ಸಲಹೆ, ಉನ್ಮಾದಾವಸ್ಥೆಯಿಂದ ಕೂಡಿದ ವಾದ ಮಾತ್ರವಲ್ಲದೇ, ಈ ಸಲಹೆ ಗಳನ್ನು ಒಪ್ಪಿಕೊಳ್ಳುವುದಾದರೆ ರಾಷ್ಟ್ರ ಹೇತುವೊಂದೇ ಅಲ್ಲದೆ ಯಾವ ಉದಾತ್ತ ತತ್ವಕ್ಕಾಗಿ ಹೋರಾಡಿ, ಯಾವ ತತ್ವದ ಮೇಲೆ ನಿಂತಿದೇವೆಯೋ ಆ ತತ್ವೋದ್ದೇಶ ಪೂರ್ಣ ಮಣ್ಣು ಗೂಡಿದಂತೆಯೇ ಸರಿ' ಎಂದು ಪ್ರಧಾನಿ ಪಂಡಿತ್ ನೆಹರೂರವರು ಪಾರ್ಲಿಮೆಂಟಿನಲ್ಲಿ ಘೋಷಿಸಿದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

10 ಆಗಸ್ಟ್ 2025 ಭಾನುವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಕೃಷ್ಣ ಪ್ರತಿಪದ್ ಗಂ. 12-11 ನಕ್ಷತ್ರ: ಧನಿಷ್ಠ ಗಂ. 13-53 ಯೋಗ: ಶೋಭನ ಗಂ. 24-02 ಕರಣ: ಕೌಲವ ಗಂ. 12-11 ಕರ್ಕಾಟಕ ಮಾಸದ 25 ನೇ ದಿನ. ಮಳೆ ನಕ್ಷತ್ರ : ಆಶ್ಲೇಷ 3 ನೇ ಪಾದ. **ರಾಹುಕಾಲ :** ಸಾಯಂಕಾಲ 04-30 06-00
ಸೂರ್ಯೋದಯ : 06-21 **ಸೂರ್ಯಾಸ್ತ :** 06-51, **ಮುಸ್ಲಿಂ ದಿನಾಂಕ :** 15 ಸಫರ್, **ದಿನ ವಿಶೇಷ :** ಗಾಯತ್ರೀ ಪ್ರತಿಪದ್, ಅದೃಷ್ಟ ಸಂಖ್ಯೆ : 3, 7

ಮೇಷ: ಇಷ್ಟವಿಲ್ಲದ ಕೆಲಸವನ್ನು ಅನಿವಾರ್ಯಕ್ಕಾದರೂ ಮಾಡಬೇಕಾದ ಪರಿಸ್ಥಿತಿ ಎದುರಾಗಲಿದೆ. ಬೇರೇ ಉದ್ಯಮಕ್ಕೆ ಕೈ ಸೇರಿಸುವಂತೆ ಸ್ನೇಹಿತನಿಂದ ಒತ್ತಡ ಬರಬಹುದು. ಆರ್ಥಿಕ ವಿಷಯ ಸರಿಯಾಗಿ ವಿಮರ್ಶಿಸಿ ಉತ್ತರಿಸಿ.

ವೃಷಭ: ಭವಿಷ್ಯಕ್ಕಾಗಿ ಯೋಜನೆಗಳನ್ನು ರೂಪಿಸುವಲ್ಲಿ ಪತ್ನಿಯ ಸಲಹೆ ಸ್ವೀಕರಿಸುವುದು ಮತ್ತು ತಂದೆಯ ಸಹಾಯವನ್ನು ಕೋರುವುದು ಅಸಹಜವಲ್ಲ. ದೇವರ ಕೃಪೆಯಿಂದ ಜಯ ಸಾಧಿಸುವಿರಿ.

ಮಿಥುನ : ವಿಚಾರಗಳನ್ನು ಭಿನ್ನ ದೃಷ್ಟಿಯಿಂದ ನೋಡಲು ಪ್ರಯತ್ನಿಸಿ, ಕೆಡಕು ಬಯಸಿದವರು ನಮಗೆ ಸಹಾಯ ಮಾಡಿದಂತೆಯೇ ಕಾಣುವುದು. ಅದರಿಂದಾಗಿ ಮನಸ್ಸಿನ ನೆಮ್ಮದಿ ಇರುತ್ತದೆ. ಶಾಂತಿಯಿಂದ ಕೆಲಸ ಸಾಧಿಸಿ.

ಕರ್ಕಾಟಕ: ಹಿಂದಿನ ನಿಮ್ಮ ಸೋಲು ನಿಮ್ಮನ್ನು ಬಾಧಿಸುತ್ತಿದ್ದರೂ, ಹೊಸ ಅವಕಾಶಗಳು ನಿಮ್ಮನ್ನು ಅರಿಸಿ ಬರಲಿದೆ. ಮಹಾಗಣಪತಿಯ ಪ್ರಾರ್ಥನೆ, ಕೆಲಸದಲ್ಲಿ ನೂತನ ಪದ್ಧತಿ ಅಳವಡಿಸಿಕೊಂಡರೆ ಜಯ ಕಾಣುವಿರಿ.

ಸಿಂಹ: ನಿಮ್ಮ ದೈನಂದಿನ ರೀತಿ ರಿವಾಜುಗಳನ್ನು ಉಳಿಸಿಕೊಳ್ಳುವುದಕ್ಕಾಗಿ ವೇಗವಾಗಿ ಕೆಲಸ ಮಾಡಬೇಕಾಗುತ್ತದೆ. ಬದಲಾವಣೆಯ ಅಥವಾ ಮೇಲ್ದರ್ಜೆಯ ಹೆಸರಿನಲ್ಲಿ ನಿಮ್ಮತನವನ್ನು ಬಿಡುವುದು ಸರಿಯಲ್ಲ.

ಕನ್ಯಾ: ಆಪ್ತರೊಬ್ಬರ ನೆರವು ದೊರೆತು ಮಗನ ವಿದ್ಯಾಭ್ಯಾಕ್ಕೆ ಸಹಾಯ ವಾಗಲಿದೆ. ಕುಟುಂಬದವರ ಮಾರ್ಗಸೂಚಿಯಂತೆ ಕಳೆದು ಹೋಗಿದ್ದ ವಸ್ತುಗಳೂ ಸಹ ಪತ್ತೆಯಾಗುವುವು, ಸಂತೋಷ ವೃದ್ಧಿಯಾಗಲಿದೆ.

ತುಲಾ: ಕೆಲಸ ಕಾರ್ಯಗಳನ್ನು ಮುಂದೂಡುವ ವಿಚಾರ ಸರಿಯಲ್ಲ, ಶೀಘ್ರದಲ್ಲಿ ಪೂರ್ತಿಗೊಳಿಸಿಕೊಳ್ಳಲು ನಿರ್ಧಾರ ಮಾಡಿ. ಆರೋಗ್ಯದ ಬಗ್ಗೆ ಕಾಳಜಿ ತೋರಿ. ಉದ್ವೇಗದ ವಾತಾವರಣ ಎದುರಾಗಬಹುದು.

ವೃಶ್ಚಿಕ: ಸಂತೋಷದ ನಡುವೆಯೂ ಒತ್ತಡದಿಂದಿರುವುದು ನಿಮ್ಮ ಜಾಯಮಾನ. ಸಕ್ರಿಯ ಹಾಗೂ ಕಾರ್ಯ ಮಗ್ನತೆಯ ದಿನವು ಇದಾಗಿದೆ. ಪಾಲುದಾರರಿಂದ ಮೋಸ ಹೋಗುವ ಸಾಧ್ಯತೆಯು ಅತ್ಯಧಿಕವಾಗಿರಲಿದೆ

ಧನು: ಖರ್ಚು-ವೆಚ್ಚಗಳಲ್ಲಿ ಹಿಡಿತವಿರಲಿ. ಇತರರು ನಿಮ್ಮ ವಿಶ್ವಾಸವನ್ನು ದುರುಪಯೋಗಪಡಿಸಿಕೊಳ್ಳದಂತೆ ಜಾಗರೂಕತೆ ವಹಿಸಬೇಕಾಗುವುದು. ಮಹಾಲಕ್ಷ್ಮಿಯನ್ನು ಪ್ರಾರ್ಥಿಸಿ ಸತ್ಫಲ ಉಂಟಾಗುವುದು.

ಮಕರ : ಬೆಲೆ ಬಾಳುವ ವಸ್ತುಗಳ ಖರೀದಿಯನ್ನು ಮಾಡುವಿರಿ. ರಾಜಕೀಯ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವ ಅವಕಾಶಗಳು ಬರುವುವು. ಖಾಸಗೀ ಸಂಸ್ಥೆಯಿಂದ ಹಣ ಪಡೆದು ಸ್ವಂತ ಉದ್ಯಮ ಆರಂಭಿಸುವ ಸಂಭವವಿದೆ.

ಕುಂಭ: ಮನೆಯಲ್ಲಿ ಸಂತಸದ ವಾತಾವರಣದಿಂದ ಹಿರಿಯರಿಗೆ ನೆಮ್ಮದಿ. ಹೊಸ ಸ್ಥಳದ ವಾತಾವರಣಕ್ಕೆ ಹೊಂದಿಕೊಳ್ಳಲು ಸಮಯ ತೆಗೆದು ಕೊಳ್ಳುವಿರಿ. ವೈದ್ಯ ವೃತ್ತಿಯಲ್ಲಿನ ಸಾಧನೆಗೆ ಸಾಮಾಜಿಕ ಗೌರವ ಸಿಗಲಿದೆ.

ಮೀನ : ವ್ಯಾಪಾರದಲ್ಲಿ ಅನಿರೀಕ್ಷಿತ ಬದಲಾವಣೆಕಾಣುವ ಸಾಧ್ಯತೆ ಇದೆ. ಅಕ್ಕ ಪಕ್ಕದವರಿಗೆ ಸಹಾಯ ನೀಡಬೇಕಾಗುವುದು. ಶ್ರೀ ಆಂಜನೇಯನ ದರ್ಶನದಿಂದ ಎಲ್ಲಾ ಕಾರ್ಯಗಳು ನೆರವೇರುವುದು.

ಪದಬಂಧ 6130

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಈತ ಆಜ್ಞೆ ಮಾಡುವವನು (4)
3.ಜರೂರಾಗಿ ಮಾಡಿರುವ ಪಂಚನಾಮೆ (4)
5.ಇದು ತುಂಬಾ ಹೊಸತು (3)
6.ಪುಷ್ಪದ ಮೇಲೆ ಬಿದ್ದಿರುವ ಸೂರ್ಯನ ಕಾವು (4)
8.ನಂಜಿನಿಂದ ಕೂಡಿರುವ ಸಂಗತಿ (3)
10.ಕೇಳಲು ಇಂಪಾಗಿರುವುದು (3)
12.ದ್ರವರೂಪದ ಲೋಹ (4)
15.ಒಳ್ಳೆಯ ವಂಶ (3)
16.ತನ್ನ ಬಗೆಗೆ ಇರುವ ಗೌರವ (4)
17.ಇದು ಕನ್ನಡಿಗನ ಚಾಳೀಸು (4)

ಮೇಲಿಂದ ಕೆಳಕ್ಕೆ

1.ಪುಷ್ಪಗಳನ್ನಿಡುವ ಕರಂಡಕವು ಉಲ್ಟಾ ಆಗಿಬಿಟ್ಟದೆ (3)
2.ನಕಲು ನೋಡಿ ಈ ರೀತಿ ಕೋಪಗೊಳ್ಳು (3)
3.ಮನದಿಂದ ಮಾಡಿಕೊಂಡಿರುವ ಅರಿಕೆ (3)
4.ರುಜುವಾತು ಪಡಿಸುವಾಗ ಹಾಕಿದ ಸಹಿ (2)
7.ಹೀಗೆ ಕಷ್ಟದ ಅನುಭವ ಮಾಡಿಸು (5)
9.ನರಕಾಧಿಪತಿಯ ಸೇವಕನಿವನು (5)
11.ವ್ಯವಸಾಯಗಾರನ ಅಳಲು (3)
12.ಕಾಪಾಡುವವನು ಇಲ್ಲಿದ್ದಾನೆ (3)
13.ಈತ ಸರಿಸಮಾನನಾದವನು (3)
14.ದೀರ್ಘವಲ್ಲದ ಅಕ್ಷರ ಕೊನೆಗೆ ದೀರ್ಘ ವಾಗಿದೆಯಲ್ಲಾ! (2)

1			2	■	3			4
	■	■	5			■	■	
6	7			■	8		9	■
■		■	■	■	■	■		■
■		■	■	■	■	■		■
■		■	■	■	■	■		■
■	10		11	■	12			13
14	■	■	15			■	■	
16				■	17			

6129ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1. 1.ಕಲ್ಪನೆ 3.ಪ್ರಧಾನ 5.ನರಭಕ್ಷಕ 6.ಲಿಪಿ 8.ಸಂತ 9.ತೂತು 10.ಠತೋ 11.ನಾರಿ 12.ಷರಾ 16.ಧರ್ಮಬಾಹಿರ 17.ಕುಗ್ರಾಮ 18.ಸತ್ಕಾರ

ಮೇಲಿಂದ ಕೆಳಕ್ಕೆ: 1. 1.ಕಡುಗಲಿ 2.ನೆನಪು 3.ಪ್ರಕಟ 4.ನವಜಾತ 7.ಪಿತೂರಿ 8.ಸಂತೋಷ 11.ನಾಮಹಾಕು 13.ರಾಯಭಾರ.14 ಅಧಮ. 15 ಅರಸ

ಸುಡೊಕು 6514

ಹೀಗೆ ಆಡಿ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

		5	6		2			
	3	1			4	6	8	
6				1			5	
	8	3		6				4
1				4				8
2			8		1	5	6	
					3			
4		2		9			3	1
	1		4		6			5

6513 ಸುಡೊಕು

8	7	6	1	4	9	3	2	5
1	3	4	5	2	7	8	6	9
5	9	2	6	3	8	7	4	1
2	1	5	9	7	3	6	8	4
6	4	7	8	1	2	9	5	3
3	8	9	4	5	6	1	7	2
9	2	8	3	6	5	4	1	7
7	6	1	2	9	4	5	3	8
4	5	3	7	8	1	2	9	6

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

‘ಸಭಿಕರಾಗಿ’ ವಿದ್ಯಾರ್ಥಿಗಳ ಬಳಕೆಗೆ ನಿರ್ಬಂಧ

ಶಾಲಾವಧಿಯಲ್ಲಿ ಶಿಕ್ಷಕರೂ ಹೋಗುವಂತಿಲ್ಲ: ಶಿಕ್ಷಣ ಇಲಾಖೆ ಆದೇಶ

• ಓದೇಶ ಸಕಲೇಶಪುರ

ರಾಮನಗರ: ‘ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳನ್ನು ಇನ್ನು ಮುಂದೆ ಹೊರಗಿನ ಯಾವುದೇ ಕಾರ್ಯಕ್ರಮಗಳಿಗೆ ಪ್ರೇಕ್ಷಕರಾಗಿ ಕರೆದುಕೊಂಡು ಹೋಗುವಂತಿಲ್ಲ’ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಆದೇಶ ಮಹತ್ವದ ಆದೇಶವನ್ನು ಹೊರಡಿಸಿದೆ.

ಆ ಮೂಲಕ ಜನಪ್ರತಿನಿಧಿಗಳು, ರಾಜಕೀಯ ಮುಖಂಡರು, ಸರ್ಕಾರೇತರ ಸಂಘ– ಸಂಸ್ಥೆಗಳು, ಸಂಘಟನೆಗಳ ಶೈಕ್ಷಣಿಕೇತರ ಕಾರ್ಯಕ್ರಮಗಳಿಗೆ ವಿದ್ಯಾರ್ಥಿಗಳನ್ನು ಕರೆದೊಯ್ಯುವ ಪ್ರವೃತ್ತಿಗೆ ಇಲಾಖೆಯ ಪ್ರಧಾನ ಕಾರ್ಯದರ್ಶಿ ವಿ.ರಶ್ಮಿ ಮಹೇಶ್ ಬ್ರೇಕ್ ಹಾಕಿದ್ದಾರೆ. ಆದೇಶ ಉಲ್ಲಂಘಿಸುವವರ ವಿರುದ್ಧ ಶಿಸ್ತು ಕ್ರಮದ ಎಚ್ಚರಿಕೆ ನೀಡಿದ್ದಾರೆ.

ಶಿಕ್ಷಕರೂ ಹೋಗುವಂತಿಲ್ಲ: ಶಾಲಾವಧಿಯಲ್ಲಿ ತರಬೇತಿ, ಕಾರ್ಯಕ್ರಮ, ಕಾರ್ಯಾಗಾರ, ಸಭೆ ಇನ್ನಿತರ ಚಟುವಟಿಕೆಗಳಿಗೆ ಶಿಕ್ಷಕರನ್ನು ನಿಯೋಜನೆ ಅಥವಾ ಕರ್ತವ್ಯದ ಮೇರೆಗೆ ಮೌಖಿಕ ಅಥವಾ ಲಿಖಿತ ಆದೇಶದ ಮೂಲಕ ಕಳುಹಿಸಬಾರದು. ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪಂಚಾಯಿತಿಯ ಸಿಇಒ ಸಹ ಇಂತಹ ನಿರ್ದೇಶನಗಳನ್ನು ನೀಡುವಂತಿಲ್ಲ.

ತರಗತಿ ಅವಧಿಯಲ್ಲಿ ಶಿಕ್ಷಕರು, ಮುಖ್ಯ ಶಿಕ್ಷಕರನ್ನು ಸಭೆಗಳಿಗೆ ಕರೆಯಬಾರದು. ವಿಡಿಯೊ ಕಾನ್ಫರೆನ್ಸ್ ಮಾಡಬಾರದು. ಇಲಾಖೆ ಅಧಿಕಾರಿಗಳು ಶಾಲೆಗೆ ಭೇಟಿ ನೀಡಿದಾಗ ತರಗತಿಗಳಿಗೆ ತೊಂದರೆ ಆಗದಂತೆ ನೋಡಿಕೊಳ್ಳಬೇಕು ಎಂದು ಅವರು ಆದೇಶದಲ್ಲಿ ಸೂಚಿಸಿದ್ದಾರೆ.

ಇತರ ಪರೀಕ್ಷೆಗೆ ಬ್ರೇಕ್: ಶಾಲಾ ದಿನಗಳಲ್ಲಿ ಯಾವುದೇ ಬಾಹ್ಯ ಪರೀಕ್ಷೆಗಳನ್ನು (ಕೆಪಿಎಸ್‌ಸಿ, ಕೇಂದ್ರ ಮತ್ತು ರಾಜ್ಯ ಸರ್ಕಾರ, ಖಾಸಗಿ ಸಂಸ್ಥೆ ಅಥವಾ ಇತರ ಸಂಸ್ಥೆಗಳು ನಡೆಸುವ ಪರೀಕ್ಷೆಗಳು) ಶಾಲಾವರಣದಲ್ಲಿ ನಡೆಸಬಾರದು. ನಡೆಸಲೇಬೇಕಾದ ಅಗತ್ಯವಿದ್ದಲ್ಲಿ, ಅದು ಸಾರ್ವತ್ರಿಕ ರಜೆ ಅಥವಾ ಬೇಸಿಗೆ ರಜೆಯಲ್ಲಿ ನಿಯಮಾನುಸಾರ ನಡೆಸಬೇಕು.

ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಶಾಲಾವಧಿಯಲ್ಲಿ ಕಡ್ಡಾಯವಾಗಿ ತರಗತಿಯಲ್ಲಿರಬೇಕು. ಬೋಧನೆ ಮತ್ತು ಕಲಿಕೆ ಅಡಚಣೆ ಇಲ್ಲದೆ ನಡೆಯಬೇಕು. ಮಕ್ಕಳ ಶೈಕ್ಷಣಿಕ ಪ್ರಗತಿ, ಫಲಿತಾಂಶ ಸುಧಾರಣೆ ಹಾಗೂ ಗುಣಮಟ್ಟದ ಬೋಧನೆಗೆ ಆದ್ಯತೆ ನೀಡಬೇಕು.

ಸಾಫ್ಟ್‌ವೇರ್‌ಗಳಲ್ಲಿ ಡೇಟಾ ಎಂಟ್ರಿ ಕೆಲಸ ಮಾಡುವಂತೆ ಶಿಕ್ಷಕರು ಅಥವಾ ಮುಖ್ಯ ಶಿಕ್ಷಕರಿಗೆ ಡಿಡಿಪಿಐಗಳು, ಬಿಇಒಗಳು, ಡಯಟ್ ಪ್ರಾಂಶುಪಾಲರು, ಇಲಾಖೆಯ ಯಾವುದೇ ಮಟ್ಟದ ಅಧಿಕಾರಿಗಳು, ಖಾಸಗಿ ಸಂಸ್ಥೆಗಳ ಅಥವಾ ಯಾವುದೇ ಜ್ಞಾನ ಪಾಲುದಾರರು ಮೌಖಿಕ ಅಥವಾ ಲಿಖಿತ ಆದೇಶ ನೀಡಬಾರದು ಎಂದು ಆದೇಶದಲ್ಲಿ ತಿಳಿಸಿದ್ದಾರೆ.

ಮಕ್ಕಳನ್ನು ಪ್ರೇಕ್ಷಕರಾಗಿ ಕರೆದೊಯ್ಯುವ, ಶೈಕ್ಷಣಿಕೇತರ ಕೆಲಸಗಳಿಗೆ ಶಿಕ್ಷಕರ ಬಳಕೆ ಕುರಿತು ದೂರುಗಳು ಇದ್ದವು. ಆ ಹಿನ್ನೆಲೆಯಲ್ಲಿ ಆದೇಶ ಹೊರಡಿಸಲಾಗಿದೆ

ವಿ.ರಶ್ಮಿ ಮಹೇಶ್,
ಪ್ರಧಾನ ಕಾರ್ಯದರ್ಶಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ

‘ಖಾಸಗಿ ಶಾಲೆಗಳಿಗೂ ಅನ್ವಯಿಸಲಿ’

‘ಹೊರಗಿನ ಕಾರ್ಯಕ್ರಮಗಳಿಗೆ ಪ್ರೇಕ್ಷಕರಾಗಿ ಕರೆದೊಯ್ಯಬಾರದು ಎಂಬ ಆದೇಶವು ಖಾಸಗಿ ಶಾಲೆಗಳಿಗೂ ಅನ್ವಯವಾಗಬೇಕು. ಈ ಆದೇಶ ಕಟ್ಟುನಿಟ್ಟಾಗಿ ಜಾರಿಯಾಗಲಿ’ ಎಂದು ಅನುದಾನ ರಹಿತ ಖಾಸಗಿ ಶಾಲಾ ಆಡಳಿತ ಮಂಡಳಿ ಒಕ್ಕೂಟದ ಬೆಂಗಳೂರು ದಕ್ಷಿಣ ಜಿಲ್ಲೆಯ ಮಾಜಿ ಅಧ್ಯಕ್ಷ ಪಟೇಲ್ ಸಿ. ರಾಜು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

ಸರ್ಕಾರೇತರ ಸಂಸ್ಥೆಗಳು ಸೇರಿ ಸಂಘ–ಸಂಸ್ಥೆ, ಸಂಘಟನೆಗಳ ಶೈಕ್ಷಣಿಕೇತರ ಕಾರ್ಯಕ್ರಮಗಳಿಗೆ ವಿದ್ಯಾರ್ಥಿಗಳ ಕರೆದೊಯ್ಯುವುದು ಸಾಮಾನ್ಯವಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.

ಇಲಾಖೆ ಆದೇಶ ಕ್ರಾಂತಿಕಾರಕವಾಗಿದೆ. ಮಕ್ಕಳ ಗುಣಾತ್ಮಕ ಶಿಕ್ಷಣಕ್ಕೆ ಹೆಚ್ಚಿನ ಒತ್ತು ಸಿಕ್ಕಂತಾಗಿದೆ

ಚಂದ್ರಶೇಖರ ನುಗ್ಗಲಿ
ಅಧ್ಯಕ್ಷ, ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ

ಧರ್ಮಸ್ಥಳ: ಬಾಹುಬಲಿ ಬೆಟ್ಟದ ರಸ್ತೆ ಬಳಿ ಎಸ್‌ಐಟಿ ಶೋಧ

10 ಅಡಿ ಅಗೆದರೂ ಸಿಗದ ಅವಶೇಷ

ಪ್ರಜಾವಾಣಿ ವಾರ್ತೆ

ಮಂಗಳೂರು: ಧರ್ಮಸ್ಥಳದ ಪ್ರಕರಣಕ್ಕೆ ಸಂಬಂಧಿಸಿದಂತೆ ಸಾಕ್ಷಿ ದೂರುದಾರ ತೋರಿಸಿದ ಹೊಸ ಜಾಗದಲ್ಲಿ ವಿಶೇಷ ತನಿಖಾ ತಂಡ (ಎಸ್‌ಐಟಿ) ಶನಿವಾರ ಶೋಧ ಕಾರ್ಯ ನಡೆಸಿದ್ದು, ಅಲ್ಲಿ ಮೃತದೇಹದ ಕುರುಹು ಸಿಕ್ಕಿಲ್ಲ.

ಧರ್ಮಸ್ಥಳದ ಗ್ರಾಮದ ಬಾಹುಬಲಿ ಬೆಟ್ಟಕ್ಕೆ ತೆರಳುವ ದಾರಿ ಪಕ್ಕದ ಜಾಗದಲ್ಲಿ ಎರಡು ಕಡೆ ಅಗೆಯಲಾಯಿತು. ಕೆಲ ವರ್ಷಗಳ ಹಿಂದೆ ಅಲ್ಲಿ ಕಟ್ಟಡದ ಅವಶೇಷ ಸುರಿದು ಸಮತಟ್ಟುಗೊಳಿಸಲಾಗಿತ್ತು. ಅವಶೇಷ ಸರಿಸಬೇಕಾದ್ದರಿಂದ ಅಗೆಯುವ ಕಾರ್ಯ ವಿಳಂಬವಾಯಿತು.

‘ಬಾಹುಬಲಿ ಬೆಟ್ಟದ ರಸ್ತೆ ಬಳಿ 20 ಅಡಿ ಉದ್ದ, 20 ಅಡಿ ಅಗಲದ ಜಾಗದಲ್ಲಿ 10 ಅಡಿ ಅಗೆಯಲಾಗಿದೆ. ಅಲ್ಲಿ ಅವಶೇಷ ಪತ್ತೆಯಾಗಿಲ್ಲ’ ಎಂದು ಮೂಲಗಳು ತಿಳಿಸಿವೆ.

ಪುತ್ತೂರು ಉಪ ವಿಭಾಗಾಧಿಕಾರಿ ಸ್ಟೆಲ್ಲಾ ವರ್ಗೀಸ್, ಎಸ್‌.ಪಿ. ಜಿತೇಂದ್ರ ಕುಮಾರ್ ದಯಾಮ ಹಾಗೂ ವಿಧಿ ವಿಜ್ಞಾನ ತಜ್ಞರು ಸ್ಥಳದಲ್ಲಿದ್ದರು.

ಸಾಕ್ಷಿ ದೂರುದಾರ ಈವರೆಗೆ ಧರ್ಮಸ್ಥಳ ಗ್ರಾಮದಲ್ಲಿ 16 ಜಾಗ ತೋರಿಸಿದ್ದು ಅವುಗಳಲ್ಲಿ 15 ಕಡೆ ಶೋಧಕಾರ್ಯ ಮುಗಿದಿದೆ. 13ನೇ ಜಾಗದಲ್ಲಿ ಶೋಧ ನಡೆಯಬೇಕಿದೆ.

‘ಧರ್ಮಸ್ಥಳಕ್ಕೆ ಅಪಖ್ಯಾತಿ ಸಲ್ಲ’

ಹಾವೇರಿ: ‘ಧರ್ಮಸ್ಥಳ ದೇವಸ್ಥಾನವು ಹಿಂದೂಗಳ ಪವಿತ್ರ ಸ್ಥಳ. ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಅವರು ಧಾರ್ಮಿಕ ಸಾಮಾಜಿಕ ಕೆಲಸಗಳಲ್ಲಿ ತೊಡಗಿಕೊಂಡಿದ್ದಾರೆ. ಇಂಥ ಕ್ಷೇತ್ರಕ್ಕೆ ಅಪಖ್ಯಾತಿ ಹಾಗೂ ಕಪ್ಪುಚುಕ್ಕೆ ತರುವ ಕೆಲಸ ನಡೆದಿದೆ’ ಎಂದು ಹರಿಹರ ಪಂಚಮಸಾಲಿ ಲಿಂಗಾಯತ ಗುರುಪೀಠದ ವಚನಾನಂದ ಸ್ವಾಮೀಜಿ ಹೇಳಿದರು.

‘ಹಿಂದೂಗಳು ಒಗ್ಗಟ್ಟಾಗಿ ಹೆಗ್ಗಡೆ ಅವರ ಪರ ನಿಲ್ಲಬೇಕು. ಇಂದು ಅವರಿಗೆ ಬಂದ ಪರಿಸ್ಥಿತಿ ಮುಂದೆ ನಮಗೂ ಬರಬಹುದು’ ಎಂದೂ ಶನಿವಾರ ಸುದ್ದಿಗಾರರಿಗೆ ತಿಳಿಸಿದರು.



ವಚನಾನಂದ ಸ್ವಾಮೀಜಿ

‘ವಿಶ್ವದಾದ್ಯಂತ ಹಿಂದೂ ಧರ್ಮ ಬೆಳೆಯುತ್ತಿದೆ. ವಿದೇಶಿಯರೂ ಸ್ವಇಚ್ಛೆಯಿಂದ ಧರ್ಮಕ್ಕೆ ಆಕರ್ಷಿತರಾಗುತ್ತಿದ್ದಾರೆ. ಮೂಲಭೂತವಾದಿಗಳಿಗೆ ಇದನ್ನು ಸಹಿಸಲು ಆಗುತ್ತಿಲ್ಲ, ಹಿಂದೂ ದೇವಸ್ಥಾನ, ಮಂದಿರ ಮತ್ತು ಧಾರ್ಮಿಕ ಕೇಂದ್ರಗಳಿಗೆ ಕಂಟಕ ತರುತ್ತಿದ್ದಾರೆ’ ಎಂದರು.

‘ಧರ್ಮಸ್ಥಳದ ಪ್ರಕರಣಗಳ ಬಗ್ಗೆ ಎಸ್‌ಐಟಿ ತನಿಖೆ ನಡೆದಿದೆ. ನ್ಯಾಯಾಲಯ ಇದೆ. ಈಗ ಬಾಯಿಗೆ ಬಂದಂತೆ ಮಾತನಾಡಿ ಹೆಸರಿಗೆ ಧಕ್ಕೆ ತರುವುದು ಸರಿಯಲ್ಲ. ಅಧರ್ಮ ಮಾಡುತ್ತಿರುವ ಪಾಪಿಗಳಿಂದ ಇದೆಲ್ಲ ಆಗುತ್ತಿದೆ’ ಎಂದು ಹೇಳಿದರು.

ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯಕ ಟಿ.ಎಂ. ಕೃಷ್ಣ ಅಭಿಮತ

‘ಚರ್ಮ ವಾದ್ಯ ತಯಾರಿಸುವ ಕೈಗಳ ಮರೆವ ರಾಜಕಾರಣ’

• ಸುಕೃತ ಎಸ್.

ಬೆಂಗಳೂರು: ‘ಚಿಮ್ಮುತ್ತಿರುವ ಬಿಸಿ ರಕ್ತದ ಮಡುವಿನಿಂದ ಮಾಂಸವನ್ನು ಕೆತ್ತಿ ತೆಗೆದು ಚರ್ಮ ಹದಗೊಳಿಸಬೇಕು. ಬಳಿಕವೇ ಅದು ಮೃದಂಗವಾಗುತ್ತದೆ. ನಾದ ಹೊಮ್ಮುತ್ತದೆ. ಇದನ್ನು ತಯಾರಿಸುವವರು ಸಮಾಜದ ತಳಸ್ತರದವರು. ಇದನ್ನು ನುಡಿಸುವ ಕೈಗಳು ಪ್ರಬಲ ಜಾತಿಯವರದ್ದು. ನಾದ ಹೊಮ್ಮಿದ ಬಳಿಕ ವಾದ್ಯ ತಯಾರಿಸಿದ ಕೈಗಳು ಮರೆತೇ ಹೋಗುತ್ತವೆ. ಇದು ನಿರ್ಲಕ್ಷ್ಯವೂ ಇರಬಹುದು, ಉದ್ದೇಶಪೂರ್ವಕವೂ ಆಗಿರಬಹುದು...’

– ಸಂಗೀತ ಲೋಕ, ಅದರೊಳಗಿನ ಜಾತಿವಾದ, ಇದಕ್ಕಿರುವ ವಿವಿಧ ಮುಖಗಳು, ಅದು ಪ್ರಕಟಗೊಳ್ಳುವ ಬಗೆ, ಜಾತಿವಾದದ ಸಮರ್ಥನೆಗೆ ಪ್ರಬಲ ಜಾತಿಗಳು ನೀಡುವ ವಿವಿಧ ಕಾರಣಗಳನ್ನು ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯಕ ಟಿ.ಎಂ. ಕೃಷ್ಣ ಅವರು ವಿವರಿಸುತ್ತಾ ಸಾಗಿದರು. ಬುಕ್‌ಬ್ರಹ್ಮ ಸಂಸ್ಥೆ ನಗರದಲ್ಲಿ ಆಯೋಜಿಸಿದ್ದ ‘ಸಾಹಿತ್ಯ ಹಬ್ಬ 2025’ರ ‘ಇದು ಯಾರ ಪರಂಪರೆ? ಕಲೆ, ಜಾತಿ ಮತ್ತು ಮೌನದ ಪರಂಪರೆ’ ಗೋಷ್ಠಿಯು ಇದಕ್ಕೆ ಸಾಕ್ಷಿಯಾಯಿತು.

‘ದಲಿತರು, ಬುಡಕಟ್ಟು ಸಮುದಾಯದ ಜನರ ಬಳಿಗೆ ಹೋಗಿ, ನಿಮ್ಮ ವಾದ್ಯಗಳನ್ನು ಯಾರು ತಯಾರಿಸಿ ಕೊಡುತ್ತಾರೆ ಎಂದು ಕೇಳಿ. ‘ನಾವೇ ತಯಾರಿಸಿಕೊಳ್ಳುತ್ತೇವೆ’ ಎಂದು ಉತ್ತರಿಸುತ್ತಾರೆ. ಚರ್ಮ ವಾದ್ಯವನ್ನು ಇವರೇ ತಯಾರಿಸಿಕೊಂಡು, ಇವರೇ ನುಡಿಸುವ ಪರಂಪರೆಯೂ ಇದೆ. ಆದರೆ, ಪ್ರಬಲ ಜಾತಿಯವರು ತಮಗೆ ಬೇಕಾದ ಚರ್ಮ ವಾದ್ಯವನ್ನು ತಯಾರಿಸಿಕೊಳ್ಳುವುದಿಲ್ಲ. ಚರ್ಮ ವಾದ್ಯಕ್ಕೆ ಅಂಟಿರುವ ‘ರಾಜಕಾರಣ’ವಿದು’ ಎಂದರು.

‘ತಳಸ್ತರದ ಜನರು ತಯಾರಿಸುವ ಮೃದಂಗದ ‘ಧಿನ್ನಾ’ ನಾದಕ್ಕೆ ಆಹಾ! ಎನ್ನುತ್ತೇವೆ. ಆದರೆ, ಈ ನಾದವನ್ನು ತಯಾರಿಸುವ ಕೈಗಳ ಕುರಿತು, ಆ ಜ್ಞಾನದ ಕುರಿತು ನಾವು ಚರ್ಚಿಸುವುದೇ ಇಲ್ಲ. ಕಲೆಯ ಪ್ರದರ್ಶನಕ್ಕೆ ವಾದಕನಿಗೆ ವೇದಿಕೆ ಇದೆ. ಆದರೆ, ತಯಾರಕ ಮಾತ್ರ ಸಮಾಜದ ಅದೆಲ್ಲೋ ಮೂಲೆಯಲ್ಲಿ ಜೀವಿಸುತ್ತಿರುತ್ತಾನೆ. ವಾದ್ಯಗಳನ್ನು ಮಾರಾಟ ಮಾಡುವ ಮಳಿಗೆಗಳೂ ಇದ್ದಾವೆ. ಇಲ್ಲೂ ತಯಾರಕನ ಅಸ್ತಿತ್ವ ಇಲ್ಲ’ ಎಂದು ಅಭಿಪ್ರಾಯಪಟ್ಟರು.

ಚರ್ಚೆಯಲ್ಲಿ ಸುಮಂಗಲಾ ಭಾಗ ವಹಿಸಿದ್ದರು. ಶೈಲಜಾ ಅವರು ಗೋಷ್ಠಿಯ ಸಮನ್ವಯದ ಜವಾಬ್ದಾರಿ ಹೊತ್ತಿದ್ದರು.

ಗೋಷ್ಠಿಯಲ್ಲಿ ಶೈಲಜಾ, ಟಿ.ಎಂ.ಕೃಷ್ಣ ಮತ್ತು ಸುಮಂಗಲಾ ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ

‘ತಯಾರಿಕೆ ಪ್ರಕ್ರಿಯೆ ಕುರಿತೂ ನಿರ್ಲಕ್ಷ್ಯ’

‘ಒಂದೆಡೆ ತಯಾರಕರನ್ನು ನಿರ್ಲಕ್ಷಿಸುವುದು. ಇನ್ನೊಂದೆಡೆ ತಯಾರಿಕಾ ಪ್ರಕ್ರಿಯೆಯನ್ನೇ ನಿರ್ಲಕ್ಷಿಸುವುದು. ನಾನು ‘ಸೆಬೆಸ್ಟಿಯನ್ ಆ್ಯಂಡ್ ಸನ್ಸ್’ ಪುಸ್ತಕ ಬರೆದು ಈಗ ಐದು ವರ್ಷವಾಗಿರಬಹುದು. ಈಗಲೂ ಜನ ನನ್ನ ಬಳಿ ಬಂದು, ‘ಮೃದಂಗವನ್ನು ಸತ್ತುಬಿದ್ದ ಗೋವಿನ ಚರ್ಮದಿಂದ ಮಾಡುತ್ತಾರೆ’ ಎನ್ನುತ್ತಾರೆ. ಇದಂತು ನೂರಕ್ಕೆ ನೂರು ಸುಳ್ಳು’ ಎಂದು ಗಾಯಕ ಟಿ.ಎಂ. ಕೃಷ್ಣ ಹೇಳಿದರು.

‘ಯಾವುದೇ ಜೀವಿಯು ಸತ್ತ ಬಳಿಕ, ರಕ್ತವು ಹೆಪ್ಪುಗಟ್ಟುತ್ತದೆ. ಚರ್ಮ ಗಟ್ಟಿಯಾಗುತ್ತದೆ. ಗಟ್ಟಿ ಚರ್ಮದಿಂದ ವಾದ್ಯ ತಯಾರಿಸಲು ಸಾಧ್ಯವೇ ಇಲ್ಲ. ಈ ಚರ್ಮದಿಂದ ನಾದವೂ ಹೊಮ್ಮುವುದಿಲ್ಲ. ಚರ್ಮದ ಹಿಗ್ಗುವ ಗುಣದ ಕಾರಣದಿಂದಲೇ ವಾದ್ಯ ತಯಾರಿಕೆ ಸಾಧ್ಯ. ಆದ್ದರಿಂದ ಗೋವನ್ನು ಕೊಲ್ಲಲೇ ಬೇಕು. ಅದರಲ್ಲೂ ಹಸುವಿನ ಹೊಟ್ಟೆಯ ಭಾಗದ ಚರ್ಮಕ್ಕೆ ಈ ಗುಣವಿದೆ. ಇಂಥ ಚರ್ಮದಿಂದ ತಯಾರಿಸಿದ ವಾದ್ಯದಿಂದ ಮಾತ್ರವೇ ನಾದ ಹೊಮ್ಮುತ್ತದೆ’ ಎಂದರು.

‘160 ಕ್ಷೇತ್ರ ಗೆಲ್ಲುವ ಖಾತರಿ ನೀಡಿದ್ದರು’

ನಾಗಪುರ (ಪಿಟಿಐ): ‘2024ರ ಚುನಾವಣೆಗೂ ಮುನ್ನ ನವದೆಹಲಿಯಲ್ಲಿ ನನ್ನನ್ನು ಭೇಟಿಯಾಗಿದ್ದ ಇಬ್ಬರು ವ್ಯಕ್ತಿಗಳು, 288 ವಿಧಾನಸಭಾ ಕ್ಷೇತ್ರಗಳ ಪೈಕಿ 160 ಕ್ಷೇತ್ರಗಳಲ್ಲಿ ವಿರೋಧ ಪಕ್ಷಗಳನ್ನು (ಮಹಾ ವಿಕಾಸ್ ಅಘಡಿ) ಗೆಲ್ಲಿಸುವ ಖಾತರಿ ನೀಡಿದ್ದರು’ ಎಂದು ಎನ್‌ಸಿಪಿ (ಎಸ್‌ಪಿ) ನಾಯಕ ಶರದ್ ಪವಾರ್ ಶನಿವಾರ ಹೇಳಿದ್ದಾರೆ.

‘ಅವರನ್ನು ನಾನು ರಾಹುಲ್ ಗಾಂಧಿ ಅವರಿಗೆ ಪರಿಚಯಿಸಿದೆ. ಅವರು ಹೇಳಿದ ಮಾತನ್ನು ರಾಹುಲ್ ನಿರ್ಲಕ್ಷಿಸಿದರು. ಇಂತಹ ಕೆಲಸಗಳಲ್ಲಿ ನಾವು ತೊಡಗಬಾರದು. ಜನರ ಬಳಿಗೆ ನೇರವಾಗಿ ಹೋಗಿ ಎಂದು ಹೇಳಿದ್ದರು’ ಎಂದು ತಿಳಿಸಿದ್ದಾರೆ.

‘ಆ ಇಬ್ಬರ ಮಾತಿಗೆ ಪ್ರಾಮುಖ್ಯತೆ ನೀಡಲಿಲ್ಲ. ಹೀಗಾಗಿ, ಅವರ ಹೆಸರು ಹಾಗೂ ಸಂಪರ್ಕ ವಿವರಗಳನ್ನು ಪಡೆಯಲಿಲ್ಲ’ ಎಂದಿದ್ದಾರೆ.

ವಿಧಾನಸಭಾ ಚುನಾವಣೆಯಲ್ಲಿ 132 ಕ್ಷೇತ್ರಗಳಲ್ಲಿ ಬಿಜೆಪಿ ಗೆಲುವು ಸಾಧಿಸಿದ್ದು, ಮಿತ್ರ ಪಕ್ಷಗಳಾದ ಶಿವಸೇನಾ ಹಾಗೂ ಎನ್‌ಸಿಪಿ ಕ್ರಮವಾಗಿ 57 ಹಾಗೂ 41 ಕ್ಷೇತ್ರಗಳಲ್ಲಿ ಗೆಲುವು ಪಡೆದಿದ್ದವು.

ಪವಾರ್ ಬೆಂಬಲಿಸಿದ ಠಾಕ್ರೆ: ಶರದ್ ಪವಾರ್ ಅವರ ಹೇಳಿಕೆಯನ್ನು ಶಿವಸೇನಾ (ಯುಬಿಟಿ) ನಾಯಕ ಆದಿತ್ಯ ಠಾಕ್ರೆ ಬೆಂಬಲಿಸಿದ್ದು, ‘ಚುನಾವಣಾ ಆಯೋಗದ ಕಚೇರಿಯು ಬಿಜೆಪಿ ಕಚೇರಿಯಂತೆ ಕೆಲಸ ಮಾಡುತ್ತಿರುವ ಅನುಭವವಾಗಿದೆ’ ಎಂದು ಹೇಳಿದ್ದಾರೆ.

ಹೇಳಿಕೆ ನಿರಾಕರಿಸಿದ ಫಡಣವೀಸ್

ಮುಂಬೈ (ಪಿಟಿಐ): ಶರದ್ ಪವಾರ್ ಆರೋಪವನ್ನು ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ನಿರಾಕರಿಸಿದ್ದಾರೆ.

‘ಮತ ಕಳವು ಕುರಿತು ರಾಹುಲ್ ಗಾಂಧಿ ಆರೋಪಿಸಿದ ಬಳಿಕ ಪವಾರ್ ಅವರು ಈ ವಿಚಾರವನ್ನು ಏಕೆ ಬಹಿರಂಗಪಡಿಸುತ್ತಿದ್ದಾರೆ? ಇವಿಎಂ ಕಾರ್ಯನಿರ್ವಹಣೆ ಬಗ್ಗೆ ರಾಹುಲ್ ನೀಡಿದ್ದ ಹೇಳಿಕೆಯನ್ನು ಪವಾರ್ ಎಂದಿಗೂ ಅನುಮೋದಿಸಿರಲಿಲ್ಲ. ರಾಹುಲ್ ಗಾಂಧಿ ಅವರು ಸಲೀಂ–ಜಾವೇದ್ ರೀತಿ ‘ಸ್ಕ್ರಿಪ್ಟ್ ಕೆಲಸ’ ಮಾಡುತ್ತಿದ್ದಾರೆ. ಪವಾರ್ ಅವರು ಅದೇ ಸ್ಕ್ರಿಪ್ಟ್ ಹೇಳುತ್ತಿದ್ದಾರೆ’ ಎಂದು ಫಡಣವೀಸ್ ಟೀಕಿಸಿದ್ದಾರೆ.

ದೇವೇಂದ್ರ ಫಡಣವೀಸ್

ಬುಕ್ ಬ್ರಹ್ಮ ಕಥಾ ಸ್ಪರ್ಧೆ: ಮನ್ಸೂರ್ ಪ್ರಥಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬುಕ್ ಬ್ರಹ್ಮ ಸ್ವಾತಂತ್ರ್ಯೋತ್ಸವ’ ಕಥಾ ಸ್ಪರ್ಧೆಯಲ್ಲಿ ಸುಲ್ತಾನ್ ಮನ್ಸೂರ್ ಅವರ ‘ಪರೇಡ್ ಪೊಡಿಮೋನು’ ಕಥೆ ಪ್ರಥಮ ಬಹುಮಾನ ಪಡೆದುಕೊಂಡಿತು.

ಕೋರಮಂಗಲದ ಸೇಂಟ್ ಜಾನ್ಸ್ ಸಭಾಂಗಣದಲ್ಲಿ ನಡೆಯುತ್ತಿರುವ ‘ಬುಕ್ ಬ್ರಹ್ಮ ಸಾಹಿತ್ಯ ಉತ್ಸವ’ದ ಎರಡನೇ ದಿನವಾದ ಶನಿವಾರ ಸಂಜೆ ನಡೆದ ಕಾರ್ಯಕ್ರಮದಲ್ಲಿ ವಿಜೇತರ ಹೆಸರು ಘೋಷಿಸಿ, ಬಹುಮಾನ ಪ್ರದಾನ ಮಾಡಲಾಯಿತು.

ಸದಾಶಿವ ಸೊರಟೂರು ಅವರ ‘ಬೆಳಕು ಕುಡಿದ ಸಂಜೆ’ ಕಥೆ ದ್ವಿತೀಯ ಬಹುಮಾನ ಹಾಗೂ ದಾದಾಪೀರ್ ಜೈಮನ್ ಅವರ ‘ದಿಗಿಲು’ ಕಥೆ ತೃತೀಯ ಬಹುಮಾನಕ್ಕೆ ಭಾಜನವಾಯಿತು. ಈ ಬಹುಮಾನಗಳು ಫಲಕದ ಜತೆಗೆ ಕ್ರಮವಾಗಿ ₹ 50 ಸಾವಿರ, ₹ 25 ಸಾವಿರ ಹಾಗೂ ₹ 15 ಸಾವಿರ ಒಳಗೊಂಡಿವೆ.

ಅಕ್ಷತಾ ಕೃಷ್ಣಮೂರ್ತಿ ಅವರ ‘ಬೆಟ್ಟದ ದಾರಿ’, ಸಂಜೋತಾ ಪುರೋಹಿತ ಅವರ ‘ಮಿಷನ್ ಪೀಕ್’, ಲಿಂಗರಾಜ ಸೊಟ್ಟಪ್ಪನವರ ಅವರ ‘ಮೈದಾನ’, ವಿನುತಾ ಕೆ.ಆರ್. ಅವರ ‘ದೇಸಮ್ಮಾಲ ಮಕ್ಕು’ ಹಾಗೂ ರೇಣುಕಾ ರಮಾನಂದ ಅವರ ‘ಉಫ಼ಡಾ ಉಫ಼ಡೀ’ ಕಥೆ ಸಮಾಧಾನಕರ ಬಹುಮಾನ ಪಡೆದುಕೊಂಡಿತು. ಈ ಬಹುಮಾನ ತಲಾ ₹ 5 ಸಾವಿರ ಹಾಗೂ ಫಲಕವನ್ನು ಒಳಗೊಂಡಿದೆ.

ಮೆಚ್ಚುಗೆ ಬಹುಮಾನ: ಕೆ. ಕರಿಸ್ವಾಮಿ ಅವರ ‘ಲೆವೆಲ್ ಕ್ರಾಸಿಂಗ್’, ರವಿ ಶಿವರಾಯಗೋಳ ಅವರ ‘ಶಬ್ದ’, ಮೋದೂರು ತೇಜ ಅವರ ‘ದವನ’, ಸಂತೆಬೆನ್ನೂರು ಫೈಜ್ನಟ್ರಾಜ್ ಅವರ ‘ಅಂಗ ಅನಂಗವೆಂಬೆರಡೂ...’, ಮಲ್ಲಮ್ಮ ಜೊಂಡಿ ಅವರ ‘ನೆರಳು’, ಸುಧಾ ಆಡುಕಳ ಅವರ ‘ಯೋಜನಗಂಧಿ’, ಶ್ರೀಧರ ಪತ್ತಾರ ಅವರ ‘ಬೆಲ್ಲಾರೋಜ್’, ಅನುಪಮಾ ಬೆಣಚಿನಮರ್ಡಿ ಅವರ ‘ಪರ್ಪಲ್ ಸಮಯ’, ಪ್ರವೀಣ್ ಕುಮಾರ್ ಜಿ. ಅವರ ‘ಲಕ್’, ಪಾಪುಗುರು ಅವರ ‘ಸೀತೆ ಮತ್ತೆ ಒಂಟಿಯಾದಳು’, ಯಶಸ್ ನಗರ ಅವರ ‘ಬೆಂಕಿ ಹುಳ’, ಅನಿಲ್ ಗುನ್ನಾಪುರ ಅವರ ‘ಬಸವ ನಿಲಯ’, ಟಿ.ಎಸ್. ಶ್ರವಣಕುಮಾರಿ ಅವರ ‘ಕಸಿ’, ಈಶ್ವರ ಎಂ. ಅವರ ‘ಕತೆ ಇಲ್ಲಿಂದಾಚೆ ಶುರು...’, ಲಕ್ಷ್ಮಣ್ ವಿ.ಎ. ಅವರ ‘ರಾಮ್ ತೇರಿ ಗಂಗಾ ಮೈಲಿ’, ಎಸ್. ನಾಗಶ್ರೀ ಅಜಯ್ ಅವರ ‘ಇತಿ ವೃತ್ತ’ ಹಾಗೂ ಚಿಕ್ಕೋಬನಹಳ್ಳಿ ಚಾಂದ್ ಬಾಷ ಅವರ ‘ದೇವರ ಹೂ’ ಮೆಚ್ಚುಗೆ ಬಹುಮಾನ ಪಡೆದ ಕಥೆಗಳಾಗಿವೆ. ಈ ಬಹುಮಾನ ತಲಾ ₹ 2 ಸಾವಿರ ನಗದು ಹಾಗೂ ಫಲಕವನ್ನು ಒಳಗೊಂಡಿತ್ತು.

ಸುಲ್ತಾನ್ ಮನ್ಸೂರ್ | ಸದಾಶಿವ ಸೊರಟೂರು | ದಾದಾಪೀರ್ ಜೈಮನ್

ಪ್ರಧಾನಿ ಕಾರ್ಯಕ್ರಮ: ಅಶೋಕ ಹೆಸರಿಲ್ಲ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರು ಆ.10ರಂದು ಭಾಗವಹಿಸುವ ವಿವಿಧ ಕಾರ್ಯಕ್ರಮಗಳ ಆಹ್ವಾನ ಪತ್ರಿಕೆಯಲ್ಲಿ ವಿಧಾನಸಭೆ ವಿರೋಧ ಪಕ್ಷದ ನಾಯಕರೂ ಆಗಿರುವ ಬೆಂಗಳೂರಿನ ಶಾಸಕ ಆರ್. ಅಶೋಕ ಅವರ ಹೆಸರಿಲ್ಲ.

ಎಲೆಕ್ಟ್ರಾನಿಕ್ ಸಿಟಿಯ ಐಐಐಟಿ ಆಡಿಟೋರಿಯಂನಲ್ಲಿ ಮಧ್ಯಾಹ್ನ 1ಕ್ಕೆ ಸಮಾರಂಭ ನಡೆಯಲಿದೆ. ಈ ಯಾವ ಕಾರ್ಯಕ್ರಮಗಳ ಪಟ್ಟಿಯಲ್ಲೂ ಅಶೋಕ ಅವರ ಹೆಸರಿನ ಉಲ್ಲೇಖವಿಲ್ಲ.

ರಾಜ್ಯ ಒಕ್ಕಲಿಗರ ಒಕ್ಕೂಟ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ನಿರ್ಮಲಾನಂದನಾಥ ಸ್ವಾಮೀಜಿ, ನಾಗಲಕ್ಷ್ಮೀ ಚೌಧರಿ, ಮನು ಬಳಿಗಾರ್, ಪುರುಷೋತ್ತಮ ಬಿಳಿಮಲೆ, ಪ್ರೊ. ಬಿ.ಜಯಪ್ರಕಾಶ್ ಗೌಡ, ಕೆ.ಎಸ್. ರಿತುಪರ್ಣ, ದೇವರಾಜ್ ಇದ್ದರು ಪ್ರಜಾವಾಣಿ ಚಿತ್ರ

‘ಮಾತೃಭಾಷೆ ಉಳಿವಿಗೆ ಸಹಕರಿಸಿ’

ಜಾನಪದ ಸಂಭ್ರಮದಲ್ಲಿ ಪುರುಷೋತ್ತಮ ಬಿಳಿಮಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2011ರ ಜನಗಣತಿ ಪ್ರಕಾರ ದೇಶದಲ್ಲಿರುವ ಮಾತೃಭಾಷೆಗಳ ಸಂಖ್ಯೆ 19,569. ಇವುಗಳ ಉಳಿವಿಗೆ ಎಲ್ಲರೂ ಕೆಲಸ ಮಾಡಬೇಕು ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಹೇಳಿದರು.

ನಗರದಲ್ಲಿ ಶನಿವಾರ ರಾಜ್ಯ ಒಕ್ಕಲಿಗರ ಒಕ್ಕೂಟ ಟ್ರಸ್ಟ್ ಆಯೋಜಿಸಿದ್ದ ರಾಜ್ಯಮಟ್ಟದ ಜಾನಪದ ಸಂಭ್ರಮ, ಸಾಧಕರಿಗೆ ಸನ್ಮಾನ ಹಾಗೂ ಎಸ್ಸೆಸ್ಸೆಲ್ಸಿ, ಪಿಯುಸಿ ವಿದ್ಯಾರ್ಥಿಗಳಿಗೆ ಅಭಿನಂದನಾ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಭಾಷೆಯ ಉಳಿವಿಗಾಗಿ ಕನ್ನಡ ಪ್ರಾಧಿಕಾರ ಹಲವು ಕ್ರಮಗಳನ್ನು ಕೈಗೊಂಡಿದೆ. ಬಲಿಷ್ಠ ನಾಡು ಕಟ್ಟಬೇಕಾದರೆ ಕಲೆ, ಸಾಹಿತ್ಯ, ಸಂಸ್ಕೃತಿ, ಭಾಷೆ ಉಳಿಸಬೇಕು. ವಿವಿಧ ಸಂಸ್ಕೃತಿ, ಭಾಷೆ ಮತ್ತು ಆಚರಣೆ ಹೊಂದಿರುವ ಭಾರತವನ್ನು ಹಾಳು ಮಾಡಲು ಬಿಡಬಾರದು ಎಂದರು.

ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮೀ ಚೌಧರಿ ಮಾತನಾಡಿ, ‘ಹೆಣ್ಣು ಮಕ್ಕಳು ಸವಾಲು, ಅಡಚಣೆ, ಅವಮಾನವನ್ನು ಧೈರ್ಯದಿಂದ ಎದುರಿಸಬೇಕು. ಸಾಧ್ಯವಾದಷ್ಟು ಮೊಬೈಲ್‌ನಿಂದ ದೂರವಿರಿ. ಜಾಲತಾಣದಲ್ಲಿ ಅಪರಿಚಿತರಿಗೆ ಫೋಟೊ, ಕಳುಹಿಸಬಾರದು. ಒಂದು ವೇಳೆ ಯಾವುದಾದರೂ ತೊಂದರೆಗೆ ಸಿಲುಕಿದರೆ ಮೊದಲು ಪೋಷಕರು ಮತ್ತು ಪೊಲೀಸರಿಗೆ ತಿಳಿಸಬೇಕು. ತುರ್ತು ಸಹಾಯವಾಣಿ 112ಕ್ಕೆ ಕರೆ ಮಾಡಿದರೆ, 10 ನಿಮಿಷದಲ್ಲಿ ಪೊಲೀಸರು ಬರುತ್ತಾರೆ ಎಂದರು.

ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಮಾತನಾಡಿ, ಮಕ್ಕಳಿಗೆ ಸಾಧನೆ ಮಾಡಲು ಸಾಕಷ್ಟು ಅವಕಾಶ ಇದೆ. ಎಂಜಿನಿಯರ್, ವೈದ್ಯರಾಗಬೇಕೆಂದು ಪೋಷಕರು ಮಕ್ಕಳ ಮೇಲೆ ಒತ್ತಡ ಹೇರಬಾರದು. ಅವರ ಆಸಕ್ತಿಯ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳಲು ಅವಕಾಶ ನೀಡಿ, ಪ್ರೋತ್ಸಾಹಿಸಬೇಕು ಎಂದು ಕಿವಿಮಾತು ಹೇಳಿದರು.

ಇದೇ ವೇಳೆ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳು ಹಾಗೂ ಸಾಧಕರನ್ನು ಸನ್ಮಾನಿಸಲಾಯಿತು. ಸೃಷ್ಟಿ ಕಲಾ ವಿದ್ಯಾಲಯ ತಂಡದವರು ಜಾನಪದ ನೃತ್ಯ ಪ್ರದರ್ಶಿಸಿದರು.

ರಾಜ್ಯ ಒಕ್ಕಲಿಗರ ಒಕ್ಕೂಟದ ಅಧ್ಯಕ್ಷ ಸಿ.ವಿ.ದೇವರಾಜ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಲೇಖಕ ಮನು ಬಳಿಗಾರ್ ಅಧ್ಯಕ್ಷತೆವಹಿಸಿದ್ದರು. ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಬಿ.ಜಯಪ್ರಕಾಶ ಗೌಡ, ಒಕ್ಕಲಿಗರ ಸಂಘದ ಅಧ್ಯಕ್ಷ ಕಿರಣ್ ಗೌಡ, ರೋಲ್ಸ್ ರಾಯ್ಸ್ ಕಂಪನಿ ಉದ್ಯೋಗಿ ಕೆ.ಎಸ್.ರಿತುಪರ್ಣ ಹಾಜರಿದ್ದರು.

ಪ್ರಮುಖ ಮಸೂದೆಗಳ ಅಂಗೀಕಾರ ಸಾಧ್ಯತೆ?

ನವದೆಹಲಿ (ಪಿಟಿಐ): ಸಂಸತ್‌ನ ಮಳೆಗಾಲದ ಅಧಿವೇಶನ ಇನ್ನೂ ಆರು ದಿನ ಬಾಕಿ ಉಳಿದಿರುವಂತೆಯೇ, ಪ್ರಮುಖ ಮಸೂದೆಗಳನ್ನು ಮಂಡಿಸಲು ಆಡಳಿತರೂಢ ಪಕ್ಷ ಸಿದ್ಧತೆ ನಡೆಸಿದೆ. ಬಿಹಾರದಲ್ಲಿ ನಡೆಸಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ವಿಚಾರ ಮುಂದಿಟ್ಟುಕೊಂಡು ವಿರೋಧ ಪಕ್ಷಗಳು ನಡೆಸುತ್ತಿರುವ ಪ್ರತಿಭಟನೆಗೆ ಅವಕಾಶ ನೀಡದಿರಲು ನಿರ್ಧರಿಸಿದೆ.

ರಾಷ್ಟ್ರೀಯ ಕ್ರೀಡಾ ಮಸೂದೆ–2025, ಭಾರತೀಯ ಬಂದರು ಮಸೂದೆ–2025 ಹಾಗೂ ನಕ್ಸಲ್ ಚಟುವಟಿಕೆಗಳ ನಿಗ್ರಹ ಹಾಗೂ ಬಾಹ್ಯಾಕಾಶ ಕ್ಷೇತ್ರದ ಕುರಿತಂತೆ ಚರ್ಚೆ ನಡೆಸಲು ಸರ್ಕಾರ ನಿರ್ಧರಿಸಿದೆ ಎಂದು ಸರ್ಕಾರದ ಮೂಲಗಳು ತಿಳಿಸಿವೆ. ಇದರ ಹೊರತಾಗಿಯೂ ವಿರೋಧ ಪಕ್ಷಗಳು ಎಸ್‌ಐಆರ್ ವಿಚಾರ ಮುಂದಿಟ್ಟುಕೊಂಡೇ ಸೋಮವಾರ ಕೂಡ ಪ್ರತಿಭಟನೆ ನಡೆಸಲು ನಿರ್ಧರಿಸಿದೆ.

‘ಮುಂದಿನ ವಾರ ಅಧಿವೇಶನವನ್ನು ಅನಿರ್ದಿಷ್ಟಾವಧಿಗೆ ಮುಂದೂಡುವ ಆಲೋಚನೆ ಸರ್ಕಾರಕ್ಕಿಲ್ಲ. ಮುಂದಿನ ದಿನಗಳಲ್ಲಿ ಹಲವು ಮಸೂದೆಗಳ ಕುರಿತು ಚರ್ಚೆ ನಡೆದು, ಉಭಯ ಸದನಗಳಲ್ಲಿ ಅಂಗೀಕರಿಸುವ ಗುರಿ ಹೊಂದಿದೆ’ ಎಂದು ಸಂಸದೀಯ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಗುಲಬರ್ಗಾ ವಿಶ್ವವಿದ್ಯಾಲಯ
ಜ್ಞಾನ ಗಂಗಾ, ಕಲಬುರಗಿ–585 106, ಕರ್ನಾಟಕ
ದೂ.: 08472–263202 ಫ್ಯಾಕ್ಸ್: 08472–263206, ಇ–ಮೇಲ್: registrargug@rediffmail.com

ಕ್ರ.ಸಂ.ಗುವಿಕ/ವಿಮವಿ/ಪಿ.ಜಿ–ಪ್ರವೇಶಾತಿ/ಪತ್ರಿಕಾ ಪ್ರಕಟಣೆ/2025–26/836 ದಿನಾಂಕ: 07.08.2025

:: ಪ್ರವೇಶಾತಿ ಅಧಿಸೂಚನೆ ::

ವಿಷಯ: ಗುಲಬರ್ಗಾ ವಿಶ್ವವಿದ್ಯಾಲಯದ 2025–26ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಪದವಿಗಳ/ಸ್ನಾತಕೋತ್ತರ ಡಿಪ್ಲೋಮಾ ಪದವಿಗಳ ಪ್ರವೇಶಾತಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 04.08.2025.

ಗುಲಬರ್ಗಾ ವಿಶ್ವವಿದ್ಯಾಲಯ, ವಿವಿಧ ಸ್ನಾತಕೋತ್ತರ/ಸ್ನಾತಕೋತ್ತರ ಡಿಪ್ಲೋಮಾ ಪದವಿಗಳಿಗಾಗಿ 2025–26ನೇ ಶೈಕ್ಷಣಿಕ ಸಾಲಿಗಾಗಿ ಮೇರಿಟ್ ಮತ್ತು ಮಿಸಲಾತಿ ಆಧಾರದ ಮೇಲೆ ವಿಶ್ವವಿದ್ಯಾಲಯದ ಮುಖ್ಯ ಆವರಣ, ಸ್ನಾತಕೋತ್ತರ ಕೇಂದ್ರ ಆಳಂದ ಮತ್ತು ಸಂಲಗ್ನತೆ ಹೊಂದಿದ ಸರಕಾರಿ/ಖಾಸಗಿ ಮತ್ತು ಸಂಜೆ ಮಹಾವಿದ್ಯಾಲಯಗಳಲ್ಲಿ ಪ್ರವೇಶಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ನಿಗದಿತ ನಮೂನೆಯಲ್ಲಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಪ್ರವೇಶಾತಿಗಾಗಿ ಲಭ್ಯವಿರುವ ಸ್ನಾತಕೋತ್ತರ ಪದವಿಗಳು

ನಿಕಾಯ	ಪದವಿಗಳು	ವಿಷಯಗಳು
ಕಲಾ ನಿಕಾಯ	ಎಂ.ಎ.	ಇಂಗ್ಲೀಷ, ಹಿಂದಿ, ಕನ್ನಡ, ಕನ್ನಡ ಮತ್ತು ಜಾನಪದ, ಮರಾಠಿ, ಸಂಗೀತ, ಸಂಸ್ಕೃತ ಮತ್ತು ಉರ್ದು ಮತ್ತು ಪರ್ಷಿಯನ್.
	ಎಂ.ವಿ.ಎ.	ದೃಶ್ಯಕಲೆ (ಚಿತ್ರಕಲೆ), ದೃಶ್ಯಕಲೆ (ಶಿಲ್ಪಕಲೆ).
ಸಮಾಜ ವಿಜ್ಞಾನ ನಿಕಾಯ	ಎಂ.ಎ.	ಅರ್ಥಶಾಸ್ತ್ರ, ಇತಿಹಾಸ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ, ರಾಜ್ಯಶಾಸ್ತ್ರ, ಮನೋವಿಜ್ಞಾನ, ಸಮಾಜಶಾಸ್ತ್ರ, ಮಹಿಳಾ ಅಧ್ಯಯನ.
	ಎಂ.ಎಸ್.ಡಬ್ಲ್ಯೂ	ಸಮಾಜ ಕಾರ್ಯ.
ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ	ಎಂ.ಎಸ್ಸಿ.	ಆನ್ವಯಿಕ ವಿದ್ಯುನ್ಮಾನ, ಜೀವರಸಾಯನಶಾಸ್ತ್ರ, ಜೈವಿಕ ತಂತ್ರಜ್ಞಾನ, ಸಸ್ಯಶಾಸ್ತ್ರ, ರಸಾಯನಶಾಸ್ತ್ರ, ಗಣಕವಿಜ್ಞಾನ, ಪರಿಸರ ವಿಜ್ಞಾನ, ಮಟೀರಿಯಲ್ಸ್ ಸೈನ್ಸ್, ಗಣಿತ, ಸೂಕ್ಷ್ಮಜೀವಶಾಸ್ತ್ರ, ಸಾವಯವ ರಸಾಯನಶಾಸ್ತ್ರ, ಭೌತಶಾಸ್ತ್ರ, ಸಂಖ್ಯಾಶಾಸ್ತ್ರ ಮತ್ತು ಪ್ರಾಣಿಶಾಸ್ತ್ರ.
ವಾಣಿಜ್ಯ ನಿಕಾಯ	ಎಂ.ಕಾಂ.	ವಾಣಿಜ್ಯ
ಶಿಕ್ಷಣ ನಿಕಾಯ	ಎಂ.ಎಡ್	ಶಿಕ್ಷಣ
	ಎಂ.ಪಿ.ಎಡ್	ದೈಹಿಕ ಶಿಕ್ಷಣ
	ಬಿ.ಪಿ.ಎಡ್.	ದೈಹಿಕ ಶಿಕ್ಷಣ
ಕಾನೂನು ನಿಕಾಯ	ಎಲ್.ಎಲ್.ಎಂ.	ಕಮರ್ಷಿಯಲ್ ಲಾ, ಕಾನ್‌ಸ್ಟಿಟ್ಯೂಶನಲ್ ಆ್ಯಂಡ್ ಆ್ಯಡ್ ಮಿನಿಸ್ಟ್ರೇಟಿವ್ ಲಾ
ಸ್ನಾತಕೋತ್ತರ ಡಿಪ್ಲೋಮಾ ಪದವಿಗಳು		ಭಾರತೀಯ ಗಣಿತ (ಗಣಿತಶಾಸ್ತ್ರ ಅಧ್ಯಯನ ವಿಭಾಗ), ಡಾ.ಬಿ.ಆರ್.ಅಂಬೇಡ್ಕರ ಸ್ಟಡೀಜ್ (ಡಾ.ಬಿ.ಆರ್.ಅಂಬೇಡ್ಕರ ಅಧ್ಯಯನ & ಸಂಶೋಧನಾ ವಿಭಾಗ), ಎಂಬೆಡೆಡ್ ಸಿಸ್ಟಮ್ಸ್ (ಅನ್ವಯಿಕ ವಿದ್ಯುದ್ವಿಜ್ಞಾನ ಅಧ್ಯಯನ ವಿಭಾಗ) ನಾಟಕ ಸಾಹಿತ್ಯ ಮತ್ತು ರಂಗ ಭೂಮಿ* (ಕನ್ನಡ ಅಧ್ಯಯನ ವಿಭಾಗ), ಪಾಲಿ ಆ್ಯಂಡ್ ಬುದ್ಧಿಸ್ಟ್ ಸ್ಟಡೀಸ್* (ಪಾಲಿ ಆ್ಯಂಡ್ ಬುದ್ಧಿಸ್ಟ್ ಅಧ್ಯಯನ ವಿಭಾಗ), ಟ್ರಾನ್ಸಲೇಶನ್ ಸ್ಕಿಲ್ ಹಿಂದಿ (ಹಿಂದಿ ಅಧ್ಯಯನ ವಿಭಾಗ), ವಚನ ಸಾಹಿತ್ಯ* (ಕನ್ನಡ ಅಧ್ಯಯನ ವಿಭಾಗ), ಯೋಗ* (ದೈಹಿಕ ಶಿಕ್ಷಣ ಅಧ್ಯಯನ ವಿಭಾಗ) ಮತ್ತು ಹ್ಯೂಮನ್ ರಿಸೋರ್ಸ್ ಮ್ಯಾನೇಜಮೆಂಟ್ (ಸಂಲಗ್ನತೆ ಕಾಲೇಜು). (ಸಹವರ್ತಿ ಪದವಿಗಳು)

ಸೂಚನೆ: * 2025–26ರ ಸ್ನಾತಕೋತ್ತರ (ಪಿ.ಜಿ/ಪಿ.ಜಿ ಡಿಪ್ಲೋಮಾ) ಪ್ರವೇಶ ಪಡೆಯಲು ಗುಲಬರ್ಗಾ ವಿಶ್ವವಿದ್ಯಾಲಯದ ಅಂತರ್ಜಾಲಕ್ಕೆ https://gug.ac.in ಭೇಟಿ ನೀಡಿ “Online PG/PG Diploma Admission Application Form ನ ಮೇಲೆ ಒತ್ತಿರಿ. * 5ನೇ ಮತ್ತು 6ನೇ ಸೆಮಿಸ್ಟರ್ ಪರೀಕ್ಷೆ ಬರೆದು ಫಲಿತಾಂಶ ನಿರೀಕ್ಷೆಯಲ್ಲಿರುವ ಅಭ್ಯರ್ಥಿಗಳು ಫಲಿತಾಂಶ ಪ್ರಕಟಣೆಗೊಂಡ ನಂತರ ಅಂಕಪಟ್ಟಿಗಳನ್ನು ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರಿಗೆ ಸಲ್ಲಿಸಲು ಸೂಚಿಸಲಾಗಿದೆ.

ಮಹತ್ವದ ದಿನಾಂಕಗಳು: * ಆನ್‌ಲೈನ್ ಅರ್ಜಿ ಪ್ರಾರಂಭ ದಿನಾಂಕ: 11.08.2025, * ಆನ್‌ಲೈನ್ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ: 10.09.2025, * ಆನ್‌ಲೈನ್ ಅರ್ಜಿಯ ಮುದ್ರಿತ ಪ್ರತಿಯನ್ನು ಮತ್ತು ಎಲ್ಲಾ ದೃಢೀಕರಿಸಿದ ದಾಖಲಾತಿಗಳೊಂದಿಗೆ ಸಂಬಂದಪಟ್ಟ ವಿಭಾಗದ ಅಧ್ಯಕ್ಷಕರಿಗೆ/ ನಿರ್ದೇಶಕರಿಗೆ/ಸಂಯೋಜಕರಿಗೆ ಸಲ್ಲಿಸುವ ಕೊನೆಯ ದಿನಾಂಕ : 16.09.2025.

ಸಹಿ/– ಕುಲಸಚಿವರು
ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/373/ಕೆ.ಎಸ್.ಎಂ.ಸಿ.&ಎ/2025–26

ಕರ್ನಾಟಕ ಸರ್ಕಾರ
ಪುರಸಭೆ ಕಾರ್ಯಾಲಯ ಲಕ್ಷ್ಮೇಶ್ವರ
ತಾ: ಲಕ್ಷ್ಮೇಶ್ವರ ಜಿ: ಗದಗ
e-mail: itstaff_ulb_laxmeshwar@yahoo.co.in Phone:08487-272916
Website:www.lakmishwaratown.mrc.gov.in Fax no:08487-272916
ಕಂ/ಪ/ಪುಸಲ/ತಾಂ.ವಿ/ಇ–ಟೆಂಡರ್/ವಹಿ/2025–26 ದಿ: 06–08–2025

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೋಕ್ಯೂರ್‌ಮೆಂಟ್ ಮೂಲಕ)

ಲಕ್ಷ್ಮೇಶ್ವರ ಪುರಸಭೆ ವ್ಯಾಪ್ತಿಯ ಲಕ್ಷ್ಮೇಶ್ವರ ಪಟ್ಟಣಕ್ಕೆ ಹಾಗೂ ಸೂರಣಗಿ ಶುದ್ದೀಕರಣ ಘಟಕದಲ್ಲಿ ಹಾಗೂ ಮೇವುಂಡಿ ಜಾಕವೆಲ್ಲಿನಲ್ಲಿ ನೀರು ಸರಬರಾಜಿಗೆ ಸಂಬಂಧಿಸಿದಂತೆ 12 ಜನ ಹೊರಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿಯನ್ನು ಪೂರೈಸು ಕುರಿತು (ಮಾನವ ಸಂಪನ್ಮೂಲ) ವಾರ್ಷಿಕ ಟೆಂಡರ್ ಪುರಸಭೆ ಅನುದಾನದಲ್ಲಿ ಒಟ್ಟು 1 ಕಾಮಗಾರಿ ಅಂದಾಜು ಮೊತ್ತ **ರೂ 28.59 ಲಕ್ಷ**ಗಳಿಗೆ ಕೆ.ಟಿ.ಟಿ.ಪಿ ಕಾಯ್ದೆ ಅಧಿನಿಯಮ 2000 ರನ್ವಯ ಈ ಕೆಳಗಿನಂತೆ ಇಂಡೆಂಟ್‌ಗಳಲ್ಲಿ ಇ ಟೆಂಡರ್‌ಗಳನ್ನು ಆಹ್ವಾನಿಸಿದ್ದು ಅರ್ಹ ಬಿಡ್‌ದಾರರು ಟೆಂಡರ್‌ನ್ನು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ https:/kppp.karnataka.gov.in ಠೇವಣಿ (ಇಎಂಡಿ) ಮತ್ತು ಟೆಂಡರ ಫೀಯನ್ನು ಇ–ಪ್ರೋಕ್ಯೂರಮೆಂಟ್ ಪೋರ್ಟಲ್‌ನಲ್ಲಿ ಸೂಚಿಸಿದಂತೆ ಪಾವತಿಸಿ ಭಾಗವಹಿಸಬಹುದಾಗಿದೆ. ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 18–08–2025ರ ಸಂಜೆ 4.00** ಗಂಟೆಯುವರೆಗೆ ಟೆಂಡರ್ ದಿನಾಂಕಗಳನ್ನು ನಿಗಧಿಪಡಿಸಲಾಗಿದೆ. ಹಾಗೂ ಟೆಂಡರ್‌ಗೆ ಸಂಬಂಧಿಸಿದ ಯಾವುದೆ ಬದಲಾವಣೆಗಳು ಅಥವಾ ತಿದ್ದುಪಡಿಗಳನ್ನು E-portal ನಲ್ಲಿ ಪ್ರಕಟಿಸಲಾಗುವುದು.

ಅ.ನಂ	ಕಾಮಗಾರಿಯ ಇಂಡೆಂಟ್ ವಿವರ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)
1	DMA/2024-25/SE4807/CALL-2	28.59

ಸಹಿ/–ಶ್ರೀಮಹಂತೇಶ.ಹೆಚ್.ಬೀಳಗಿ, ಮುಖ್ಯಾಧಿಕಾರಿಗಳು, ಪುರಸಭೆ ಲಕ್ಷ್ಮೇಶ್ವರ
ಸಹಿ/–ಶ್ರೀಮತಿ ಯಲ್ಲವ್ವ.ಗಂ.ದುರಗಣ್ಣವರ, ಅಧ್ಯಕ್ಷರು, ಪುರಸಭೆ ಲಕ್ಷ್ಮೇಶ್ವರ
ವಾ.ಸಾ.ಇ/ಗದಗ/226/ದೇಶಪಾಂಡೆಪಬ್ಲಿಸಿಟಿ/2025–26

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮೈಸೂರು

ಟೆಂಡರ್ ಅಧಿಸೂಚನೆ ಸಂಖ್ಯೆ: 11/2025–26, ದಿನಾಂಕ: 04.08.2025

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ನಜರ್‌ಬಾದ್, ಮೈಸೂರು–570010 ರವರು ಕೆ.ಡಬ್ಲ್ಯು–1, 3 ಮತ್ತು 4ರ ರೀತ್ಯ ಒಟ್ಟು 4 ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದ್ದು, ಇವುಗಳಲ್ಲಿ ಕನಿಷ್ಠ ಮೊತ್ತ ರೂ.3.69 ಲಕ್ಷಗಳು, ಮತ್ತು ಗರಿಷ್ಟ ಮೊತ್ತ ರೂ.252.71 ಲಕ್ಷಗಳು, ಇ.ಎಂ.ಡಿ ಕನಿಷ್ಠ ರೂ 0.0925 ಲಕ್ಷಗಳು ಮತ್ತ ಗರಿಷ್ಟ ರೂ.3.79 ಲಕ್ಷಗಳಾಗಿರುತ್ತದೆ. ಈ ಕಾಮಗಾರಿಗಳಿಗೆ ಐಟಂವಾರು ಅಲ್ಪಾವದಿ ಟೆಂಡರನ್ನು “ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್”ನಲ್ಲಿನ ಷರತ್ತುಗಳಿಗನುಗುಣವಾಗಿ ಕರೆಯಲಾಗಿದ್ದು, ಕೆ.ಪಿ.ಪಿ. ಪೋರ್ಟಲ್‌ನಲ್ಲಿ” ಮೂಲಕ ನೋಂದಾಯಿತ ಗುತ್ತಿಗೆದಾರರಿಂದ ಬಿಡ್ಡನ್ನು ಆಹ್ವಾನಿಸಲಾಗಿದೆ. ಸದರಿ ಟೆಂಡರ್‌ಗೆ ಸಂಬಂದಿಸಿದ ಮಾಹಿತಿಗಳು ಈ ಕೆಳಕಂಡಂತಿರುತ್ತವೆ. ಟೆಂಡರ್‌ಗೆ ಸಂಬಂಧಿಸಿದ ಮಾಹಿತಿಗಳನ್ನು ಕಛೇರಿಯ ವೇಳೆಯಲ್ಲಿ ಈ ದಿನಾಂಕದೊಳಗೆ ಪಡೆಯಬಹುದಾಗಿರುತ್ತದೆ.: 14.8.2025 ಸಂಜೆ 5.30 ಗಂಟೆ. ಭರ್ತಿಮಾಡಿದ ಟೆಂಡರ್ ದಾಖಲೆಗಳು ಮತ್ತು ಬಿಡ್ಡ್‌ನ್ನು ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಸಲ್ಲಿಸಲು ಕಡೆಯ ದಿ: 16.8.2025 ಸಂಜೆ 5.30 ಗಂಟೆ. ಬಿಡ್ ತೆರೆಯುವ ದಿ: 18.8.2025ರ ಬೆಳಿಗ್ಗೆ 11.00 ಗಂಟೆ ನಂತರ ಟೆಂಡರ್ ದಾಖಲಾತಿಗಳನ್ನು ವೆಬ್‌ಸೈಟ್ “https://kppp.karnataka.gov.in " ರಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು ಹೆಚ್ಚಿನ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದು.

ವಿ.ಸೂ: ಸದರಿ ಕಾಮಗಾರಿಯ ಟೆಂಡರ್‌ಅನ್ನು ಮುಂದೂಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಹಾಗೂ ಯಾವುದೇ ಬಿಡ್ಡ್‌ನ್ನು ತಿರಸ್ಕರಿಸುವ ಹಕ್ಕನ್ನು ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮೈಸೂರು ಇವರಿಗೆ ಕಾಯ್ದಿರಿಸಲಾಗಿದೆ. ಹಾಗೂ ಈ ಪ್ರಕಟಣೆಗೆ ಸಂಬಂಧಿಸಿದಂತೆ, ಯಾವುದೇ ತಿದ್ದುಪಡಿಗಳನ್ನು ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಸನೀ ಮತ್ತು ಅಂ.ಅ. ವಿಭಾಗ, ಮೈಸೂರು.
DIPR/DDMYS/778/KSMCA/438/2025-26

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು		
	100 ಕ್ಕೆ	₹495
	12 ಕ್ಕೆ	₹66
ಮೈಸೂರು:	100 ಕ್ಕೆ	₹505

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹399-638
ದ್ವಿತಳಿ (ಬಿ.ವಿ)	₹350-806

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹200
ಆರ್‌ಎಸ್‌ಎಸ್-5	₹194
ಗುಡ್ ಲಾಟ್	₹178

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1355 (1355)
ಸೋಯಾ (ರಿಫೈನ್ಡ್)	₹1230 (1235)
ಸೂರ್ಯಕಾಂತಿ (ರಿಫೈನ್ಡ್)	₹1345(1350)
ಪಾಮೋಲಿನ್	₹1195 (1200)

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ಮುಂಬೈ ಧಾರಣೆ (ಶೇಂಗಾ)

09-08-2025	
ಜಾವಾ 70/80(ಹೊಸ)	10600-10700
ಜಾವಾ 80/90(ಹೊಸ)	9900-10000
ದಪ್ಪ ಮಧ್ಯಪ್ರದೇಶ (ಹೊಸ)	7300-7400
ದಪ್ಪ ಗುಜರಾತ್ (ಹೊಸ)	8300-8400
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1365 (1365)
ಒಂದು ವಾರದ ಡೆಲಿವರಿ	1360 (1360)
ಪಾಮ್ ವಾರದ ಡೆಲಿವರಿ	1193 (1198)
ಸೂರ್ಯಕಾಂತಿ ಎಣ್ಣೆ ಕಚ್ಚಾ	1275 (1280)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,00,600 (1,00,400)
ಬೆಳ್ಳಿ ಕೆ.ಜಿಗೆ	1,15,000 (1,15,100)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ರಫ್ತುದಾರರಿಗೆ ಕೇಂದ್ರ ಶೀಘ್ರ ನೆರವು?

ರಫ್ತು ಉತ್ತೇಜನಾ ಮಿಷನ್ ಅಡಿಯಲ್ಲಿ ನೆರವು ನೀಡಲು ಚಿಂತನೆ

ಮುಖ್ಯಾಂಶಗಳು

- ₹2,250 ಕೋಟಿ ಮೊತ್ತದ ಮಿಷನ್
- ಸುಲಭ ಸಾಲದ ಯೋಜನೆ ಘೋಷಣೆ ನಿರೀಕ್ಷೆ
- ದೇಶಿ ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚಿಸಲೂ ಯತ್ನ

ನವದೆಹಲಿ (ಪಿಟಿಐ): ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಭಾರತದ ಸರಕುಗಳ ಮೇಲೆ ವಿಧಿಸಿರುವ ಭಾರಿ ಸುಂಕದ ಪರಿಣಾಮದಿಂದ ರಫ್ತುದಾರರನ್ನು ರಕ್ಷಿಸಲು ಕೇಂದ್ರ ಸರ್ಕಾರವು ಕೆಲವು ಕ್ರಮಗಳನ್ನು ಘೋಷಿಸುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

₹2,250 ಕೋಟಿ ಮೊತ್ತದ ಪ್ರಸ್ತಾವಿತ ರಫ್ತು ಉತ್ತೇಜನಾ ಮಿಷನ್ ಅಡಿಯಲ್ಲಿ ಕ್ರಮಗಳು ಘೋಷಣೆ ಆಗುವ ನಿರೀಕ್ಷೆ ಇದೆ.

'ನಾವು ಯಾವ ಬಗೆಯಲ್ಲಿ ನೆರವು ನೀಡಬಹುದು ಎಂಬುದನ್ನು ಅರಿಯಲು ರಫ್ತುದಾರರ ಜೊತೆ ಮಾತುಕತೆಯಲ್ಲಿ ತೊಡಗಿದ್ದೇವೆ. ದೇಶಿ ಬೇಡಿಕೆಯನ್ನು ಇನ್ನಷ್ಟು ಹೆಚ್ಚು ಮಾಡುವುದು ಹೇಗೆ ಎಂಬ ಬಗ್ಗೆಯೂ ಪರಿಶೀಲನೆ ನಡೆದಿದೆ. ಹೊಸ ಮಾರುಕಟ್ಟೆಗಳ ಬಗ್ಗೆ ಹಾಗೂ ಹೊಸ ಉತ್ಪನ್ನಗಳ ಬಗ್ಗೆ ಪರಿಶೀಲನೆ ನಡೆದಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಎಂಎಸ್‌ಎಂಇ ವಲಯದ ಉದ್ದಿಮೆಗಳಿಗೆ ಹಾಗೂ ಇ-ವಾಣಿಜ್ಯ ವಲಯದ ರಫ್ತುದಾರರಿಗೆ ಸುಲಭವಾಗಿ ಸಾಲ ಲಭ್ಯವಾಗುವಂತೆ ಮಾಡುವ ಯೋಜನೆಗಳು, ವಿದೇಶಗಳಲ್ಲಿ ಗೋದಾಮು ಹೊಂದಲು ನೆರವು ಒದಗಿಸುವುದು, ಹೊಸ ರಫ್ತು ಅವಕಾಶಗಳನ್ನು ಬಳಸಿಕೊಳ್ಳಲು ನೆರವಾಗುವಂತೆ ಬ್ರ್ಯಾಂಡಿಂಗ್ ಚಟುವಟಿಕೆಗಳಿಗೆ ಸಹಾಯ ಒದಗಿಸುವ ಕ್ರಮಗಳನ್ನು ಈ ಮಿಷನ್ ಒಳಗೊಳ್ಳುವ ಸಾಧ್ಯತೆ ಇದೆ ಎನ್ನಲಾಗಿದೆ.

₹2,250 ಕೋಟಿ ಮೊತ್ತದ ಈ ಮಿಷನ್ ಆರಂಭಿಸುವ ಘೋಷಣೆಯನ್ನು ಕೇಂದ್ರ ಸರ್ಕಾರವು ಫೆಬ್ರುವರಿಯಲ್ಲಿ ಮಾಡಿದೆ.

ವಿದೇಶ ವ್ಯಾಪಾರಗಳ ಮಹಾ ನಿರ್ದೇಶನಾಲಯವು (ಡಿಜಿಎಫ್‌ಟಿ) ಈ ಮಿಷನ್ ಬಗ್ಗೆ ರಫ್ತು ಉತ್ತೇಜನಾ ಮಂಡಳಿಗಳ ಪ್ರತಿನಿಧಿಗಳಿಗೆ ಹಾಗೂ ಇತರ ಪ್ರಮುಖ ಭಾಗೀದಾರರಿಗೆ ಏಪ್ರಿಲ್ ಕೊನೆಯಲ್ಲಿ ಮಾಹಿತಿ ಒದಗಿಸಿದೆ.

ಜಿಎಸ್‌ಟಿ ಮಂಡಳಿಯು ಶೀಘ್ರದಲ್ಲಿಯೇ ಸಭೆ ಸೇರುವ ಸಾಧ್ಯತೆ ಇದ್ದು, ತೆರಿಗೆ ಹಂತಗಳನ್ನು ಸರಳೀಕರಿಸುವ ಬಗ್ಗೆ ಅದು ಸಮಾಲೋಚನೆ ನಡೆಸಲಿದೆ. ಪರಿಹಾರ ಸೆಸ್‌ನ ಭವಿಷ್ಯದ ಬಗ್ಗೆಯೂ ಮಂಡಳಿಯು ಚರ್ಚಿಸಲಿದೆ. ದೇಶಿ ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚಳಕ್ಕೆ ಇಂಬು ಕೊಡುವಂತಹ ತೀರ್ಮಾನವನ್ನು ಮಂಡಳಿಯು ತೆಗೆದುಕೊಳ್ಳಲಿದೆ ಎಂಬ ನಿರೀಕ್ಷೆ ಇದೆ.

ಕೇಂದ್ರ ವಾಣಿಜ್ಯ ಸಚಿವಾಲಯವು ಈಚೆಗೆ ಕೆಲವು ದಿನಗಳಿಂದ ರಫ್ತುದಾರರ ಪ್ರತಿನಿಧಿಗಳ ಜೊತೆ ಸಭೆ ನಡೆಸುತ್ತಿದೆ. ಅಮೆರಿಕವು ಭಾರತದ ಸರಕುಗಳ ಮೇಲೆ ವಿಧಿಸಿರುವ ಭಾರಿ ಪ್ರಮಾಣದ ಸುಂಕದ ಪರಿಣಾಮಗಳ ಬಗ್ಗೆ ಅರಿಯಲು ಮುಂದಾಗಿದೆ.

20 ಗೂಢಚಾರರ ಬಂಧಿಸಿದ ಇರಾನ್

ಟೆಹರಾನ್ (ರಾಯಿಟರ್ಸ್): ಇಸ್ರೇಲ್‌ನ ಗುಪ್ತಚರ ಸಂಸ್ಥೆ ಮೊಸಾದ್ ಪರ ಗೂಢಚರ್ಯೆ ನಡೆಸಿದ ಆರೋಪದಲ್ಲಿ 20 ಮಂದಿಯನ್ನು ಈಚೆಗೆ ಬಂಧಿಸಲಾಗಿದೆ ಎಂದು ಇರಾನ್ ಶನಿವಾರ ತಿಳಿಸಿದೆ.

ಇಸ್ರೇಲ್‌ಗಾಗಿ ಬೇಹುಗಾರಿಕೆ ನಡೆಸಿದ ಆರೋಪದ ಮೇಲೆ ಇರಾನ್‌ನ ಅಪರಾಧಿಗಳಿಗೆ ಮರಣದಂಡನೆ ವಿಧಿಸಿರುವುದು ಈ ವರ್ಷ ಹೆಚ್ಚಾಗಿದೆ.

ಇರಾನ್ ಮೇಲೆ ಇಸ್ರೇಲ್ ನಡೆಸಿದ ವಾಯುದಾಳಿಯಲ್ಲಿ ಕೊಲ್ಲಲ್ಪಟ್ಟ ಪರಮಾಣು ವಿಜ್ಞಾನಿಯ ಮಾಹಿತಿಯನ್ನು ಹಂಚಿಕೊಂಡಿದ್ದ ಅಪರಾಧದಡಿ ರೌಜ್ಬೆ ವಾಡಿ ಎಂಬ ಪರಮಾಣು ವಿಜ್ಞಾನಿಯನ್ನು ಗಲ್ಲಿಗೇರಿಸಲಾಗಿದೆ ಎಂದು ಮಾಧ್ಯಮವೊಂದು ವರದಿ ಮಾಡಿದೆ.

ಭಾರತ –ಒಮಾನ್: ಮುಕ್ತ ವ್ಯಾಪಾರ ಒಪ್ಪಂದ ಶೀಘ್ರ

ನವದೆಹಲಿ (ಪಿಟಿಐ): ಭಾರತ ಮತ್ತು ಒಮಾನ್ ನಡುವಿನ ಮುಕ್ತ ವ್ಯಾಪಾರ ಒಪ್ಪಂದಕ್ಕೆ (ಎಫ್‌ಟಿಎ) ಶೀಘ್ರವೇ ಸಹಿ ಬೀಳುವ ನಿರೀಕ್ಷೆ ಇದೆ ಎಂದು ಅಧಿಕೃತ ಮೂಲಗಳು ಶನಿವಾರ ತಿಳಿಸಿವೆ.

ವ್ಯಾಪಾರ ಒಪ್ಪಂದದ ದಾಖಲೆಗಳನ್ನು ಒಮಾನ್‌ನಲ್ಲಿ ಅರೇಬಿಕ್ ಭಾಷೆಗೆ ಅನುವಾದ ಮಾಡಲಾಗುತ್ತಿದೆ. ಈ ಪ್ರಕ್ರಿಯೆ ಪೂರ್ಣಗೊಂಡ ಬಳಿಕ ಎರಡೂ ದೇಶಗಳ ಸಚಿವ ಸಂಪುಟವು ಒಪ್ಪಂದಕ್ಕೆ ಅನುಮೋದನೆ ನೀಡಬೇಕಿದೆ ಎಂದು ತಿಳಿಸಿವೆ.

ಒಪ್ಪಂದ ಘೋಷಣೆಗೆ ಎರಡರಿಂದ ಮೂರು ತಿಂಗಳು ಬೇಕಾಗಬಹುದೇ ಎಂಬ ಪ್ರಶ್ನೆಗೆ ಉತ್ತರಿಸಿದ ಮೂಲಗಳು, 'ಅದಕ್ಕಿಂತಲೂ ಕಡಿಮೆ ಸಮಯ ಸಾಕು' ಎಂದಿವೆ.

2023ರ ನವೆಂಬರ್‌ನಲ್ಲಿ ಸಮಗ್ರ ಆರ್ಥಿಕ ಪಾಲುದಾರಿಕೆ ಒಪ್ಪಂದದ (ಸಿಇಪಿಎ) ಮಾತುಕತೆಗಳು ಆರಂಭವಾಗಿದ್ದವು.

ಒಪ್ಪಂದವು ಜಾರಿಗೊಂಡರೆ ಈ ಎರಡೂ ವ್ಯಾಪಾರ ಪಾಲುದಾರ ದೇಶಗಳ ನಡುವಿನ ಬಹುತೇಕ ಸರಕುಗಳ ಮೇಲಿನ ಸೀಮಾ ಸುಂಕವು ಕಡಿಮೆ ಆಗಲಿದೆ ಅಥವಾ ರದ್ದಾಗಲಿದೆ. ಅಲ್ಲದೆ, ನಿಯಮಗಳನ್ನು ಸರಳಗೊಳಿಸಿ ವ್ಯಾಪಾರಕ್ಕೆ ಉತ್ತೇಜನ ನೀಡಲಿದೆ ಮತ್ತು ಹೂಡಿಕೆಯನ್ನು ಆಕರ್ಷಿಸಲಿದೆ.

ಕಳೆದ ಆರ್ಥಿಕ ವರ್ಷದಲ್ಲಿ ಭಾರತ ಮತ್ತು ಒಮಾನ್ ನಡುವಿನ ದ್ವಿಪಕ್ಷೀಯ ವ್ಯಾಪಾರದ ಮೌಲ್ಯ ₹87,578 ಕೋಟಿ ಆಗಿದೆ.

ಪೆಟ್ರೋಲಿಯಂ ಉತ್ಪನ್ನಗಳು ಮತ್ತು ಯೂರಿಯಾ ಭಾರತವು ಒಮಾನ್‌ನಿಂದ ಆಮದು ಮಾಡಿಕೊಳ್ಳುವ ಪ್ರಮುಖ ಉತ್ಪನ್ನಗಳಾಗಿದ್ದು, ಒಟ್ಟು ಆಮದಿನಲ್ಲಿ ಶೇ 70 ರಷ್ಟು ಪಾಲನ್ನು ಹೊಂದಿವೆ. ಪ್ರೊಪಿಲೀನ್, ಎಥಿಲೀನ್ ಪಾಲಿಮರ್ಸ್, ಪೆಟ್ರೋಲಿಯಂ ಕೋಕ್, ಜಿಪ್ಸಂ, ರಾಸಾಯನಿಕಗಳು, ಕಬ್ಬಿಣ ಮತ್ತು ಉಕ್ಕನ್ನು ಆಮದು ಮಾಡಿಕೊಳ್ಳುತ್ತದೆ.

ಐಸಿಐಸಿಐ ಬ್ಯಾಂಕ್: ಖಾತೆಯಲ್ಲಿರಬೇಕು ಕನಿಷ್ಠ ₹50 ಸಾವಿರ

ಒಂದನೇ ಪುಟದಿಂದ...

ಗ್ರಾಹಕರು ಕನಿಷ್ಠ ಮೊತ್ತವನ್ನು ಇರಿಸಲು ವಿಫಲವಾದಲ್ಲಿ ₹500 ಅಥವಾ ಕೊರತೆ ಮೊತ್ತದ ಶೇ 6ರಷ್ಟನ್ನು ದಂಡದ ರೂಪದಲ್ಲಿ ಬ್ಯಾಂಕ್‌ಗೆ ಪಾವತಿಸಬೇಕಾಗುತ್ತದೆ. ಈ ಎರಡು ಮೊತ್ತಗಳಲ್ಲಿ ಯಾವುದು ಕಡಿಮೆಯೋ ಆ ಮೊತ್ತವನ್ನು ದಂಡವಾಗಿ ಪಡೆಯಲಾಗುತ್ತದೆ. ಈ ವಿವರಗಳು ಐಸಿಐಸಿಐ ಬ್ಯಾಂಕ್‌ನ ವೆಬ್‌ಸೈಟ್‌ನಲ್ಲಿ ಲಭ್ಯವಿವೆ.

ವೇತನ ಖಾತೆ, ಜನಧನ ಖಾತೆ ಹಾಗೂ ಮೂಲ ಉಳಿತಾಯ ಖಾತೆಯನ್ನು ಹೊಂದಿರುವವರಿಗೆ ಪರಿಷ್ಕೃತ ನಿಯಮಗಳು ಅನ್ವಯ ಆಗುವುದಿಲ್ಲ.

ಸರ್ಕಾರಿ ಸ್ವಾಮ್ಯದ ಕೆಲವು ಬ್ಯಾಂಕ್‌ಗಳು ಕನಿಷ್ಠ ಮೊತ್ತ ಕಾಪಾಡಿಕೊಳ್ಳಬೇಕು ಎಂಬ ನಿಯಮವನ್ನು ಈಚೆಗೆ ರದ್ದುಪಡಿಸಿವೆ. ಉಳಿತಾಯ ಖಾತೆಗಳಲ್ಲಿ ಕನಿಷ್ಠ ಮೊತ್ತವನ್ನು ಇರಿಸಿಕೊಳ್ಳಬೇಕು ಎಂಬ ನಿಯಮ ಇಲ್ಲ, ಖಾತೆಗಳಲ್ಲಿ ಮೊತ್ತವನ್ನು ಶೂನ್ಯಕ್ಕೆ ತಂದುಕೊಂಡರೆ ದಂಡವೂ ಇರುವುದಿಲ್ಲ ಎಂದು ಸರ್ಕಾರಿ ಸ್ವಾಮ್ಯದ ಕೆನರಾ ಬ್ಯಾಂಕ್ ಈಚೆಗೆ ಹೇಳಿದೆ.

ಇದೇ ರೀತಿ ಎಸ್‌ಬಿಐ, ಪಂಜಾಬ್ ನ್ಯಾಷನಲ್ ಬ್ಯಾಂಕ್, ಇಂಡಿಯನ್ ಬ್ಯಾಂಕ್ ಕೂಡ ಕನಿಷ್ಠ ಮೊತ್ತ ಕಾಯ್ದುಕೊಳ್ಳುವ ಅಗತ್ಯವನ್ನು ಇಲ್ಲವಾಗಿಸಿವೆ.

ಐಸಿಐಸಿಐ ಬ್ಯಾಂಕ್‌ನ ಈ ಕ್ರಮಕ್ಕೆ ಕೆಲವರು ವಿರೋಧ ದಾಖಲಿಸಿದ್ದಾರೆ. 'ಮಾಸಿಕ ಸರಾಸರಿ ಮೊತ್ತವನ್ನು ₹50 ಸಾವಿರಕ್ಕೆ ಹೆಚ್ಚಿಸಿ, ವಹಿವಾಟುಗಳಿಗೆ ಹೆಚ್ಚಿನ ಮೌಲ್ಯ ತಂದುಕೊಡದ ಗ್ರಾಹಕರನ್ನು ತನ್ನಿಂದ ದೂರ ಸರಿಸುವ ಉದ್ದೇಶವನ್ನು ಐಸಿಐಸಿಐ ಬ್ಯಾಂಕ್ ಹೊಂದಿದೆ. ಹೀಗೆ ಮಾಡುವುದರಿಂದ ಬ್ಯಾಂಕಿಗೆ ಶ್ರೀಮಂತ ವರ್ಗದ ಗ್ರಾಹಕರ ಮೇಲೆ ಗಮನ ನೀಡಲು, ಅವರಿಗೆ ಇತರ ಹಣಕಾಸಿನ ಉತ್ಪನ್ನಗಳನ್ನು ಮಾರಾಟ ಮಾಡಲು ಆಗುತ್ತದೆ. ಈ ಕ್ರಮಕ್ಕೆ ಯಶಸ್ಸು ಸಿಕ್ಕರೆ ಇತರ ಕೆಲವು ಖಾಸಗಿ ಬ್ಯಾಂಕ್‌ಗಳೂ ಇದೇ ಕ್ರಮ ಅನುಸರಿಸಬಹುದು' ಎಂದು ಸಾಮಾಜಿಕ ಜಾಲತಾಣ ಬಳಕೆದಾರರೊಬ್ಬರು ಬರೆದಿದ್ದಾರೆ.

ಹಲವು ದೇಶಗಳ ವಿರೋಧ

ಗಾಜಾ ಮೇಲೆ ನಿಯಂತ್ರಣ ಸಾಧಿಸಲು ಇಸ್ರೇಲ್ ನಿರ್ಧಾರ

ಉತ್ತರ ಗಾಜಾ ಪಟ್ಟಿಯ ಜಬಾಲಿಯಾದಲ್ಲಿ ಮಿಲಿಟರಿ ವಿಮಾನದಿಂದ ಕೆಳಗೆ ಹಾಕಲಾದ ಪರಿಹಾರ ಸಾಮಗ್ರಿಯನ್ನು ಎತ್ತಿಕೊಳ್ಳಲು ಮುಗಿಬಿದ್ದ ಪ್ಯಾಲೆಸ್ಟೀನಿಯನ್ನರು —ಎಎಫ್‌ಪಿ ಚಿತ್ರ

ಕೈರೊ/ ಬರ್ಲಿನ್ (ರಾಯಿಟರ್ಸ್): ಗಾಜಾ ನಗರವನ್ನು ಸಂಪೂರ್ಣವಾಗಿ ಸೇನೆಯ ನಿಯಂತ್ರಣಕ್ಕೆ ತೆಗೆದುಕೊಳ್ಳುವ ಇಸ್ರೇಲ್‌ನ ನಿರ್ಧಾರವನ್ನು ಅರಬ್ ಮತ್ತು ಮುಸ್ಲಿಮ್ ದೇಶಗಳು ಒಳಗೊಂಡಂತೆ ಹಲವು ದೇಶಗಳು ಖಂಡಿಸಿವೆ.

ಈಜಿಪ್ಟ್, ಸೌದಿ ಅರೇಬಿಯಾ ಮತ್ತು ಟರ್ಕಿ ಸೇರಿದಂತೆ ಸುಮಾರು 20 ದೇಶಗಳು ಈ ಯೋಜನೆಯು 'ಅಂತರರಾಷ್ಟ್ರೀಯ ಕಾನೂನಿನ ಸ್ಪಷ್ಟ ಉಲ್ಲಂಘನೆಯಾಗಿದೆ' ಎಂದು ಶನಿವಾರ ಹೇಳಿವೆ.

ಗಾಜಾ ನಗರವನ್ನು ಸೇನೆಯ ವಶಕ್ಕೆ ತೆಗೆದುಕೊಳ್ಳುವ ಪ್ರಸ್ತಾವಕ್ಕೆ ಇಸ್ರೇಲ್‌ನ ಭದ್ರತಾ ಸಂಪುಟ ಶುಕ್ರವಾರ ಅನುಮೋದನೆ ನೀಡಿತ್ತು. ಆಸ್ಟ್ರೇಲಿಯಾ, ಜರ್ಮನಿ, ಇಟಲಿ, ನ್ಯೂಜಿಲೆಂಡ್ ಮತ್ತು ಬ್ರಿಟನ್‌ನ ವಿದೇಶಾಂಗ ಸಚಿವರು ಈ ನಿರ್ಧಾರವನ್ನು ಟೀಕಿಸಿದ್ದಾರೆ.

'ಇಸ್ರೇಲ್ ಸರ್ಕಾರ ಘೋಷಿಸಿರುವ ಯೋಜನೆಗಳು ಅಂತರರಾಷ್ಟ್ರೀಯ ಕಾನೂನನ್ನು ಉಲ್ಲಂಘಿಸುವ ಅಪಾಯ ಹೊಂದಿವೆ' ಎಂದು ಸಚಿವರು ಜಂಟಿ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಶಸ್ತ್ರಾಸ್ತ್ರ ಪೂರೈಕೆ ಸ್ಥಗಿತ: ಇಸ್ರೇಲ್ ನಿರ್ಧಾರವನ್ನು ಟೀಕಿಸಿರುವ ಜರ್ಮನಿ, ಆ ದೇಶಕ್ಕೆ ಶಸ್ತ್ರಾಸ್ತ್ರ ಪೂರೈಕೆ ಸ್ಥಗಿತಗೊಳಿಸಲು ನಿರ್ಧರಿಸಿದೆ.

'ಗಾಜಾದಲ್ಲಿ ಬಳಸಲು ಸಾಧ್ಯತೆಯಿರುವ ಯಾವುದೇ ಮಿಲಿಟರಿ ಉಪಕರಣಗಳ ರಫ್ತಿಗೆ ಜರ್ಮನಿ ಅನುಮತಿ ನೀಡುವುದಿಲ್ಲ. ಮುಂದಿನ ಸೂಚನೆ ಬರುವವರೆಗೂ ಈ ನಿಲುವು ಜಾರಿಯಲ್ಲಿರಲಿದೆ' ಎಂದು ಜರ್ಮನಿಯ ಚಾನ್ಸಲರ್ ಫ್ರೆಡರಿಕ್ ಮೆರ್ಜ್ ಶುಕ್ರವಾರ ಹೇಳಿದ್ದಾರೆ.

ಟರ್ಕಿ ಕರೆ (ಅಂಕಾರ ವರದಿ): ಇಸ್ರೇಲ್ ಯೋಜನೆಯ ವಿರುದ್ಧ ಮುಸ್ಲಿಂ ರಾಷ್ಟ್ರಗಳು ಒಗ್ಗಟ್ಟಿನಿಂದ ಕೆಲಸ ಮಾಡಬೇಕು ಮತ್ತು ಅಂತರರಾಷ್ಟ್ರೀಯ ಸಮುದಾಯದ ಬೆಂಬಲ ಗಳಿಸಬೇಕು ಎಂದು ಟರ್ಕಿ ವಿದೇಶಾಂಗ ಸಚಿವ ಹಕನ್ ಫಿದಾನ್ ಕರೆ ನೀಡಿದ್ದಾರೆ.

ರಷ್ಯಾ ಉಪಪ್ರಧಾನಿ ಜತೆ ಡೊಭಾಲ್ ಮಾತುಕತೆ

ಅಜಿತ್ ಡೊಭಾಲ್ ಹಾಗೂ ರಷ್ಯಾದ ಉಪಪ್ರಧಾನಿ ಡೆನಿಸ್ ಮಂತುರೊವ್

ಮಾಸ್ಕೊ (ಪಿಟಿಐ): ಭಾರತದ ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೊಭಾಲ್ ಅವರು ರಷ್ಯಾದ ಉಪ ಪ್ರಧಾನಿ ಡೆನಿಸ್ ಮಂತುರೊವ್ ಅವರನ್ನು ಭೇಟಿಯಾಗಿ ದ್ವಿಪಕ್ಷೀಯ ಮಾತುಕತೆ ನಡೆಸಿದರು.

ಮಿಲಿಟರಿ– ತಾಂತ್ರಿಕ ಸಹಕಾರ, ನಾಗರಿಕ ವಿಮಾನ ತಯಾರಿಕೆ, ರಾಸಾಯನಿಕ ಉದ್ಯಮ ಸೇರಿದಂತೆ ಇತರ ಯೋಜನೆಗಳ ಅನುಷ್ಠಾನದ ಕುರಿತು ಶುಕ್ರವಾರ ಚರ್ಚಿಸಿದರು.

ಗುರುವಾರ ಪುಟಿನ್ ಅವರನ್ನು ಭೇಟಿಯಾಗಿದ್ದ ಡೊಭಾಲ್, ದ್ವಿಪಕ್ಷೀಯ ಸಹಕಾರದ ಕುರಿತು ಚರ್ಚಿಸಿದರು. ಬಾಹ್ಯ ಒತ್ತಡಗಳ ಹೊರತಾಗಿಯೂ ರಷ್ಯಾದೊಂದಿಗೆ ಎಲ್ಲಾ ಕ್ಷೇತ್ರಗಳಲ್ಲಿ ಸಹಕಾರ ಮುಂದುವರಿಸುವ ಭಾರತದ ಬದ್ಧತೆಯನ್ನು ಪುನರುಚ್ಚರಿಸಿದರು.

ಈ ವರ್ಷದ ಕೊನೆಯಲ್ಲಿ ಭಾರತಕ್ಕೆ ಭೇಟಿ ನೀಡುವಂತೆ ರಷ್ಯಾ ಅಧ್ಯಕ್ಷ ಪುಟಿನ್ ಅವರಿಗೆ ಪ್ರಧಾನಿ ನರೇಂದ್ರ ಮೋದಿ ಅವರ ಪರವಾಗಿ ಆಹ್ವಾನ ನೀಡಿದರು. ಪುಟಿನ್ ಅವರು ಆಹ್ವಾನವನ್ನು ಸ್ವೀಕರಿಸಿದರು ಎಂದು ಮೂಲಗಳು ಹೇಳಿವೆ.

ಶಾಂತಿ ಒಪ್ಪಂದಕ್ಕೆ ಅರ್ಮೇನಿಯ– ಅಜರ್‌ಬೈಜಾನ್ ಸಹಿ

ವಾಷಿಂಗ್ಟನ್ (ಎಎಫ್‌ಪಿ): ಮೂರು ದಶಕಗಳಿಗೂ ಹೆಚ್ಚು ಕಾಲ ಸಂಘರ್ಷದಲ್ಲಿ ತೊಡಗಿದ್ದ ಅರ್ಮೇನಿಯ ಹಾಗೂ ಅಜರ್‌ಬೈಜಾನ್ ದೇಶಗಳು ಶಾಂತಿ ಒಪ್ಪಂದಕ್ಕೆ ಶನಿವಾರ ಸಹಿ ಹಾಕಿದವು. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮಧ್ಯಸ್ಥಿಕೆಯಲ್ಲಿ ಈ ಒಪ್ಪಂದ ನಡೆದಿದೆ.

ಒಪ್ಪಂದಕ್ಕೆ ಸಹಿ ಹಾಕುವ ಕಾರ್ಯಕ್ರಮವು ಶ್ವೇತಭವನದಲ್ಲಿ ಶುಕ್ರವಾರ ನಡೆಯಿತು. ಈ ವೇಳೆ ಮಾತನಾಡಿದ ಟ್ರಂಪ್ 'ಎಲ್ಲಾ ಸಂಘರ್ಷಗಳನ್ನು ಶಾಶ್ವತವಾಗಿ ನಿಲ್ಲಿಸಿ ವ್ಯಾಪಾರ, ವಾಣಿಜ್ಯ ಹಾಗೂ ರಾಜತಾಂತ್ರಿಕ ಸಂಬಂಧಗಳನ್ನು ಬೆಳೆಸಲು, ಪರಸ್ಪರ ಸಾರ್ವಭೌಮತೆ ಹಾಗೂ ಪ್ರಾದೇಶಿಕ ಸಮಾನತೆಯನ್ನು ಗೌರವಿಸಲು ಎರಡೂ ದೇಶಗಳು ಬದ್ಧವಾಗಿವೆ' ಎಂದರು.

> **ಶಾಂತಿಪ್ರಿಯ ಟ್ರಂಪ್ ಇಲ್ಲದಿದ್ದರೆ ಒಪ್ಪಂದವು ಸಾಧ್ಯವಾಗುತ್ತಿರಲಿಲ್ಲ. ನಾವು ಶಾಂತಿ ಸಾಧಿಸಿದ್ದೇವೆ. ಇದು ಹೊಸ ಯುಗದ ದಾರಿಯಾಗಿದೆ**
> **ನಿಕೋಲ್ ಪಶಿನ್ಯಾನ್,** ಅರ್ಮೇನಿಯ ಪ್ರಧಾನಿ

> **ಟ್ರಂಪ್ ಅವರಿಗೆ ನೊಬೆಲ್ ಶಾಂತಿ ಪುರಸ್ಕಾರ ನೀಡಲು ಸಮಿತಿಗೆ ಶಿಫಾರಸು ಮಾಡುವಂತೆ ನಿಕೋಲ್ ಅವರೊಂದಿಗೆ ಮನವಿ ಸಲ್ಲಿಸಲಾಗುವುದು**
> **ಇಲ್ಹಾಮ್ ಆಲಿಯೇವ್,** ಅಜರ್‌ಬೈಜಾನ್ ಅಧ್ಯಕ್ಷ

> **ಇಬ್ಬರೂ ನಾಯಕರು ಉತ್ತಮ ಸಂಬಂಧವನ್ನು ಹೊಂದಿದ್ದಾರೆ. ಸಂಘರ್ಷ ಉಂಟಾದರೆ ಅವರು ನನಗೆ ಕರೆ ಮಾಡುತ್ತಾರೆ. ನಾನು ಅದನ್ನು ಸರಿಪಡಿಸುತ್ತೇನೆ**
> **ಡೊನಾಲ್ಡ್ ಟ್ರಂಪ್,** ಅಮೆರಿಕ ಅಧ್ಯಕ್ಷ

'ಟ್ರಂಪ್ ಅವರ ಮಧ್ಯಸ್ಥಿಕೆಯಲ್ಲಿ ಒಪ್ಪಂದ ನಡೆದಿದೆ. ಟ್ರಂಪ್ ಅವರಿಗೆ ನೊಬೆಲ್ ಶಾಂತಿ ಪುರಸ್ಕಾರ ನೀಡಿ ಗೌರವಿಸಬೇಕು' ಎಂದು ಅರ್ಮೇನಿಯ ಪ್ರಧಾನಿ ನಿಕೋಲ್ ಪಶಿನ್ಯಾನ್ ಮತ್ತು ಅಜರ್‌ಬೈಜಾನ್ ಅಧ್ಯಕ್ಷ ಇಲ್ಹಾಮ್ ಆಲಿಯೇವ್ ಹೇಳಿದ್ದಾರೆ.

ಕ್ರೈಸ್ತರು ಬಹುಸಂಖ್ಯಾತರಾಗಿರುವ ಅರ್ಮೇನಿಯ ಹಾಗೂ ಮುಸ್ಲಿಮರು ಹೆಚ್ಚಿರುವ ಅಜರ್‌ಬೈಜಾನ್ ದೇಶಗಳು ಗಡಿ ಸೇರಿದಂತೆ ಹಲವು ವಿಚಾರಗಳಿಗೆ ಸಂಘರ್ಷದಲ್ಲಿ ತೊಡಗಿದ್ದವು. ವಿವಾದಿತ ಕರಾಬಖ್ ಪ್ರದೇಶಕ್ಕಾಗಿ ಎರಡೂ ದೇಶಗಳ ನಡುವೆ 2 ಬಾರಿ ಯುದ್ಧ ನಡೆದಿದೆ.

ಭೇಟಿ ವೇಳೆ ರಷ್ಯಾ–ಉಕ್ರೇನ್ ಕದನ ವಿರಾಮದ ಬಗ್ಗೆ ಚರ್ಚೆ ಸಾಧ್ಯತೆ

ಟ್ರಂಪ್–ಪುಟಿನ್ ಮಾತುಕತೆ 15ಕ್ಕೆ

ಡೊನಾಲ್ಡ್ ಟ್ರಂಪ್ – ವ್ಲಾದಿಮಿರ್ ಪುಟಿನ್

ವಾಷಿಂಗ್ಟನ್ (ಎಎಫ್‌ಪಿ): 'ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರೊಂದಿಗೆ ಶೀಘ್ರದಲ್ಲೇ ಮಾತುಕತೆ ನಡೆಸಲಿದ್ದು, ರಷ್ಯಾ-ಉಕ್ರೇನ್ ನಡುವಿನ ಯುದ್ಧ ಕೊನೆಗಾಣಿಸಿ, ಕದನ ವಿರಾಮ ಘೋಷಿಸಲು ಅಂತಿಮ ಒಪ್ಪಂದಕ್ಕೆ ಬರಲಾಗುವುದು' ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

'ರಷ್ಯಾ ಮತ್ತು ಅಮೆರಿಕದ ಅಧ್ಯಕ್ಷರ ಬಹುನಿರೀಕ್ಷಿತ ಸಭೆ ಇದೇ ಆ.15ರಂದು ಅಲಾಸ್ಕಾದಲ್ಲಿ ನಿಗದಿಯಾಗಿದೆ' ಎಂದು ಟ್ರಂಪ್ ತಮ್ಮ ಸಾಮಾಜಿಕ ಜಾಲತಾಣ 'ಟ್ರುತ್'ನಲ್ಲಿ ಹೇಳಿದ್ದಾರೆ.

ರಷ್ಯಾದ ಆಡಳಿತ ಕಚೇರಿ ಕ್ರೆಮ್ಲಿನ್, ಪುಟಿನ್-ಟ್ರಂಪ್ ಭೇಟಿಯನ್ನು ಖಚಿತಪಡಿಸಿದೆ. ರಷ್ಯಾ-ಉಕ್ರೇನ್ ಕದನ ವಿರಾಮ ಘೋಷಣೆಗೆ ಸಂಬಂಧಿಸಿದಂತೆ ಅಮೆರಿಕ ಈಗಾಗಲೇ ಮೂರು ಬಾರಿ ನಡೆಸಿದ ಸಂಧಾನ ಮಾತುಕತೆ ವಿಫಲಗೊಂಡಿದೆ. ಉಕ್ರೇನ್ ಜತೆಗೆ ಕದನ ವಿರಾಮ ಘೋಷಿಸುವಂತೆ ರಷ್ಯಾಗೆ ಟ್ರಂಪ್ ನೀಡಿದ 50 ದಿನಗಳ ಗಡುವು ಶುಕ್ರವಾರ ಕೊನೆಗೊಂಡಿದೆ. ಈ ಹಿನ್ನೆಲೆಯಲ್ಲಿ ಆ.15ರ ಟ್ರಂಪ್ –ಪುಟಿನ್ ನೇರ ಭೇಟಿ ಮಹತ್ವ ಪಡೆದುಕೊಂಡಿದೆ.

'ಉಭಯ ದೇಶಗಳ ಅಧ್ಯಕ್ಷರು ಯುದ್ಧ ಕೊನೆಗಾಣಿಸಿ ಶಾಂತಿ ಮರುಸ್ಥಾಪಿಸುವ ನಿಟ್ಟಿನಲ್ಲಿ ಗಮನ ಕೇಂದ್ರೀಕರಿಸಿದ್ದಾರೆ' ಎಂದು ಕ್ರೆಮ್ಲಿನ್ ಸಹಾಯಕ ಯೂರಿ ಉಷಕೋವ್ ಟೆಲಿಗ್ರಾಂನಲ್ಲಿ ಪೋಸ್ಟ್ ಮಾಡಿದ್ದಾರೆ.

ಅಮೆರಿಕ ನೀಡಿದ್ದ ಗಡುವು ಮುಗಿದ ಬೆನ್ನಲ್ಲೇ, ಪುಟಿನ್ ಅವರು ಭಾರತ ಮತ್ತು ಚೀನಾದ ಮುಖಂಡರೊಂದಿಗೆ ಶುಕ್ರವಾರ ಮಾತುಕತೆ ನಡೆಸಿದ್ದರು.

2021ರ ನಂತರ ಅಮೆರಿಕ ಮತ್ತು ರಷ್ಯಾದ ಅಧ್ಯಕ್ಷರು ಇದೇ ಮೊದಲ ಬಾರಿಗೆ ನೇರ ಮಾತುಕತೆಗೆ ಮುಂದಾಗಿದ್ದಾರೆ. 2021ರಲ್ಲಿ ಜಿನಿವಾದಲ್ಲಿ ನಡೆದ ಸಭೆಯಲ್ಲಿ ಆಗಿನ ಅಧ್ಯಕ್ಷ ಜೊ ಬೈಡನ್ ಅವರೊಂದಿಗೆ ಪುಟಿನ್ ಮಾತುಕತೆ ನಡೆಸಿದ್ದರು. 2019ರಲ್ಲಿ ಜಪಾನ್‌ನಲ್ಲಿ ನಡೆದ ಜಿ-20 ಶೃಂಗಸಭೆಯಲ್ಲಿ ಟ್ರಂಪ್-ಪುಟಿನ್ ಮಾತುಕತೆ ನಡೆಸಿದ್ದರು.

ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರೊಂದಿಗೆ ಈ ಹಂತದಲ್ಲಿ ಮಾತುಕತೆ ನಡೆಸುವ ಸಾಧ್ಯತೆಯನ್ನು ಟ್ರಂಪ್ ತಳ್ಳಿಹಾಕಿದ್ದಾರೆ.

ಯುದ್ಧ ನಿಲ್ಲಿಸಿದ್ದು ನಾನೇ: ಟ್ರಂಪ್

ನ್ಯೂಯಾರ್ಕ್ (ಪಿಟಿಐ): 'ಭಾರತ–ಪಾಕ್ ನಡುವಿನ ಯುದ್ಧ ನಿಲ್ಲಿಸಿ, ಕದನ ವಿರಾಮ ಘೋಷಿಸಲು ನಾನೇ ಕಾರಣ' ಎಂದು ಡೊನಾಲ್ಡ್ ಟ್ರಂಪ್ ಪುನರುಚ್ಚರಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಭಾರತ– ಪಾಕ್ ನಡುವೆ ನಾಲ್ಕು ದಿನ ಮುಂದುವರಿದ ಸೇನಾ ಸಂಘರ್ಷದಲ್ಲಿ ಐದರಿಂದ ಆರು ಯುದ್ಧ ವಿಮಾನಗಳನ್ನು ಹೊಡೆದುರುಳಿಸಲಾಗಿತ್ತು. ನೆರೆಹೊರೆ ದೇಶಗಳು 'ಅಣ್ವಸ್ತ್ರ ಪ್ರಯೋಗಿಸುವ ಹಂತ' ತಲುಪಿದ್ದ ಈ ಸಂಘರ್ಷನ್ನು ನಾನು ಶಮನಗೊಳಿಸಿದೆ' ಎಂದು ಹೇಳಿದ್ದಾರೆ. 'ಅಮೆರಿಕದ ಅಧ್ಯಕ್ಷನಾಗಿ ನನ್ನ ಮೊದಲ ಆದ್ಯತೆ ಜಗತ್ತಿನೆಲ್ಲೆಡೆ ಶಾಂತಿ ಮತ್ತು ಸುಸ್ಥಿರತೆ ತರುವುದಾಗಿದೆ' ಎಂದು ಟ್ರಂಪ್ ಹೇಳಿದ್ದಾರೆ.

'ನಾವಿಲ್ಲದೆ ಯುದ್ಧ ನಿಲ್ಲುವುದಿಲ್ಲ'

ಕೀವ್ (ಉಕ್ರೇನ್) (ಎಎಫ್‌ಪಿ): 'ಉಕ್ರೇನ್, ರಷ್ಯಾಕ್ಕೆ ತನ್ನ ಭೂಮಿಯನ್ನು ಬಿಟ್ಟುಕೊಡುವುದಿಲ್ಲ' ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಖಡಾಖಂಡಿತವಾಗಿ ಹೇಳಿದ್ದಾರೆ.

ರಷ್ಯಾ–ಉಕ್ರೇನ್ ಯುದ್ಧ ಕೊನೆಗೊಳಿಸುವ ನಿಟ್ಟಿನಲ್ಲಿ ಟ್ರಂಪ್ ಮತ್ತು ಪುಟಿನ್ ಶೀಘ್ರದಲ್ಲೇ ಮಾತುಕತೆ ನಡೆಸಲಿದ್ದಾರೆ ಎಂಬ ಸುದ್ದಿ ಹೊರಬಿದ್ದ ಬೆನ್ನಲ್ಲೇ, ಝೆಲೆನ್‌ಸ್ಕಿ ಈ ಪ್ರತಿಕ್ರಿಯೆ ನೀಡಿದ್ದಾರೆ. ರಷ್ಯಾ–ಉಕ್ರೇನ್ ಎರಡೂ ದೇಶಗಳ ಹಿತಾಸಕ್ತಿ ಗಮನದಲ್ಲಿಟ್ಟುಕೊಂಡು, ದೇಶಗಳ ಗಡಿ ಮರುನಿಗದಿ ಮಾಡುವಾಗ ಸ್ವಲ್ಪ ವ್ಯತ್ಯಾಸ ಆಗಬಹುದು ಟ್ರಂಪ್ ಹೇಳಿದ್ದರು. ಇದಕ್ಕೆ ಝೆಲೆನ್‌ಸ್ಕಿ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದಾರೆ.

'ನಮ್ಮ ವಿರುದ್ಧದ ಅಥವಾ ಉಕ್ರೇನ್‌ನನ್ನು ಹೊರಗಿರಿಸಿ ತೆಗೆದುಕೊಳ್ಳುವ ಯಾವುದೇ ನಿರ್ಧಾರವು ಶಾಂತಿಗೆ ವಿರುದ್ಧವಾಗಿದೆ. ಈ ಮಾತುಕತೆಯಿಂದ ಅವರು ಏನೂ ಸಾಧಿಸುವುದಿಲ್ಲ. ಯುದ್ಧ ಕೊನೆಗೊಳ್ಳಬೇಕಾದರೆ ನಾವಿರಬೇಕು, ಉಕ್ರೇನ್ ಇಲ್ಲದೆ ಯುದ್ಧ ಮುಗಿಯುವುದಿಲ್ಲ' ಎಂದು ಅವರು ಸಾಮಾಜಿಕ ಜಾಲತಾಣದಲ್ಲಿ ಹೇಳಿದ್ದಾರೆ.

ಶ್ರದ್ಧಾಂಜಲಿ

ಶ್ರೀಮತಿ ಸರೋಜಿನಿ ಚೆರಿಯನ್ (ಸಜು)
7th Aug, 2025
"ಕರ್ತನು ಕೊಟ್ಟನು, ಕರ್ತನು ತೆಗೆದುಕೊಂಡನು; ಕರ್ತನ ನಾಮವು ಸ್ತುತಿಸಲ್ಪಡಲಿ." Job 1:21
ನಮ್ಮ ಪ್ರೀತಿಯ ಶ್ರೀಮತಿ ಸಜು ಚೆರಿಯನ್ ಅವರ ನಿಧನದ ಸುದ್ದಿಯನ್ನು ತೀವ್ರ ದುಃಖದಿಂದ ತಿಳಿಸುತ್ತಿದ್ದೇವೆ.
ಅಂತ್ಯಕ್ರಿಯೆಯು Aug 10, 25 ರಂದು ಭಾನುವಾರ ನಡೆಯಲಿದೆ.
ಮನೆಯಲ್ಲಿ ಪ್ರಾರ್ಥನೆ: 1pm
ಚರ್ಚ್ ಸೇವೆ: 2pm
Ebenezer Marthoma Church, Jalahalli
ಪ್ರೀತಿಯಿಂದ ಸ್ಮರಿಸುತ್ತಾರೆ
John Cheriyan, Asha, Anu, Amith, Rajesh, Reji, Shradha, Sannidhi, Arpitha, Neel, Nidhi, Siah, Gabriel & Nazhicheril Chiramel Family

2ನೇ ವರ್ಷದ ಪುಣ್ಯಸ್ಮರಣೆ

ಪಂಡಿತ್ ಹೆಚ್. ರಾಮಚಂದ್ರಪ್ಪ
12.08.1936 – 31.08.2023
ಕಷ್ಟ–ನಷ್ಟ, ಅಪಮಾನಗಳನ್ನು ಮೆಟ್ಟಿ ನಿಲ್ಲುವುದನ್ನು ಕಲಿಸಿದ ಪೂಜ್ಯ ತಂದೆಯವರಿಗೆ ಸಾಷ್ಟಾಂಗ ಪ್ರಣಾಮಗಳು.
ಕುಟುಂಬ ವರ್ಗ: ಶ್ರೀನಿವಾಸ ರಾಜು, ಪೂರ್ಣಿಮಾ ರಾಜು, ಶ್ರೀಹರ್ಷ, ಶೃತಿ, ವೆಂಕಟ್ ರಾಜು, ಪ್ರಭಾವತಿ, ಮೈತ್ರಿ.
ಮೊ: 9448386618

LOOKING FOR JOB OPPORTUNITY
Refer Classifieds on Wednesday

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು!
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277
Tanveer: +91 9886213331 | Anitha: +91 9900428036

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General
ಬಾರ್ ವೇಟರ್ಸ್ ಬೇಕಾಗಿದ್ದಾರೆ ಸಂಪರ್ಕಿಸಿ ಮೊಬೈಲ್ 7090650796 ಜೆ.ಪಿ.ನಗರ್ ಹಂತ 2 7090650796

Part-Time Jobs
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

Stores/ Purchase
PURCHASE-COORDINATOR REQUIRED. Candidate should have experience in store data entry, computer proficiency, and be a B.Com graduate. Send CV to bkhrdept8517@gmail.com

Wanted
ಶೇಷಾದ್ರಿಪುರಂನಲ್ಲಿರುವ ಫಾರ್ಮಾ ಕಂಪನಿಯು ಗೋದಾಮು ಮೇಲ್ವಿಚಾರಕರು ಮತ್ತು ಸರಕುಗಳ ನಿರ್ವಹಣೆ, ಲೋಡಿಂಗ್ ಮತ್ತು ಅನ್‌ಲೋಡಿಂಗ್‌ಗೆ ಕಾರ್ಮಿಕರನ್ನು ನೇಮಿಸಿಕೊಳ್ಳುತ್ತಿದೆ. ಸ್ಪರ್ಧಾತ್ಮಕ ಸಂಬಳವನ್ನು ನೀಡಲಾಗುತ್ತದೆ. 8660700898.

ರಿಯಲ್ ಎಸ್ಟೇಟ್ ಸೆಲ್ಲಿಂಗ್

Commercial Land

Mysore Road
MY OWN PROPERTY
LAND FOR SALE
9 ACRES GARDEN LAND
MYSORE - OOTY HIGHWAY TO SITE 4.5KM
MYSORE ORR TO 28 KMS
PER ACRE ₹50 LAKHS
89888 31999

Sites

Kempegowda Layout
SITE SALE No: 4686/A 6th Block, J Sector 30X40 Arkavathi Alternate South-Facing Kempegowda Layout: 9972539916

ಬಿಲ್ಡರ್ ಎಸೆನ್ಷಿಯಲ್

Water Proofing
ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ರಿಯಲ್ ಎಸ್ಟೇಟ್ ಬೈಯಿಂಗ್

Sites

Jakkur
ಅರ್ಕಾವತಿಬಡಾವಣೆ, ಜಕ್ಕೂರು, ಟೆಲಿಕಾಂಬಡಾವಣೆ ಹಾಗೂ ಭುವನೇಶ್ವರಿ ನಗರದಲ್ಲಿ 20x30, 30x40, 40x60 ಅಳತೆಯ ಬಿಡಿಎ ಸೈಟುಗಳು ಬೇಕಾಗಿದೆ. ಸಂಪರ್ಕಿಸಿ: 9972849555

ವ್ಯಾಪಾರ

Business Offers

Distributors
ತನ್ಮಯಿ ಪ್ರೋಟಿನ್ ಪೌಡರ್ ಕೆಲಸ ಮಾಡಲು ಯುವಕ ಯುವತಿಯರು ಬೇಕಾಗಿದ್ದಾರೆ. ತಿಂಗಳಿಗೆ ವೇತನ 20,000 ಇರುತ್ತದೆ. ರಕ್ತದೊತ್ತಡ, ತೂಕ, ಕಡಿಮೆಯಾಗುತ್ತದೆ. ದೇಹಕ್ಕೆ ಶಕ್ತಿ ಮಂಡಿನೋವು, ಕಾಲುನೋವು, ನಿದ್ರೆ ಸಮಸ್ಯೆ, ಶಕ್ತಿ ಇಲ್ಲದವರಿಗೆ, ಬಿಸಿನೀರು ಅಥವಾ ಹಾಲಿನಲ್ಲಿ ಬೆರಸಿ ಕುಡಿಯುವುದರಿಂದ ನಿಮ್ಮ ಕಾಯಿಲೆಗಳು ಮುಕ್ತಿಗೊಳ್ಳುತ್ತವೆ. ಬೆಂಗಳೂರು Ph: 9019626612.

Dealers And Stockists
OM GGBS
DEALERS FOR GGBS
"OM GGBS" is from the house of Chennai based 56 years old "Balaha Group".
We are producing OM Brand GGBS using German Technology (Loesche VRM) at our Modern Plant, which is located near Hindupur, about 100 kms from Bangalore. We are interested in appointing Dealers, who can distribute OM GGBS to customers in Bangalore. Financially sound parties, with prior experience in Distribution to RMC/ Construction Sector may please send their profile and experience details to: dealers@balaha.com
SBC Since 1969
for more details contact: R.Raghuraman 98417 34999

ಪ್ರವಾಸ

Holiday Package Tours
3.9.2025, 4 ದಿನಗಳು ಬೀದರ್ ಝರಣಿನರಸಿಂಹಸ್ವಾಮಿ, ಕೂಡಲಸಂಗಮ, ಗಾಣಗಾಪುರ, 108 ಅಡಿ ಬಸವೇಶ್ವರ ಪ್ರತಿಮೆ, ಅನುಭವಮಂಟಪ, ವೈಷ್ಣೋದೇವಿ ಇತ್ಯಾದಿ. 9481433157

ಕೃಷ್ಣ ಹೆರಿಟೇಜ್ ಟೂರ್ಸ್ ಊಟ ರೂಮಿನೊಂದಿಗೆ 14.10.2025 ರಿಂದ 10 ದಿನಗಳ ಕಾಶಿ,ಗಯಾ,ಅಯೋಧ್ಯೆ ಪ್ರಯಾಗ್‌ರಾಜ್ ನೈಮಿಶಾರಣ್ಯ ಜಾರ್ಖಂಡ್ ವೈದ್ಯನಾಥೇಶ್ವರ ರೂ.24000. 26000. 29000. 9448390735 9449721678

Travel
ಚಾರ್‌ಧಾಮ ಪ್ರವಾಸ 11.9.2025. ನೇಪಾಳ,ಕಾಶಿ,ಮುಕ್ತಿನಾಥ 04.10.2025. ಆಂಧ್ರ ಪ್ರವಾಸ 27.10.2025. ಅಷ್ಟ ಜ್ಯೋತಿರ್ಲಿಂಗ ಪ್ರವಾಸ 13.11.2025. ಸಂಪರ್ಕಿಸಿ.ಏಷ್ಯನ್ ಟೂರ್ಸ್ ಅಂಡ್ ಟ್ರಾವೆಲ್ಸ್ ಬೆಂಗಳೂರು.70 9342287551 9482239855

ಭಾರತಪರಂಪರ ದರ್ಶನ: 17.8.25 ಪುರಿಜಗನ್ನಾಥ, 2ಶಕ್ತಿಪೀಠ, ಲಿಂಗರಾಜ,ಕೊಲ್ಕತ್ತ, 6ದಿನ ವಿಮಾನದಲ್ಲಿ. 31.8.25 11ದಿನ 4ಜ್ಯೋತಿರ್ಲಿಂಗ ಮಾತ್ರಗಯ,ಗುಜರಾತ್, ಮಧ್ಯಪ್ರದೇಶ. ಪ್ರಕಾಶ್ ಹೆಬ್ಬಾರ್ 9448792891.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಸಾರ್ವಜನಿಕ ಪ್ರಕಟಣೆ
BOOK YOUR PUBLIC NOTICE ADS IN PRAJAVANI ALL KARNATAKA, ON ALL DAYS
@500/-* PER SQCM
www.dhclassifieds.com
BOOK NOW
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9886213331 | +91 9731810277
9845114560
*Conditions apply

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ವಿಷ್ಣು ಸ್ಮಾರಕಕ್ಕಾಗಿ ಕಲಾವಿದರ ಕೂಗು

ಕುಟುಂಬ– ಅಭಿಮಾನಿಗಳ ನಡುವೆ ಬಿರುಕು ಮೂಡಿಸುವ ಯತ್ನ: ಅನಿರುದ್ಧ್

ಪ್ರಜಾವಾಣಿ ವಾರ್ತೆ

ಅನಿರುದ್ಧ್

ಬೆಂಗಳೂರು: ಅಭಿಮಾನ್ ಸ್ಟುಡಿಯೋದಲ್ಲಿನ ವಿಷ್ಣುವರ್ಧನ್ ಸಮಾಧಿ ಪುಣ್ಯಸ್ಥಳವಾಗಿದ್ದು, ಆ ಜಾಗ ಪುಣ್ಯಕ್ಷೇತ್ರದ ರೀತಿಯೇ ಇತ್ತು. ಅದನ್ನು ನೆಲಸಮ ಮಾಡಬಾರದಿತ್ತು ಎಂದು ವಿಷ್ಣುವರ್ಧನ್ ಅಳಿಯ, ನಟ ಅನಿರುದ್ಧ್ ಆಕ್ರೋಶ ವ್ಯಕ್ತಪಡಿಸಿದರು.

ಶನಿವಾರ ತಮ್ಮ ನಿವಾಸದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, 'ಮೈಸೂರಿನ ಜತೆಗೆ ಬೆಂಗಳೂರಿನಲ್ಲಿಯೂ ಅಪ್ಪಾಜಿ ಸ್ಮಾರಕವಾದರೆ ಸಂತಸದ ಸಂಗತಿ. ಆದರೆ ಈ ವಿವಾದದಲ್ಲಿ ನಮ್ಮ ಕುಟುಂಬದವರನ್ನು ಖಳನಟರಂತೆ ಬಿಂಬಿಸಲಾಗುತ್ತಿದೆ. ಇದರ ಹಿಂದಿನ ಹೋರಾಟ, ಪರಿಶ್ರಮ ತಿಳಿದುಕೊಂಡು ಸಾಮಾಜಿಕ ಜಾಲತಾಣಗಳಲ್ಲಿ ಪ್ರತಿಕ್ರಿಯಿಸಿ. ಈಗ ಸಮಾಧಿ ಇರುವ ಜಾಗದಲ್ಲಿ ಪೂಜಿಸಬೇಡಿ ಎಂದು ನಾವು ಯಾವತ್ತೂ ಹೇಳಿಲ್ಲ. ಆರೂವರೆ ವರ್ಷಗಳು ಬೆಂಗಳೂರಿನಲ್ಲಿ ಸ್ಮಾರಕ ನಿರ್ಮಾಣಕ್ಕೆ ಪ್ರಯತ್ನ ಮಾಡಿದ್ದೇವೆ. ಇಲ್ಲಿ ಸ್ಮಾರಕ ಆಗುವುದೇ ಇಲ್ಲ ಎಂಬುದು ಖಚಿತವಾದಾಗ ಮೈಸೂರಿಗೆ ಹೋಗಿದ್ದೇವೆ' ಎಂದರು.

'ಇವತ್ತು ಮೈಸೂರಲ್ಲಿ ಐದು ಎಕರೆ ಜಾಗದಲ್ಲಿ ಸ್ಮಾರಕವಾಗಿದೆ. ಅದು ಹೇಗೆ ಆಗಿದ್ದು? ಅದಕ್ಕಾಗಿ ಎಷ್ಟು ಕಚೇರಿಗಳನ್ನು ಅಲೆದಿದ್ದೇವೆ ಎಂಬುದು ಗೊತ್ತಿದೆಯಾ? ಪ್ರಯತ್ನಗಳ ಬಗ್ಗೆ ಗೊತ್ತಿಲ್ಲದೇ ಆರೋಪ ಹೊರಿಸಲಾಗುತ್ತಿದೆ. ಕುಟುಂಬ ಮತ್ತು ಅಭಿಮಾನಿಗಳ ನಡುವೆ ಬಿರುಕು ಮೂಡಿಸುವ ಕಾರ್ಯವನ್ನು ಕೆಲವರು ಮಾಡುತ್ತಿದ್ದಾರೆ' ಎಂದು ಬೇಸರ ವ್ಯಕ್ತಪಡಿಸಿದರು.

'ಬೆಂಗಳೂರು, ಮೈಸೂರಿನಲ್ಲಿ ಸ್ಮಾರಕಕ್ಕಾಗಿ ಸಾಕಷ್ಟು ಜಾಗಗಳನ್ನು ನೋಡಿದ್ದೆವು. ಎಲ್ಲ ಕಡೆ ಒಂದಲ್ಲ ಒಂದು ರೀತಿ ಸಮಸ್ಯೆಯಾಯಿತು. ಕಂಠೀರವ ಸ್ಟುಡಿಯೋದಲ್ಲಿ ಸ್ಮಾರಕ ಮಾಡಲು 2018ರಲ್ಲಿ ಸರ್ಕಾರ ಕೇಳಿತು. ಆಗ ಮೈಸೂರಿನಲ್ಲಿ ಸ್ಮಾರಕ ನಿರ್ಮಾಣ ಹತ್ತಿರದಲ್ಲಿತ್ತು. ಹೀಗಾಗಿ ಮತ್ತೆ ಜಾಗ ಬದಲಿಸಲು ಸಾಧ್ಯವಿಲ್ಲ ಎಂದೆವು. 2023ರಲ್ಲಿ ಮೈಸೂರಿನಲ್ಲಿ ಅಪ್ಪಾಜಿ ಅಸ್ತಿಯನ್ನು ಇಟ್ಟು ಸ್ಮಾರಕ ಮಾಡಿದ್ದೇವೆ' ಎಂದು ಅವರು ಸಮಜಾಯಿಷಿ ನೀಡಿದರು.

ಧ್ರುವ ಸರ್ಜಾ ಬೇಸರ: 'ಸಾಧಕನಿಗೂ ಸಾವಿಲ್ಲ, ಕಲೆಗೂ ಸಾವಿಲ್ಲ. ವಿಷ್ಣು ಅಪ್ಪಾಜಿ ಸದಾ ಅಜರಾಮರ. ಕೋಟ್ಯಂತರ ಕನ್ನಡಿಗರ ಹೃದಯದಲ್ಲಿ ಗುಡಿ ಕಟ್ಟಿರುವ ವ್ಯಕ್ತಿಗೆ ಸ್ಮಾರಕ ಏಕೆ ಬೇಕು? ಆದರೂ ಸಹ ಈ ನಾಡಿನಲ್ಲಿ ಇಂಥ ಒಬ್ಬ ಕಲಾವಿದನಿಗೆ ಹೀಗೆ ಆಗಿದ್ದು ಖಂಡಿತ ಮನಸ್ಸಿಗೆ ನೋವುಂಟು ಮಾಡಿದೆ. ನಾನು ಒಬ್ಬ ಕನ್ನಡಿಗನಾಗಿ, ಕಲಾವಿದನಾಗಿ, ಈ ಒಂದು ಸಂದರ್ಭದಲ್ಲಿ ವಿಷ್ಣುವರ್ಧನ್ ಅವರ ಅಭಿಮಾನಿಗಳ ಜೊತೆಗೆ ನಿಂತಿದ್ದೇನೆ. ನಿಮ್ಮ ಮುಂದಿನ ನಡೆಗಾಗಿ ಕಾಯುತ್ತಿದ್ದೇನೆ' ಎಂದು ಧ್ರುವ ಸರ್ಜಾ ತಮ್ಮ ಸಾಮಾಜಿಕ ಜಾಲತಾಣದಲ್ಲಿ ಬರೆದುಕೊಂಡಿದ್ದಾರೆ.

ಬಾಲಣ್ಣ ಪುತ್ರಿ ವಿಷಾದ: ಹಿರಿಯ ನಟ ಬಾಲಕೃಷ್ಣ ಅವರಿಗೆ ಸೇರಿದ್ದ ಅಭಿಮಾನ್ ಸ್ಟುಡಿಯೋದಲ್ಲಿ ನಡೆದ ಈ ಘಟನೆಗೆ ಬಾಲಣ್ಣ ಪುತ್ರಿ ಗೀತಾ ಕೂಡ ಪ್ರತಿಕ್ರಿಯಿಸಿದ್ದಾರೆ.

'ವಿಷ್ಣುವರ್ಧನ್ ನಮ್ಮ ತಂದೆಗೆ ಮಗನ ಥರ ಇದ್ದರು. ಅವರ ಸಮಾಧಿ ನೆಲಸಮ ಮಾಡಿರುವುದು ವಿಷಾದನೀಯ. ನಮ್ಮ ಕುಟುಂಬದ ಸದಸ್ಯರೊಬ್ಬರು ಇದಕ್ಕೆ ಕಾರಣ. ಆ ಭೂಮಿಯಲ್ಲಿ ನಮಗೂ ಹಕ್ಕಿದೆ. ನ್ಯಾಯಾಲಯದ ಮೂಲಕವೇ ಅವರಿಗೆ ಉತ್ತರಿಸುವೆ' ಎಂದಿದ್ದಾರೆ.

ನಟ ರಿಷಬ್ ಶೆಟ್ಟಿ ಅವರು ಕೂಡ ವಿಷ್ಣುವರ್ಧನ್ ಸ್ಮಾರಕಕ್ಕೆ ಒತ್ತಾಯಿಸಿದ್ದಾರೆ.

ಅಭಿಮಾನ್ ಸ್ಟುಡಿಯೊದ ಎದುರು ಬ್ಯಾರಿಕೇಡ್ ಹಾಕಿ ಭದ್ರತೆಗೆ ಪೊಲೀಸರನ್ನು ನಿಯೋಜಿಸಲಾಗಿದೆ ಪ್ರಜಾವಾಣಿ ಚಿತ್ರ

ನಟ ಸುದೀಪ್ ಆಕ್ರೋಶ

ವಿಷ್ಣುವರ್ಧನ್ ಅವರ ಸಮಾಧಿ ನೆಲಸಮ ಮಾಡಿರುವುದಕ್ಕೆ ನಟ ಸುದೀಪ್ ತಮ್ಮ 'ಎಕ್ಸ್' ಖಾತೆಯಲ್ಲಿ ಆಕ್ರೋಶ ಹೊರಹಾಕಿದ್ದಾರೆ.

'ಸಾಹಸ ಸಿಂಹ ವಿಷ್ಣುವರ್ಧನ್ ಎಂದರೆ, ಎಂದೂ ಮುಗಿಯದ ಒಂದು ಅಭಿಮಾನ, ಗೌರವ. ಅವರ ಸ್ಮಾರಕವನ್ನು ಒಡೆದು ಹಾಕಿದ್ದು, ಒಂದು ದೇವಸ್ಥಾನವನ್ನು ಕೆಡವಿದಾಗ ಎಷ್ಟು ನೋವು ಆಗುತ್ತದೋ, ಅಷ್ಟೇ ನೋವು ಮತ್ತು ಸಂಕಟ ನನಗಾಗಿದೆ. ನಮ್ಮದೇ ರಾಜ್ಯದಲ್ಲಿ ಒಬ್ಬೊಬ್ಬ ಕಲಾವಿದರಿಗೆ ಒಂದೊಂದು ರೀತಿ ಗೌರವ. ವಿಷ್ಣುವರ್ಧನ್ ಅಂಥ ಒಬ್ಬ ಮೇರು ನಟನಿಗೆ ರಾಜಧಾನಿಯಲ್ಲಿ, ಒಂದು ಅರ್ಧ ಎಕರೆ ಜಾಗ ಕೊಡಲಿಲ್ಲ, ಅವರ ಹೆಸರಿನಲ್ಲಿ ಒಂದು ಪ್ರಾರ್ಥನೆ ಮಾಡಲು ನಮ್ಮ ಬಳಿ ಜಾಗವಿಲ್ಲ ಎಂದರೆ, ಇದು ಅತ್ಯಂತ ಖಂಡನೀಯ ವಿಷಯ. ಸರ್ಕಾರ ಮಧ್ಯ ಪ್ರವೇಶ ಮಾಡಬೇಕು. ಇದು ನನ್ನ ವಿನಂತಿ. ನ್ಯಾಯಾಲಯಕ್ಕೆ ಹೋಗುವುದಾದರೆ, ನಾನೂ ಬರಲು ಸಿದ್ಧ. ಸರ್ಕಾರ, ನ್ಯಾಯಾಲಯ ಮತ್ತು ಆ ಭೂಮಿ ಖರೀದಿ ಮಾಡಿರುವವರಲ್ಲಿ ನನ್ನದೊಂದು ಮನವಿ- ನಿಮಗೆ ಏನು ಹಣಕಾಸು ಬೇಕೋ, ಅದನ್ನು ಕೊಡಲು ನಾನು ಮತ್ತು ನನ್ನಂತಹ ಲಕ್ಷಾಂತರ ಜನರು ಮುಂದೆ ಬರುತ್ತೇವೆ. ನಾನೇ ಮುಂದೆ ನಿಂತು ಅದನ್ನು ಸ್ಮಾರಕವಾಗಿಸುತ್ತೇನೆ. ಅದಕ್ಕೆ ಒಂದು ಅವಕಾಶ ಮಾಡಿ ಕೊಡಿ. ಜೈ ವಿಷ್ಣು ಸರ್" ಎಂದು ಸುದೀಪ್ ಹೇಳಿದ್ದಾರೆ.

ಪೊಲೀಸ್ ಕಾವಲು

ಉತ್ತರಹಳ್ಳಿ–ಕೆಂಗೇರಿ ರಸ್ತೆಯಲ್ಲಿರುವ ಅಭಿಮಾನ್ ಸ್ಟುಡಿಯೊದಲ್ಲಿದ್ದ ವಿಷ್ಣುವರ್ಧನ್ ಅವರ ಸಮಾಧಿಯನ್ನು ತೆರವು ಮಾಡಿರುವ ಕ್ರಮವನ್ನು ಖಂಡಿಸಿ ವಿಷ್ಣುವರ್ಧನ್ ಅಭಿಮಾನಿಗಳು ಶುಕ್ರವಾರ ಮಧ್ಯಾಹ್ನ ಪ್ರತಿಭಟನೆ ನಡೆಸಿದ್ದರಿಂದ ಮುನ್ನೆಚ್ಚರಿಕೆ ಕ್ರಮವಾಗಿ ಪೊಲೀಸ್ ಕಾವಲು ಹಾಕಲಾಗಿದೆ. ಗೇಟ್ ಎದುರು ಪೊಲೀಸರನ್ನು ನಿಯೋಜಿಸಲಾಗಿದೆ.

'ವಿಷ್ಣುವರ್ಧನ್ ಅವರ ಸಮಾಧಿಯನ್ನು ತೆರವು ಮಾಡಿರುವ ಕ್ರಮ ಖಂಡನೀಯ. ನಾಡಿನ ಸಾಂಸ್ಕೃತಿಕ ಪರಂಪರೆಗೆ ಮುಜುಗರ ತಂದಿದೆ. ಈ ರೀತಿಯ ಕೆಲಸಗಳು ಇನ್ನಾದರೂ ನಿಲ್ಲಬೇಕು. ಸಮಾಧಿ ಸ್ಥಳವನ್ನು ಅಭಿಮಾನಿಗಳಿಗೆ ಹಸ್ತಾಂತರಿಸಲು ಕ್ರಮ ತೆಗೆದುಕೊಳ್ಳಬೇಕು' ಎಂದು ವಿಷ್ಣುಸೇನಾ ಸಮಿತಿ ಪದಾಧಿಕಾರಿಗಳು ಪೊಲೀಸರಿಗೆ ಮನವಿ ಮಾಡಿದ್ದಾರೆ.

ರಕ್ಷಾ ಕಣ್ಣೀರು...

ಪಿಟಿಐ ಚಿತ್ರ

ಅಹಮದಾಬಾದ್‌ನ ಸಾಬರಮತಿ ಕೇಂದ್ರ ಕಾರಾಗೃಹದಲ್ಲಿ ಕೈದಿಯಾಗಿರುವ ತನ್ನ ಸಹೋದರನಿಗೆ ರಾಖಿ ಕಟ್ಟಿದ ಸಹೋದರಿಯು, ಹಣೆಗೆ ತಿಲಕ ಧರಿಸುವಾಗ ಕಣ್ಣೀರಿಟ್ಟರು

ಆಕ್ಷೇಪ ಸಲ್ಲಿಸದ ರಾಜಕೀಯ ಪಕ್ಷಗಳು

ಬಿಹಾರದಲ್ಲಿ ಮತದಾರರ ಪಟ್ಟಿ ಬಿಡುಗಡೆಗೊಳಿಸಿ 9 ದಿನ

ನವದೆಹಲಿ (ಪಿಟಿಐ): ಬಿಹಾರದ ಮತದಾರರ ಪರಿಷ್ಕೃತ ಪಟ್ಟಿಯನ್ನು ಚುನಾವಣಾ ಆಯೋಗವು ಬಿಡುಗಡೆಗೊಳಿಸಿ ಶನಿವಾರಕ್ಕೆ ಒಂಬತ್ತು ದಿನ ಪೂರ್ಣಗೊಂಡಿದೆ. ಆದರೆ, ಇದುವರೆಗೂ ಯಾವುದೇ ರಾಜಕೀಯ ಪಕ್ಷವು ಹೆಸರು ಸೇರ್ಪಡೆ ಅಥವಾ ತೆಗೆದು ಹಾಕುವ ಕುರಿತು ಆಕ್ಷೇಪಣೆಗಳನ್ನು ಸಲ್ಲಿಸಿಲ್ಲ.

ಈಗಾಗಲೇ ಪಟ್ಟಿಯಲ್ಲಿ ಹೊರಗುಳಿದಿದ್ದ ಮತದಾರರ ಹೆಸರು ಸೇರ್ಪಡೆ, ಆಕ್ಷೇಪಣೆ ಸಲ್ಲಿಸಲು ಸೆಪ್ಟೆಂಬರ್ 1ರವರೆಗೆ ರಾಜಕೀಯ ಪಕ್ಷಗಳಿಗೆ ಅವಕಾಶ ಕಲ್ಪಿಸಲಾಗಿದೆ.

ಮತಪಟ್ಟಿಗೆ ಆಕ್ಷೇಪಣೆ ಸಲ್ಲಿಸುವ ಕುರಿತು ಆಗಸ್ಟ್ 1ರಿಂದ 9ರವರೆಗೆ ಯಾವುದೇ ರಾಜಕೀಯ ಪಕ್ಷಗಳು ಕೂಡ ಬೂತ್ ಮಟ್ಟದ ಏಜೆಂಟ್‌ಗಳನ್ನು ನೇಮಿಸಿರಲಿಲ್ಲ. ಇದೇ ವೇಳೆ 7,252 ಮಂದಿ ತಮ್ಮ ಹೆಸರು ಸೇರ್ಪಡೆ ಹಾಗೂ ತೆಗೆದುಹಾಕುವ ಸಂಬಂಧ ಆಯೋಗವನ್ನು ಸಂಪರ್ಕಿಸಿದ್ದಾರೆ ಎಂದು ತಿಳಿಸಿದೆ.

'ಅರ್ಹ ಮತದಾರರು ಯಾವುದೇ ಕಾರಣಕ್ಕೂ ಬಿಟ್ಟು ಹೋಗಬಾರದು ಹಾಗೂ ಅನರ್ಹ ಮತದಾರರನ್ನು ಅಂತಿಮ ಪಟ್ಟಿಯಲ್ಲಿ ಯಾವುದೇ ಕಾರಣಕ್ಕೂ ಸೇರಿಸಿಕೊಳ್ಳುವುದಿಲ್ಲ ಎಂದು ಚುನಾವಣಾ ಆಯೋಗವು ಸ್ಪಷ್ಟಪಡಿಸಿದೆ. ಹೀಗಾಗಿ, ಯಾವುದೇ ಆಕ್ಷೇಪಣೆ, ತಪ್ಪುಗಳು ಇದ್ದರೆ ದೂರು ಸಲ್ಲಿಸಿ, ಸರಿಪಡಿಸಿಕೊಳ್ಳಬಹುದು' ಎಂದು ಆಯೋಗದ ಅಧಿಕಾರಿಯೊಬ್ಬರು ತಿಳಿಸಿದರು.

ಸೆಪ್ಟೆಂಬರ್ 30ರಂದು ಅಂತಿಮ ಪಟ್ಟಿ ಪ್ರಕಟಿಸಲಾಗುವುದು ಎಂದು ಆಯೋಗವು ಈಗಾಗಲೇ ತಿಳಿಸಿದೆ.

ಚಟಿಕೆ ಸುದ್ದಿ

ಕುಲಗಾಮ್: ಇಬ್ಬರು ಯೋಧರು ಹುತಾತ್ಮ

ಹುತಾತ್ಮರಾದ ಯೋಧರಿಗೆ ಜಮ್ಮು ಮತ್ತು ಕಾಶ್ಮೀರ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಗೌರವ ಸಲ್ಲಿಸಿದರು

ಶ್ರೀನಗರ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಕುಲಗಾಮ್ ಜಿಲ್ಲೆಯಲ್ಲಿ ಉಗ್ರರ ವಿರುದ್ಧ ನಡೆದ ಕಾರ್ಯಾಚರಣೆಯಲ್ಲಿ ಇಬ್ಬರು ಯೋಧರು ಹುತಾತ್ಮರಾಗಿದ್ದು, ಹಲವರು ಗಾಯಗೊಂಡಿದ್ದಾರೆ.

ಲ್ಯಾನ್ಸ್ ನಾಯಕ್ ಪ್ರಿತ್‌ಪಾಲ್ ಸಿಂಗ್ ಮತ್ತು ಹರ್ಮಿಂದರ್ ಸಿಂಗ್ ಹುತಾತ್ಮರಾದವರು.

ಕುಲಗಾಮ್‌ನಲ್ಲಿ ಆಗಸ್ಟ್ 1ರಿಂದ ಆರಂಭಗೊಂಡಿರುವ ಉಗ್ರರ ವಿರುದ್ಧದ ಕಾರ್ಯಾಚರಣೆ ಸತತ 9ನೇ ದಿನವೂ ಮುಂದುವರಿದಿದೆ. ಇಬ್ಬರು ಉಗ್ರರನ್ನು ಹೊಡೆದುರುಳಿಸಲಾಗಿದೆ. ಗುಪ್ತಚರ ಮಾಹಿತಿಯ ಆಧಾರದ ಮೇರೆಗೆ ದಕ್ಷಿಣ ಕಾಶ್ಮೀರದ ಅಖಲ್ ಅರಣ್ಯ ಪ್ರದೇಶದಲ್ಲಿ ಶೋಧ ಕಾರ್ಯಾಚರಣೆ ನಡೆಯುತ್ತಿದೆ' ಎಂದು ಸೇನೆಯ ಚಿನಾರ್ ಕೋರ್ ಘಟಕ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದೆ.

ಉತ್ತರ ಕಾಶಿ ಮುಂದುವರಿದ ರಕ್ಷಣಾ ಕಾರ್ಯ

ಉತ್ತರಕಾಶಿ (ಪಿಟಿಐ): ಮೇಘಸ್ಫೋಟದಿಂದ ಉಂಟಾದ ಪ್ರವಾಹದಿಂದ ನಲುಗಿರುವ ಉತ್ತರಾಖಂಡದ ಉತ್ತರಕಾಶಿಯಲ್ಲಿ ಐದನೇ ದಿನವಾದ ಶನಿವಾರವೂ ರಕ್ಷಣಾ ಕಾರ್ಯ ಮುಂದುವರಿಯಿತು.

ಜಿಲ್ಲೆಯ ವಿವಿಧೆಡೆ ಆಶ್ರಯ ಪಡೆದಿದ್ದ ಜನರನ್ನು ರಕ್ಷಿಸಲು ಉತ್ತರಾಖಂಡ ನಾಗರಿಕ ವಿಮಾನಯಾನ ಪ್ರಾಧಿಕಾರದ ನಾಲ್ಕು ಹೆಲಿಕಾಪ್ಟ-ರ್‌ಗಳನ್ನು ರಕ್ಷಣಾ ಕಾರ್ಯಾಚರಣೆಗೆ ನಿಯೋಜಿಸಲಾಗಿತ್ತು. 170 ಜನರನ್ನು ಮತಲಿಯ ಐಟಿಬಿಪಿ ಹೆಲಿಪ್ಯಾಡ್ ಹಾಗೂ 107 ಜನರನ್ನು ಚಿನ್ಯಾಲೀಸೌರ್ ಏರ್‌ಸ್ಟ್ರಿಪ್‌ಗೆ ಸ್ಥಳಾಂ-ತರಿಸಲಾಯಿತು ಎಂದು ಪೊಲೀಸರು ತಿಳಿಸಿದ್ದಾರೆ.

ಪರಿಹಾರ ಘೋಷಣೆ: ಧರಾಲಿಯಲ್ಲಿ ಸಂಭವಿಸಿದ ದುರಂತದಲ್ಲಿ ಮೃತಪಟ್ಟವರ ಸಂಬಂಧಿಕರು ಹಾಗೂ ಮನೆ ಕಳೆದುಕೊಂಡ ಸಂತ್ರಸ್ತರಿಗೆ ತಲಾ ₹5 ಲಕ್ಷ ಪರಿಹಾರ ನೀಡುವುದಾಗಿ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಶನಿವಾರ ಘೋಷಿಸಿದ್ದಾರೆ.

ನಾಲ್ವರ ವಿರುದ್ಧ ಎಫ್‌ಐಆರ್: ಧರಾಲಿ ಪ್ರವಾಹದ ಕುರಿತು ಅಕ್ಷೇಪಾರ್ಹ ಹೇಳಿಕೆಗಳನ್ನು ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ ಆರೋಪದಡಿ ನಾಲ್ವರ ವಿರುದ್ಧ ಕೊತ್ವಾಲಿ ಪೊಲೀಸ್ ಠಾಣೆಯಲ್ಲಿ ಶುಕ್ರವಾರ ಎಫ್‌ಐಆರ್ ದಾಖಲಿಸಲಾಗಿದೆ.

ಮಹಿಳೆ ನಾಪತ್ತೆ

ಧರಾಲಿಯಲ್ಲಿ ಸಂಭವಿಸಿದ ಪ್ರವಾಹದಲ್ಲಿ ಮಹಾರಾಷ್ಟ್ರದ ಮಹಿಳೆಯೊಬ್ಬರು ನಾಪತ್ತೆಯಾಗಿದ್ದಾರೆ.

ಮಹಾರಾಷ್ಟ್ರದಿಂದ ಧರಾಲಿ ಹಾಗೂ ಸುತ್ತಲಿನ ಪ್ರದೇಶಗಳಿಗೆ ಪ್ರವಾಸಕ್ಕೆ ತೆರಳಿದ್ದ 172 ಪ್ರವಾಸಿಗರ ಪೈಕಿ 171 ಮಂದಿ ಸುರಕ್ಷಿತವಾಗಿದ್ದಾರೆ. ಕೃತಿಕಾ ಜೈನ್ ಎಂಬುವರು ನಾಪತ್ತೆಯಾಗಿದ್ದಾರೆ.

ಗೋಡೆ ಕುಸಿದು ಏಳು ಸಾವು

ದೆಹಲಿಯಲ್ಲಿ ಭಾರಿ ಮಳೆ, ತಗ್ಗು ಪ್ರದೇಶಗಳು ಜಲಾವೃತ

ನವದೆಹಲಿ: ರಾಷ್ಟ್ರ ರಾಜಧಾನಿಯಲ್ಲಿ ಭಾರಿ ಮಳೆ ಸುರಿದ ಪರಿಣಾಮ ಶನಿವಾರ ಬೆಳಗ್ಗೆ ಜೈತ್‌ಪುರದ ಹರಿನಗರದಲ್ಲಿರುವ ಮೋಹನ್ ಬಾಬಾ ಮಂದಿರ ಬಳಿ ಗೋಡೆ ಕುಸಿದುಬಿದ್ದು ಇಬ್ಬರು ಮಕ್ಕಳು ಸೇರಿದಂತೆ ಏಳು ಮಂದಿ ಮೃತಪಟ್ಟಿದ್ದಾರೆ.

ಶನಿವಾರ ಬೆಳಿಗ್ಗೆ 9.16ರ ಸುಮಾರಿಗೆ ಮಾಹಿತಿ ದೊರೆತ ಕೂಡಲೇ ಪೊಲೀಸರು, ದೆಹಲಿ ಅಗ್ನಿಶಾಮಕ ಮತ್ತು ತುರ್ತು ಸೇವೆ ಸಿಬ್ಬಂದಿ ಮತ್ತು ರಾಷ್ಟ್ರೀಯ ವಿಪತ್ತು ಪ್ರತಿಕ್ರಿಯ ಪಡೆಯ (ಎನ್‌ಡಿಆರ್‌ಎಫ್) ಸಿಬ್ಬಂದಿ ಸ್ಥಳಕ್ಕೆ ತೆರಳಿ ರಕ್ಷಣಾ ಕಾರ್ಯಾಚರಣೆ ನಡೆಸಿದರು. ಅವಶೇಷಗಳಡಿ ಸಿಲುಕಿದ್ದ ಎಂಟು ಮಂದಿಯನ್ನು ಆಸ್ಪತ್ರೆಗಳಿಗೆ ಸಾಗಿಸಲಾಯಿತು. ಏಳು ಮಂದಿ ಮೃತಪಟ್ಟು, ಒಬ್ಬರು ಗಂಭೀರ ಸ್ಥಿತಿಯಲ್ಲಿದ್ದಾರೆ ಎಂದು ದೆಹಲಿ ಆಗ್ನೇಯ ವಿಭಾಗದ ಡಿಸಿಪಿ ಐಶ್ವರ್ಯಾ ಶರ್ಮಾ ತಿಳಿಸಿದ್ದಾರೆ.

ಮೂವರು ಪುರುಷರು, ಇಬ್ಬರು ಮಹಿಳೆಯರು, ಇಬ್ಬರು ಮಕ್ಕಳು ಸಾವಿಗೀಡಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಶುಕ್ರವಾರ ರಾತ್ರಿ, ಶನಿವಾರ ಮುಂಜಾನೆಯೂ ಮಳೆ ಸುರಿದಿದ್ದರಿಂದ ದೆಹಲಿಯ ತಗ್ಗುಪ್ರದೇಶದ ಬಹುತೇಕ ರಸ್ತೆಗಳು ಜಲಾವೃತಗೊಂಡಿದ್ದವು. ಕೆಳಸೇತುವೆಗಳಲ್ಲಿ ನೀರು ತುಂಬಿದ್ದರಿಂದ ವಾಹನ ಸವಾರರು ಪರದಾಡಿದರು.

ನವದೆಹಲಿಯ ಹರಿನಗರದಲ್ಲಿ ಗುಡಿಸಲು ಮತ್ತು ಶೆಡ್‌ಗಳ ಮೇಲೆ ಗೋಡೆ ಕುಸಿದು ಬಿದ್ದಿದ್ದು, ಶನಿವಾರ ರಕ್ಷಣಾ ಕಾರ್ಯಾಚರಣೆ ನಡೆಯಿತು – ಪಿಟಿಐ ಚಿತ್ರ

300ಕ್ಕೂ ಹೆಚ್ಚು ವಿಮಾನ ಸಂಚಾರ ವಿಳಂಬ

ಭಾರಿ ಮಳೆ ಮತ್ತು ಪ್ರತಿಕೂಲ ಹವಾಮಾನದ ಕಾರಣ ಶನಿವಾರ ನವದೆಹಲಿಯ ಇಂದಿರಾಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ತೆರಳಬೇಕಿದ್ದ ಹಲವು ವಿಮಾನಗಳ ಸಂಚಾರದಲ್ಲಿ ವ್ಯತ್ಯಯ ಉಂಟಾಗಿತ್ತು.

ಸುಮಾರು 300ಕ್ಕೂ ಹೆಚ್ಚು ವಿಮಾನಗಳ ಸಂಚಾರ ವಿಳಂಬವಾಯಿತು.

₹1.50 ಲಕ್ಷ ಕೋಟಿ ತಲುಪಿದ ರಕ್ಷಣಾ ಉತ್ಪಾದನೆ

ನವದೆಹಲಿ (ಪಿಟಿಐ): ಭಾರತದ ರಕ್ಷಣಾ ವಲಯದ ಉತ್ಪಾದನೆ ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ಏರಿಕೆ ಕಂಡಿದ್ದು, 2024–25ನೇ ಸಾಲಿನಲ್ಲಿ ₹ 1,50,590 ಕೋಟಿಗೆ ತಲುಪಿದೆ ಎಂದು ರಕ್ಷಣಾ ಸಚಿವ ರಾಜನಾಥ ಸಿಂಗ್ ಶನಿವಾರ ತಿಳಿಸಿದ್ದಾರೆ.

ಕಳೆದ ಆರ್ಥಿಕ ವರ್ಷಕ್ಕೆ ಹೋಲಿಸಿದರೆ ಶೇಕಡ 18ರಷ್ಟು ಪ್ರಗತಿ ಕಂಡಿದೆ. ಕಳೆದ ವರ್ಷ ₹1.27 ಲಕ್ಷ ಕೋಟಿಯಷ್ಟು ಮೌಲ್ಯದ ಉತ್ಪಾದನೆ ಆಗಿತ್ತು.. 2019–20ರ ಸಾಲಿಗೆ ಹೋಲಿಸಿದರೆ ಶೇಕಡ 90ರಷ್ಟು ವೃದ್ಧಿ ಕಂಡಿದೆ. ಆಗ ₹79,071 ಕೋಟಿಯಷ್ಟು ಉತ್ಪಾದನೆಯಾಗಿತ್ತು ಎಂದು ಅವರು 'ಎಕ್ಸ್'ನಲ್ಲಿ ತಿಳಿಸಿದ್ದಾರೆ.

'ರಕ್ಷಣಾ ಇಲಾಖೆಯ ಉತ್ಪಾದನಾ ವಿಭಾಗ, ಎಲ್ಲ ಪಾಲುದಾರರು, ರಕ್ಷಣಾ ಕ್ಷೇತ್ರದ ಸಾರ್ವಜನಿಕ ಉದ್ದಿಮೆ ವಲಯ, ಖಾಸಗಿ ಕೈಗಾರಿಕೆಗಳ ಸಂಘಟಿತ ಪ್ರಯತ್ನದಿಂದ ಇದು ಸಾಧ್ಯವಾಗಿದೆ. ಭಾರತದ ರಕ್ಷಣಾ ವಲಯದ ಕೈಗಾರಿಕೆಗಳ ಉತ್ಪಾದನಾ ಸಾಮರ್ಥ್ಯ ಬಲಗೊಳ್ಳುತ್ತಿದೆ ಎನ್ನುವುದರ ಸ್ಪಷ್ಟ ಮುನ್ಸೂಚನೆ ಇದು' ಎಂದು ಸಿಂಗ್ ಹೇಳಿದ್ದಾರೆ.

ರೌಂಡ್ ಟ್ರಿಪ್‌ಗೆ ರಿಯಾಯಿತಿ ಘೋಷಿಸಿದ ರೈಲ್ವೆ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಸಾಲು ಸಾಲು ಹಬ್ಬಗಳಿರುವ ಕಾರಣ, ರೈಲಿನಲ್ಲಿ ನಿಗದಿತ ಸ್ಥಳಕ್ಕೆ ತೆರಳುವ ಮತ್ತು ಅದೇ ಸ್ಥಳಕ್ಕೆ ವಾಪಸ್ ಪ್ರಯಾಣಿಸುವ (ರೌಂಡ್ ಟ್ರಿಪ್) ಟಿಕೆಟ್‌ಗಳನ್ನು ಒಟ್ಟಿಗೆ ಕಾಯ್ದಿರಿಸುವ ಪ್ರಯಾಣಿಕರಿಗೆ ರೈಲ್ವೆ ಸಚಿವಾಲಯವು ಶೇ 20ರಷ್ಟು ರಿಯಾಯಿತಿ ಘೋಷಿಸಿದೆ.

ಈ ಸೌಲಭ್ಯದಡಿ ಪ್ರಯಾಣಿಕರು ಅಕ್ಟೋಬರ್ 13ರಿಂದ 26ರ ನಡುವಿನ ಅವಧಿಯಲ್ಲಿ ಪ್ರಯಾಣಿಸಲು ಆಗಸ್ಟ್ 14ರಿಂದ ಟಿಕೆಟ್ ಕಾಯ್ದಿರಿಸಬಹುದು. ನವೆಂಬರ್ 17ರಿಂದ ಡಿಸೆಂಬರ್ 1ರ ನಡುವಿನ ಅವಧಿಯಲ್ಲಿ ಹಿಂದಿರುಗುವ ಪ್ರಯಾಣದ ಟಿಕೆಟ್‌ಗಳನ್ನು ಅದೇ ರೈಲಿನಲ್ಲಿ ಕಾಯ್ದಿರಿಸಿದರೆ ಇದಕ್ಕೆ ಶೇ 20ರಷ್ಟು ರಿಯಾಯಿತಿ ಲಭಿಸಲಿದೆ ಎಂದು ರೈಲ್ವೆ ಸಚಿವಾಲಯ ತಿಳಿಸಿದೆ.

ರಿಯಾಯಿತಿ ಕೊಡುಗೆಯು ಕೆಲವು ಮಿತಿಗಳನ್ನು ಹೊಂದಿದೆ. ಪ್ರಯಾಣಿಕರು ಹೋಗುವ ಮತ್ತು ಬರುವ ಟಿಕೆಟ್‌ಗಳನ್ನು ಒಂದೇ ದರ್ಜೆಯಡಿ ಕಾಯ್ದಿರಿಸಬೇಕು. ಮೊದಲು ಹೋಗುವ ಟಿಕೆಟ್ ಕಾಯ್ದಿರಿಸಿ ನಂತರ 'ಕನೆಕ್ಟಿಂಗ್ ಜರ್ನಿ' ಸೌಲಭ್ಯದ ಮೂಲಕ ಹಿಂದಿರುಗುವ ಟಿಕೆಟ್ ಕಾಯ್ದಿರಿಸಬೇಕು. ಹಿಂದಿರುಗುವ ಪ್ರಯಾಣದಲ್ಲಿ ಪ್ರಯಾಣಿಕರ ಹೆಸರು, ದರ್ಜೆ, ಒಟ್ಟು ಸಂಖ್ಯೆಯನ್ನು ಬದಲಿಸಲು ಅವಕಾಶವಿಲ್ಲ.

ರಾಜಧಾನಿ, ಶತಾಬ್ದಿ ಮತ್ತು ಡುರಾಂಟೊದಂತಹ ಬೇಡಿಕೆ–ಲಭ್ಯತೆ ಆಧರಿಸಿ ಬದಲಾಗುವ ದರ ವ್ಯವಸ್ಥೆಯ (ಫ್ಲೆಕ್ಸಿ ಫೇರ್) ರೈಲುಗಳನ್ನು ಹೊರತುಪಡಿಸಿ, ವಿಶೇಷ ರೈಲುಗಳು ಸೇರಿದಂತೆ ಎಲ್ಲ ರೈಲುಗಳ ಪ್ರಯಾಣಕ್ಕೂ ಈ ಸೌಲಭ್ಯ ಸಿಗಲಿದೆ. ಆನ್‌ಲೈನ್ ಅಥವಾ ಕೌಂಟರ್ ಮೂಲಕ ಟಿಕೆಟ್ ಕಾಯ್ದಿರಿಸಬಹುದು, ಆದರೆ ಎರಡೂ ಪ್ರಯಾಣಕ್ಕೂ ಒಂದೇ ವಿಧಾನದಲ್ಲಿ ಟಿಕೆಟ್ ಕಾಯ್ದಿರಿಸಿರಬೇಕು.

ಈ ಸೌಲಭ್ಯದಡಿ ಟಿಕೆಟ್ ಕಾಯ್ದಿರಿಸಿ ಪ್ರಯಾಣ ರದ್ದುಗೊಳಿಸಿದರೆ ಮರುಪಾವತಿ ಮಾಡಲಾಗುವುದಿಲ್ಲ ಎಂದು ರೈಲ್ವೆ ಸ್ಪಷ್ಟಪಡಿಸಿದೆ.

ಐಚ್ಛಿಕ ಶುಲ್ಕ ಸಂಗ್ರಹ ನಿಲ್ಲಿಸಿ: 'ಸುಪ್ರೀಂ'

ನವದೆಹಲಿ (ಪಿಟಿಐ): 'ಕಾನೂನು ಪದವೀಧರರು ವಕೀಲರಾಗಿ ತಮ್ಮ ಸನ್ನದು ನೋಂದಣಿ ಮಾಡಿಸಿಕೊಳ್ಳಬೇಕಾದ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಪರಿಷತ್ ಶಾಸನಬದ್ಧ ಶುಲ್ಕವನ್ನು ಮಾತ್ರವೇ ಸಂಗ್ರಹಿಸಬೇಕು. ಅದನ್ನು ಹೊರತುಪಡಿಸಿ ಯಾವುದೇ 'ಐಚ್ಛಿಕ' ಶುಲ್ಕ ಸಂಗ್ರಹಿಸುವಂತಿಲ್ಲ' ಎಂದು ಸುಪ್ರೀಂ ಕೋರ್ಟ್, ಕರ್ನಾಟಕ ರಾಜ್ಯ ವಕೀಲರ ಪರಿಷತ್‌ಗೆ ನಿರ್ದೇಶಿಸಿದೆ.

'ವಕೀಲರ ಕಾಯ್ದೆ– 1961ರ ಅನ್ವಯ ನಿಗದಿತ ಕಾನೂನುಬದ್ಧ ಶುಲ್ಕವನ್ನಷ್ಟೇ ಪಡೆಯಬೇಕು ಮತ್ತು ಐಚ್ಛಿಕ ಶುಲ್ಕ ಸಂಗ್ರಹಿಸುತ್ತಿರುವುದನ್ನು ಕೂಡಲೇ ನಿಲ್ಲಿಸಬೇಕು' ಎಂದು ಜೆ.ಬಿ. ಪಾರ್ದೀವಾಲಾ ಹಾಗೂ ಆರ್. ಮಹದೇವನ್ ಅವರಿದ್ದ ಪೀಠವು ತಾಕೀತು ಮಾಡಿದೆ.

ನೋಂದಣಿ ಸಂದರ್ಭದಲ್ಲಿ ಅತಿಯಾದ ಶುಲ್ಕ ವಿಧಿಸದಂತೆ ಕಳೆದ ವರ್ಷದ ಜುಲೈನಲ್ಲಿ ನ್ಯಾಯಾಲಯ ನೀಡಿದ್ದ ನಿರ್ದೇಶನವನ್ನು ಪರಿಷತ್ ಪಾಲಿಸುತ್ತಿಲ್ಲ ಎಂದು ದೂರಿ ಕೆ.ಎಲ್.ಜೆ.ಎ. ಕಿರಣ್ ಬಾಬು ಸಲ್ಲಿಸಿದ್ದ ನ್ಯಾಯಾಂಗ ನಿಂದನೆಯ ಅರ್ಜಿ ವಿಚಾರಣೆ ನಡೆಸಿದ ಪೀಠವು ಈ ನಿರ್ದೇಶನ ನೀಡಿತು.

'ಪಾಕ್‌ನ ಆರು ಯುದ್ಧವಿಮಾನ ನಾಶ'

ಒಂದನೇ ಪುಟದಿಂದ...

'ರಷ್ಯಾ ನಿರ್ಮಿತ 'ಎಸ್–400' ವಾಯು ರಕ್ಷಣಾ ವ್ಯವಸ್ಥೆ ಮತ್ತು ನಮ್ಮ ಯುದ್ಧವಿಮಾನಗಳ ಮೂಲಕ ಪಾಕಿಸ್ತಾನದ ಯುದ್ಧ ವಿಮಾನಗಳನ್ನು ಹೊಡೆದುರುಳಿಸಿದೆವು. ನೆಲ ಮಟ್ಟದಿಂದ ಆಗಸದಲ್ಲಿನ ಗುರಿಗೆ 300 ಕಿ.ಮೀ. ದೂರದಿಂದ ದಾಳಿ ನಡೆಸಿ ಇಷ್ಟೊಂದು ದೊಡ್ಡ ಮಟ್ಟದ ಯಶಸ್ಸು ಸಾಧಿಸಿರುವುದು ಇದೇ ಮೊದಲು' ಎಂದೂ ಹರ್ಷ ವ್ಯಕ್ತಪಡಿಸಿದರು.

'ನಮ್ಮ ದಾಳಿಯಿಂದಾಗಿ ಜಕೋಬಾಬಾದ್ ವಾಯುನೆಲೆಗೆ ಅತಿ ಹೆಚ್ಚು ಹಾನಿಯಾಗಿದೆ. ಎಫ್–16 ಯುದ್ಧವಿಮಾನದ ಹ್ಯಾಂಗರ್ (ನಿಲುಗಡೆ ಪ್ರದೇಶ) ಅರ್ಧದಷ್ಟು ನಾಶವಾಗಿದೆ. ಕೆಲವು ಯುದ್ಧವಿಮಾನಗಳು ವಾಯುನೆಲೆಯೊಳಗೆ ಇದ್ದವು. ಇವುಗಳಿಗೂ ಹಾನಿಯಾಗಿದೆ. ಮುರೀದ್ ಮತ್ತು ಚಕ್ಲಾಲ ವಾಯುನೆಲೆಗಳಿಗೆ ಹಾನಿಯಾಗಿದೆ' ಎಂದು ಅವರು ಹೇಳಿದರು.

ಪಾಕಿಸ್ತಾನದ ದಾಳಿಯಿಂದ ಶ್ರೀನಗರ, ಅವಂತಿಪುರ ಮತ್ತು ಅದಂಪುರ ವಾಯುಕೇಂದ್ರ ತುಸು ಹಾನಿಯಾಗಿದೆ. ದೊಡ್ಡ ಪ್ರಮಾಣದ ಅವಶೇಷಗಳನ್ನು ಸಂಗ್ರಹಿಸಲಾಗಿದೆ. ಇದನ್ನು ಡಿಆರ್‌ಡಿಒಗೆ ನೀಡಿದ್ದೇವೆ

ಎ.ಪಿ. ಸಿಂಗ್, ವಾಯುಪಡೆಯ ಮುಖ್ಯಸ್ಥ

ಭಾರತದ ದಾಳಿಯಿಂದ ಒಂದೇ ಒಂದು ಪಾಕಿಸ್ತಾನದ ಯುದ್ಧ ವಿಮಾನಕ್ಕೆ ಹಾನಿಯಾಗಿಲ್ಲ. ಈ ಮೂರು ತಿಂಗಳಲ್ಲಿ ಒಮ್ಮೆಯೂ ಇಂಥ ಮಾಹಿತಿಯನ್ನು ನೀಡಲಾಗಿಲ್ಲ

ಖ್ವಾಜಾ ಆಸಿಫ್, ಪಾಕಿಸ್ತಾನದ ರಕ್ಷಣಾ ಸಚಿವ

ಪ್ರಧಾನಿ ಯಾಕೆ ಕಾರ್ಯಾಚರಣೆ ನಿಲ್ಲಿಸಿದರು?: ಏರ್‌ಚೀಫ್ ಮಾರ್ಷಲ್ ಎ.ಪಿ. ಸಿಂಗ್ ಅವರು ಹೊಸದೊಂದು ಮಾಹಿತಿಯನ್ನು ಬಹಿರಂಗ ಮಾಡಿದ್ದಾರೆ. ಈ ಮಾಹಿತಿ ತಿಳಿದ ಬಳಿಕ, ಪ್ರಧಾನಿ ನರೇಂದ್ರ ಮೋದಿ ಅವರು ಯಾಕಾಗಿ ಆಪರೇಷನ್ ಸಿಂಧೂರವನ್ನು ತಕ್ಷಣವೇ ನಿಲ್ಲಿಸಿದರು ಎಂದು ಆಶ್ಚರ್ಯವಾಗುತ್ತದೆ. ಪ್ರಧಾನಿ ಅವರ ಮೇಲೆ ಎಲ್ಲಿಂದ ಒತ್ತಡ ಬಂತು ಮತ್ತು ಯಾಕಾಗಿ ಅವರು ಅಷ್ಟು ಬೇಗ ಶರಣಾದರು ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಪ್ರಶ್ನಿಸಿದ್ದಾರೆ.

ನೋಂದಾಯಿತ ಮಾನ್ಯತೆ ಪಡೆಯದ ರಾಜಕೀಯ ಪಕ್ಷಗಳ ಪಟ್ಟಿ ಪರಿಷ್ಕರಣೆ

334 ಪಕ್ಷಗಳನ್ನು ಕೈಬಿಟ್ಟ ಆಯೋಗ

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ಕರ್ನಾಟಕದ 12 ಪಕ್ಷಗಳು ಸೇರಿದಂತೆ 334 ನೋಂದಾಯಿತ ಮಾನ್ಯತೆ ಪಡೆಯದ ರಾಜಕೀಯ ಪಕ್ಷಗಳನ್ನು ಆಯೋಗವು ಶನಿವಾರ ತನ್ನ ಪಟ್ಟಿಯಿಂದ ಕೈಬಿಟ್ಟಿದೆ.

ಚುನಾವಣೆಯಲ್ಲಿ ಸ್ಪರ್ಧಿಸಬೇಕು ಎನ್ನುವ ಷರತ್ತನ್ನು ಈ ಪಕ್ಷಗಳು ಪಾಲಿಸಿಲ್ಲ. 2019ರಿಂದ ಇದುವರೆಗಿನ ಆರು ವರ್ಷಗಳ ಅವಧಿಯಲ್ಲಿ ಈ ಪಕ್ಷಗಳು ಒಂದೇ ಒಂದು ಚುನಾವಣೆಯಲ್ಲಿ ಸ್ಪರ್ಧಿಸಿಲ್ಲ ಮತ್ತು ನೋಂದಾಯಿಸಿಕೊಂಡಿರುವ ವಿಳಾಸದಲ್ಲಿಯೂ ಈ ಪಕ್ಷಗಳ ಕಚೇರಿಯೂ ಪತ್ತೆಯಾಗಿಲ್ಲ ಎಂದು ಆಯೋಗ ತಿಳಿಸಿದೆ.

ವರ್ಷಾಂತ್ಯದಲ್ಲಿ ವಿಧಾನಸಭಾ ಚುನಾವಣೆ ನಡೆಯಲಿರುವ ಬಿಹಾರದಲ್ಲೂ ಭಾರತೀಯ ಹಿಂದುಳಿದ ಪಕ್ಷ, ಬಿಹಾರ ಜನತಾ ಪಕ್ಷ ಮತ್ತು ಗಾಂಧಿ ಪ್ರಕಾಶ್ ಪಕ್ಷ ಸೇರಿದಂತೆ 17 ಪಕ್ಷಗಳನ್ನು ಪಟ್ಟಿಯಿಂದ ಕೈಬಿಡಲಾಗಿದೆ.

ಮುಖ್ಯಾಂಶಗಳು

- ಆರು ವರ್ಷದಿಂದ ಚುನಾವಣೆಗೆ ಸ್ಪರ್ಧಿಸಿಲ್ಲ
- ಕಚೇರಿಯೇ ಇಲ್ಲ
- ಆದಾಯ ತೆರಿಗೆ ಕಾನೂನುಗಳ ಉಲ್ಲಂಘನೆ

ಉತ್ತರ ಪ್ರದೇಶದಲ್ಲಿನ 115 ಪಕ್ಷಗಳನ್ನು ಪಟ್ಟಿಯಿಂದ ಕೈಬಿಡಲಾಗಿದೆ. ದೆಹಲಿ 27, ತಮಿಳುನಾಡು 22, ಹರಿಯಾಣ 21, ಮಧ್ಯಪ್ರದೇಶ 15, ತೆಲಂಗಾಣ 13 ಹಾಗೂ ಗುಜರಾತ್‌ನ 11 ಪಕ್ಷಗಳನ್ನು ಆಯೋಗವು ಪಟ್ಟಿಯಿಂದ ಕೈಬಿಟ್ಟಿದೆ.

ಅಸ್ತಿತ್ವದಲ್ಲಿದ್ದ 2,854 ನೋಂದಾಯಿತ ಮಾನ್ಯತೆ ಪಡೆಯದ ರಾಜಕೀಯ ಪಕ್ಷಗಳ (ಆರ್‌ಯುಪಿಪಿ) ಪೈಕಿ, ಪರಿಷ್ಕರಣೆಯ ಬಳಿಕ 2,520 ಪಕ್ಷಗಳು ಪಟ್ಟಿಯಲ್ಲಿ ಉಳಿದಿವೆ. ಪ್ರಸ್ತುತ ಆರು ರಾಷ್ಟ್ರೀಯ ಪಕ್ಷಗಳು ಹಾಗೂ 67 ರಾಜ್ಯ ಪಕ್ಷಗಳಿವೆ.

ಕರ್ನಾಟಕದ ಕೈಬಿಟ್ಟ ಪಕ್ಷಗಳು...

ಅಂಬೇಡ್ಕರ್ ಜನತಾ ಪಕ್ಷ, ಭಾರತೀಯ ಪ್ರಜಾ ಪಕ್ಷ, ಜನ ಸ್ವರಾಜ್ಯ ಪಕ್ಷ, ಕಲ್ಯಾಣ ಕ್ರಾಂತಿ ಪಕ್ಷ, ಕರ್ನಾಟಕ ಪ್ರಜಾ ವಿಕಾಸ್ ಪಕ್ಷ, ಕರ್ನಾಟಕ ಸ್ವರಾಜ್ಯ ಪಕ್ಷ, ಮಹಿಳಾ ಪ್ರಧಾನ ಪಕ್ಷ, ನಮ್ಮ ಕಾಂಗ್ರೆಸ್, ಪ್ರಜಾ ರೈತ ರಾಜ್ಯ ಪಕ್ಷ, ರಕ್ಷಕ ಸೇನಾ, ಸಮನ್ವಾ ಜನತಾ ಪಕ್ಷ (ಲೋಕ ತಾಂತ್ರಿಕ್) ಹಾಗೂ ವಿಚಾರ ಜಾಗೃತಿ ಕಾಂಗ್ರೆಸ್ ಪಕ್ಷ ಆಯೋಗದ ಪಟ್ಟಿಯಿಂದ ಕೈಬಿಟ್ಟ ಕರ್ನಾಟಕದ 12 ಪಕ್ಷಗಳು.

ಕಳೆದ ಜೂನ್ ತಿಂಗಳಲ್ಲಿ 345 ರಾಜಕೀಯ ಪಕ್ಷಗಳ ವಿಚಾರಣೆ ನಡೆಸಿದ ಆಯೋಗವು ನಿಯಮಗಳನ್ನು ಪಾಲಿಸದ 334 ಪಕ್ಷಗಳನ್ನು ಪಟ್ಟಿಯಿಂದ ಕೈಬಿಟ್ಟಿದೆ. ಈ ಪಕ್ಷಗಳು ದೇಣಿಗೆ ಪಡೆಯುವುದು ಹಾಗೂ ಆದಾಯ ತೆರಿಗೆಯ ವಿನಾಯಿತಿ ಪಡೆಯುವುದನ್ನು ನಿರ್ಬಂಧಿಸಿದೆ. 11 ಪಕ್ಷಗಳ ಕಾರ್ಯವೈಖರಿಯನ್ನು ಮರುಪರಿಶೀಲಿಸುವಂತೆ ಆಯಾ ರಾಜ್ಯದ ಮುಖ್ಯ ಚುನಾವಣಾ ಅಧಿಕಾರಿಗಳಿಗೆ ಸೂಚಿಸಿದೆ.

2022ರಲ್ಲಿ ನಡೆದ ಪರಿಷ್ಕರಣೆಯಲ್ಲಿ 537 ಪಕ್ಷಗಳ ಪೈಕಿ 284 ಪಕ್ಷಗಳನ್ನು ಪಟ್ಟಿಯಿಂದ ಕೈಬಿಡಲಾಗಿತ್ತು. ಇದು ನಿರಂತರ ಪ್ರಕ್ರಿಯೆ ಎಂದು ಆಯೋಗ ತಿಳಿಸಿದೆ.

ನಿಷ್ಕ್ರಿಯ ನೋಂದಾಯಿತ ಮಾನ್ಯತೆ ಪಡೆಯದ ರಾಜಕೀಯ ಪಕ್ಷಗಳ ಪಟ್ಟಿಯನ್ನು 2001ರಿಂದ ಇಲ್ಲಿಯವರೆಗೆ ಮೂರರಿಂದ ನಾಲ್ಕು ಬಾರಿ ಪರಿಷ್ಕರಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಹಣ ಅಕ್ರಮ ವರ್ಗಾವಣೆ ತಡೆಗಟ್ಟುವಿಕೆ ಕಾಯ್ದೆ ಹಾಗೂ ಆದಾಯ ತೆರಿಗೆಯ ಕಾನೂನುಗಳನ್ನು ಪಟ್ಟಿಯಿಂದ ಕೈಬಿಡಲಾದ ಬಹುತೇಕ ಪಕ್ಷಗಳು ಉಲ್ಲಂಘಿಸಿವೆ. ಆಕ್ಷೇಪಣೆ ಸಲ್ಲಿಸಲು 30 ದಿನ ಕಾಲಾವಕಾಶ ನೀಡಿದ ನಂತರವೇ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಆಯೋಗ ತಿಳಿಸಿದೆ.

'ಒಳಮೀಸಲಾತಿ ವಿರೋಧಿಸಿಲ್ಲ'

ಜಿ.ಪರಮೇಶ್ವರ

ತುಮಕೂರು: 'ಪರಿಶಿಷ್ಟ ಜಾತಿಯವರಿಗೆ ಒಳ ಮೀಸಲಾತಿ ಕಲ್ಪಿಸಲು ಯಾವುದೇ ರೀತಿ ವಿರೋಧ ವ್ಯಕ್ತಪಡಿಸಿಲ್ಲ' ಎಂದು ಗೃಹ ಸಚಿವ ಜಿ.ಪರಮೇಶ್ವರ ಸ್ಪಷ್ಟಪಡಿಸಿದರು.

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಒಳ ಮೀಸಲಾತಿ ಕುರಿತು ಆಯೋಗದ ವರದಿ ವಿರೋಧಿಸಿಲ್ಲ. ಸಂಪುಟ ಸಭೆಯಲ್ಲೂ ವಿರೋಧ ವ್ಯಕ್ತಪಡಿಸಿಲ್ಲ' ಎಂದರು.

'ವಿಧಾನಸಭೆ ಚುನಾವಣೆ ಸಮಯದಲ್ಲಿ ಪಕ್ಷ ನೀಡಿದ್ದ ಪ್ರಣಾಳಿಕೆಯಲ್ಲಿ ಒಳ ಮೀಸಲಾತಿ ಕಲ್ಪಿಸುವ ಭರವಸೆ ನೀಡಲಾಗಿದೆ. ನಾನೇ ಪಕ್ಷದ ಪ್ರಣಾಳಿಕೆ ಸಿದ್ಧಪಡಿಸಿ, ಈ ವಿಚಾರವನ್ನು ಸೇರಿಸಿದ್ದೆ. ಈಗ ಏಕೆ ವಿರೋಧ ವ್ಯಕ್ತಪಡಿಸಲಿ?' ಎಂದು ಪ್ರಶ್ನಿಸಿದರು.

ಸಚಿವ ಸಂಪುಟದ ವಿಶೇಷ ಸಭೆಯಲ್ಲಿ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ಹೇಳಿದರು.

'ಗೊಂದಲ ಬಗೆಹರಿಸಿಕೊಳ್ಳುತ್ತೇವೆ'

ಬೆಂಗಳೂರು: 'ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲು ಕಲ್ಪಿಸಲು ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್‌ದಾಸ್ ಆಯೋಗ ನೀಡಿರುವ ವರದಿಯು ಅನುಷ್ಠಾನಗೊಳ್ಳುವುದು ಶೇ 100ರಷ್ಟು ಖಚಿತ. ಈ ಬಗ್ಗೆ ಯಾವುದೇ ಅನುಮಾನ ಇಲ್ಲ' ಎಂದು ಆಹಾರ ಸಚಿವ ಕೆ.ಎಚ್.ಮುನಿಯಪ್ಪ ಹೇಳಿದರು.

ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದ ಅವರು, 'ಸಂಪುಟ ಸಭೆಯಲ್ಲಿ ಮುಖ್ಯಮಂತ್ರಿ ಎಲ್ಲರಿಗೂ ಆಯೋಗದ ವರದಿಯನ್ನು ನೀಡಿದ್ದಾರೆ. ಅದನ್ನು ಅಧ್ಯಯನ ಮಾಡಿ ಇದೇ 16ರಂದು ನಡೆಯಲಿರುವ ವಿಶೇಷ ಸಂಪುಟ ಸಭೆಗೆ ಹೋಗುತ್ತೇವೆ. ಏನೇ ಗೊಂದಲಗಳಿದ್ದರೂ ಕುಳಿತು ಬಗೆಹರಿಸಿಕೊಳ್ಳುತ್ತೇವೆ. ಒಟ್ಟಾಗಿ ತೀರ್ಮಾನ ಮಾಡುತ್ತೇವೆ' ಎಂದರು.

'ಜಾತಿ ಪಟ್ಟಿಯಲ್ಲಿರುವ ಯಾರನ್ನೂ ಕೈಬಿಡುವಂತೆ ಇಲ್ಲ. ಸುಪ್ರೀಂ ಕೋರ್ಟ್ ತೀರ್ಪಿನಂತೆ ಹಿಂದುಳಿದಿರುವಿಕೆಯ ಆಧಾರದಲ್ಲಿ ಮೀಸಲಾತಿ ಆಗಬೇಕು' ಎಂದೂ ಹೇಳಿದರು.

ಪಾಲು ಹೆಚ್ಚಳಕ್ಕೆ ಬಲಗೈ ಒತ್ತಡ

ಒಂದನೇ ಪುಟದಿಂದ...

ಆದರೆ, ಆಯೋಗದ ಈ ಸಮರ್ಥನೆಯನ್ನು ಒಪ್ಪಲು ನಿರಾಕರಿಸಿರುವ ಪ್ರವರ್ಗ 'ಸಿ'ಯಲ್ಲಿರುವ ಬಲಗೈ (ಹೊಲೆಯ, ಛಲವಾದಿ ಸಂಬಂಧಿತ) ಸಮುದಾಯಗಳು, ಬಲಗೈ ಜಾತಿಯ 'ಸಾಮ್ಯತೆ'ಗಳನ್ನು ಹೊಂದಿರುವ ಮೂಲ ಜಾತಿಗಳನ್ನು ಮತ್ತು ಮೂಲ ಜಾತಿ ನಮೂದಿಸದ ಆದಿ ಕರ್ನಾಟಕ, ಆದಿ ದ್ರಾವಿಡ, ಆದಿ ಆಂಧ್ರ ಎಂದು ಪ್ರವರ್ಗ 'ಇ'ಯಲ್ಲಿ ಪಟ್ಟಿ ಮಾಡಿರುವ ಮೂರು ಜಾತಿಗಳನ್ನು ಪ್ರವರ್ಗ 'ಸಿ' ಅಡಿಗೆ ತರಬೇಕು ಎಂಬ ವಾದ ಮುಂದಿಟ್ಟಿವೆ. ಆ ಮೂಲಕ, ಪ್ರವರ್ಗ 'ಸಿ'ಯಲ್ಲಿರುವ ಜಾತಿಗಳ ಸಂಖ್ಯೆ ಮತ್ತು ಜನಸಂಖ್ಯೆಯು ಹೆಚ್ಚಳಗೊಳ್ಳಲಿದೆ. ಅದಕ್ಕೆ ಅನುಗುಣವಾಗಿ ಮೀಸಲಾತಿ ಪ್ರಮಾಣವೂ ಹೆಚ್ಚಳ ಆಗಬೇಕು ಎಂದು ಪ್ರತಿಪಾದಿಸಲು ಮುಂದಾಗಿವೆ.

'ಮೀಸಲಾತಿಯ ಸವಲತ್ತುಗಳು ತಲುಪದ ಜಾತಿಗಳನ್ನು ಪಟ್ಟಿ ಮಾಡಿರುವ ಆಯೋಗವು ಆ 59 ಜಾತಿಗಳನ್ನು ಪ್ರವರ್ಗ 'ಎ'ಯಲ್ಲಿ ಪಟ್ಟಿ ಮಾಡಿ ಶೇ 1 ಮೀಸಲಾತಿ ಹಂಚಿಕೆ ಮಾಡಿದೆ. ಆದರೆ, ಈ ಪಟ್ಟಿಯಲ್ಲಿರುವ 16 ಜಾತಿಗಳು (ಒಟ್ಟು ಜನಸಂಖ್ಯೆ 1,38,653) ಮತ್ತು ಪ್ರವರ್ಗ 'ಬಿ'ಯಲ್ಲಿರುವ (ಎಡಗೈ ಸಂಬಂಧಿತ) ಒಟ್ಟು 18 ಜಾತಿಗಳ ಪೈಕಿ ನಾಲ್ಕು ಜಾತಿಗಳು (ಒಟ್ಟು 2,58,915) ಬಲಗೈ (ಹೊಲೆಯ, ಛಲವಾದಿ) ಸಂಬಂಧಿತ ಜಾತಿಗಳ ಪಟ್ಟಿಯಲ್ಲಿ (ಪ್ರವರ್ಗ 'ಸಿ') ಸೇರಬೇಕು' ಎನ್ನುತ್ತಾರೆ ಛಲವಾದಿ ಮಹಾಸಭಾದ ಡಿ.ಚಂದ್ರಶೇಖರಯ್ಯ.

'ಅಲ್ಲದೆ, ಪ್ರವರ್ಗ 'ಇ'ಯಲ್ಲಿ ಆಯೋಗವು ಆದಿ ಕರ್ನಾಟಕ, ಆದಿ ದ್ರಾವಿಡ, ಆದಿ ಕರ್ನಾಟಕ ಎಂಬ ಮೂರು ಜಾತಿಗಳ (ಒಟ್ಟು ಜನಸಂಖ್ಯೆ 4,74,954) ಗುಂಪನ್ನು ಪಟ್ಟಿ ಮಾಡಿದೆ. ಆದರೆ, ಈ ಮೂರೂ ಜಾತಿಗಳ ಗುಂಪಿನಲ್ಲಿ ಬರುವ ಎಲ್ಲರೂ ಹೊಲೆಯ, ಛಲವಾದಿ ಸೇರಿದಂತೆ ಬಲಗೈ ಸಂಬಂಧಿತ ಜಾತಿಯವರು. ಹೀಗೆ, ಬಲಗೈ ಸಂಬಂಧಿತ ಜಾತಿಗಳನ್ನು ಸೇರಿಸಿದರೆ 8,72,522 ಜನಸಂಖ್ಯೆ ಆಗಲಿದೆ. ಆಯೋಗವು ತನ್ನ ವರದಿಯಲ್ಲಿ ಪ್ರವರ್ಗ 'ಸಿ'ಯಲ್ಲಿ (ಬಲಗೈ) ಈಗಾಗಲೇ 17 ಜಾತಿಗಳನ್ನು (ಒಟ್ಟು ಜನಸಂಖ್ಯೆ 30,08,633) ಪಟ್ಟಿ ಮಾಡಿದೆ. ಈ ಪ್ರವರ್ಗಕ್ಕೆ ಇತರ ಗುಂಪುಗಳಲ್ಲಿರುವ ಬಲಗೈ ಸಂಬಂಧಿತ ಜಾತಿಗಳ ಜನಸಂಖ್ಯೆಯನ್ನೂ ಸೇರಿಸಿದರೆ ಒಟ್ಟು 38,81,155 ಆಗಲಿದೆ. ಅಲ್ಲದೆ, ಸಮೀಕ್ಷೆಯ ವೇಳೆ ನಾನಾ ಕಾರಣಗಳಿಗೆ ಸುಮಾರು 8 ಲಕ್ಷ ಮಕ್ಕಳು ಗಣತಿಯಲ್ಲಿ ಸೇರಿಲ್ಲ' ಎಂದೂ ಅವರು ವಿವರಿಸಿದರು.

ಬಲಗೈ ಸಮುದಾಯದ ಜಾತಿ ಲೆಕ್ಕಾಚಾರ

ಜಾತಿ	ಜನಸಂಖ್ಯೆ
ಪ್ರವರ್ಗ 'ಎ'	
ಅಡಿಯ (ಕೊಡಗು ಜಿಲ್ಲೆ)	8,837
ಬೈರ	4,815
ಬಕಡ್	992
ಬಾಂಡಿ	642
ಬ್ಯಾಗರ	854
ಚೆನ್ನದಾಸರ, ಹೊಲೆಯ ದಾಸರ	79,625
ಹಲ್ಲೀರ್	6,099
ಹೊಲರ್, ವಲ್ಹರ್	11,248
ಹೊಲೆಯ ದಾಸರಿ	3,063
ಮೈಲ	2,008
ಮಸ್ತಿ	33
ಮೇಘವಾಲ್, ಮೆಂಗ್ವರ್	193
ಮುಕರಿ	10,234
ನದಿಯ, ಹಾಡಿ	475
ಪರವನ್	6,630
ಒಟ್ಟು	1,38,653
ಪ್ರವರ್ಗ 'ಬಿ'	
ಹಲ್ಸರ್, ಹಸ್ಲರ್, ಹುಲಸ್ವಾರ್, ಹಲಸ್ವರ	9,924
ಹಸಲ	710
ಮೊಗೇರ್	87,117
ಪರೈಯನ್, ಪರಾಯ	1,61,164
ಒಟ್ಟು	2,58,915
ಪ್ರವರ್ಗ 'ಇ'	
ಆದಿ ಆಂಧ್ರ	7,114
ಆದಿ ದ್ರಾವಿಡ	3,20,641
ಆದಿ ಕರ್ನಾಟಕ	1,47,199
ಒಟ್ಟು	4,74,954
ಪ್ರವರ್ಗ 'ಸಿ' (ಬಲಗೈ ಸಂಬಂಧಿತ ಜಾತಿಗಳು)	30,08,633
ಒಟ್ಟು ('ಎ', 'ಬಿ', 'ಇ' ಮತ್ತು 'ಸಿ')	38,81,155



ವಿಶ್ವದಾಖಲೆಯ ಸಂಭ್ರಮದಲ್ಲಿ ರೆಮೋನ

170 ಗಂಟೆ ನಿರಂತರ ಭರತನಾಟ್ಯ ರೆಮೋನ ಬರೆದ ದಾಖಲೆ

• ಕೋಡಿಬೆಟ್ಟು ರಾಜಲಕ್ಷ್ಮಿ

ಇದು ಅಮ್ಮ ಮಗಳಿಬ್ಬರ ಕನಸೊಂದು ಸಾಕಾರಗೊಂಡ ಕಥೆ. ನೃತ್ಯವನ್ನು ಅದಮ್ಯವಾಗಿ ಪ್ರೀತಿಸುವ ಅಮ್ಮನಿಗೆ ನೃತ್ಯ ಕಲಿಯುವ ಅವಕಾಶ ಒದಗಿಬರಲೇ ಇಲ್ಲ. ಆದರೇನಂತೆ ಮಗಳು ಚಿಕ್ಕಂದಿನಲ್ಲಿ ಹಾಡಿಗೆ ಹೆಜ್ಜೆ ಹಾಕುತ್ತ ಸಂತೋಷ ಪಡುವುದನ್ನು ಗುರುತಿಸಿ, ಆಕೆಯನ್ನು ನೃತ್ಯಕಲಾವಿದೆಯನ್ನಾಗಿ ಮಾಡುವ ಕನಸು ಕಂಡರು. ಆ ಕನಸಿನ ಸಂತೃಪ್ತಿಯ ಕ್ಷಣಗಳು ಇತ್ತೀಚೆಗೆ ಮಂಗಳೂರಿನ ಸೇಂಟ್ ಅಲೋಷಿಯಸ್ ಕಾಲೇಜಿನ ಸಭಾಂಗಣದಲ್ಲಿ ಸಾಕಾರಗೊಂಡವು. ರೆಮೋನ ಇವೆಟ್ ಪಿರೇರಾ ಜಗತ್ತಿನಲ್ಲಿಯೇ 170 ಗಂಟೆಗಳು ಸುದೀರ್ಘವಾಗಿ ನಿರಂತರ ನೃತ್ಯ ಪ್ರದರ್ಶನ ನೀಡಿದ ಪ್ರಥಮ ನೃತ್ಯಕಲಾವಿದೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದಾರೆ. ಮಗಳ ಈ ಸಾಧನೆಗೆ ಆಧಾರವಾಗಿ ನಿಂತವರು ಅಮ್ಮ ಗ್ಲಾಡಿಸ್ ಪಿರೇರಾ.

ಚಿತ್ರ: ಫಕ್ರುದ್ದೀನ್ ಎಚ್

ಕಲಾವಿದೆ ರೆಮೋನ ಪದವಿ ವಿದ್ಯಾರ್ಥಿನಿ. ಆದರೆ ಭರತನಾಟ್ಯವೆಂದರೆ ರಾತ್ರಿ ಹಗಲೆನ್ನದೆ ಹೆಜ್ಜೆ ಹಾಕುವ ಅವರು 'ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್'ನಲ್ಲಿ ತಮ್ಮ ಹೆಸರು ಸೇರಬೇಕು ಎಂದು ಪಣತೊಟ್ಟಿದ್ದು ಇತ್ತೀಚೆಗೆ. ದಾಖಲೆಗೆ ಸಂಬಂಧಿಸಿದಂತೆ ಅರ್ಜಿ ಸಲ್ಲಿಸಿ, ಅವಕಾಶ ದೊರೆತಾಗಲೇ ಅಮ್ಮ ಮಗಳಿಬ್ಬರೂ ಖುಷಿಯಾಗಿದ್ದರು. ಆದರೆ ಮೂರೇ ತಿಂಗಳ ಅವಧಿಯಲ್ಲಿ ಈ ನಿರಂತರ ನೃತ್ಯಕ್ಕೆ ಶಕ್ತಿ ಸಂಚಯನ ಮಾಡುವುದು ಹೇಗೆ ಎಂದು ಸ್ವಲ್ಪ ಚಿಂತೆಯಾಗಿದ್ದು ಹೌದು. ಆದರೂ ದೊರೆತ ಅವಕಾಶವನ್ನು ಕೈಬಿಡದೇ ಪ್ರಯತ್ನಿಸಿಯೇ ತೀರುವುದೆಂದು ರೆಮೋನ ನೃತ್ಯಕ್ಕೆ ಸಿದ್ಧತೆಗಳನ್ನು ಮಾಡಿಕೊಂಡರು. ಅವರು ಪದವಿ ಓದುತ್ತಿರುವ ಸೇಂಟ್ ಅಲೋಷಿಯಸ್ ಕಾಲೇಜಿನ ಪ್ರಾಂಶುಪಾಲರು ಮತ್ತು ಉಪನ್ಯಾಸಕ ವರ್ಗದವರು ರೆಮೋನ ಅವರ ಈ ಹೊಸ ಪ್ರಯತ್ನಕ್ಕೆ ಬೆಂಬಲವಾಗಿ ನಿಂತರು. ತಮ್ಮದೇ ಕಾಲೇಜಿನ ಸಭಾಂಗಣದಲ್ಲಿ ಈ ವಿಶ್ವ ದಾಖಲೆಯ ಪ್ರದರ್ಶನ ನೀಡಲು ಅವಕಾಶವನ್ನೂ ಮಾಡಿಕೊಟ್ಟರು.

ಜುಲೈ 21ರಂದು ಬೆಳಿಗ್ಗೆ ಸಭಾಂಗಣದಲ್ಲಿ ನೃತ್ಯ ಆರಂಭ ಮಾಡಿದ ರೆಮೋನ, ಜುಲೈ 28ರ ಮಧ್ಯಾಹ್ನದ ಹೊತ್ತಿಗೆ ಮಂಗಳ ಹಾಡಿದರು. ಎಂಟು ದಿನಗಳು ಸೇಂಟ್ ಅಲೋಷಿಯಸ್ ಕಾಲೇಜಿನಲ್ಲಿ ಸಂಭ್ರಮದ ವಾತಾವರಣ. ರೆಮೋನ ನೃತ್ಯ ಪ್ರದರ್ಶನ ನೀಡುತ್ತಿದ್ದ ಸಭಾಂಗಣದಲ್ಲಿ ನೃತ್ಯಪ್ರಿಯರು, ಅಭಿಮಾನಿಗಳು, ಆಕೆಯ ಸಾಧನೆಯ ಹೆಜ್ಜೆಯನ್ನು ಪ್ರೋತ್ಸಾಹಿಸುವವರು ಸಾಲುಗಟ್ಟಿ ಬಂದು ಕುಳಿತು ಚಪ್ಪಾಳೆಯೊಂದಿಗೆ ಅಭಿನಂದಿಸಿದರು. ನಿರಂತರತೆ ಎನ್ನುವುದು ಸುಲಭವೇನಲ್ಲ. ಅವರು ಈ ಪ್ರದರ್ಶನಕ್ಕೆ ಬೇಕಾಗಿ ಪೂರಕವಾದ ಪುಷ್ಪಾಂಜಲಿ, ವರ್ಣಗಳು, ಅಭಿನಯ ಪ್ರಧಾನ ಕೃತಿಗಳು, ದಾಸರಪದಗಳು ಸೇರಿದಂತೆ ಹತ್ತಾರು ನೃತ್ಯಗಳನ್ನು ಪದಗತ ಮಾಡಿಕೊಂಡಿದ್ದರು. ಎಂಟು ದಿನಗಳು ಅಪಾರ ಸಾಧ್ಯತೆಯನ್ನು ಅನಾವರಣಗೊಳಿಸಿದರು. 'ನಾನು ಕ್ರಿಶ್ಚಿಯನ್ ಸಮುದಾಯದಲ್ಲಿ ಹುಟ್ಟಿದ್ದರೂ ಗುರುಗಳ ಮೂಲಕ ಮಹಾಕಾವ್ಯಗಳ ಕಥೆಗಳನ್ನು ತಿಳಿದುಕೊಂಡಿದ್ದೇನೆ. ಭರತನಾಟ್ಯವನ್ನು ಕಲಿಯುತ್ತ ಹೋದಷ್ಟೂ ಅದರ ಸಾಧ್ಯತೆಯ ವಿಸ್ತಾರವನ್ನು ಕಂಡು ನಿಜಕ್ಕೂ ವಿಸ್ಮಯಗೊಂಡಿದ್ದೇನೆ. ಎಂಟು ದಿನಗಳು ನಾನು ನಿರಂತರವಾಗಿ ನೃತ್ಯ ಮಾಡಬೇಕಾದರೆ ಈ ಕಲಾ ಪ್ರಕಾರವೂ ಸುಂದರವಾಗಿದೆ ಎಂಬರ್ಥವನ್ನು ಕೊಡುತ್ತದೆ ಅಲ್ಲವೇ' ಎನ್ನುತ್ತಾರೆ.

ತಾಯಿ ಗ್ಲಾಡಿಸ್ ಪಿರೇರಾ ಜೊತೆಗೆ ರೆಮೋನ

ಭರತನಾಟ್ಯ ಹೇಳಿಕೊಟ್ಟ ನೃತ್ಯ ಗುರುಗಳಾದ ಸುರೇಶ್ ಅತ್ತಾವರ್, ಉಮಾ ಕಲ್ಲೂರಾಯ, ಪ್ರಸ್ತುತ ನೃತ್ಯ ಗುರುಗಳಾಗಿರುವ ಶ್ರೀವಿದ್ಯಾ ಅವರು ನನ್ನ ಈ ಸಾಧನೆಗೆ ಪ್ರೇರಣೆಯಾಗಿದ್ದಾರೆ ಎಂದು ಹೇಳುವುದನ್ನು ರೆಮೋನ ಮರೆಯುವುದಿಲ್ಲ. ಈಗ ಅವರ ನೃತ್ಯ ಗುರು ಶ್ರೀವಿದ್ಯಾ ಅವರು ಭರತನಾಟ್ಯದಲ್ಲಿ ಪಿಎಚ್.ಡಿ ಮಾಡಿದವರು. 'ಅವರಂತೆಯೇ ನನಗೂ ಭರತನಾಟ್ಯದಲ್ಲಿ ಪಿಎಚ್.ಡಿ ಮಾಡಬೇಕು ಎಂಬ ಆಸೆಯಿದೆ' ಎಂದು ತಮ್ಮ ಕನಸನ್ನು ಹಂಚಿಕೊಂಡರು.

'ನಿರಂತರ ನೃತ್ಯವೆಂದರೆ ವಿಶ್ರಾಂತಿಯ ಅಗತ್ಯ ಕಾಣಲಿಲ್ಲವೇ?' ಎಂಬ ಪ್ರಶ್ನೆಗೆ ರೆಮೋನ ನಗುತ್ತಾರೆ, 'ಮೊದಲನೆಯದ್ದಾಗಿ ಈ ದಾಖಲೆಯನ್ನು ಮಾಡಬೇಕು ಎಂಬ ತುಡಿತವೇ ನನ್ನ ನಿದ್ದೆಯನ್ನು ಕಿತ್ತುಕೊಂಡಿತು. ಈ ನಿರಂತರ ದಾಖಲೆಯನ್ನು ಮಾಡುವ ಸಂದರ್ಭದಲ್ಲಿರುವ ನಿಯಮಗಳ ಪ್ರಕಾರ, ಮೂರು ಗಂಟೆ ನೃತ್ಯ ಮಾಡಿದ ಬಳಿಕ 15 ನಿಮಿಷಗಳ ವಿರಾಮಕ್ಕೆ ಅವಕಾಶವಿದೆ. ಈ ವಿರಾಮದಲ್ಲಿ ನಾನು ನನ್ನ ವೈಯಕ್ತಿಕ ಕೆಲಸಗಳನ್ನು ಮಾಡಿಕೊಳ್ಳಬೇಕು. ಈ ಬಿಡುವೇ ವಿಶ್ರಾಂತಿಯೂ ಹೌದು' ಎಂದು ನಕ್ಕರು.

170 ಗಂಟೆಗಳು ನಿರಂತರ ನೃತ್ಯ ಮಾಡಿದ ಬಳಿಕವೂ ರೆಮೋನ, ಲವಲವಿಕೆಯಿಂದ ಉತ್ಸಾಹದಿಂದಲೇ ಇದ್ದಳು. ಇದೊಂದು ಅಪೂರ್ವ ಸಾಧನೆಯೇ ಹೌದು. ಆಕೆಯ ಇಚ್ಛಾಶಕ್ತಿಯೇ ಈ ಸಾಧನೆಗೆ ಆಧಾರ' ಎಂದು 'ಗೋಲ್ಡನ್ ಬುಕ್ ಆಫ್ ರೆಕಾರ್ಡ್ಸ್'ನ ಭಾರತೀಯ ಪ್ರತಿನಿಧಿ ಮನಿಷ್ ವಿಷ್ಣೋಯಿ ಮೆಚ್ಚುಗೆ ವ್ಯಕ್ತಪಡಿಸಿದರು.

ರೆಮೋನ ಅವರ ನೃತ್ಯ ಜೀವನದ ಅನುಭವಗಳು ವಿಭಿನ್ನವಾಗಿವೆ. ದೇಶದ ವಿವಿಧೆಡೆ ಹಲವಾರು ನಾಟ್ಯೋತ್ಸವಗಳಲ್ಲಿ ನೃತ್ಯ ಪ್ರದರ್ಶನ ನೀಡಿರುವ ಅವರು, ಭರತನಾಟ್ಯದ ಜೊತೆಗೆ ಇತರ ನೃತ್ಯ ಪ್ರಕಾರಗಳನ್ನೂ ಪ್ರದರ್ಶಿಸಿದ್ದಾರೆ. 'ಸಿನಿಮಾ, ಜನಪದ, ನೃತ್ಯನಾಟಕಗಳನ್ನು ಪ್ರಸ್ತುತಪಡಿಸಿದ್ದಾರೆ. ವೇದಿಕೆಯ ಮೇಲೆ ಮಡಿಕೆಯನ್ನಿಟ್ಟು ಅದರ ಮೇಲೆ ನೃತ್ಯ ಮಾಡುವುದಾಗಲೀ, ಎರಡೂ ಕೈಗಳಲ್ಲಿ ಬೆಂಕಿಯ ಮಡಕೆಗಳನ್ನು ಹಿಡಿದುಕೊಂಡು ನರ್ತಿಸುವುದಾಗಲೀ... ಇನ್ನಾವುದೇ ವಸ್ತುಗಳನ್ನು ಬಳಸಿಕೊಂಡು ನೃತ್ಯ ಮಾಡುವ ಪ್ರಯೋಗವನ್ನು ಮೊದಲು ಅಮ್ಮ ಮಾಡುವುದು ವಾಡಿಕೆ. ಮಗಳ ನೃತ್ಯಕ್ಕೆ ವಸ್ತ್ರ ವಿನ್ಯಾಸ ಮಾಡುವವರು ಕೂಡ ಅಮ್ಮನೇ. ಪುತ್ತೂರು ಮೂಲದವರಾದ ಅಮ್ಮ ಗ್ಲಾಡಿಸ್ ಪಿರೇರಾ, ಮಗಳಿಗೋಸ್ಕರ ಮಂಗಳೂರು ನಗರದಲ್ಲಿದ್ದುಕೊಂಡು ಆಕೆಯ ಸಾಧನೆಗೆ ಬೆಂಬಲವಾಗಿ ನಿಂತಿದ್ದಾರೆ.

10ನೇ ಪುಟಕ್ಕೆ..

ಸವಣೂರಿನಲ್ಲಿರುವ ಆಫ್ರಿಕಾ ಮೂಲದ ಬ್ಯಾಬಬ್ ಮರ

ನಮ್ಮ ಕಾಡುಗಳು ವನವಾಸಿಗಳ ಕುಲ ಚಿಹ್ನೆ ಹಿನ್ನೆಲೆಯ ಸಸ್ಯ ನಂಬಿಕೆಗಳಿಂದ ಉಳಿದಿರುವುದು ಸತ್ಯ. ಇವು ಕೆಲವೊಮ್ಮೆ ಮೂಢನಂಬಿಕೆಗಳಂತೆ ಕಂಡರೂ ಕಾಡುಗಳ ಸಂರಕ್ಷಣೆಗೆ ದೊಡ್ಡ ಕೊಡುಗೆಯನ್ನೇ ನೀಡಿವೆ. ಇಂಥ ವನವಾಸಿ ಪರಂಪರೆಯ ವೃಕ್ಷ ನಂಬಿಕೆ ಆಧರಿಸಿ ಸಸ್ಯಾಭಿವೃದ್ಧಿಯ ಪರ್ಯಾಯ ದಾರಿಗಳು ಹಾಗೂ ಈಗ ನಾವೇನು ಮಾಡಲು ಸಾಧ್ಯ? ಎನ್ನುವ ಕುರಿತು ಲೇಖಕರು ಚರ್ಚಿಸಿದ್ದಾರೆ.

'ಮರ ಬಳಿ'ಯ ಮರು ನೆನಪುಗಳು

• ಶಿವಾನಂದ ಕಳವೆ

ಕಾಡು ಮರಗಳ ಸುತ್ತ ನಮ್ಮದೇ ನಂಬಿಕೆಯ ಆಪ್ತ ಬೇರುಗಳಿವೆ, ಸೋಜಿಗದ ಕಥನಗಳಿವೆ. ಆದರೆ ನಮ್ಮ ಅರಣ್ಯ ನೀತಿಗಳು ತೇಗ, ವಾಣಿಜ್ಯ ನೆಡುತೋಪಿನ ಅಬ್ಬರದಲ್ಲಿ ಶತಮಾನಗಳಿಂದಲೂ ದೇಸಿತನ ಮರೆತಿವೆ.

ವನವಾಸಿ ಸೋಲಿಗರ ಒಂದು ಕುಲಕ್ಕೆ 'ಹೊಂಗೆಲರ ಕುಲ' ಎಂಬ ಹೆಸರಿದೆ. ಸಿದ್ಧೇಶ್ವರ ಕುಲ ದೇವರಾದ ಇವರೊಮ್ಮೆ ಕಲ್ಲು ಬಂಡೆ ಸನಿಹದಲ್ಲಿದ್ದ ಹೊಂಗೆಯ ಮರ ಕಡಿದರಂತೆ, ಅಷ್ಟರಲ್ಲಿ ಮರದಲ್ಲಿ ದೇವತೆಯಿರುವುದು ತಿಳಿಯಿತು. ತಮ್ಮಿಂದಾದ ಅಪರಾಧ ಗಮನಿಸಿ ಪ್ರಾಯಶ್ಚಿತವಾಗಿ ಮುಂದೆಂದೂ ಹೊಂಗೆಯ ಮರ ಕಡಿಯಬಾರದು, ಸುಡಬಾರದೆಂಬ ಸ್ವಯಂ ನಿರ್ಧಾರ ಮಾಡುತ್ತಾರೆ. ಇವರನ್ನು ಹೊಂಗೆಲರ ಕುಲವೆಂದು ಗುರುತಿಸಲಾಗುತ್ತದೆ.

ಇನ್ನೊಂದು ಪ್ರಸಂಗ ಕುಮರಿ ಮರಾಠಿಗರ ನಂಬಿಕೆಯಲ್ಲಿದೆ. ಇವರು ಬೇಟೆಗೆ ಹೋಗಿದ್ದರು. ಕಾಟಿ (ಕಾಡೆಮ್ಮೆ)ಯೊಂದು ಒಬ್ಬರನ್ನು ಕೋಡಿನಿಂದ ತಿವಿದು ಸಾಯಿಸಿತು. ಘಟನೆ ಬಳಿಕ ಹಿರಿಯರ ಸಮ್ಮುಖದಲ್ಲಿ ಜನಾಂಗದ ಸಭೆ ನಡೆಯಿತು. ಜೀವನ ಪರ್ಯಂತ ಕಾಡಿನಲ್ಲಿರುವ ನಮ್ಮವರು ಕಾಡೆಮ್ಮೆ ತಿವಿತದಿಂದ ಸಾಯುವುದು ಅವಮಾನವಲ್ಲವೇ? ಮರವೇರಿ ತಪ್ಪಿಸಿಕೊಳ್ಳಬೇಕಿತ್ತೆಂಬ ಚರ್ಚೆ ನಡೆಯಿತು. ಆದರೆ ಆ ಬೇಟೆಗಾರ ಅಲ್ಲೇ ಇದ್ದ ಕೌಲು ಮರ ಏರಿದ್ದನು, ಆದರೆ ಪುನಃ ಮರವೇ ನೆಲಕ್ಕೆ ಬಾಗಿದ್ದರಿಂದ ಕಾಡೆಮ್ಮೆಯ ದಾಳಿಗೆ ಸಿಲುಕುವಂತಾಯಿತೆಂಬ ವಿವರ ದೊರೆಯಿತು. ಭೂಮಿಗೆ ಕೌಲು ಮರವನ್ನು ತಂದಿದ್ದು ಕಾಡೆಮ್ಮೆಗಳೆಂಬ ನಂಬಿಕೆಯಿದೆ. ಭೂಮಿಗೆ ತಂದ ಪ್ರಾಣಿಗೆ ನೆರವಾಗುವುದು ಮುಖ್ಯವೆಂದು ಕೌಲು ಮರವು ನೆಲಕ್ಕೆ ಬಾಗಿದ್ದರಿಂದ ಬೇಟೆಗಾರ ಸಾಯಬೇಕಾಯಿತೆಂದು ಹಿರಿಯರು ಗುರುತಿಸಿದರು. ನಂತರ ಕುಮರಿ ಮರಾಠಿಗರು ಕೌಲು ಮರ ಏರಬಾರದು, ಕಡಿಯಬಾರದೆಂದು ತೀರ್ಮಾನಿಸಿದರು. ವನವಾಸಿ ನಂಬಿಕೆಗಳೆಲ್ಲ ಮರದ ಬುಡದಲ್ಲಿ ಜ್ಞಾನೋದಯವಾಗುವಂತೆ ಶತಶತಮಾನಗಳ ಕಾಡು ಒಡನಾಟದಲ್ಲಿ ಮೂಡಿವೆ.

ಸಾವಿರದ ಸಸ್ಯ ನಂಬಿಕೆಗಳು

ನಮ್ಮದು ಇಂಥ ಬಳಿ, ಇಂಥ ಕುಲವೆಂದು ಗುರುತಿಸಿಕೊಳ್ಳುತ್ತೇವೆ. ದೊಡ್ಡ ದೊಡ್ಡ ಕುಟುಂಬಗಳನ್ನು ಪರಿಚಯಿಸುವಾಗ ಇವರ ಬಳಿ ಬಹಳ ದೊಡ್ಡದೆನ್ನುತ್ತೇವೆ. ಆಲದ ಮನೆ ರಾಮೇಗೌಡ, ಅಪ್ಪೆ ರಾಮೈ ಹೆಗಡೆ, ಹಲಸಿನಹಳ್ಳಿ ಮನೆತನ, ಮತ್ತಿಕೊಪ್ಪದ ಗೌಡರು, ಲಕ್ಕಿಜಡ್ಡಿಯ ಸಾಹುಕಾರರು, ಹೊನ್ನೆ ಹಕ್ಲು ಶೆಟ್ಟರು...ಹೀಗೆ ಸಸ್ಯಗಳ ಮೂಲಕ ಗುರುತಿಸಿಕೊಂಡ ಹಳ್ಳಿ, ಮನೆತನಗಳು ಸಿಗುತ್ತವೆ. ಬುಡಕಟ್ಟು ಜನಾಂಗಗಳು ಕುಲಚಿಹ್ನೆಯನ್ನು ಸಸ್ಯ, ಪ್ರಾಣಿಗಳಿಂದ ಗುರುತಿಸುವರು. ಕುಲದ ಚಿಹ್ನೆಯಾದ ಸಸ್ಯ/ಪ್ರಾಣಿ ಸಂರಕ್ಷಿಸುವುದು ತಮ್ಮ ಜನಾಂಗದ ಕರ್ತವ್ಯವೆಂಬ ಭಾವನೆಯಿದೆ. ಹಾಲಕ್ಕಿ, ಮುಕ್ರಿ, ನಾಮಧಾರಿ, ನಾಡವ, ಕರೆವೊಕ್ಕಲಿಗ, ಲಮಾಣಿ, ಗೌಳಿ, ಸಿದ್ಧಿ, ಹಸಲರ... ಹೀಗೆ ನಾಡಿನ ನೂರಾರು ಜನಾಂಗಗಳ ಮರ ನಂಬಿಕೆಯಲ್ಲಿ ಹಲವು ಸಸ್ಯ ಬಳಿಗಳಿವೆ. ಮಲ್ಲಿಗೆ ಬಳಿ, ಕಾಯಿ(ತೆಂಗು)ಬಳಿ, ಹೂಲಿ ಬಳಿ, ಕೆಂದಗಿ ಬಳಿ, ಸೀಗೆ ಬಳಿ, ಹೊನ್ನೆ ಬಳಿ, ಕೊಡಸಿಗ ಬಳಿ, ಬೆತ್ತದ ಬಳಿ... ಹೀಗೆ ಸಸ್ಯ ಕುಲ ಚಿಹ್ನೆಗಳಾಗಿವೆ.

ಬನವಾಸಿಯನ್ನು ರಾಜಧಾನಿಯಾಗಿಸಿದ ಮೊಟ್ಟ ಮೊದಲ ಕನ್ನಡ ರಾಜವಂಶ ಕದಂಬರು. 'ಕದಂಬ ವೃಕ್ಷ' ಕಾರಣದಿಂದ ಅರಸುಕುಲ ಚಿರಪರಿಚಿತವಾಗಿದೆ. ಎಕ್ಕೆಯ ಗಿಡವನ್ನು ರಾಣೆಬೆನ್ನೂರಿನ ಕೆಲವು ಪ್ರದೇಶಗಳಲ್ಲಿ 'ಗುಡ್ಡದಯ್ಯನ ಬಿಲ್ಲು' ಎಂದು ಪವಿತ್ರ ಭಾವನೆಯಿಂದ ನೋಡುವರು. ಕಡಿಯುವುದಿಲ್ಲ, ಕೀಳುವುದಿಲ್ಲ. ಈಶ್ವರನ ಅರ್ಚನೆಗೆ ಬಳಸುವ ಬಿಲ್ವಪತ್ರೆ ಮರ ಯಾರೂ ಕಡಿಯುವುದಿಲ್ಲ, ಹಲವು ಕಡೆ ಬಿಲ್ವವನಗಳು ಸುರಕ್ಷಿತವಾಗಿವೆ. ಪೂಜಾರ್ಹ ವೃಕ್ಷ ಬನ್ನಿಯಲ್ಲಿ ಪಾಂಡವರು ಅಜ್ಞಾತವಾಸಕ್ಕೆ ಕಾಡಿಗೆ ಹೋಗುವಾಗ ಆಯುಧಗಳನ್ನು ಇಟ್ಟರಂತೆ.... 'ಕಲ್ಲು ಕಡಬು ಮಾಡಿ, ಮುಳ್ಳ ಶಾವಿಗೆ ಮಾಡಿ, ಬನ್ನಿಯ ಎಲೆಯಾಗ ಎಡೆಮಾಡಿ ಪಾಂಡವರು ಉಂಡು ಹೋಗ್ಯಾರೋ ವನವಾಸೋ' ಜನಪದರು ಹಾಡಿದ್ದಾರೆ. ಬನ್ನಿ ಮರ ಯಾರೂ ಕಡಿಯುವುದಿಲ್ಲ. ಪುರಾತನ ಗ್ರಂಥಗಳಲ್ಲಿ 27 ನಕ್ಷತ್ರಗಳಿಗೊಂದು ವೃಕ್ಷವಿದೆ. ಅಶ್ವಿನಿ ನಕ್ಷತ್ರಕ್ಕೆ ಕಾಸರಕ, ಭರಣಿಗೆ ನೆಲ್ಲಿ, ಕೃತಿಕಾ ಅತ್ತಿ, ರೋಹಿಣಿ ನೇರಳೆ, ಮೃಗಶಿರಾಕ್ಕೆ ಖೈರ, ಆದ್ರಾಕ್ಕೆ ಶಿವಣೆ ಮುಂತಾದ ವೃಕ್ಷಗಳಿವೆ. ಮನುಷ್ಯ ಭೂಮಿಗೆ ಬರುವುದಕ್ಕಿಂತ ಮೂರು ಯುಗಗಳ ಮುಂಚೆ ದೇವರು ಸಸ್ಯಗಳನ್ನು ಬೆಳೆಸಿದನೆಂಬ ಮಾತಿದೆ. ಒಮ್ಮೆ ದೇವತೆಗಳ ಮಕ್ಕಳು ದೇವಲೋಕದಲ್ಲಿ ಆಟವಾಡುವಾಗ ಬೆಳದಿಂಗಳು ಚೆಲ್ಲಿದ ವಿಶಾಲ ಭೂಮಿ ನೋಡಿದರು. ಮಕ್ಕಳಿಗೆ ಈ ದೊಡ್ಡ ಬಯಲಿನಲ್ಲಿ ಆಟವಾಡುವ ಆಸೆಯಾಯಿತು. 'ನಾವು ಬಯಲು ಭೂಮಿಗೆ ಹೋಗಿ ಆಟವಾಡಿ ಬರಬಹುದೇ?' ದೇವಾನುದೇವತೆಗಳಲ್ಲಿ ಕೇಳಿದರು. 'ಮಕ್ಕಳೇ, ನೀವು ಬೆಳದಿಂಗಳಲ್ಲಿ ಆಟವಾಡಲು ಭೂಮಿಗೆ ಹೋಗಬಹುದು, ಆದರೆ ಬೆಳಗಾಗುವ ಮುಂಚೆ ದೇವಲೋಕಕ್ಕೆ ಮರಳಿ ಬರಬೇಕು' ಎಂದು ದೇವತೆಗಳು ಸೂಚಿಸಿದರು. ಹಿರಿಯರ ಸಮ್ಮತಿ ಪಡೆದು ಭೂಮಿಗೆ ಬೆಳದಿಂಗಳಲ್ಲಿ ಆಡಲು ಬಂದ ಮಕ್ಕಳು ಆಟದಲ್ಲಿ ಮೈಮರೆತರು, ಅಷ್ಟರಲ್ಲಿ ಬೆಳಗಾಯಿತು! ಅಂದು ಆಡಲು ಭೂಮಿಗೆ ಬಂದ ದೇವತೆಗಳ ಮಕ್ಕಳೆಲ್ಲ ಭೂಮಿಯ ಮರಗಳಾದವಂತೆ! ಕಾಡು ಓದು ಪುರಾಣಗಳ ಜೊತೆಗಿದೆ.

ದಕ್ಷಿಣಾ ಪಥದಲ್ಲಿ ನೀರಿಗೆ ಕೊರತೆಯಾದಾಗ ಅಗಸ್ತ್ಯರು ಜಲರೂಪದಲ್ಲಿ ಲೋಪಾಮುದ್ರೆಯನ್ನು ಕಮಂಡಲಿನಲ್ಲಿ ತುಂಬಿಕೊಂಡು ಸಹ್ಯಾದ್ರಿಯ ಪರ್ವತಕ್ಕೆ ತಂದರು. ಬ್ರಹ್ಮಗಿರಿಯಲ್ಲಿ ವಿಷ್ಣು ಆಮಲಕ (ನೆಲ್ಲಿ) ವೃಕ್ಷದ ರೂಪದಲ್ಲಿದ್ದುದು ಗಮನಿಸಿ ವಿಷ್ಣುವಿನ ಸನಿಹವಿಟ್ಟರು. ಕೈಲಾಸದಿಂದ ತಂದ ಅಗಸ್ತ್ಯರ ಕಮಂಡಲದ ಲೋಪಾಮುದ್ರೆ ನೆಲಕ್ಕುರುಳಿತು. ಇದೇ ಪವಿತ್ರ ತಲಕಾವೇರಿಯಾಯಿತು. ನದಿ ನಂಬಿದವರಿಗೆ ನೆಲ್ಲಿ ಅಕ್ಕರೆಯ ವೃಕ್ಷವಾಗಬಹುದು. ವಿಶಾಲ ಆಲದಮರದ ಬೇರು ಸಾಕ್ಷಾತ್ ಶಿವನ ಜಟೆಯಂತೆ ಕಾಣುತ್ತದೆ. ಭಕ್ತಿ, ಮುಕ್ತಿ ಮಾರ್ಗಕ್ಕೆ ಆಲದಮರ ಸಾಕ್ಷಾತ್ ಶಿವನಿದ್ದಂತೆಯೆಂಬ ನಂಬಿಕೆಯಿದೆ. ಅರಳಿ, ಔದುಂಬರ ವೃಕ್ಷಗಳಡಿ ಸಾಧು ಸಂತರು ತಪಸ್ಸನ್ನಾಚರಿಸಿ ಜ್ಞಾನೋದಯ ಪಡೆದ ಕಥೆಯಿದೆ. ಹಿಪ್ಪೆ, ಮತ್ತಿ ಮರ ಬೆಳೆಸಿದರೆ ಪ್ರಶಂಸೆ ಹೆಚ್ಚುತ್ತದೆ. ಕಗ್ಗಲಿ (ಖೈರ) ಮರ ಸ್ವರ್ಗ ನೀಡುತ್ತದೆ, ಮಾವು ಇಷ್ಟಾರ್ಥ ದಯಪಾಲಿಸುತ್ತದೆ, ಬಿಲ್ವ ದೀರ್ಘಾಯುಷ್ಯ, ನೇರಳೆ ಹೆಚ್ಚು ಸಂಪತ್ತು, ಬೂರಗ ಮರದಿಂದ ಕುಲಾಭಿವೃದ್ಧಿ, ನೀರಂಜಿ ಮರದಿಂದ ದೇಹ-ಬುದ್ಧಿಯ ಬಲ, ಅಶೋಕ ಸಸ್ಯ ಬೆಳೆಸಿದರೆ ಶೋಕನಾಶ, ಅಶ್ವಗಂಧ ಸಸ್ಯದಿಂದ ಮಾನಸಿಕ ಸಮಸ್ಯೆ ದೂರ, ಪಲಾಶ (ಮುತ್ತುಗ) ಮರದಿಂದ ಮನಸ್ಸು ಪ್ರಶಾಂತ... ಹೀಗೆ ನಮ್ಮ ಸುತ್ತಮುತ್ತಲ ಮರಗಳಲ್ಲಿ ನಂಬಿಕೆ ಕಟ್ಟಿಕೊಂಡು ಸಮಾಜ ಬೆಳೆದಿದೆ. ವಿಜ್ಞಾನ ಇಂಥ ನಂಬಿಕೆಗಳನ್ನು ಒಪ್ಪಬೇಕಿಲ್ಲ, ಆದರೆ ಭೂಮಿಯಲ್ಲಿ ಬೆಳೆದ ಯಾವುದೇ ಮರದ ಲಾಭ ಪರಿಸರಕ್ಕೆ ಇದ್ದೇ ಇದೆಯಲ್ಲವೇ? ಕ್ರಿ.ಶ. 1938-39ರಲ್ಲಿ ತಾಳಗುಪ್ಪ ರೈಲು ಮಾರ್ಗ ನಿರ್ಮಾಣ ಕಾಲಕ್ಕೆ ಮಾರ್ಗದಲ್ಲಿದ್ದ ತಾರೆ ಮರವನ್ನು ಕಡಿಯಬೇಕಿತ್ತು. ಈ ಶಾಂತಿ ಮರದಲ್ಲಿ ಶನಿದೇವರು ನೆಲೆಸಿದ್ದಾನೆಂಬ ಭಯದಿಂದ ಸ್ಥಳೀಯ ಕೂಲಿಗಳು ಹೆದರಿದರು, ಜನ ನಂಬಿಕೆಯಲ್ಲಿ ಕಡಿಯದ ಮರಗಳ ಪಟ್ಟಿಯಿದೆ.

ಚಿಕ್ಕಮಗಳೂರಿನ ಸಮೀಪದ ಮದಗ ಕೆರೆದಂಡೆಯಲ್ಲಿನ ವೃಕ್ಷಕ್ಕೆ ಪೂಜೆ

ಬೇರು ಮರೆತ ಅರಣ್ಯ ನೀತಿ !

ಗೊಂಡರು ಗೊಂಡ್ವಾನ ಭೂಮಿಯ ಮೊದಲಿಗರೆಂಬ ಮಾತಿದೆ. ಸುಮಾರು 200-300 ಮಿಲಿಯನ್ ವರ್ಷಗಳ ಹಿಂದೆ ಭೂಮಿ ಇಡಿಯಾಗಿ ಒಂದಾಗಿತ್ತು. ಗ್ರೀಕ್ ಭಾಷೆಯಲ್ಲಿ ಇದನ್ನು 'ಪ್ಯಾಂಜಿಯ' ಎನ್ನುವರು. ಸುಮಾರು 144 ಮಿಲಿಯನ್ ವರ್ಷಗಳ ಹಿಂದೆ ಎರಡು ಭಾಗಗಳಾಗಿ ವಿಂಗಡನೆಯಾಗಿ ಉತ್ತರದ ಟೆರೇಶಿಯಾ, ದಕ್ಷಿಣದ ಗೊಂಡ್ವಾನ ಭಾಗವಾಗಿ ದೂರ ಸರಿಯಲ್ಪಟ್ಟಿತು. ಇಲ್ಲಿನ ಗೊಂಡ್ವಾನ ಭೂಮಿ ಪುನಃ ಐದು ಖಂಡಗಳಾಗಿ ವಿಂಗಡನೆಯಾಯಿತು. ಏಷ್ಯಾ ಅಥವಾ ಜಂಬೂ ದ್ವೀಪ, ಆಫ್ರಿಕಾ, ಆಸ್ಟ್ರೇಲಿಯಾ, ದಕ್ಷಿಣ ಅಮೆರಿಕಾ, ಅಂಟಾರ್ಟಿಕವೆಂಬ ಖಂಡಗಳಾದವು. ಈ ಐದು ಖಂಡಗಳಲ್ಲಿ ದೊರೆಯುವ ಖನಿಜ, ಸಸ್ಯ, ಜೀವ ಸಂಪತ್ತುಗಳು ಪರಸ್ಪರ ಹೋಲಿಕೆಯಾಗುತ್ತಿರುವುದರಿಂದ ಇವನ್ನು 'ಗೊಂಡ್ವಾನ ಲ್ಯಾಂಡ್' ಸಿದ್ಧಾಂತವೆಂದರು. ರಾಜ್ಯದ ಹಿರಿಯ ಸಂಶೋಧಕರಾದ ಎಂ. ಆರ್. ಪಂಪನಗೌಡ, ಕೆ.ಎಂ. ಮೇತ್ರಿ ಗೊಂಡ್ವಾನ ಕುಲ, ಚಿಹ್ನೆಗಳ ಕುರಿತು ವಿಶೇಷ ಅಧ್ಯಯನ ಮಾಡಿದ್ದಾರೆ. ಲಾಳಗೊಂಡವೆಂಬ ಜನಾಂಗವು ಲಾಂಜಿಗಢದಿಂದ ಬಂದ ಗೊಂಡರ ನಾಲ್ಕು ದೇವತಾ ಗುಂಪುಗಳಾಗಿದ್ದು ಇವರನ್ನು ನೇತಾಮ್ ಎಂಬ ಗೋತ್ರದವರೆನ್ನುವರು. ತೇಗದ ಮರ, ಆಮೆ, ಕಾಡುಹಂದಿ, ನಾಯಿ ಇವರ ಗುಂಪುಗಳಿಗೆ ಕುಲಚಿಹ್ನೆಯಾಗಿವೆ. ಹುಲಿ ಬಳಿಯವರು ಹುಲಿ ಕೊಲ್ಲುವುದಿಲ್ಲ, ಹಾವಿನ ಬಳಿಯವರು ಹಾವಿಗೆ ತೊಂದರೆ ನೀಡುವುದಿಲ್ಲ. ಮತ್ತಿ, ಕೌಲು, ದೇವಣಿಗೆ, ತುಳಸಿ, ಬಿದಿರು... ಹೀಗೆ ಬಳಿ ವಿಂಗಡನಾ ಪರಂಪರೆಯಿದೆ, ನೆಲ ಮೂಲದ ವನವಾಸಿಗರು ಯಾವತ್ತೂ ಮರದ ಬಳಿಯೇ ಇದ್ದರೂ ಇವರ ಜ್ಞಾನಕ್ಕೆ ಸರ್ಕಾರಿ ಅರಣ್ಯ ನೀತಿಗಳಲ್ಲಿ ಆದ್ಯತೆಯಿಲ್ಲ. ಅಪ್ಪಟ ಬರದ ಸೀಮೆಯಲ್ಲಿಯೂ ಮರ ಬೆಳೆಸುವ ಭರವಸೆಯಾಗಿ ದೇವರ ಮರ, ದೇವರ ಕಾಡು ಉಳಿದಿದ್ದು ನೆಲದ ಸತ್ವ ಸಾಕ್ಷಿ.

ಬ್ರಿಟಿಷರ ಮರ ಬಳಕೆಗೆ ತಕ್ಕಂತೆ ಭಾರತೀಯ ಅರಣ್ಯ ಕಾನೂನು ಹುಟ್ಟಿದೆ. ಅರಸರ ಹಕ್ಕಿನ ಮರವೆಂದು ಹೈದರ್ ಗುರುತಿಸಿದ ತೇಗದ ಮರಗಳ ಸುತ್ತವೇ ಬ್ರಿಟಿಷರು ತಿರುಗಿದವರು. ಕ್ರಿ.ಶ. 1830-1849 ಕಾಲದ ಅರಣ್ಯ ನೀತಿಯಲ್ಲಿ ತೇಗದ ಪ್ರೀತಿ ಮೆರೆದರು. 1980 ರವರೆಗೂ ನೈಸರ್ಗಿಕ ಕಾಡು ಕಡಿದು ತೇಗ ಬೆಳೆಸುವುದು ಮುಖ್ಯ ಕೆಲಸವಾಯಿತು. ಮರಗಳನ್ನು ಕತ್ತರಿಸಿ ನದಿಗಳ ಮೂಲಕ ಸಮುದ್ರ ತೀರಕ್ಕೆ ಒಯ್ದು ವಿದೇಶಕ್ಕೆ ಸಾಗಿಸಲು ನದಿ, ನಾಲಾ ಗಡಿಯಲ್ಲಿ ಅರಣ್ಯ ಕಾರ್ಯ ಯೋಜನೆಗಳಾಗಿವೆ. ಅರಣ್ಯ ಆದಾಯದ ಮೂಲವೆಂದು ಸರ್ಕಾರ ಯೋಚಿಸಿತು. ನೀಲಗಿರಿ, ಅಕೇಶಿಯಾ, ಗಾಳಿ, ಫೈನಸ್ ಮುಂತಾದ ಬೆರಳೆಣಿಕೆಯ ಸಸ್ಯಗಳ ವ್ಯಾಪಕ ಅರಣ್ಯೀಕರಣಕ್ಕೆ ಮುಂದೆ ನಿಂತಿತು, ಮರ ನಂಬಿಕೆಗಳ ಸೂತ್ರಗಳು ಹಳಿ ತಪ್ಪಿದವು.

ಸಸ್ಯ ಜಾಗೃತಿಗೆ ಪರಿಣಾಮಕಾರಿ ಮಾರ್ಗ

ಆಫ್ರಿಕಾದ ಬ್ಯಾಬಬ್ ವೃಕ್ಷದ ಬೀಜಗಳನ್ನು ವರ್ಷದ ಹಿಂದೆ ಬ್ರಿಜೇಶ್ ಹೆಗಡೆ ಸನೆಗಲ್‌ನಿಂದ ಕಳಿಸಿದ್ದರು. ಕರ್ನಾಟಕ ಅರಣ್ಯ ಇಲಾಖೆ ಯಲ್ಲಾಪುರ ವಿಭಾಗದ ಅರಣ್ಯ ನರ್ಸರಿಯಲ್ಲಿ ಚೆಂದದ ಸಸಿಯಾದವು.

9ನೇ ಪುಟಕ್ಕೆ...



ಕಾಡು ಉಳಿಸಿದ ಜನರ ನಂಬಿಕೆ

• ಜಗದೀಶ್ ಕೊಪ್ಪ

ಭಾರತದಲ್ಲಿರುವ ದೇವರ ಕಾಡುಗಳ ಕುರಿತ ಅಧಿಕೃತ ಅಧ್ಯಯನ 1891ರಲ್ಲಿ ಆರಂಭವಾಗಿ ಇಂದಿನವರೆಗೂ ಮುಂದುವರಿದು ಬಂದಿದೆ. ಭಾರತದ ದೇವರ ಕಾಡುಗಳ ಅನನ್ಯತೆಯನ್ನು ಹಾಗೂ ಇಲ್ಲಿನ ನಿಸರ್ಗ ಮತ್ತು ಮನುಷ್ಯರ ನಡುವೆ ಇರುವ ಅವಿನಾಭಾವ ಸಂಬಂಧವನ್ನು ಮೊದಲ ಬಾರಿಗೆ ಗುರುತಿಸಿ, ಭಾರತದ ಅರಣ್ಯ ಇಲಾಖೆಗೆ ಭದ್ರ ಬುನಾದಿ ಹಾಕಿದವರು ಡಯಟ್ರಿಚ್ ಬ್ರ್ಯಾಂಡಿಸ್ ಎಂಬ ಜರ್ಮನ್ ವ್ಯಕ್ತಿ. ಇವರು ಭಾರತದ ಪ್ರಥಮ ಇನ್‌ಸ್ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ ಹುದ್ದೆಗೇರಿದವರು. 1868 ರಲ್ಲಿ ಆಗಿನ ಮೈಸೂರು ಸಂಸ್ಥಾನದಲ್ಲಿದ್ದ ಕೊಡಗು ಪ್ರದೇಶದ ಅರಣ್ಯಗಳು, ತಮಿಳುನಾಡು, ಆಂಧ್ರಪ್ರದೇಶ ಮತ್ತು ಒರಿಸ್ಸಾ ಅರಣ್ಯ ಪ್ರದೇಶಗಳಲ್ಲಿ ಸಂಚರಿಸಿ ಅಲ್ಲಿನ ಜನರ ಸಂಸ್ಕೃತಿಯನ್ನು ಆಳವಾಗಿ ಅಧ್ಯಯನ ನಡೆಸಿದ್ದರು. ಹಲವು ಅಧ್ಯಯನಗಳ ನಡುವೆಯೂ ಭಾರತದಲ್ಲಿ ಅಧಿಕೃತವಾಗಿ ಇರುವ ದೇವರ ಕಾಡುಗಳ ಸಂಖ್ಯೆ ಕುರಿತಂತೆ ನಿಖರವಾದ ಮಾಹಿತಿ ಇಲ್ಲ. ಸದ್ಯಕ್ಕಿರುವ ಮಾಹಿತಿ ಮತ್ತು ಅಂಕಿಅಂಶಗಳು ಸಹ ಗೊಂದಲದ ಗೂಡಾಗಿವೆ. 2006 ರಲ್ಲಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ (ಉಡುಪಿ ಸೇರಿದಂತೆ) 1011 ದೇವರ ಕಾಡುಗಳು ಪತ್ತೆಯಾಗಿವೆ. ಇನ್ನು ಕೊಡಗು ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಕಾಡುಗಳನ್ನು ಸೇರಿಸಿದರೆ, ಕರ್ನಾಟಕದ ದೇವರಕಾಡುಗಳ ಸಂಖ್ಯೆ ಮತ್ತಷ್ಟು ಹೆಚ್ಚಾಗುತ್ತದೆ.

ಬೆಳ್ತಂಗಡಿ ತಾಲ್ಲೂಕಿನ ಗುರುವಾಯನಕೆರೆ ಗ್ರಾಮದ ನಾಗರಿಕ ಟ್ರಸ್ಟ್ 2006 ರಲ್ಲಿ ಕೆ.ಪ್ರಭಾಕರ ಆಚಾರ್ಯ ಮತ್ತು ವಿದ್ಯಾ ನಾಯಕ್ ಎಂಬ ತಜ್ಞರ ನೇತೃತ್ವದಲ್ಲಿ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆಸಿದ ಸಮೀಕ್ಷೆಯ ಪ್ರಕಾರ 460 ಭೂತವನಗಳು ಮತ್ತು 651 ನಾಗಬನಗಳು ಪತ್ತೆಯಾಗಿವೆ. ಅಲ್ಲಿನ ಸ್ಥಳಗಳಲ್ಲಿ ಇರುವ ಸಸ್ಯ ಮತ್ತು ಮರಗಳ ಪ್ರಭೇದ ಹಾಗೂ ಪ್ರಾಣಿ, ಪಕ್ಷಿಗಳನ್ನು ಸಹ ಗುರುತಿಸಿ ದಾಖಲಿಸಿದ್ದು, ಇದು ಇತ್ತೀಚೆಗಿನ ದಿನಗಳಲ್ಲಿ ಬಂದ ಅತ್ಯುತ್ತಮ ಸಮೀಕ್ಷಾ ವರದಿಯಾಗಿದೆ. ಕ್ರಿ.ಶ. 1870 ರಲ್ಲಿ ಈಸ್ಟ್ ಇಂಡಿಯಾ ಕಂಪನಿಯ ಪ್ರತಿನಿಧಿಯಾಗಿ ಕರ್ನಾಟಕದಲ್ಲಿ ಪ್ರವಾಸ ಮಾಡಿ ದೇವರ ಕಾಡುಗಳ ಬಗ್ಗೆ ಅಧ್ಯಯನ ನಡೆಸಿರುವ ಬಖನನ್ ಪ್ರತಿಯೊಂದು ಕಾಡುಗಳು ಆಯಾ ಗ್ರಾಮದೇವತೆಯ ಆಸ್ತಿಯೆಂಬಂತೆ ಇದ್ದವು ಎಂದು ದಾಖಲಿಸಿದ್ದಾರೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಭೂತಪ್ಪನ ಕಾಡು, ಜಕ್ಕಪ್ಪನ ಕಾಡು, ಹುಲಿದೇವರ ಕಾಡು, ಮಾರಿಯಮ್ಮನ ಕಾಡುಗಳು ಸಿದ್ಧಾಪುರ ತಾಲ್ಲೂಕಿನ ವ್ಯಾಪ್ತಿಯಲ್ಲಿ ಇದ್ದವು ಎಂಬುದು ಬುಖನನ್ ವರದಿಯಲ್ಲಿ ದಾಖಲಾಗಿದೆ. ಜೊತೆಗೆ ಇಲ್ಲಿ ವಾಸಿಸುವ ಹವ್ಯಕ ಬ್ರಾಹ್ಮಣರು ಸಹ ಇಂತಹದ್ದೇ ಮಾದರಿಯ 116 ಮೆಣಸಿನ ಕಾಡುಗಳನ್ನು ಪೋಷಿಸಿದ್ದರು ಎಂದು ತಿಳಿಸಿದ್ದಾರೆ.

ಕೊಡಗು ಜಿಲ್ಲೆಯಲ್ಲಿ ವಿಶೇಷವಾಗಿ ಮಡಿಕೇರಿ ಮತ್ತು ವಿರಾಜಪೇಟೆ ಸುತ್ತಮುತ್ತಲಿನ ಪ್ರದೇಶದಲ್ಲಿ 1,214 ದೇವರ ಕಾಡುಗಳಿದ್ದವು ಎಂಬುದು ಬುಖನನ್ ಅಧ್ಯಯನದಲ್ಲಿ ಕಂಡು ಬಂದಿದೆ. ಇವುಗಳಲ್ಲಿ ಕೆಲವು ದೇವರ ಕಾಡುಗಳಲ್ಲಿ ದೇವಸ್ಥಾನದ ನಿರ್ಮಾಣಕ್ಕೆ ಮಾತ್ರ ಮರ ಕಡಿಯಲು ಅನುಮತಿಯಿತ್ತು ಎಂದು ತಿಳಿಸಿರುವ ಅವರು, ಮತ್ತೆ ಕೆಲವು ದೇವರ ಕಾಡುಗಳಿಗೆ ಮನುಷ್ಯ ಪ್ರವೇಶ ನಿಷಿದ್ಧವಾಗಿತ್ತು ಎಂದು ದಾಖಲಿಸಿದ್ದಾರೆ. ಅಂತಹ ಕಾಡುಗಳಲ್ಲಿ ಸ್ವರ್ಗಸ್ಥರಾದವರು ವಾಸಿಸುವುದರಿಂದ, ಆ ಕಾಡುಗಳಲ್ಲಿ ಜೀವಂತ ಮನುಷ್ಯರ ಹೆಜ್ಜೆ ದಾಖಲಿಸಬಾರದು ಎಂಬುದು ಕೊಡವರ ನಂಬಿಕೆಯಾಗಿತ್ತು ಎಂಬ ಅಂಶ ವರದಿಯಲ್ಲಿದೆ. ಈ ಕಾರಣಕ್ಕಾಗಿ ಬ್ರಿಟಿಷರು ಇಂತಹ ದೇವರ ಕಾಡುಗಳಲ್ಲಿ ಬೇಟೆಯಾಡುತ್ತಿರಲಿಲ್ಲ.

ಯುನೆಸ್ಕೊ ವರದಿಯ ಪ್ರಕಾರ ಜಗತ್ತಿನಲ್ಲಿ 1.47 ಲಕ್ಷ ದೇವರ ಕಾಡುಗಳಿವೆ ಎಂದು ಅಂದಾಜಿಸಲಾಗಿದೆ. ಉತ್ತರ ಕನ್ನಡ ಜಿಲ್ಲೆಯ ಸಿದ್ಧಾಪುರ ತಾಲ್ಲೂಕಿನ ದೇವರ ಕಾಡುಗಳ ಬಗ್ಗೆ 2011 ರಲ್ಲಿ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ ರಾಜಶ್ರೀ ರೇ, ಸುಭಾಷ್ ಚಂದ್ರನ್ ಮತ್ತು ಟಿ.ವಿ. ರಾಮಚಂದ್ರನ್ ಸಮೀಕ್ಷೆ ನಡೆಸಿ, ಅಲ್ಲಿರುವ 54 ದೇವರ ಕಾಡುಗಳಲ್ಲಿರುವ ಜೀವ ವೈವಿಧ್ಯತೆಯನ್ನು ದಾಖಲಿಸಿದ್ದಾರೆ. ಕಡಗೋಡು ಚೌಡಮ್ಮ ಬನ, ಚೌಡಿ ಬನ, ಜೆಟ್ಟಿ ಬನ, ದೇವರತ್ತಿ ಕಾನು, ಬೀರಪ್ಪ ಮತ್ತು ಚೌಡಿ ಎಂಬ ದೇವರ ಹೆಸರುಗಳಲ್ಲಿರುವ ಕಾಡುಗಳನ್ನು ಗುರುತಿಸಿದ್ದಾರೆ. ಇತ್ತೀಚಿನ ದಿನಗಳಲ್ಲಿ ಇಂತಹ ಬನಗಳಿಗೆ ಸೂಕ್ತ ರಕ್ಷಣೆಯಿಲ್ಲದೆ, ಅಲ್ಲಿನ ಮರಗಳು ಕಾಡುಗಳ್ಳರ ಪಾಲಾಗುತ್ತಿರುವ ಅಂಶ ತಜ್ಞರ ವರದಿಯಲ್ಲಿ ದಾಖಲಾಗಿದೆ. ಕೊಡಗಿನಲ್ಲಿ ಕಳೆದ ಎರಡು ದಶಕಗಳಿಂದ ವಿಸ್ತರಣೆಗೊಂಡ ಕಾಫಿ ಪ್ಲಾಂಟೇಶನ್‌ನಿಂದಾಗಿ 1891ರಲ್ಲಿ 755 ಇದ್ದ ದೇವರ ಕಾಡುಗಳು ಈಗ 346 ಕ್ಕೆ ಇಳಿದಿವೆ.

ದೇಶದ ವಿವಿಧೆಡೆ ಇರುವ ದೇವರ ಕಾಡುಗಳಲ್ಲಿ ಹಲವನ್ನು ರಾಜ್ಯ ಸರ್ಕಾರಗಳ ಅರಣ್ಯ ಇಲಾಖೆಗಳು ಸಂರಕ್ಷಿಸಿಕೊಂಡು ಬರುತ್ತಿವೆ. ಇನ್ನೂ ಕೆಲವು ದೇವರ ಕಾಡುಗಳು, ದೇವಸ್ಥಾನಗಳ ಸಮಿತಿ, ಗ್ರಾಮ ಸಮಿತಿ ಹಾಗೂ ಕೇರಳ ರಾಜ್ಯದ ಹಲವೆಡೆ ಕೆಲವು ಕುಟುಂಬಗಳ ಮೇಲ್ವಿಚಾರಣೆಯಲ್ಲಿವೆ. ಇವೊತ್ತಿಗೂ ಈ ದೇಶದಲ್ಲಿ ಅರಣ್ಯ, ಅಪರೂಪದ ಸಸ್ಯ ಪ್ರಭೇದಗಳು, ಪ್ರಾಣಿ ಮತ್ತು ಒಂದಿಷ್ಟು ಪಕ್ಷಿಗಳು ಸುರಕ್ಷಿತವಾಗಿದ್ದರೆ, ಅದು ದೇವರ ಕಾಡುಗಳಲ್ಲಿ ಮಾತ್ರ.

ನಮ್ಮ ಪೂರ್ವಿಕರ ಜ್ಞಾನಶಿಸ್ತುಗಳಲ್ಲಿ, ಭೂಮಿ, ನೀರು, ಪರಿಸರ ಇವೆಲ್ಲವನ್ನೂ ದೈವೀಕರಿಸಿ ಆರಾಧಿಸುವ, ಸಂರಕ್ಷಿಸುವ ಭಾವನೆ ಬೆಳೆದು ಬಂದಿತ್ತು. ವೇದಗಳಲ್ಲಿ ಒಂದಾದ ಅಥರ್ವವೇದದಲ್ಲಿ ದುರಾಸೆ ಎಂಬುದು ಜನರ ಒಡಲನ್ನು ಸುಡುವ ಅಗ್ನಿ ಎಂಬ ಸೂಕ್ತಿ ಇದೆ. ಈ ಕಾರಣಕ್ಕಾಗಿಯೇ ನಮ್ಮ ವೇದಗಳು ಮತ್ತು ಪುರಾಣಗಳು ಭೂಮಿ, ಆಕಾಶ, ನೀರು, ವಾಯು, ಅಗ್ನಿ ಇವೆಲ್ಲವುಗಳಿಗೆ ದೈವ ಸ್ವರೂಪ ನೀಡಿವೆ. ಭೂಮಿಯನ್ನು ದೇವತೆ, ನೀರನ್ನು ಗಂಗೆ ಎಂತಲೂ, ಮಳೆಯನ್ನು ವರುಣ, ಗಾಳಿಗೆ ಇಂದ್ರ, ಬೆಂಕಿಗೆ ಅಗ್ನಿ, ಆಕಾಶಕ್ಕೆ ಸೂರ್ಯ, ಚಂದ್ರರೆಂಬ ದೇವತೆಗಳು... ಹೀಗೆ ತಮ್ಮ ಭಾವಕ್ಕೆ, ಭಕ್ತಿಗೆ ಅನುಸಾರವಾಗಿ ಪೂಜಿಸುತ್ತಾ ಬಂದ ಕಾರಣ ನಿಸರ್ಗದ ಮೇಲೆ ಒಂದಿಷ್ಟು ಅಭಿಮಾನ ಮತ್ತು ಕಾಳಜಿಗಳಿದ್ದವು. ಇಂತಹ ಸಂಸ್ಕಾರಗಳು ಭಾರತದುದ್ದಕ್ಕೂ ಪ್ರಾದೇಶಿಕ ಆಚರಣೆಗೆ ತಕ್ಕಂತೆ ಬಳಕೆಯಲ್ಲಿದ್ದ ಕಾರಣದಿಂದಾಗಿ ಭಾರತದ ಪಶ್ಚಿಮ ಮತ್ತು ಈಶಾನ್ಯ ಭಾರತದ ಘಟ್ಟದ ಪ್ರದೇಶಗಳ ಅರಣ್ಯದಲ್ಲಿ ಅತಿ ಹೆಚ್ಚು ಇಂತಹ ದೇವರ ಕಾಡುಗಳಿವೆ.

ಕೌತುಕದ ನೆಲೆ ಗೋಕರ್ಣ ಗುಹೆ



ಗೋಕರ್ಣದ ಗೋ ಗರ್ಭ ಗುಹೆಯಲ್ಲಿ ವಿಹರಿಸುತ್ತಿರುವ ಪ್ರವಾಸಿಗರು.

• ಗಣಪತಿ ಹೆಗಡೆ

ಅದು 2020ರ ಏಪ್ರಿಲ್. ಕೋವಿಡ್ ಕಾರಣಕ್ಕೆ ಇಡೀ ದೇಶ ಲಾಕ್‌ಡೌನ್ ಆಗಿದ್ದ ಸಮಯವದು. ಗೋಕರ್ಣದ ಮುಖ್ಯ ಕಡಲತೀರ ಮತ್ತು ಕುಡ್ಲೆ ಕಡಲತೀರದ ಮಧ್ಯದಲ್ಲಿರುವ ಜಟಾಯು ತೀರ್ಥದ ಪಕ್ಕದ ಬಲ್ಲಾಳ ತೀರ್ಥದ ದುರ್ಗಮ ಪ್ರದೇಶದಲ್ಲಿನ ಗುಹೆಯೊಂದರಲ್ಲಿ ಓರ್ವ ವಿದೇಶಿ ಪ್ರಜೆ ಹಾಗೂ ಅಲ್ಲೇ ಪಕ್ಕದಲ್ಲಿ ಇನ್ನೋರ್ವ ವಿದೇಶಿಗ ಟೆಂಟ್ ಹಾಕಿಕೊಂಡು ವಾಸಿಸುತ್ತಿರುವುದು ಕಂಡು ಬಂದಿತ್ತು. ಸ್ಥಳೀಯ ಯುವಕರು ಗುಡ್ಡದ ತಪ್ಪಲಿನಲ್ಲಿರುವ ಐತಿಹಾಸಿಕ ಸ್ಥಳಗಳ ವೀಕ್ಷಣೆಗೆ ತೆರಳಿದಾಗ ಇವರನ್ನು ಪತ್ತೆ ಮಾಡಿದ್ದರು.

ತೀರಾ ಈಚೆಗೆ ಇಲ್ಲಿಯೇ ಸಮೀಪದ ರಾಮತೀರ್ಥ ಗುಹೆಯಲ್ಲಿ ರಷ್ಯನ್ ಮಹಿಳೆಯೊಬ್ಬರು ತನ್ನಿಬ್ಬರು ಪುಟ್ಟ ಹೆಣ್ಣು ಮಕ್ಕಳೊಂದಿಗೆ ಹಲವು ವಾರಗಳಿಂದ ವಾಸವಿದ್ದ ಸಂಗತಿ ಬೆಳಕಿಗೆ ಬಂದಿತ್ತು. ನಿರಂತರವಾಗಿ ಸುರಿಯುತ್ತಿದ್ದ ಮಳೆ, ಬೋರ್ಗರೆಯುತ್ತಿದ್ದ ಝರಿ, ಸರಿಸೃಪಗಳ ಓಡಾಟ, ಸ್ವಲ್ಪ ಹೊರಕ್ಕೆ ಬಂದು ಕಾಲು ಎಡವಿದರೂ ಪ್ರಪಾತದಿಂದ ಜಾರಿ ಸಮುದ್ರಕ್ಕೆ ಬೀಳಬಹುದಾಗಿದ್ದ ಸ್ಥಳದಲ್ಲಿ ಮಹಿಳೆ ಮತ್ತು ಮಕ್ಕಳು ಹೆದರದೆ ವಾಸವಿದ್ದ ಸಂಗತಿ ಪೊಲೀಸರನ್ನೂ ಅಚ್ಚರಿಗೆ ತಳ್ಳಿತ್ತು.

ಗುಹೆಗಳಲ್ಲಿ ವಿದೇಶಿಗರು ಕಾಣಸಿಗುವುದು ಗೋಕರ್ಣದ ಜನರಿಗೆ ಅಚ್ಚರಿಯ ವಿಷಯವೇನಲ್ಲ. ಆದರೆ, ಮಳೆಗಾಲ, ಕೋವಿಡ್ ಲಾಕ್‌ಡೌನ್‌ನಂತಹ ಕ್ಲಿಷ್ಟಕರ ಸ್ಥಿತಿಯಲ್ಲೂ ಅಪಾಯಕಾರಿ ಎನಿಸಬಹುದಾದ ಸ್ಥಳದಲ್ಲಿ ಬೀಡುಬಿಟ್ಟವರು ಪತ್ತೆಯಾಗಿದ್ದು ಆಶ್ಚರ್ಯ ಹುಟ್ಟಿಸಿತ್ತು.

ವಿಶಿಷ್ಟ ಬಗೆಯ ಕಡಲತೀರ, ಪುರಾಣ ಕಾಲದ ದೇವಾಲಯಗಳಿಂದಾಗಿ ಆಕರ್ಷಣೀಯ ತಾಣವಾಗಿರುವ ಗೋಕರ್ಣದಲ್ಲಿ ಗುಹೆಗಳೂ ಕುತೂಹಲ ಸೃಷ್ಟಿಸಿವೆ. ಸಮುದ್ರದ ತೀರದ ಗುಡ್ಡದಲ್ಲಿನ ಗುಹೆಗಳ ಬಗ್ಗೆ ವಿದೇಶಿಯರು ಆಕರ್ಷಿತರಾದರೆ, ದೇಸಿ ಪ್ರವಾಸಿಗರಿಗೆ ಇದು ಕೌತುಕದ ಸಂಗತಿಯಾಗಿದೆ.

ಗೋಕರ್ಣದ ಗುಹೆಗಳನ್ನು ಯಾರೂ ನಿರ್ಮಿಸಿದ್ದಲ್ಲ, ಇವು ಸ್ವಾಭಾವಿಕವಾಗಿ ರೂಪುಗೊಂಡ ಭೂರಚನೆಗಳು. ಇವುಗಳಿಗೆ ಎಂಟು ಸಾವಿರ ವರ್ಷಗಳಿಗಿಂತ ಪುರಾತನ ಹಿನ್ನೆಲೆ ಇರಬಹುದು ಎನ್ನುತ್ತಾರೆ ಇತಿಹಾಸಕಾರರು.

ಓಂ ಕಡಲ ತೀರ, ಅದರ ಪಕ್ಕದ ಕುಡ್ಲೆ ಕಡಲ ತೀರ, ಮುಖ್ಯ ಕಡಲ ತೀರಗಳು ಗೋಕರ್ಣದಲ್ಲಿವೆ. ಕುಡ್ಲೆ ಕಡಲ ತೀರದ ಪಕ್ಕದಲ್ಲಿನ ಗುಡ್ಡದಲ್ಲೇ ಐದಾರು ಗುಹೆಗಳಿವೆ. ಕುಡ್ಲೆ ತೀರದ ಮೇಲ್ಭಾಗದಲ್ಲಿರುವ ಗೋ ಗರ್ಭ ಗುಹೆ, ಮುಖ್ಯ ಕಡಲತೀರದ ಬಳಿಯ ರಾಮತೀರ್ಥ ಮತ್ತು ಜಟಾಯುತೀರ್ಥದ ಬಳಿಯ ಗುಹೆಗಳಲ್ಲಿ ಜನರ ವಾಸ ಹೆಚ್ಚು. ಆದರೆ, ಇನ್ನೂ ಬೆಳಕಿಗೆ ಬಾರದ, ದುರ್ಗಮ ಪ್ರದೇಶಗಳಲ್ಲಿ ಹತ್ತಕ್ಕೂ ಹೆಚ್ಚು ಗುಹೆಗಳಿರಬಹುದು ಎಂಬ ಅಂದಾಜಿದೆ. ಒಂದು ಕಾಲದಲ್ಲಿ ಇವು ಆಧ್ಯಾತ್ಮಿಕ ಸಾಧನೆಯ ನೆಲೆಗಳಾಗಿದ್ದವು. ಈಗ ವಿದೇಶಿ ಪ್ರವಾಸಿಗರ ಏಕಾಂತ ವಾಸಕ್ಕೆ, ಮೋಜಿಗೆ ಬಳಕೆ ಆಗುತ್ತಿವೆ. ಮುಖ್ಯ ಕಡಲ ತೀರದ ಸಮೀಪದಲ್ಲಿನ ರಾಮತೀರ್ಥ ಗುಹೆ ಈಚೆಗೆ ಹೆಚ್ಚು ಚರ್ಚೆಗೆ ಒಳಗಾಗಿದೆ.



ಗುಹೆಯಲ್ಲಿರುವ ಶಿವಮಂದಿರದ ಬಳಿ ಧ್ಯಾನಸ್ಥ ಸ್ಥಿತಿಯಲ್ಲಿರುವ ವಿದೇಶಿ ಮಹಿಳೆ.

ಕಡಿದಾದ ಮಾರ್ಗ ಹೊಂದಿದ್ದ, ಗುಡ್ಡದ ಅಂಚಿನಲ್ಲಿದ್ದ ಗುಹೆಯಲ್ಲಿ ಉಳಿದುಕೊಂಡಿದ್ದ ರಷ್ಯನ್ ಮಹಿಳೆ ಹೊರ ಜಗತ್ತಿಗೆ ಅಚ್ಚರಿಯಾದರು. ಅಲ್ಲಿ ಆಕೆ ಆಧ್ಯಾತ್ಮಿಕ ಸಾಧನೆಯಲ್ಲಿ ತೊಡಗಿದ್ದರು ಎಂಬುದಕ್ಕೆ ಪಾಂಡುರಂಗನ ಮೂರ್ತಿ, ಇನ್ನಿತರ ಸಾಮಗ್ರಿಗಳು ಕುರುಹುಗಳಾಗಿದ್ದವು.

ಈ ಘಟನೆಯ ಕಾರಣದಿಂದಲೇ ಗೋಕರ್ಣದ ಗುಹೆಗಳು ಮತ್ತೆ ಮುನ್ನೆಲೆಯ ಚರ್ಚೆಗೆ ಎಡೆಮಾಡಿಕೊಟ್ಟಿವೆ. ವಿದೇಶಿಗರಿಗೆ ಗುಹೆಯ ಮೇಲೆ ಮೋಹ ಏಕೆ? ಎಂಬ ಪ್ರಶ್ನೆ ಸಹಜವಾಗಿ ಜನರಲ್ಲಿ ಕುತೂಹಲ ಹುಟ್ಟಿಸುತ್ತಿದೆ.

'ಗುಹೆಗಳಲ್ಲಿ ವಿದೇಶಿಗರ ವಾಸ ಇದೇ ಮೊದಲಲ್ಲ. ಕಳೆದ ಕೆಲ ದಶಕಗಳಿಂದ ಇಲ್ಲಿಗೆ ಸಾವಿರಾರು ಸಂಖ್ಯೆಯಲ್ಲಿ ವಿದೇಶಿ ಪ್ರವಾಸಿಗರು ಭೇಟಿ ನೀಡುತ್ತಿದ್ದಾರೆ. ಅವರ ಪೈಕಿ ಹಲವರು ಐಷಾರಾಮಿ ರೆಸಾರ್ಟ್, ಹೋಮ್ ಸ್ಟೇ ಬದಲಿಗೆ ಗುಡ್ಡ, ಕಡಲ ತೀರದ ದುರ್ಗಮ ಸ್ಥಳಗಳನ್ನು ವಾಸಕ್ಕೆ ಆಯ್ಕೆ ಮಾಡಿಕೊಳ್ಳುತ್ತಾರೆ. ಏಕಾಂತ ಬಯಸುವ ವಿದೇಶಿಗರು ಗುಡ್ಡದ ಮೇಲ್ಭಾಗದಲ್ಲಿನ ಗುಹೆಗಳಲ್ಲಿ ಆಶ್ರಯ ಪಡೆದುಕೊಳ್ಳುತ್ತಾರೆ. ಹೀಗೆ ಉಳಿದವರು ಒಂದೆರಡು ದಿನ, ಕೆಲವರು ಮಾತ್ರ ವಾರಗಟ್ಟಲೆ ಉಳಿದುಕೊಳ್ಳುತ್ತಾರೆ' ಎಂದು ವಿದೇಶಿಗರ ಗುಹೆ ವಾಸದ ಕುರಿತು ಗೋಕರ್ಣದ ಮಾಣಿ ಗೌಡ ವಿವರಿಸುತ್ತಾರೆ.

'ಭಾರತೀಯ ಸಂಸ್ಕೃತಿಗೆ ಮಾರುಹೋದ ವಿದೇಶಿಗರು ಗುಹೆಗಳಲ್ಲಿದ್ದುಕೊಂಡು ಧ್ಯಾನ ಮಾಡುವುದುಂಟು. ಗೋ ಗರ್ಭ ಗುಹೆಯಲ್ಲಿನ ಶಿವತಾಣದ ಬಳಿ ಹತ್ತಾರು ವಿದೇಶಿಗರು ಕುಳಿತು ಆಗಾಗ ಧ್ಯಾನ, ಯೋಗ ಮಾಡುತ್ತಾರೆ. ಕೆಲವರು ಒಬ್ಬಂಟಿಯಾಗಿ ದಿನಗಟ್ಟಲೆ ಕುಳಿತು ಧ್ಯಾನಸ್ಥರಾಗುತ್ತಾರೆ' ಎಂದು ಅವರು ಹೇಳುತ್ತಾರೆ.

'ಗುಹೆಗಳನ್ನೇ ವಾಸಕ್ಕೆ ಆಶ್ರಯಿಸುವ ವಿದೇಶಿ ಪ್ರವಾಸಿಗರ ಪೈಕಿ ಕೆಲವರು ಕೇವಲ ಏಕಾಂತದ ಕಾರಣಕ್ಕೆ ಮಾತ್ರವೇ ಗುಹೆಯನ್ನು ಆಯ್ದುಕೊಳ್ಳುವುದಿಲ್ಲ. ರೆಸಾರ್ಟ್, ಹೋಂ ಸ್ಟೇಗಳಲ್ಲಿನ ದುಬಾರಿ ದರ ಭರಿಸಲಾಗದೆ ನೈಸರ್ಗಿಕ ತಾಣದ ಮೊರೆ ಹೋಗುವುದೂ ಉಂಟು. ಕೆಲವರು ಗಾಂಜಾ ಸೇವನೆಯಂತಹ ಚಟುವಟಿಕೆಯಲ್ಲಿ ನಿರಂತರವಾಗಿ ತೊಡಗಿರುವ ಕಾರಣದಿಂದ ಯಾರ ಹಂಗಿಲ್ಲದೆ ನಿಸರ್ಗದ ಮಧ್ಯೆ ಮೋಜಿನಲ್ಲಿ ತೊಡಗಲು 'ಗುಹೆ ವಾಸಿ' ಆಗುತ್ತಾರೆ' ಎಂದು ವಿವರಣೆ ನೀಡುತ್ತಾರೆ.

'ಸಾಮಾಜಿಕ ಕಟ್ಟಲೆಗಳನ್ನು ತೊರೆದು ಬದುಕಲು ಬಯಸುವ ವಿದೇಶಗಳ ಹಿಪ್ಪಿಗಳು ಗೋಕರ್ಣಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿದ್ದರು. ಹೀಗೆ ಬಂದವರು ಯಾರ ಸಂಪರ್ಕಕ್ಕೆ ಸಿಗಲು ಬಯಸದೆ ಗುಡ್ಡದ ಮೇಲೆ ಟೆಂಟ್ ಕಟ್ಟಿಕೊಂಡು ಉಳಿಯುತ್ತಿದ್ದರು. ಅವರಲ್ಲಿ ಕೆಲವರು ಗುಹೆಗಳನ್ನೇ ಆಶ್ರಯಿಸಿಕೊಂಡಿದ್ದರು. ಅವರಿಂದಾಗಿ ವಿದೇಶಿ ಪ್ರವಾಸಿಗರಿಗೆ ಗುಹೆಯ ವಾಸದ ಸೆಳೆತ ಹೆಚ್ಚಿರಬಹುದು' ಎಂದು ವಿಶ್ಲೇಷಿಸುತ್ತಾರೆ.

ಸಾಮಾನ್ಯವಾಗಿ ಅಕ್ಟೋಬರ್ ಬಳಿಕ ವಿದೇಶಿಗರ ಗೋಕರ್ಣ ಭೇಟಿ ಆರಂಭಗೊಳ್ಳುತ್ತದೆ. ಮಾರ್ಚ್‌ವರೆಗೂ ಇಲ್ಲಿಯೇ ನೆಲೆ ನಿಲ್ಲುವವರ ಸಂಖ್ಯೆ ಸಾಕಷ್ಟಿದೆ. ವರ್ಷಾಂತ್ಯದ ಅವಧಿಯಲ್ಲಂತೂ ಗೋಕರ್ಣದ ಕಡಲ ತೀರ, ಮುಖ್ಯ ಬೀದಿಗಳಲ್ಲಿ ವಿದೇಶಿಗರ ಮುಖವೇ ಹೆಚ್ಚು ಕಾಣಸಿಗುತ್ತವೆ. ಆದರೆ, ಕೋವಿಡ್ ಹರಡಿದ್ದ ಅವಧಿಗೆ ಮುನ್ನದ ಅವಧಿಗೆ ಹೋಲಿಕೆ ಮಾಡಿದರೆ ವಿದೇಶಿಗರ ಭೇಟಿ ಅರ್ಧದಷ್ಟು ಇಳಿಕೆಯಾಗಿದೆ ಎಂಬುದಾಗಿ ಸ್ಥಳೀಯರು ಹೇಳುತ್ತಾರೆ. ❖

ಋಷಿಮುನಿಗಳ ನೆಚ್ಚಿನ ತಾಣ

ಗೋಕರ್ಣದ ಗುಹೆ ಈಗ ವಿದೇಶಿಗರನ್ನು ಆಕರ್ಷಿಸುವ ತಾಣ. ಪುರಾಣ ಪ್ರಸಿದ್ಧ ಕ್ಷೇತ್ರವಾಗಿರುವ ಗೋಕರ್ಣ ಈಗ ಪ್ರಾಕೃತಿಕ ಸೊಬಗಿನಿಂದಾಗಿ ವಿಶ್ವ ಮಟ್ಟದ ಪ್ರವಾಸಿ ತಾಣವಾಗಿ ಗುರುತಿಸಿಕೊಂಡಿದೆ. ಆದರೆ, ಇಲ್ಲಿನ ಗುಹೆಗಳಿಗೆ ಮತ್ತು ದೇವಾಲಯಗಳಿಗೆ ನಂಟು ಬೆಸೆದುಕೊಂಡಿತ್ತು. ತಪಸ್ಸು ಮಾಡಲು ಋಷಿಮುನಿಗಳು ಗೋಕರ್ಣವನ್ನೇ ಆಯ್ಕೆ ಮಾಡಿಕೊಂಡಿದ್ದು ಹೆಚ್ಚು ಎಂದು ಇತಿಹಾಸಕಾರರು ಪ್ರತಿಪಾದಿಸುತ್ತಾರೆ.

'ಗೋಕರ್ಣದ ಗುಹೆಗಳು ಮಾನವ ನಿರ್ಮಿತವಂತೂ ಅಲ್ಲ. ಇವು ನೈಸರ್ಗಿಕವಾಗಿ ರಚನೆಯಾದ ತಾಣಗಳು. ಈವರೆಗಿನ ಯಾವುದೇ ಶಿಲಾಶಾಸನಗಳಲ್ಲಿ ಗುಹೆಗಳ ಬಗ್ಗೆ ಉಲ್ಲೇಖವಿಲ್ಲ. ಈ ಕಾರಣದಿಂದಲೇ ಇವುಗಳ ಹಿನ್ನೆಲೆಯ ಕುರಿತಾಗಿ ಸಂಶೋಧನೆಗಳು ನಡೆದಿಲ್ಲ. ಆದರೆ, ಸುಮಾರು ಎಂಟು ಸಾವಿರ ವರ್ಷಗಳಷ್ಟು ಹಳೆಯ ರಚನೆ ಆಗಿರಬಹುದು ಎಂಬ ಊಹೆಯಿದೆ. ಪುರಾಣ ಸ್ಥಳವಾಗಿರುವ ಇಲ್ಲಿ ಋಷಿಮುನಿಗಳು ತಪಸ್ಸನ್ನು ಆಚರಿಸಲು ಗುಹೆಗಳನ್ನು ಆಶ್ರಯಿಸುತ್ತಿದ್ದರು ಎಂಬುದನ್ನು ಅನೇಕ ಪೌರಾಣಿಕ ಕಥೆಗಳನ್ನು ಆಧಾರವಾಗಿಟ್ಟುಕೊಂಡು ಹೇಳಬಹುದು' ಎನ್ನುತ್ತಾರೆ ಇತಿಹಾಸ ಸಂಶೋಧಕ ಲಕ್ಷ್ಮೀಶ ಹೆಗಡೆ ಸೋಂದಾ.

ಗುಹೆಯ ಪ್ರವೇಶ ದ್ವಾರದ ಬಳಿ ನಿಂತ ವಿದೇಶಿ ಯುವತಿ.

ರಷ್ಯನ್ ಮಹಿಳೆಯೊಬ್ಬರು ವಾಸವಿದ್ದ, ದುರ್ಗಮ ಸ್ಥಳದಲ್ಲಿರುವ ರಾಮತೀರ್ಥ ಗುಹೆ.

ಚಿತ್ರಗಳು: ರವಿ ಸೂರಿ/ಪುಷ್ಪಹಾಸ ಭಕ್ತಿಕರ್

ಪ್ರಜಾ ವಾಣಿ

ದೀಪಾವಳಿ ವಿಶೇಷಾಂಕ 2025

ಓದುಗರ ವೇದಿಕೆಗೆ ಬರಹ ಆಹ್ವಾನ

ರೀಲ್ಸ್ ಲೋಕದಲ್ಲಿ...

ಮೊಬೈಲ್ ಬಂದ ಮೇಲೆ ಬದುಕು ಮಗ್ಗಲು ಬದಲಿಸಿದೆ. ರಿಯಲ್ ಲೋಕದಿಂದ ರೀಲ್ಸ್ ಲೋಕದಲ್ಲಿ ವಿಹರಿಸುವವರು ಹೆಚ್ಚಾಗಿದ್ದಾರೆ. ಎಲ್ಲಿಯಾದರೂ ಐದು ನಿಮಿಷ ಕಾಯುವ ಸಂದರ್ಭ ಬಂದರೆ ಕೂಡಲೇ ಮೊಬೈಲ್‌ನ ಸ್ಕ್ರೀನ್ ತಡವಿ ರೀಲ್ಸ್ ನೋಡುವುದರಲ್ಲಿ ಮಗ್ನರಾಗುತ್ತಾರೆ. ಚಿಕ್ಕ ಮಕ್ಕಳು ಕೂಡ ರೀಲ್ಸ್ ನೋಡಿ ನಗುವುದು, ಮತ್ತೆ ಮತ್ತೆ ನೋಡಲು ಹಟ ಹಿಡಿಯುವುದು ಬದುಕಿನ ಭಾಗದಂತಾಗಿದೆ. ರೀಲ್ಸ್‌ಗಳ ಮೂಲಕ ಬೇರೆಯವರ ಲೋಕವನ್ನು ಇಣುಕಿ ನೋಡುವುದು ಸಂತೋಷ ಕೊಡುವಂತಿದೆ. ರೀಲ್ಸ್ ಲೋಕದಿಂದ ನಿಮ್ಮ ಬದುಕಿನಲ್ಲಿ ಆದ ಬದಲಾವಣೆಗಳು, ಫಜೀತಿಗಳ ಕುರಿತು ಬರೆಯಿರಿ.

ಬರಹ 250 ಪದಗಳ ಮಿತಿಯಲ್ಲಿರಲಿ. ಆಯ್ದ ಬರಹಗಳನ್ನು ಪ್ರಕಟಿಸಲಾಗುವುದು

ಬರಹ ತಲುಪಲು ಕೊನೆಯ ದಿನಾಂಕ ಆಗಸ್ಟ್ 15, 2025

ಇ-ಮೇಲ್: deepavali@prajavani.co.in

'ಮರ ಬಳಿ'ಯ ಮರು ನೆನಪುಗಳು

8ನೇ ಪುಟದಿಂದ...

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹಿಮವತಿ ಭಟ್, ಉಪ ವಲಯ ಅರಣ್ಯಾಧಿಕಾರಿ ಮನೋಜ್ ದೇಶಭಾಗರ ಜೊತೆ ಸೇರಿ ಮಹಾವೃಕ್ಷದ ಸಸಿ ನಾಟಿಗೆ ನಾವು ಪರಿಕಲ್ಪನೆ ರೂಪಿಸಿದೆವು. 30 ಮೀಟರ್ ಸುತ್ತಳತೆ ಬೆಳೆಯಬಹುದಾದ ಜಗತ್ತಿನ ಅತಿದೊಡ್ಡ ಮರ, 5150 ವರ್ಷಗಳಿಂದಲೂ ಬದುಕಿರುವ ಸಸ್ಯ ಕುಲವನ್ನು ಚಾರಿತ್ರಿಕ ನೆನಪಿಗೆ ದೇಗುಲಗಳಿಗೆ ಉಚಿತವಾಗಿ ಕೊಡಲು ನಿರ್ಧಾರವಾಯಿತು. ಸಾಮಾಜಿಕ ಜಾಲತಾಣ, ಪತ್ರಿಕೆ ಮೂಲಕ ಮಾಹಿತಿ ಹಂಚಲಾಯಿತು. ಸವಣೂರಿನಲ್ಲಿ ನಾಥಪಂಥದ ಸ್ವಾಮಿಗಳು ನಾಟಿ ಮಾಡಿದ ವೃಕ್ಷಕ್ಕೆ 600 ವರ್ಷಗಳು, ಶ್ರೀಕೃಷ್ಣ ಇದನ್ನು ಭೂಮಿಗೆ ತಂದನೆಂಬ ಉಲ್ಲೇಖಗಳ ಸಹಿತ ಬರಹಗಾರ ಎಚ್. ಆರ್. ಕೃಷ್ಣಮೂರ್ತಿಯವರು ಕಲ್ಪವೃಕ್ಷವೆಂದು ಗುರುತಿಸಿದ ವಿವರಗಳನ್ನು ಹಂಚಿದೆವು. ಒಂದು ಸಸಿ ಪಡೆಯಲು ನೂರಾರು ಕಿಲೋ ಮೀಟರ್ ದೂರಗಳಿಂದಲೂ ಆಸಕ್ತರು ಬಂದರು. ಇಂದು ಹಲವು ದೇಗುಲಗಳ ಸನಿಹದ ಬಯಲಿನಲ್ಲಿ ಸಸಿ ನಾಟಿಯಾಗಿದೆ. ಬ್ಯಾಬಬ್ ಮಾತ್ರವಲ್ಲ, ಚಂದನ, ಏಕನಾಯಕ, ಮತ್ತಿ, ಅರ್ಜುನ, ಹೊನ್ನೆ, ಹೊಂಗೆ, ನೇರಳೆ, ಕಾಸರಕ, ರಾಮಪತ್ರೆ, ಸೀತಾ ಅಶೋಕ, ಮುತ್ತುಗ ಇತ್ಯಾದಿ ನೂರಾರು ಸಸ್ಯಗಳ ಸರಿಯಾದ ಮಾಹಿತಿ ಹಂಚಿದರೂ ಹೀಗೆ ಆಸಕ್ತರು ಸಸಿ ನೆಡಲು ಮುಂದೆ ಬರುತ್ತಾರೆ. ಬುಡಕಟ್ಟು ಪರಂಪರೆ, ನಕ್ಷತ್ರ ವೃಕ್ಷ, ಮರ ನಂಬಿಕೆ ಆಧಾರದಲ್ಲಿ ಮರ ಬೆಳೆಸುವ ಪರ್ಯಾಯ ಸಾಧ್ಯತೆಗಳಿವೆ.

ಕುಟುಂಬ, ಬಳಿ, ಮನೆತನ, ದೇಗುಲ, ಮಠ ಮಂದಿರಗಳ ನೆನಪಿಗೆ ಸೂಕ್ತ ಸಸಿ ಗುರುತಿಕೊಂಡು ಒಂದು ಸಸ್ಯದ ಉಳಿವಿಗೆ ನಮ್ಮದೇ ನಂಬಿಕೆ ಮೂಲಕ ಜೀವನ ಪರ್ಯಂತ ನಿಲ್ಲುವ ನಿರ್ಧಾರ ಮಾಡಿದರೆ ನೂರಾರು ಸಸ್ಯ ಕುಲ ಉಳಿಯುತ್ತವೆ. ಸಸ್ಯದ ಬೀಜ ಸಂಗ್ರಹ, ಸಸ್ಯ ಮಾಹಿತಿ ವಿನಿಮಯ, ಸಸ್ಯಾಭಿವೃದ್ಧಿ, ತಮಗೆ ಗೊತ್ತಿರುವ ವ್ಯಕ್ತಿ, ಸಂಸ್ಥೆಗಳ ನೆರವಿನಿಂದ ಸಸಿ ಹಂಚಿಕೆ, ನಾಟಿ, ಸಂರಕ್ಷಣೆ ಕಾರ್ಯವನ್ನು ಶ್ರದ್ಧೆಯ ಕಾರ್ಯವಾಗಿ ಮಾಡಬಹುದು. ಒಂದು ಮರ ಬೆಳೆಯಲು ಏನು ಬೇಕೋ ಅದನ್ನು ಸರಿಯಾಗಿ ತಿಳಿದು ಆತ್ಮಸಾಕ್ಷಿಗೆ ಅನುಗುಣವಾಗಿ ಕೆಲಸ ಮಾಡಿದರೆ ಸಾಕೇ ಸಾಕು, ಭೂಮಿಗೆ ಮಹತ್ವದ ಕೊಡುಗೆಯಾಗುತ್ತದೆ. ಬಳಿ ಸಸ್ಯವೆಂದು ಅರಳಿ, ಮಾವು, ಬೇವು, ಹೊಂಗೆ ಮುಂತಾಗಿ ಆಯ್ದು ಮರದ ಪ್ರೀತಿ ಹಬ್ಬಿಸುವ ಕಾರ್ಯ ಶಕ್ತ್ಯಾನುಸಾರ ತಪಸ್ಸಿನಂತೆ ಸಸಿ ನೆಡಸಬಹುದು. ಪರಿಸರ ಬಿಕ್ಕಟ್ಟಿನ ಕಾಲಘಟ್ಟದಲ್ಲಿ 'ಮರವುಳಿದರೆ ನಾವ್ ಉಳಿವುದು ಸತ್ಯ' ತಿಳಿಯಬೇಕು. 'ಸಸ್ಯ ಬಳಿ' ಪವಿತ್ರ ಸಸ್ಯಾಂದೋಲನವಾಗಬೇಕು. ❖

ಮುನ್ನೋಟ 10-08-2025 ರಿಂದ 16-08-2025

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ಆರ್ಥಿಕ ಸಂಕಷ್ಟಗಳ ಬಗ್ಗೆ ಮುಂದಾಲೋಚನೆ ಮಾಡುವಿರಿ. ನಿಮ್ಮ ಸ್ವಂತ ಪರಿಶ್ರಮದಿಂದ ಆದಾಯವನ್ನು ಹೆಚ್ಚು ಮಾಡಿಕೊಳ್ಳಬಹುದು. ಹಿರಿಯರ ಜತೆಗೂಡಿ ನಿಮ್ಮ ಕೆಲಸ ಕಾರ್ಯಗಳನ್ನು ಸಾಧಿಸಿಕೊಳ್ಳುವಿರಿ. ಸರ್ಕಾರಿ ವ್ಯವಹಾರಗಳಲ್ಲಿ ಪ್ರಗತಿ ಇರುತ್ತದೆ. ವಿದ್ಯಾರ್ಥಿಗಳು ಹೆಚ್ಚು ಪರಿಶ್ರಮವನ್ನು ಪಡಲೇಬೇಕಾದ ಪರಿಸ್ಥಿತಿಯು ಇರುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ಆದಾಯವು ಬಹಳ ಉತ್ತಮವಾಗಿರುತ್ತದೆ. ಕೃಷಿ ವಿಷಯ ಓದುತ್ತಿರುವವರಿಗೆ ಬೇಕಾಗಿದ್ದ ಸವಲತ್ತುಗಳು ದೊರೆಯುತ್ತವೆ. ಹಲ್ಲು ನೋವು ಅಥವಾ ಬಾಯಿ ಹುಣ್ಣು ಕಾಡಬಹುದು. ಸಂಗಾತಿಯು ನಿಮ್ಮ ಸಂಸಾರಕ್ಕಾಗಿ ದುಡಿಯುವರು. ನಿರೀಕ್ಷೆ ಮಾಡದಿದ್ದ ಸಂದರ್ಭಗಳಲ್ಲಿ ಆರ್ಥಿಕ ಸಹಾಯ ಲಭಿಸಬಹುದು. ಉದ್ದಿಮೆದಾರರು ತಮ್ಮ ಮಕ್ಕಳಿಗೆ ಅವರ ವ್ಯವಹಾರಗಳಲ್ಲಿ ಅವಕಾಶ ಕೊಡುವರು. ವಿದೇಶಿ ವ್ಯವಹಾರ ಮಾಡುವವರಿಗೆ ಅನುಕೂಲವಿರುತ್ತದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಬಹಳ ಗೌರವಯುತವಾಗಿ ವರ್ತಿಸುವಿರಿ. ಆದಾಯವು ನಿರೀಕ್ಷೆಯ ಹತ್ತಿರ ಬರುತ್ತದೆ. ಸರ್ಕಾರಿ ಸಂಬಂಧಿತ ಕೆಲಸಗಳಲ್ಲಿ ಆದಾಯವು ಹೆಚ್ಚುತ್ತದೆ. ಜಾಣತನದಿಂದ ಮಾತನಾಡಿ ನಿಮ್ಮ ಕೆಲಸ ಸಾಧಿಸಿಕೊಳ್ಳುವಿರಿ. ನಿಮ್ಮ ಉತ್ತಮ ಕೆಲಸಗಳಿಗೆ ಹಿರಿಯರ ಬೆಂಬಲ ದೊರೆಯುತ್ತದೆ. ವಿದ್ಯಾರ್ಥಿಗಳಿಗೆ ಹೆಚ್ಚಿನ ಯಶಸ್ಸು ಪಡೆಯುವ ಕಾಲ. ಬಂಧುಗಳೊಡನೆ ಯಾವುದೇ ರೀತಿಯ ವ್ಯವಹಾರಗಳು ಬೇಡ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ಆತ್ಮವಿಶ್ವಾಸವನ್ನು ಹೆಚ್ಚು ಮಾಡಿಕೊಳ್ಳುವಿರಿ. ಬಹಳ ಬುದ್ಧಿವಂತಿಕೆಯಿಂದ ಕೆಲಸ ಮಾಡುವಿರಿ. ಆದಾಯವು ಕಡಿಮೆ ಇರುತ್ತದೆ. ಬಂಧುಗಳಿಂದ ಸಹಕಾರ ಸಿಗುವಂತೆ ಕಂಡರೂ, ಸಕಾಲದಲ್ಲಿ ಸಿಗುವುದಿಲ್ಲ. ಆಸ್ತಿ ವಿಚಾರಗಳಲ್ಲಿ ಎಚ್ಚರವಾಗಿರಿ. ಈಗ ವಿದ್ಯಾರ್ಥಿಗಳಿಗೆ ನಿರೀಕ್ಷಿತ ಮಟ್ಟದ ಫಲಿತಾಂಶವಿರುವುದಿಲ್ಲ. ಹೊಟ್ಟೆ ಸಂಬಂಧಿತ ದೋಷಗಳು ನಿಮ್ಮನ್ನು ಕಾಡಬಹುದು. ರಾಜಕಾರಣಿಗಳಿಗೆ ಅಭಿವೃದ್ಧಿ ಯೋಗವಿದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಬಹಳಷ್ಟು ಆಲಸಿತನ ವಾರದ ಆರಂಭದಲ್ಲಿರುತ್ತದೆ. ಆದಾಯವು ಕಡಿಮೆ ಇರುತ್ತದೆ. ಆದರೆ ಕೃಷಿಯಿಂದ ಆದಾಯವನ್ನು ನಿರೀಕ್ಷೆ ಮಾಡಬಹುದು. ಬಂಧುಗಳಿಂದ ಸಹಕಾರವನ್ನು ನಿರೀಕ್ಷೆ ಮಾಡಬಹುದು. ವಿದ್ಯಾರ್ಥಿಗಳಿಗೆ ಸ್ವಲ್ಪ ಉತ್ತಮ ಫಲಿತಾಂಶ ಸಿಗುತ್ತದೆ. ನೀವು ವಿದೇಶದಲ್ಲಿರುವ ನಿಮ್ಮ ಸಂಗಾತಿಯನ್ನು ಹೋಗಿ ಕೂಡಿಕೊಳ್ಳಬಹುದು. ರಾಜಕಾರಣಿಗಳಿಗೆ ಹಿನ್ನಡೆಯಾಗುವ ಸಂದರ್ಭವಿದೆ. ಉದ್ಯೋಗದಲ್ಲಿ ಆದಾಯವು ಹೆಚ್ಚುವ ಸಾಧ್ಯತೆ ಇದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ವಾರದ ಆರಂಭದಲ್ಲಿ ಬಹಳ ಚೈತನ್ಯಶೀಲರಾಗಿರುವಿರಿ. ಮುನ್ನುಗ್ಗುವ ಹುಮ್ಮಸ್ಸು ನಿಮ್ಮಲ್ಲಿ ತುಂಬಿರುತ್ತದೆ. ಆದಾಯವು ಸಾಮಾನ್ಯ ಗತಿಯಲ್ಲಿರುತ್ತದೆ. ಹೆಚ್ಚು ಚಟುವಟಿಕೆಯಿಂದ ಕೆಲಸ ಮಾಡಿ ಎಲ್ಲರ ಗಮನ ಸೆಳೆಯುವಿರಿ. ವಿದ್ಯಾರ್ಥಿಗಳಿಗೆ ಶ್ರಮಕ್ಕೆ ತಕ್ಕ ಫಲ ಮಾತ್ರವಿರುತ್ತದೆ. ಶೀತ ಬಾಧೆ ಅಥವಾ ಕೀಲು ನೋವು ಕಾಣಿಸಬಹುದು.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ಈ ವಾರ ನಿಮಗೆ ಸ್ವಲ್ಪ ತೃಪ್ತಿದಾಯಕವಾಗಿರುತ್ತದೆ. ಆದಾಯವು ಕಡಿಮೆ ಇದ್ದು ಖರ್ಚು ಹೆಚ್ಚಾಗುವ ಸಾಧ್ಯತೆಗಳಿವೆ. ಹಿರಿಯರಿಂದ ನಿಮ್ಮ ಕೆಲಸ, ಕಾರ್ಯಗಳಿಗೆ ಸಹಕಾರ ದೊರೆಯಬಹುದು. ಸ್ಥಿರಾಸ್ತಿಯ ವ್ಯವಹಾರಗಳಲ್ಲಿ ನಷ್ಟ ಉಂಟಾಗುವ ಸಾಧ್ಯತೆಗಳಿವೆ. ವಿದೇಶದಲ್ಲಿ ಓದುತ್ತಿರುವವರಿಗೆ ಹೆಚ್ಚಿನ ಅಭಿವೃದ್ಧಿ ಇರುತ್ತದೆ. ವಾತಬಾಧೆಗಳು ನಿಮ್ಮನ್ನು ಕಾಡಬಹುದು. ಸಂಗಾತಿಯ ಖರ್ಚು ಬಹಳ ಹೆಚ್ಚಾಗುವ ಸಾಧ್ಯತೆಗಳಿವೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ವಾರದ ಆರಂಭದಲ್ಲಿ ಕೋಪ–ತಾಪಗಳನ್ನು ಕಾಣಬಹುದು. ಆದಾಯವು ಸಾಮಾನ್ಯ ಗತಿಯಲ್ಲಿ ಇರುತ್ತದೆ. ಪೊಲೀಸ್ ತರಬೇತಿದಾರರಿಗೆ ಬಹಳ ಅನುಕೂಲವಿರುತ್ತದೆ. ವಿದೇಶದಲ್ಲಿರುವವರು ಸ್ಥಿರಾಸ್ತಿಯನ್ನು ಮಾಡಿಕೊಳ್ಳಹುದು. ಕಾಡುತ್ತಿದ್ದ ಅನಾರೋಗ್ಯ ಈಗ ಶಮನವಾಗುತ್ತದೆ. ಸಂಗಾತಿಯಿಂದ ಅನಿರೀಕ್ಷಿತ ಧನ ಲಾಭವಿರುತ್ತದೆ. ಹಣಕಾಸಿನ ವ್ಯವಹಾರ ಮಾಡುವವರಿಗೆ ಅನಿರೀಕ್ಷಿತ ಲಾಭ ಇರುತ್ತದೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ಸಮೂಹದಲ್ಲಿ ಹೆಚ್ಚು ಕಾಣಿಸಿಕೊಳ್ಳುವಿರಿ. ಆದಾಯವು ಕಡಿಮೆ ಇರುತ್ತದೆ. ವಿದೇಶಿ ವ್ಯವಹಾರ ಮಾಡುವವರ ಆದಾಯ ಬಹಳಷ್ಟು ಹೆಚ್ಚುತ್ತದೆ. ಸಾಂಪ್ರದಾಯಿಕ ಕೃಷಿ ಮಾಡುವವರಿಗೆ ಬೇಡಿಕೆ ಹೆಚ್ಚಾಗುತ್ತದೆ. ಹೆಚ್ಚುವರಿ ಜವಾಬ್ದಾರಿಗಳನ್ನು ತೆಗೆದುಕೊಳ್ಳುವ ಮೂಲಕ ವೃತ್ತಿಯಲ್ಲಿ ಹೆಸರನ್ನು ಮಾಡಬಹುದು. ವಿದ್ಯಾರ್ಥಿಗಳಿಗೆ ಅಪೇಕ್ಷಿಸಿದ ಫಲಿತಾಂಶ ಸಿಗುವುದು ಕಡಿಮೆ. ಸಂಗಾತಿಯ ಆರೋಗ್ಯದಲ್ಲಿ ಸಾಕಷ್ಟು ಸುಧಾರಣೆಯನ್ನು ಕಾಣಬಹುದು.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಯಾವುದೇ ರೀತಿ ಒತ್ತಡಗಳಿಗೆ ಒಳಗಾಗದೆ ನಿಮ್ಮ ಕೆಲಸವನ್ನು ನೀವು ಮಾಡುವಿರಿ. ಸಿದ್ಧಪಡಿಸಿದ ಆಹಾರ ವಸ್ತುಗಳನ್ನು ವಿದೇಶಕ್ಕೆ ಕಳುಹಿಸುವವರಿಗೆ ಆದಾಯ ಹೆಚ್ಚುತ್ತದೆ. ನಿಮ್ಮ ಶತ್ರುಗಳನ್ನು ಮಟ್ಟ ಹಾಕುವ ಕಲೆ ನಿಮಗೆ ಸಿದ್ಧಿಸುತ್ತದೆ. ಸ್ಥಿರಾಸ್ತಿ ಖರೀದಿಸಬಹುದು. ವಿದ್ಯಾರ್ಥಿಗಳಿಗೆ ನಿರೀಕ್ಷೆಯ ಹತ್ತಿರದ ಫಲಿತಾಂಶ ಬರುತ್ತದೆ. ವಿಶೇಷ ಧಾರ್ಮಿಕ ಆಸಕ್ತಿ ನಿಮ್ಮಲ್ಲಿ ಮೂಡುತ್ತದೆ. ಕೃಷಿಯಿಂದ ನಿಮಗೆ ಲಾಭವಿರುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ತಂತ್ರಜ್ಞರಿಗೆ ತುಂಬಾ ಬೇಡಿಕೆ ಬರುತ್ತದೆ. ಆದಾಯವು ಕಡಿಮೆ ಇದ್ದರೂ ಕೂಡ ನಿಭಾಯಿಸುವ ಶಕ್ತಿ ಇರುತ್ತದೆ. ಬಂಧುಗಳು ಸಂಪೂರ್ಣ ಸಹಕಾರ ನೀಡುವುದಿಲ್ಲ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಪಡೆಯುವ ಯೋಗವಿದೆ. ನರ ದೌರ್ಬಲ್ಯ ಅಥವಾ ಕಣ್ಣಿನ ಸಮಸ್ಯೆ ಕೆಲವರನ್ನು ಕಾಡಬಹುದು. ಸರ್ಕಾರಿ ಸಾಲವನ್ನು ಪಡೆದು ಇತರ ಕೈಸಾಲಗಳನ್ನು ತೀರಿಸಿಕೊಳ್ಳಬಹುದು.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಕೃಷಿಯಿಂದ ನಿರೀಕ್ಷಿತ ಆದಾಯ ಬರುತ್ತದೆ. ನಿಮ್ಮ ಬಂಧುಗಳು ಕೆಲವೊಮ್ಮೆ ಸಹಕಾರ ನೀಡುವವರು. ಸಂಸಾರದಲ್ಲಿ ಸಂತೋಷವಿರುತ್ತದೆ. ವಿದ್ಯಾರ್ಥಿಗಳಿಗೆ ಉತ್ತಮ ಯಶಸ್ಸು ದೊರೆಯುತ್ತದೆ. ಉದರ ಸಂಬಂಧಿ ದೋಷಗಳು ನಿಮ್ಮನ್ನು ಕಾಡಬಹುದು. ನಿಮ್ಮ ಸಂಗಾತಿಯ ಸಹಾಯದಿಂದ ಕೃಷಿ ಮಾಡಬಹುದು.

ಪದಬಂಧ 2904

ಮೇಲಿನಿಂದ ಕೆಳಕ್ಕೆ

2. ಅಡುಗೆಯಲ್ಲಿ ಹದತಂದರೂ ನಂಬುವುದಕ್ಕೇ ಆಗದ ಕಿಲಾಡಿ	3
3. ತನ್ನವರ ಮೇಲೆ ಇರುವ ಅಕ್ಕರೆ ಅಲ್ಪಖಾರದ್ದು	4
4. ವೇಗವನ್ನು ಬಯಸುವ ಈತನಿಗೆ ಬುದ್ಧಿ ಮಟ್ಟ	5
5. ಯಾರಿಗೂ ಹೆದರದ ನೇರ ನಿಲುವು, ಎದೆಗಾರಿಕೆ	4
7. ಸಾಲಕೊಟ್ಟು ಅಸಲಿನಿಂದ ಗಳಿಸುವ ಹಣ ತಿನ್ನುವುದಕ್ಕೆಂದೇ ಹುಟ್ಟಿರುವ ಪುತ್ರ	4
8. ಭೂಮಿಯಂತಹ ಬುದ್ಧಿಯುಳ್ಳವಳು	4
10. ನಿರ್ಮಲ ತಾವರೆಯನ್ನು ಹೊಕ್ಕಳಲ್ಲಿ ಬೆಳೆಸಿಕೊಂಡವ	5
14. ಪರರಿಗೆ ಉರಿಯುಂಟು ಮಾಡುವ ಅರ್ಜುನ	4
15. ಘಳಿಗೆ ಘಳಿಗೆಯ ಎಣಿಕೆ	4
16. ಹೂವಿನಂತಹ ಒಳ್ಳೆಯ ಮನಸ್ಸನ್ನು ಅಪಹರಿಸುವ ಈಶ್ವರ	5
17. ಚೊಕ್ಕವಾಗಿ ಹೊಂದಿಸಿಕೊಡು	4
19. ಗುರುಪೀಠವನ್ನು ಅಲಂಕರಿಸುವ ಶ್ರೇಷ್ಠ ಸಂನ್ಯಾಸಿ	4
21. ಯುಗ ಬದಲಾಗಿ ಯಾಗ ಮೊಟಕಾಗಿ ಹರಿಯುವ ಸಣ್ಣ ನದಿ ನೀರಿನಾಟಕ್ಕೆ ಹೆಸರುವಾಸಿ	3

ಎಡದಿಂದ ಬಲಕ್ಕೆ

1. ಆಕಾಶದಲ್ಲಿನ ಸೂರ್ಯನನ್ನು ಹೋಲುವ ದಾಸವಾಳ	5
4. ಭರವಸೆಯ ಆಸೆ ಹೊತ್ತು ತನ್ನ ನಿಲುವು ಮಂಡಿಸುವವ	4
6. ಗೃಹಕ್ಕೆ ಮೀಸಲಾದ ನುಡಿ	4
7. ನಾನು ಬಡವಿ ಆತ……..	3
9. ಅಸ್ವಸ್ಥವಾದ ಜನಜೀವನವನ್ನು ಮೇಲೆತ್ತಲು ಬಂದವ	4
11. ಆವರಿಸುವ ತೀವ್ರ ನಿಶ್ಶಬ್ಧ	4
12. ಜೇನಿನಂತೆ ಸಿಹಿ ಸವಿ	3
13. ಗುಂಪುಗಳ ಎಣಿಕೆ	3
14. ಪ್ರತ್ಯಕ್ಷವಾಗಿ ಅಲ್ಲ, ಕಣ್ಣಿಗೆ ಕಾಣದಂತೆ ನಡೆವ ಮಾತು , ವಿಷಯ, ಘಟನೆ	3
16. ನಾ ಹೂವೆನ್ನುವ ಒಳ್ಳೆಯ ಅಂತರಂಗದ ಹುಡುಗಿ	3
17. ಸಾಗುತ್ತಾ ಬರುವ ವಿಷ್ಣುವಿನ ಚಂದವಾದ ಹೆಸರು	4
18. ಹೆದರಿಕೆ ಗಾಬರಿಯಿಂದ ಕಂಗಾಲಾದವ	4
20. ಸಾಗುವ ಜೀವನ ಯಾತ್ರೆ	3
22. ಕಡಲೆ ಮಿಶ್ರಿತ ಬೆಲ್ಲದನ್ನವನ್ನು ತಿಂದ ಕುದುರೆ ಕೊರಳಿನ ವಿಷ್ಣು ಅವತಾರ	4
23. ದೇವತೆಗಳ ಜೊತೆ ಸೇರಿದ ಮಾನವ	4
24. ಖಂಡಿತವಾಗಿ ಅನರ್ಘ್ಯ ಹರಳುಗಳಿಂದ ಕೂಡಿದ್ದು	5



ಪದಬಂಧ ಉತ್ತರ -2903

ಮೇಲಿಂದ ಕೆಳಕ್ಕೆ

1.ಸಮಾಸ 2.ಸುಶ್ರಾವ್ಯ 3.ಗಣಕ 4.ತನಯ 7.ಕಾಯಕ 9.ವಿಹಾರ 10.ಸತಸಂ 11.ರವಿಕೆ 12.ವಿರಸ 13.ಮನವಿ 16.ನೌಕರಿ 18.ರಜತ 19.ರಸಿಕ 20.ತವಕ 21.ಸಂಭವ 22. ರಮಣ

ಎಡದಿಂದ ಬಲಕ್ಕೆ

1.ಸವಿಗನಸು 3.ಗಣಪೂಜಿತ 5.ಶ್ರಾವಣ 6.ಸಮಗ್ರಕಾವ್ಯ 8.ಕವಿಸಮಯ 10.ಸತ್ಯಶಂಕರ 12.ವಿರಳತಮ 14.ವಿಧುರ 15.ಸಂಸಾರನೌಕೆ 17.ಸರಳಜೀವಿ 19.ರಸಪೂರಿತ 21.ಸಂತಕಬೀರ 23.ವಲ್ಲಭ 24.ಕಪಿನಾಯಕ 25.ವಶೀಕರಣ

ಸಂಗೀತದ ಅನುಸಂಧಾನ ಸಾಧನೆಯೊಂದೇ ಧ್ಯಾನ!

ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದವರಾದ ಪಂಡಿತ ಪರಮೇಶ್ವರ ಹೆಗಡೆ ಹಿಂದೂಸ್ತಾನಿ ಸಂಗೀತದ ಮೇರು ಗಾಯಕ. ಕಿರಾಣ–ಗ್ವಾಲಿಯರ್–ಪಟಿಯಾಲ ಘರಾಣೆಯಲ್ಲಿ ಹಾಡುವ ಇವರು ಸಂಗೀತ ದಿಗ್ಗಜ ಪಂಡಿತ ಬಸವರಾಜ ರಾಜಗುರು ಅವರ ಗರಡಿಯಲ್ಲಿ ಪಳಗಿದವರು. ಆಕಾಶವಾಣಿಯ ಟಾಪ್ ಗ್ರೇಡ್ ಕಲಾವಿದರಾಗಿ ರೂಪುಗೊಂಡ ಹೆಗಡೆ ಅವರು 'ಭಾನುವಾರದ ಪುರವಣಿ'ಯೊಂದಿಗೆ ತಮ್ಮ ಸಂಗೀತ ಸಾಧನೆಯ ಸಾರವನ್ನು ಹಂಚಿಕೊಂಡಿದ್ದಾರೆ.

• ಉಮಾ ಅನಂತ್

• ನಿಮಗೆ ಸಂಗೀತ ರಸಾಸ್ವಾದನೆಯ ರುಚಿ ಹತ್ತಿದ್ದು ಹೇಗೆ?

ಅದು ಅರವತ್ತರ ದಶಕ. ನಾನು ಅದು ಹೇಗೆ ಸಂಗೀತದ ಹುಚ್ಚು ಬೆಳೆಸ್ಕೊಂಡೆನೋ ಗೊತ್ತಿಲ್ಲ. ಮನೆಯಲ್ಲಂತೂ ಸಂಗೀತದ, ಕಲೆಯ ವಾತಾವರಣ ಇತ್ತು. ತಂದೆಯವರು ಭಜನೆ, ಯಕ್ಷಗಾನ, ನಾಟಕ, ಹಾರ್ಮೋನಿಯಂ ವಾದನದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಜೊತೆಗೆ ಸಂಗೀತದ ಗೀಳೂ ಇತ್ತು, ನನಗಾಗ ಎಂಟು ವರ್ಷ. ನನಗೆ ಸಂಗೀತ ಕಲಿಸಬೇಕು ಎಂಬ ಆಸೆ ಅಪ್ಪನಿಗಿತ್ತು. ಹೀಗಾಗಿ ಹೊನ್ನಾವರದ ನಮ್ಮ ಮನೆಗೆ ಸಂಗೀತ ಗುರು ಪಂಡಿತ ಎಸ್.ಎಂ. ಭಟ್ ಕಟ್ಟಿಗೆ ಅವರನ್ನು ಗೋಕರ್ಣದಿಂದ ಕರೆಸಿಕೊಂಡು ಸಂಗೀತಾಭ್ಯಾಸಕ್ಕೆ ಶುರುವಿಟ್ಟುಕೊಂಡೆ. ಮುಂದೆ ಪಂಡಿತ ಚಂದ್ರಶೇಖರ್ ಪುರಾಣಿಕಮಠ ಅವರ ಬಳಿ ಕಲಿಯಲಾರಂಭಿಸಿದೆ. ಅವರು ತಬಲಾ, ಹಾರ್ಮೋನಿಯಂ ಸಾಥಿಯೊಂದಿಗೇ ಸಂಗೀತಾಭ್ಯಾಸ ಮಾಡಿಸೋರು. ಶಾಸ್ತ್ರೀಯ ಸಂಗೀತದ ಬಗ್ಗೆ ಹಳ್ಳಿಯ ಜನರಲ್ಲಿ ಅಷ್ಟಾಗಿ ಜ್ಞಾನ ಇಲ್ಲದ ಕಾಲವದು. ನಾನು ತಂಬೂರಿ ಹಿಡಿದುಕೊಂಡು ಅಭ್ಯಾಸ ಮಾಡಲಾರಂಭಿಸಿದರೆ ಜನ 'ಇದೇನೋ ಭೀಮನ ಗದೆ ಹಿಡ್ಕೊಂಡು ಹಾಡ್ತಿಯಲ್ಲೋ..' ಎನ್ನೋರು. ಬಸ್‌ನಲ್ಲಿ ತಂಬೂರಿ ತೆಗೆದುಕೊಂಡು ಹೋಗುವಾಗ 'ಹುಷಾರು, ಯಾರದಾದ್ರೂ ತಲೆಗಿಲೆ ಒಡೆದು ಬಿಟ್ಟೀಯ' ಅಂತ ತಮಾಷೆ ಮಾಡೋರು. ಮುಂದೆ ನಾನು ಧಾರವಾಡಕ್ಕೆ ಬಿ.ಕಾಂ ಪದವಿ ಕಲಿಯಲು ಹೋಗಬೇಕಾಯ್ತು. ನನ್ನ ಅದೃಷ್ಟಕ್ಕೆ ಪುರಾಣಿಕಮಠ ಅವರಿಗೆ ಧಾರವಾಡ ಆಕಾಶವಾಣಿಯಲ್ಲಿ ನಿಲಯ ಕಲಾವಿದರಾಗಿ ಕೆಲಸ ಸಿಕ್ತು. ಹೀಗಾಗಿ ಅವರ ಮನೆಗೇ ಹೋಗಿ ಸಂಗೀತ ಕಲಿಯುತ್ತಿದ್ದೆ. ಒಮ್ಮೆ ಅವರು ಹಿಂದೂಸ್ತಾನಿ ಸಂಗೀತ ದಿಗ್ಗಜ ಪಂಡಿತ ಬಸವರಾಜ ರಾಜಗುರು ಅವರನ್ನು ಪರಿಚಯಿಸಿ, 'ಈ ಹುಡುಗ ಅಗ್ದಿ ಚೊಲೊ ಹಾಡ್ತಾನ, ಇವ್ನಿಗೆ ಇನ್ಮುಂದೆ ನೀವು ಕಲಿಸ್ರಿ' ಎಂದರು. ಅಲ್ಲಿಂದ ನನ್ನ ಸಂಗೀತ ಬದುಕಿಗೆ ಹೊಸ ತಿರುವು ಸಿಕ್ಕಿದ ಹಾಗಾಯ್ತು.

• ಪಂಡಿತ ಬಸವರಾಜ ರಾಜಗುರು ಅವರ ಗರಡಿಯಲ್ಲಿ ಪಳಗಿದ ನಿಮಗೆ ಅವರ ಆದರ್ಶಗಳು ಪ್ರಭಾವಿಸಿದ ಪರಿ ಹೇಗೆ?

ಹಿಂದೂಸ್ತಾನಿ ಸಂಗೀತ ಕಿರಾಣ, ಪಟಿಯಾಲ ಹಾಗೂ ಗ್ವಾಲಿಯರ್ ಘರಾಣೆಯಲ್ಲಿ ಹಾಡುತ್ತಿದ್ದ ಪಂಡಿತ ಬಸವರಾಜ ರಾಜಗುರು ಎಂದರೆ ಅವರು ಸಾಧನೆಯ ಶಿಖರ. ಬಹಳ ಕಟ್ಟುನಿಟ್ಟಿನ ವ್ಯಕ್ತಿ, ಅವರ ಶಿಷ್ಯತ್ವ ನನಗೆ ಸಿಕ್ಕಿದ್ದು ನಿಜವಾಗಿಯೂ ಅದೃಷ್ಟವೆಂದೇ ಹೇಳಬೇಕು. ಅವರ ಕಲಿಸುವಿಕೆ ಹೇಗೆ ಎಂದರೆ ಸಂಗೀತ ಕಲಿಸಿದ್ದು ಹಾಡಲು ಬರದೇ ಇದ್ದರೆ ಅವರು ಬಿಡುವವರೇ ಅಲ್ಲ. ಕಾಂಪ್ರೊಮೈಸ್ ಅನ್ನೋದು ಇಲ್ಲವೇ ಇಲ್ಲ. ಅವರದೇ ಘರಾಣೆಯಲ್ಲಿ ನಾನೂ ಹಾಡುವುದು, ಅವರ ಎಷ್ಟೋ ಕಛೇರಿಗಳಿಗೆ ನಾನು ತಂಬೂರ ನುಡಿಸಿದ್ದೀನಿ, ಸಹಗಾಯನ ಮಾಡಿದ್ದೀನಿ. ಅವರೊಂದಿಗೆ ಕಛೇರಿಯಲ್ಲಿ ಕೂರೋದೇ ಒಂದು ಪಾಠ ಅಂತ ಅನಿಸುತ್ತಿತ್ತು. ಅವರು ಬೆಳಿಗ್ಗೆ ರಿಯಾಜ್ ಮಾಡುವಾಗ ನಾನು ತಪ್ಪದೇ ಹೋಗಿ ತಂಬೂರ ನುಡಿಸುತ್ತಿದ್ದೆ. ಆಗ ತಬಲಾ ವಾದಕರನ್ನೂ ಕರೆಸುತ್ತಿದ್ದರು, ಬೆಳಿಗ್ಗೆ 6ರಿಂದ 8.30ರವರೆಗೂ ರಿಯಾಜ್ ಇರ್ತಿತ್ತು. ಅದು ಒಂದು ರೀತಿಯ ಲೈವ್ ಪ್ರೋಗ್ರಾಂ ತರನೇ ಆಗ್ತಿತ್ತು. ಸಂಗೀತಗಾರರನ್ನು ತಯಾರು ಮಾಡುವ ಪರಂಪರೆ ಅಂದರೆ ಹೀಗೆ. ಶಿಷ್ಯರಲ್ಲಿ ಟ್ಯಾಲೆಂಟ್– ಕಮಿಟ್‌ಮೆಂಟ್ ಇದ್ದರೆ ಮಾತ್ರ ಅವರ ಬಳಿ ಅವಕಾಶ.

• ಸಂಗೀತದಲ್ಲಿ ಗುರು–ಶಿಷ್ಯ ಪರಂಪರೆ ಎಂದರೆ ಅದಕ್ಕೆ ವಿಶೇಷ ಆದ್ಯತೆ. 'ಗುರು–ಶಿಷ್ಯ' ಪರಂಪರೆಯನ್ನು ನೀವು ಹೇಗೆ ವ್ಯಾಖ್ಯಾನಿಸುತ್ತೀರಿ?

ಸಂಗೀತದಲ್ಲಿ ಹಿಂದಿನ ಗುರು– ಶಿಷ್ಯ ಪರಂಪರೆಯನ್ನು ಈಗಿನ ವಿದ್ಯಮಾನಕ್ಕೆ ಹೋಲಿಸುವ ಹಾಗೆಯೇ ಇಲ್ಲ. ಹಿಂದೆ ಸಂಗೀತವನ್ನು ಗಂಭೀರವಾಗಿ ಅಭ್ಯಾಸ ಮಾಡೋರು. ಈಗ ಶಾಸ್ತ್ರೀಯ ಸಂಗೀತವನ್ನು ಸೀರಿಯಸ್ ಆಗಿ ಕಲಿಯುವವರು 50ರಲ್ಲಿ ಕೇವಲ ನಾಲ್ಕೇ ನಾಲ್ಕು ಜನ. ನಾನಂತೂ 'ಪರಮೇಶ್ವರ ಹೆಗಡೆ ಸಂಗೀತ ಅಕಾಡೆಮಿ' ಸ್ಥಾಪಿಸಿ ಹಳೆಯ ಸಂಪ್ರದಾಯದ ಕಲಿಕೆ, ಕಲಿಸುವಿಕೆಯನ್ನು ಮುಂದುವರಿಸಿದ್ದೀನಿ. ಹಿಂದೆ ಸಂಗೀತ ಕಲಿಯುವಾಗ ಗುರುಗಳ ಕೈಲಿ ಚೆನ್ನಾಗಿ ಬೈಸಿಕೊಳ್ತಾ ಇದ್ವಿ. ಈಗಿನವರಿಗೆ ಬೈದರೆ ಸಿಟ್ಟು ಬರುತ್ತೆ. ಮತ್ತೆ ಕ್ಲಾಸಿಗೇ ಬರಲ್ಲ. ಆದರೆ ನಾನು ಮಾತ್ರ ಶಿಷ್ಯ ಸರಿಯಾಗಿ ಕಲಿಯದೇ ಹೋದ್ರೆ ಬೈಯುವವನೇ. ಹೀಗಾಗಿ ಈಗ ಸಂಗೀತದಲ್ಲಿ 'ಗಟ್ಟಿಕಾಳು' ಸಿಗೋದು ಬಾರೀ ಅಪರೂಪವಾಗಿ ಬಿಟ್ಟಿದೆ.

• ಗುರುಗಳೊಂದಿಗೆ ಒಡನಾಟ ಶಿಷ್ಯಂದಿರಿಗೆ ಎಂದಿಗೂ ಪುಳಕವೇ. ನಿಮ್ಮ– ಗುರುಗಳ ಅನ್ಯೋನ್ಯತೆ ಹೇಗಿತ್ತು?

ಶಿಸ್ತಿನಿಂದ ಅಭ್ಯಾಸ ಮಾಡುವ ಶಿಷ್ಯಂದಿರನ್ನು ಗುರುಗಳು ಬಹಳ ಪ್ರೀತಿಸೋರು. ಒಮ್ಮೆ ಅವರಿಗೆ ದೆಹಲಿಯಲ್ಲಿ ಸಂಗೀತ ಕಛೇರಿ ಇತ್ತು. ನನ್ನನ್ನೂ ಕರ್ಕೊಂಡ್ ಹೋಗಿದ್ರು. ಸಂಜೆ ಕಛೇರಿ ಮುಗಿಸಿಕೊಂಡು ರೂಂಗೆ ಬಂದೆವು. ಆಗಲೇ ಅವರು ಮರುದಿನ 'ದೆಹಲಿ ದರ್ಶನ' ಮಾಡಿಸುವ ಬಸ್ ಟಿಕೆಟ್ ತಂದು ಕೊಟ್ರು. 'ನಾಳೆ ನೀನು ಇಡೀ ಡೆಲ್ಲಿ ನೋಡ್ಕೊಂಡು ಬರ್ಬೇಕು. ಇಗೋ ಇಲ್ಲಿದೆ ಟಿಕೆಟ್, ತಗೊ' ಅಂದ್ರು. ಆಗ ನಾನು 'ಗುರುಗಳೇ, ನನಗೆ ಪರೀಕ್ಷೆ ಇದೆ, ನಾನು ನಾಳೆ ಧಾರವಾಡಕ್ಕೆ ಹೋಗಬೇಕು ಅಂದೆ. ಆಗ 'ಯಾವ ಪರೀಕ್ಷೆ?' ಅಂತ ಕೇಳಿದ್ರು. 'ಬಿ.ಕಾಂ ಪರೀಕ್ಷೆ' ಅಂದೆ. 'ಬಿ.ಕಾಂ ರಗಡ್ ಮಂದಿ ಮಾಡ್ತಾರ, ಸಂಗೀತ ಕಲಿಯೋರು ಕಡಿಮೆ, ನೀನು ಡೆಲ್ಲಿ ಸುತ್ತಿ ನೋಡಿಕೊಂಡೇ ಹೋಗಬೇಕು' ಅಂದ್ರು. ಅಷ್ಟು ಅಭಿಮಾನ, ಪ್ರೀತಿ ಅವರಿಗೆ ನನ್ನ ಮೇಲೆ.

• ಮುಂಡಗೋಡದಲ್ಲಿ ಸರ್ಕಾರಿ ಕಾಲೇಜಿನಲ್ಲಿ ಸಂಗೀತ ಶಿಕ್ಷಕರಾಗಿದ್ದ ನೀವು, ಬೆಂಗಳೂರಿಗೆ ಬಂದು ಸಂಗೀತದಲ್ಲಿ ಭದ್ರವಾಗಿ ನೆಲೆಯೂರಿದ್ದು ಹೇಗೆ?

ಇದು ಸುಮಾರು 70ರ ದಶಕ. ಆಗ ನಾನು ಉತ್ತರ ಕನ್ನಡ ಜಿಲ್ಲೆ ಮುಂಡಗೋಡದಲ್ಲಿದ್ದೆ. ಕಲಿಕೆ ಮುಗಿದ ಬಳಿಕ ಅಲ್ಲೇ ಸರ್ಕಾರಿ ಕಾಲೇಜಿನಲ್ಲಿ ಸಂಗೀತ ಶಿಕ್ಷಕನಾಗಿದ್ದೆ. ಧಾರವಾಡದಲ್ಲಿ ನನ್ನ ಗುರುಗಳ ಬಳಿ ಸಂಗೀತ ಕಲಿಕೆಯನ್ನು ಅವರ ನಿಧನದ ವರ್ಷ (1991)ದವರೆಗೂ ಕಲಿತೆ. ಅದಾಗಿ ಒಮ್ಮೆ ನನ್ನ ಸಂಗೀತ ಕಛೇರಿಗೆ ಆಗಿನ ಮುಖ್ಯಮಂತ್ರಿಗಳಾಗಿದ್ದ ಎಸ್. ಬಂಗಾರಪ್ಪ ಅವರು ಬಂದಿದ್ರು. ಕಛೇರಿ ಬಳಿಕ ನನ್ನನ್ನು ಮಾತಾಡಿಸಿ, 'ನೀವು ಬೆಂಗಳೂರಿಗೆ ಯಾಕೆ ಬರಬಾರದು?' ಅಂದ್ರು. 'ನೀವು ಕರೆಸಿಕೊಳ್ಳೋದಾದರೆ ಬರುವೆ' ಎಂದೆ. ಹೀಗೆ ಬಂಗಾರಪ್ಪ ಅವರಿಂದಲೇ ನಾನು 1992ರಲ್ಲಿ ಬೆಂಗಳೂರಿಗೆ ಬರುವಂತಾಯಿತು. ಇಲ್ಲೇ ಸಂಗೀತ ಅಕಾಡೆಮಿ ಶುರು ಮಾಡಿದೆ. ಕಛೇರಿ, ಕ್ಲಾಸ್‌ಗಳಲ್ಲಿ ತೊಡಗಿಕೊಂಡೆ. ಬಂಗಾರಪ್ಪ ಅವರಿಗೆ ಶಾಸ್ತ್ರೀಯ ಸಂಗೀತ ಅಂದ್ರೆ ಭಾಳ ಪ್ರೀತಿ. ರಾತೋ ರಾತ್ರಿ ವಿಮಾನ ಹತ್ತಿ ಪುಣೆಯ ಸವಾಯ್ ಗಂಧರ್ವ ಉತ್ಸವಕ್ಕೆ ಹೋಗಿ ಸಂಗೀತ ಕೇಳೋರು.

ಒಮ್ಮೆ ಸೊರಬದಲ್ಲಿ ಸಂಗೀತ ಕಛೇರಿ ಇತ್ತು. ಅಲ್ಲಿಗೆ ಬಂಗಾರಪ್ಪ ಅವರು ಸಂಗೀತ ಕೇಳೋದಕ್ಕೆ ಅಂತ ಬಂದಿದ್ರು. ವೇದಿಕೆಯ ಮುಂಭಾಗದಲ್ಲಿ ನನ್ನ ಪಕ್ಕ ಬಂದು ಕುಳಿತ್ರು. ಅಷ್ಟೊತ್ತಿಗೆ ಸಂಘಟಕರು ಒಂದು ಸಿಂಹಾಸನದಂತಿರುವ ದೊಡ್ಡ ಕುರ್ಚಿಯನ್ನು ತಂದು ಬಂಗಾರಪ್ಪ ಅವರನ್ನು ಕುಳಿತುಕೊಳ್ಳುವಂತೆ ವಿನಂತಿಸಿದ್ರು. ಆಗ ಅವರು, 'ಕೊಂಡೋಗಿ ಇದನ್ನ ಆಚೆ, ನನಗೆ ಸಿಂಹಾಸನ ಬೇಡ' ಅಂದ್ರು. ಆಮೇಲೆ ಇವರಿಗೆ ತಿನ್ನಲು ಹಣ್ಣುಹಂಪಲು ತಂದು ಕೊಟ್ಟಾಗಲೂ 'ನನಗೀಗ ಏನೂ ಬೇಡ, ನಾನು ಸಂಗೀತ ಕೇಳಬೇಕು' ಅಂತ ಹೇಳಿದ್ರು. ಇದು ಅವರ ಸಂಗೀತದ ಪ್ರೀತಿಯನ್ನು ತೋರಿಸುತ್ತೆ. ಸಂಗೀತವನ್ನು ಇಷ್ಟೊಂದು ಇಷ್ಟಪಡುತ್ತಿದ್ದ ರಾಜಕಾರಣಿಯನ್ನು ನಾನು ಜೀವಮಾನದಲ್ಲಿ ನೋಡಿದ್ದು ಇವರನ್ನು ಮಾತ್ರ.

• ನಿಮ್ಮ ಗುರುಗಳ ಹೆಸರಿನಲ್ಲಿ 'ರಾಜಗುರು ಸ್ಮೃತಿ' ಸಂಗೀತೋತ್ಸವ ಪ್ರತಿವರ್ಷ ಏರ್ಪಡಿಸುತ್ತಾ ಬಂದಿರುವ ನಿಮ್ಮ ಸಂಗೀತದ ಇನ್ನಿತರ ಚಟುವಟಿಕೆಗಳೇನು?

ಗುರುಗಳ ಹೆಸರಿನಲ್ಲಿ ಬೆಳಗಿನ ರಾಗಗಳನ್ನು ಕೇಳುವ ಸಲುವಾಗಿ 'ರಾಜಗುರು ಸ್ಮೃತಿ' ಕಛೇರಿಗಳನ್ನು ಆಯೋಜಿಸುತ್ತಾ ಬಂದೆ. 'ಸುರ್ ಪ್ರಭಾತ್' ಎಂಬ ವಾರ್ಷಿಕ ಸಂಗೀತ ಸಮಾರೋಹ ಹಾಗೂ 'ಪರಂಪರಾ' ಎಂಬ ಮತ್ತೊಂದು ಕಾರ್ಯಕ್ರಮ... ಒಟ್ಟು ಮೂರು ವೈವಿಧ್ಯಮಯ ಕಛೇರಿಗಳನ್ನು ಆಯೋಜಿಸುತ್ತೇನೆ. ಸತತವಾಗಿ ಬೈಠಕ್ ಮಾಡ್ತೀನಿ. ಮಕ್ಕಳಿಗೆ ಮುಂದಿನ ಪೀಳಿಗೆಗಾಗಿ 'ರಾಗ–ಅನುರಾಗ' ಎಂಬ ಆಲ್ಬಂ ಅನ್ನು ಮೂರು ಆವೃತ್ತಿಯಲ್ಲಿ ಹೊರತಂದಿದ್ದೇನೆ.



ರೆಮೋನ ಇವೆಟ್ ಪಿರೇರ

170 ಗಂಟೆ ನಿರಂತರ ಭರತನಾಟ್ಯ...

8ನೇ ಪುಟದಿಂದ...

'ಪ್ರಯೋಗದಿಂದ ನನಗೆ ತೊಂದರೆ ಆಗುವುದಿಲ್ಲ ಎನ್ನುವುದು ಅಮ್ಮನಿಗೆ ಮನದಟ್ಟಾದರೆ ಮಾತ್ರ ಅಂತಹ ನೃತ್ಯವನ್ನು ಮಾಡಲು ಹೇಳುತ್ತಿದ್ದರು' ಎಂದು ಹೇಳುವಾಗ ಕಣ್ಣಲ್ಲಿ ನೀರಿತ್ತು. ಅಷ್ಟಾದರೂ ಒಮ್ಮೆ ಸಮುದ್ರ ದಂಡೆಯಲ್ಲಿ ನಡೆಯುತ್ತಿದ್ದ ಕಾರ್ಯಕ್ರಮದಲ್ಲಿ ಎರಡೂ ಕೈಗಳಲ್ಲಿ ಬೆಂಕಿಯ ಮಣ್ಣಿನ ಮಡಕೆಗಳನ್ನು ಹಿಡಿದು ನೃತ್ಯ ಮಾಡುತ್ತಿರಬೇಕಾದರೆ ಮಡಕೆ 'ಟಪ್' ಅಂತ ಒಡೆಯಿತು. ಬೆಂಕಿಯಿರುವ ಮಡಕೆಯನ್ನು ಬಿಸಾಡಿಬಿಡುವಂತಿಲ್ಲ, ಮುಂದೆಯೇ ಪ್ರೇಕ್ಷಕರಿದ್ದಾರೆ. ಹಾಗೆಂದು ಅಂಗೈ ಸುಡುತ್ತಿತ್ತು. ಅಷ್ಟರಲ್ಲಿ ಅಮ್ಮನೇ ಬಂದು ಮಡಕೆಗಳನ್ನು ತೆಗೆದುಕೊಂಡು ಹೋದರು. ಹೊಸ ಪ್ರಯೋಗಗಳನ್ನು ಮಾಡುವಾಗ ಇಂತಹ ಸವಾಲುಗಳಿರುತ್ತವೆ. ಆದರೂ ಹೊಸದನ್ನು ಪ್ರಯತ್ನಿಸುವುದರಲ್ಲಿಯೇ ಹೆಚ್ಚಿನ ಖುಷಿಯಿರುತ್ತದೆ' ಎಂದು ರೆಮೋನ ಹೇಳುತ್ತಾರೆ. ಮುಂದೇನು ಎಂಬ ಪ್ರಶ್ನೆಗೆ ಭರತನಾಟ್ಯದಲ್ಲಿ ವಿದ್ವತ್ ಪರೀಕ್ಷೆಗೆ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿರುವೆ ಎಂದರು.

ಇವರಿಗೆ ನೃತ್ಯವೇ ಜೀವ ಮತ್ತು ಜೀವನ, ಎಲ್ಲವೂ.

ಮೊದಲ ಓದು

ದಶರೂಪಕಗಳ ದಶಾವತಾರ
ಲೇ: ಅಶೋಕ ಹಾಸ್ಯಗಾರ
ಪ್ರ: ಯಾಜಿ ಪ್ರಕಾಶನ
ಸಂ: 9148739504

ಆಳ ವಿಶ್ಲೇಷಣೆಯ ಅಧ್ಯಯನಾತ್ಮಕ ಗ್ರಂಥ

ಅಶೋಕ ಹಾಸ್ಯಗಾರರ ದಶಾವತಾರದ ದಶರೂಪಕ ಕೃತಿ, ಯಕ್ಷಗಾನದ ಶಾಸ್ತ್ರೀಯತೆಯನ್ನು ಭರತನ ನಾಟ್ಯಶಾಸ್ತ್ರದ ದಶರೂಪಕಗಳ ಆಧಾರದ ಮೇಲೆ ಆಳವಾಗಿ ವಿಶ್ಲೇಷಿಸುವ ಅಧ್ಯಯನಾತ್ಮಕ ಗ್ರಂಥವಾಗಿದೆ.

ಯಕ್ಷಗಾನದ ಪಾತ್ರಗಳು, ಪ್ರಸಂಗಗಳು, ಚೌಕಿಮನೆ, ಭಾಗವತ, ವಾದನ, ರಂಗಪ್ರವೇಶ ಮುಂತಾದ ಅಂಶಗಳನ್ನು ನಾಟ್ಯಶಾಸ್ತ್ರದ ನಿಯಮಗಳೊಂದಿಗೆ ಹೋಲಿಸಿ ಲೇಖಕರು ಸ್ಪಷ್ಟ ವಿಶ್ಲೇಷಣೆ ನೀಡಿದ್ದಾರೆ. ನಾಟ್ಯಶಾಸ್ತ್ರದ ಭಾಣ, ಪ್ರಹಸನ, ಡಿಮ, ವ್ಯಾಯೋಗ ಮೊದಲಾದ ರೂಪಕಗಳನ್ನು ಯಕ್ಷಗಾನದಲ್ಲಿನ ಪಾತ್ರಗಳು ಮತ್ತು ಪ್ರಸಂಗಗಳ ಮುಖಾಂತರ ವಿವರಣೆ ನೀಡಿದ್ದಾರೆ.

ಸೃಷ್ಟಿ, ಸ್ಥಿತಿ, ಲಯ ತತ್ತ್ವಗಳನ್ನು ಯಕ್ಷಗಾನ ಶೈಲಿಗೆ ಸಮರ್ಪಕವಾಗಿ ಅನ್ವಯಿಸಿದ್ದಾರೆ. ಭಾಗವತನೆಂಬ ಸೂತ್ರಧಾರನ ಪಾತ್ರ, ವೇಷಭೂಷಣ, ಆಹಾರ್ಯಾಭಿನಯ ಮುಂತಾದ ಅಂಶಗಳನ್ನು ಶಾಸ್ತ್ರದ ಬೆಳಕಿನಲ್ಲಿ ವಿವೇಚಿಸಿದ್ದಾರೆ. ದೇಶೀ ಮಾರ್ಗವನ್ನು ಅಳವಡಿಸಿಕೊಂಡು ಯಕ್ಷಗಾನಕ್ಕೂ ನಾಟ್ಯಶಾಸ್ತ್ರಕ್ಕೂ ಇರುವ ಸಂಬಂಧವನ್ನು ಸಾದರಪಡಿಸಿರುವ ಈ ಕೃತಿ, ಯಕ್ಷಗಾನವನ್ನು ಕೇವಲ ಜನಪದ ಕಲೆಯೆಂದು ನೋಡುವ ನಿಲುವಿಗೆ ಶಾಸ್ತ್ರೀಯ ಒಳನೋಟವನ್ನು ಒದಗಿಸುತ್ತದೆ.

ಈ ಗ್ರಂಥ, ಯಕ್ಷಗಾನ ಹಾಗೂ ಇತರ ನಾಟ್ಯಪದ್ಧತಿಗಳ ಅಧ್ಯಯನದಲ್ಲಿ ತೊಡಗಿರುವವರಿಗೆ ಅಮೂಲ್ಯ ಮಾಹಿತಿ ನೀಡುತ್ತದೆ. ಕೃತಿಯು ಕೇವಲ ವಿಚಾರಗಳನ್ನು ಮಾತ್ರ ಪರಿಚಯಿಸುವುದಲ್ಲದೆ, ಅನೇಕ ಹೊಸ ಪ್ರಶ್ನೆಗಳನ್ನು ಎಬ್ಬಿಸಿ, ಅವುಗಳಿಗೆ ಉತ್ತರ ಹುಡುಕುವ ಮಾರ್ಗವನ್ನೂ ಸೂಚಿಸುತ್ತದೆ. ಈ ರೀತಿಯ ವಿಚಾರ ವಿಸ್ತಾರದ ಚಿಂತನೆಗಳ ಮೂಲಕ ಲೇಖಕರ ಈ ಪ್ರಯತ್ನವು ಖಂಡಿತವಾಗಿಯೂ ಸಾರ್ಥಕವಾಗಿದೆಯೆಂದು ಹೇಳಬಹುದು.

ಪುಟ: 276 ₹320

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ವಜ್ರನಿದ್ರೆ

ವಜ್ರನಿದ್ರೆ (ನಾ). ಗಾಢವಾದ ನಿದ್ದೆ

ಮಹೇಂದ್ರಾಚಲದ ಬಂಡೆಗಳನ್ನು ಕುರಿತು ಹೇಳುವಾಗ ಕುವೆಂಪು ಅವರು ಅವು ಎಚ್ಚರಗೊಳ್ಳದೆ ಇರುವ ಸ್ಥಿತಿಯನ್ನು 'ವಜ್ರನಿದ್ರೆ' ಪದದಿಂದ ಹೀಗೆ ಬಣ್ಣಿಸಿದ್ದಾರೆ:

'ಘನಿತ ಮೌನಂ
ವಜ್ರನಿದ್ರೆಯಿಂದೆಳ್ಚರದೊ
ಪೇಳೆಂಬೊಲಾ ಬಂಡೆ
ಬಿದ್ದಿದ್ದುವಲ್ಲಲ್ಲಿ!'

ಪ್ರೇಮರಾಹು

ಶತ್ರುಘ್ನನು ರವಿಕುಲದ ಸುಖವನ್ನು ತಿಂದ ಮಂಥರೆಯನ್ನು ದಾರಿಯಲ್ಲಿ ಕಂಡು ಗೂನು ಬಿರಿಯುವಂತೆ ಬಡಿಯುವನು. ಆ ಗೋಳ್ದನಿ ಕೇಳಿ ಅಲ್ಲಿಗೆ ಬಂದ ಭರತನಿಗೆ ಅವಳು 'ರಕ್ಷಿಸೋ' ಎಂದು ಕೈ ನೀಡಿ ಬರುವಳು. ಆ ಚಿತ್ರಣದಲ್ಲಿ ಕುವೆಂಪು ಅವಳನ್ನು 'ಪ್ರೇಮರಾಹು' ಎಂದು ಕರೆದಿದ್ದಾರೆ. ಆ ನುಡಿ ಅವಳ ಪ್ರೇಮದಲ್ಲಿಯ ರಾಹುನಡೆಯನ್ನು ಸಮರ್ಥವಾಗಿ ಅಭಿವ್ಯಕ್ತಿಸಿದೆ.

'ತನ್ನಂ ಮರೆವುಗಲ್ಕೋಡಿ
ಕೈನೀಡಿ ಬರುತಿರ್ದಳಂ ಆ ಪ್ರೇಮರಾಹುವಂ
ತೊಲಗಿಸುತ್ತ'

ಕಥೆ

ಪ. ರಾಮಕೃಷ್ಣ ಶಾಸ್ತ್ರಿ ಅವರ **ದಡ ಸೇರದ ದೋಣಿ**

prajavani.net/short-story

ಕವನ

ನಾ ದಿವಾಕರ ಅವರ **ಶೋಧ ಮರುಶೋಧದ ದಾರಿ**

www.prajavani.net/poetry

ಸಾದರ ಸ್ವೀಕಾರ

ಹೊಸ ಪುಸ್ತಕಗಳ ಮಾಹಿತಿಗೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರತಿಕ್ರಿಯೆಗಳನ್ನು ಕಳಿಸಲು
bhanuvara@prajavani.co.in

ಮಜ ಮಜ ಮಜಕೂರ

ಎಂ.ಎಸ್.ಪೂಜಾರ

ಮಾಯವಾದ ಮೀನು!

ಡಣ್ಣ ಚಿಕ್ಕು ಕೌತುಕ ಕಥೆಯ

ಕಲೆ–ಪರಿಕಲ್ಪನೆ: ಸಂತೋಷ್ ಸಸಿಹಿತ್ಲು

ಗುಂಡ ಮೀನೊಂದನ್ನು ಸಾಕಿದ್ದ. ಚಿಂಟು ಹೆಸರಿನ ಆ ಮೀನನ್ನು ಗಾಜಿನ ಹೂಜಿಯೊಳಗೆ ಹಾಕಿ ದಿನವೂ ಅದಕ್ಕೆ ಆಹಾರ ಹಾಕುತ್ತಿದ್ದ. ಅದು ದಷ್ಟಪುಷ್ಟವಾಗಿ ಬೆಳೆಯುತ್ತಿತ್ತು. ಆ ಗಾಜಿನ ಹೂಜಿಯ ಪಕ್ಕದಲ್ಲೇ ಹಕ್ಕಿಯ ಚಿತ್ರವೊಂದನ್ನು ಗುಂಡ ನೇತುಹಾಕಿದ್ದ. ಒಂದು ದಿನ ಆ ಹಕ್ಕಿಗೆ ಜೀವಬಂತು. ಸುತ್ತಲೂ ನೋಡಿದಾಗ ಹೂಜಿಯೊಳಗಿನ ಮೀನು ಅದಕ್ಕೆ ಕಂಡಿತು. ಪಕ್ಕನೆ ಹಾರಿ ಆ ಮೀನನ್ನು ನುಂಗಿ ಮತ್ತೆ ಚಿತ್ರದೊಳಗೆ ಹೋಗಿ ಅದು ಅಡಗಿಕೊಂಡಿತು. ತಾನು ಸಾಕಿದ ಮೀನು ಏಕಾಏಕಿ ಕಾಣೆಯಾಗಿರುವುದನ್ನು ಕಂಡು ಗುಂಡನಿಗೆ ಗಾಬರಿಯಾಯಿತು.



ಗಣಿತದಲ್ಲಿ ಗರ್ದಿ ಗಮ್ಮತ್ತು

ಮೂರಂಕಿಯ ಒಂದು ಸಂಖ್ಯೆಯನ್ನು ಮಗ್ಗಲು ಮಗ್ಗಲು ಬರೆದುಕೊಳ್ಳಿ. ಅದನ್ನು 7ರಿಂದ ಭಾಗಿಸಿದರೆ ಯಾವಾಗಲೂ ಶೇಷ 0 ಉಳಿಯುತ್ತದೆ.

ಉದಾ: 887,887

ಇಂತಹ ಬೇರೆ ಬೇರೆ ಮೂರು ಅಂಕಿಗಳ ಜೋಡಿಗಳನ್ನು ಬರೆದುಕೊಂಡು ಆಡಿ ನೋಡಿ.

```
7)887887(126841
  7
  18
  14
   47
   42
    58
    56
     28
     28
     007
       7
       0
```

ಅಕ್ಷರ ಚ್ಯುತಿ ಆಟ

ಇಲ್ಲಿ ಕೊಟ್ಟಿರುವ ಪದಗಳಿಗೆ ಒಂದಕ್ಷರ ಸೇರಿಸಿ ಕೆಲವು ಊರು, ದೇಶಗಳ ಹೆಸರು ರಚಿಸಿ. (ಅಕ್ಷರಗಳನ್ನು ಹಿಂದೆ, ಮುಂದೆ ನಡುವೆ ಸೇರಿಸಬಹುದು)

1	ಇಲಿ	
2	ದರ	
3	ಕೊಡ	
4	ಹಾರಿ	
5	ಗದ	
6	ಜನ	
7	ಕೊಳ	
8	ಗುರುವಾರು	
9	ಸಾರ	
10	ಶಿರ	

ಅದಲು–ಬದಲು

ಇಲ್ಲಿ ಕೊಟ್ಟಿರುವ ಅಕ್ಷರಗಳನ್ನು ಸರಿಯಾಗಿ ಹೊಂದಿಸಿ ಅರ್ಥಬದ್ಧ ಪದ ಮಾಡಿ

1	ಯಾರಗಡಿ	
2	ನಿರಾಧಾಜ	
3	ಗುರುಮಹಾ	
4	ಜೀವಜನನ	
5	ಮಾಡುತನಾ	

ಪದ ಸಂಕಲನ

ಇಲ್ಲಿ ಕೊಟ್ಟಿರುವ ಎರಡು ಪದ ಹಾಗೂ ಒಂದು ಅಕ್ಷರವನ್ನು ಕೂಡಿಸಿ ಅರ್ಥಬದ್ಧ ಒಂದೇ ಪದ ಮಾಡಿರಿ.

1	ಕಡು	+	ಪರ	+	ಟ್ಟಿ	=	
2	ಶುಕ	+	ಪಾಪ	+	ಲ	=	
3	ನೀಗು	+	ನರಿ	+	ಳ್ಳೆ	=	
4	ವಾದ	+	ಕರ	+	ಳೆ	=	
5	ದನ	+	ದಿಬ್ಬ	+	ಹ	=	

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಚಿಕ್ಕ–ಲೆಕ್ಕ ದಿನಾಂಕ ಪತ್ತೆ ಹಚ್ಚಿ

ಕೆಳಗೆ ನೀಡಿರುವ ಸಂಖ್ಯೆಗಳನ್ನು ಗುಣಾಕಾರ ಮಾಡಿ ಇಂದಿನ ದಿನಾಂಕವನ್ನು ತಿಳಿದುಕೊಳ್ಳಿ..

120225X9

ಉತ್ತರ:

ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರವನ್ನು ಕೆಳಗಿನ ಇಮೇಲ್‌ಗೆ ಕಳುಹಿಸಿ...

majakoora@prajavani.co.in

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಸಂಕಲನ: 1.ಸರಳಹಾದಿ 2.ಕೋತಿಯಬಾಲ 3.ಕಮರಡೇಗು 4.ಹರಿವೆಪಲ್ಲೆ 5.ಬಳೆತೊಡಿಸು

ಸಿನಿಸ್ವಾರಸ್ಯ: ತವರಿಗೆ ಬಾ ತಂಗಿ

ಜಾಣಪದ ಆಟ: 1.ಕುಂಕುಮ 2.ಕಂಕಣ 3.ದುಂದುಭಿ 4.ಗಂಗರು 5.ಸಂಸದ 6.ಡಿಂಡಿಮ 7.ಗುಂಗುರು 8.ತುಂತುರು 9.ಚಂಚಲೆ 10.ಜಂಜಡ

ಅದಲು ಬದಲು: 1.ಸರಿಹೊಂದಿಸು 2.ಸರಿಪಡಿಸಿ 3.ಮುಳುಗು 4.ಹಿತಕರ 5.ಭೂತಗನ್ನಡಿ

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು

ಅಭಿಷೇಕ್ ಎಂ., ಪುತ್ತೂರು
ಪ್ರತೀಕ್ಷಾ ಜೋಯ್ಸ್, ಸಾಗರ
ನಂದಿತಾ ಎಸ್.ಎಂ., ಬೆಂಗಳೂರು
ಪ್ರತೀಕ್ಷಾ ಬಿ., ವಿಜಯಪುರ
ತನ್ವಿಕ ಕೆ.ಎಚ್., ಕೆ.ಆರ್.ಪೇಟೆ
ಸೃಜನಾ ಟಿ.ಆರ್., ಹೊಸಪೇಟೆ

ಹಿಮಾಚಲ ಪ್ರದೇಶದ ಸ್ಪಿಟಿ ಕಣಿವೆಯಲ್ಲಿರುವ ಚಂದ್ರತಾಲ್ ಸರೋವರ

ಚಾರಣದ ವೇಳೆ ತಂಪಾಗಿರುವ ಇಂತಹ ನದಿಗಳನ್ನು ದಾಟುವುದು ಸುಲಭದ ಮಾತಲ್ಲ...

ಚಾರಣ ಬೇಡವೆನ್ನುತ್ತಾ ಹಿಮಾಲಯ ಏರಿದೆ!

ಪ್ರವಾಸ

ಹಿಮಾಲಯ ಚಾರಣ ಹಲವರ ಜೀವಮಾನದ ಕನಸಾಗಿರುತ್ತದೆ. ಇದಕ್ಕಾಗಿ ಪ್ರತಿ ಕ್ಷಣವೂ ಹಂಬಲಿಸುತ್ತಲೇ ಇರುತ್ತಾರೆ. ಆದರೆ, ಈ ಲೇಖಕರು ಅನಿರೀಕ್ಷಿತವಾಗಿ ಚಾರಣಕ್ಕೆ ಹೊರಡುತ್ತಾರೆ. ಅಲ್ಲಿ ತಮಗಾದ ಅನುಭವವನ್ನು ಇಲ್ಲಿ ಕಟ್ಟಿಕೊಟ್ಟಿದ್ದಾರೆ

• ಕೆ.ಸಿ. ವಿರೂಪಾಕ್ಷ

ನಾನೇನು ಹಿಮಾಲಯ ಪರ್ವತಶ್ರೇಣಿಯಲ್ಲಿ ಚಾರಣ ಮಾಡಬೇಕು ಎಂಬ ಕನಸು ಕಟ್ಟಿಕೊಂಡಿರಲಿಲ್ಲ. 'ಹಿಮಾಲಯದ ಪರ್ವತ ಸಾಲುಗಳಲ್ಲಿ ಚಾರಣ ಮಾಡುವುದು ಅಪಾಯಕಾರಿ. ಅಲ್ಲಿಗೆ ಹೋಗುವುದು ಬೇಡ. ನಿಮ್ಮ ತಂದೆಯ ಮಾತು ಕೇಳಿ' ಎಂದು ಹಲವಾರು ವರ್ಷಗಳಿಂದ ಚಾರಣವನ್ನೇ ಹವ್ಯಾಸ ಮಾಡಿಕೊಂಡಿರುವ ಮಿತ್ರರೊಬ್ಬರಿಗೆ ಸಲಹೆ ನೀಡಲು ಹೋಗಿದ್ದೆ. ಆದರೆ, ಅವರು ನನ್ನ ಮನಸ್ಸನ್ನೇ ಪರಿವರ್ತನೆ ಮಾಡಿ ಹಿಮಾಲಯ ಚಾರಣಕ್ಕೆ ಹೊರಡುವಂತೆ ಮಾಡಿಯೇಬಿಟ್ಟರು! ಅವರ ಜೊತೆ ಚಾರಣ ಮಾಡಿ ಬಂದ ನಂತರ ನನಗೆ ಅನಿಸಿದ್ದು, ಚಾರಣ ಬೇಡ ಎಂದು ಸ್ನೇಹಿತನ ಮನವೊಲಿಸುವ ಪ್ರಯತ್ನ ಮಾಡದೇ ಹೋಗಿದ್ದರೆ ಬದುಕಿನಲ್ಲಿ ಅಪೂರ್ವ ಅನುಭವವೊಂದನ್ನು ಕಳೆದುಕೊಂಡುಬಿಡುತ್ತಿದ್ದೆ ಎಂದು...

ಕರ್ನಾಟಕ ಪರ್ವತಾರೋಹಣ ಸಂಸ್ಥೆಯ ಸದಸ್ಯರೊಂದಿಗೆ 20 ಸದಸ್ಯರ ತಂಡ ಚಾರಣ ಏರ್ಪಡಿಸಿತ್ತು. ಆ ತಂಡದಲ್ಲಿ ನಾನು, ನನ್ನ ಮಗ ಸೇರಿದಂತೆ ಏಳು ಹೊಸ ಸದಸ್ಯರು ಕುಲು ಕಣಿವೆಯ ದಿಯೋ ತಿಬ್ಬ ಶಿಖರದ ಬೇಸ್ ಕ್ಯಾಂಪ್ ಚಂದ್ರತಾಲ್‌ವರೆಗೆ ಚಾರಣ ಮಾಡಲು ಹೊರಟಿದ್ದೆವು. ಉಳಿದ 13 ಸದಸ್ಯರ ತಂಡ 'ದಿಯೋ ತಿಬ್ಬ' ಶಿಖರಕ್ಕೆ ಹೊರಟಿತು. ಇದರ ನಾಯಕತ್ವ ವಹಿಸಿದ್ದು ಕರ್ನಾಟಕ ಪರ್ವತಾರೋಹಣ ಸಂಸ್ಥೆಯ ಸದಸ್ಯ, ನನ್ನ ಸ್ನೇಹಿತ ಸಂತೋಷ್ ದೇವರಾಜಪ್ಪ. ಮನಾಲಿಯಿಂದ ಕನೂಲ್‌ವರೆಗೆ ವಾಹನಗಳಲ್ಲಿ ತೆರಳಿ ಅಲ್ಲಿಂದ ನಮ್ಮ ಚಾರಣ ಪ್ರಾರಂಭಿಸಿದೆವು. ಕನೂಲ್ ಬಳಿ ಜಲ ವಿದ್ಯುತ್ ಘಟಕ ಇದ್ದು, ಅಲ್ಲಿವರೆಗೆ ವಾಹನಗಳಲ್ಲಿ ತೆರಳಬಹುದು. ಅದು ದುರ್ಗಮ ಹಾದಿ. ಚಿಕ್ಕಪುಟ್ಟ ವಾಹನಗಳು ಮಾತ್ರ ಈ ರಸ್ತೆಯಲ್ಲಿ ಸಾಗಲು ಸಾಧ್ಯ.

ಮೊದಲ ದಿನ ಕನೂಲ್‌ನಿಂದ ಚಾರಣ ಪ್ರಾರಂಭಿಸಿದ ನಮಗೆ ಇದ್ದ ಗುರಿ 10,370 ಅಡಿ ಎತ್ತರದಲ್ಲಿದ್ದ 'ಚಿಕ್ಕ' ಕ್ಯಾಂಪ್ ತಲುಪುವುದು. ಮೊದಲ ದಿನವಾದ ಕಾರಣ, ಆ ದಿನ ಎರಡೂವರೆ ಗಂಟೆಯ ಚಾರಣ ಮಾತ್ರ ನಿಗದಿಯಾಗಿತ್ತು. ಅದನ್ನು ಚಾರಣದ ಭಾಷೆಯಲ್ಲಿ 'ಬೇಬಿ ಸ್ಟೆಪ್' ಅನ್ನುತ್ತಾರೆ. ಬೆಳಿಗ್ಗೆ 10 ಗಂಟೆಗೆ ಪ್ರಾರಂಭಿಸಿ 12.30ರ ಹೊತ್ತಿಗೆ 'ಚಿಕ್ಕ' ಕ್ಯಾಂಪ್ ಅನ್ನು ಆರಾಮದಲ್ಲಿ ತಲುಪಿದೆವು.

ಕುಲು, ಮನಾಲಿ, ಕನೂಲ್ ಎಲ್ಲ ಕಡೆಗಳಲ್ಲಿ ಹಚ್ಚ ಹಸುರಿನಿಂದ ಕಂಗೊಳಿಸುವ ಪರ್ವತಶ್ರೇಣಿ. ಎಲ್ಲಿಂದ ಎಲ್ಲಿಯವರೆಗೆ ಕಣ್ಣು ಹಾಯಿಸಿದರೂ ಆಕಾಶದೆತ್ತರಕ್ಕೆ ಬೆಳೆದಿರುವ ಪೈನ್ ಮರಗಳು ಕಂಡು ಬರುತ್ತವೆ. ಅವುಗಳನ್ನು ನೋಡುವುದೇ ಚೆಂದ. ಪರ್ವತ ಶಿಖರಗಳಿಗೆ ಮುತ್ತಿಕ್ಕಿಕೊಂಡು ನಭೋಮುಖವಾಗಿ ಹೋಗುವ ಮಂಜು ಮತ್ತು ಮೋಡ ಪರ್ವತಗಳಿಗೆ ಬೆಳ್ಳಿ ಹೊದಿಕೆಯನ್ನು ಹೊದಿಸಿದಂತೆ ಭಾಸವಾಗುತ್ತದೆ. ಕಡಿದಾದ ಹಾದಿಯಲ್ಲಿ ದಟ್ಟಕಾಡಿನ ಮಧ್ಯೆ ಜಗತ್ ಸುಖ್ ಹಳ್ಳದ ಜೊತೆ ಜೊತೆಯಲ್ಲಿ ಮೊದಲ ದಿನದ ಚಾರಣವನ್ನು ಆಯಾಸವಿಲ್ಲದೆ ಮುಗಿಸಿದೆವು.

ಎರಡನೆಯ ದಿನದ ಚಾರಣ 'ಚಿಕ್ಕ ಕ್ಯಾಂಪ್'ನಿಂದ 'ಸೆರಿ ಕ್ಯಾಂಪ್'ವರೆಗೆ ಇತ್ತು. ಅದು ಸುಮಾರು ಆರು ಗಂಟೆಗಳ ಪಯಣ. ಬೆಳಿಗ್ಗೆ 8 ಗಂಟೆಗೆ ಪ್ರಾರಂಭಿಸಿ ಮಧ್ಯಾಹ್ನ 2 ಗಂಟೆಗೆ ತಲುಪುವ ಗುರಿಯಿರುತ್ತದೆ. ಸ್ವಲ್ಪ ಹೆಚ್ಚು ಕಡಿಮೆ ಎಂಬಂತೆ ಎಲ್ಲರೂ ನಿಗದಿತ ಅವಧಿಯಲ್ಲಿ ತಲುಪಿದೆವು. ಮೊದಲ ಬಾರಿಗೆ ಚಾರಣ ಕೈಗೊಂಡಿದ್ದ ನಮಗೆ ಈಗಾಗಲೇ ಪರ್ವತಾರೋಹಣವನ್ನು ಕೈಗೊಂಡ ಅನುಭವ ಹೊಂದಿದ್ದವರು ಹಿಂದೆ ಇದ್ದು ಪ್ರೋತ್ಸಾಹ, ಮಾರ್ಗದರ್ಶನ ಮಾಡುತ್ತಾ ಬರುತ್ತಿದ್ದರು. ಎರಡನೆಯ ದಿನ ಸ್ವಲ್ಪ ಆಯಾಸ, ಸುಸ್ತು ಕಾಡಿತ್ತು. ಆದರೆ ಪ್ರಕೃತಿಯ ರಮಣೀಯತೆ, ಸ್ವಚ್ಛ ಗಾಳಿ, ಸುತ್ತಲೂ ಹರಿಯುತ್ತಿದ್ದ ಝರಿಗಳು ಆಯಾಸವನ್ನು ಮರೆಸಿಬಿಡುತ್ತಿದ್ದವು. ಎರಡೂ ಕಡೆ ಕಡಿದಾದ ಬೆಟ್ಟಗಳ ಸಾಲು, ನಡುವೆ ಜಗತ್ ಸುಖ್ ಹಳ್ಳದ ದಂಡೆಯಲ್ಲಿ ಸಣ್ಣದಾದ ಕಂಡೂ ಕಾಣದಂತಿದ್ದ ಕಾಲುಹಾದಿಯಲ್ಲಿ ಗೈಡ್‌ಗಳೊಂದಿಗೆ ಎಲ್ಲರೂ ಚಾರಣ ಮಾಡುತ್ತ ಎದುರಿಗೆ ಆಕಾಶದೆತ್ತರಕ್ಕೆ ಕಾಣುತ್ತಿದ್ದ ಬೆಟ್ಟವನ್ನು ದಿಟ್ಟಿಸಿ ನೋಡುತ್ತಾ, ಅದರ ತುದಿಯಲ್ಲಿ ಅಲ್ಲಲ್ಲಿ ಹಿಮದ ರಾಶಿಯನ್ನು ನೋಡುತ್ತಾ, ಮಧ್ಯಾಹ್ನ 2 ಗಂಟೆಯ ಹೊತ್ತಿಗೆ 12,140 ಅಡಿ ಎತ್ತರದ 'ಸೆರಿ' ಕ್ಯಾಂಪ್ ತಲುಪಿದೆವು.

ಎರಡನೆಯ ದಿನ ಕ್ಯಾಂಪ್ ತಲುಪುವ ಹೊತ್ತಿಗೆ ಕೆಲವರು ಬಳಲಿದ್ದರು. ಎಲ್ಲರೂ ನಿಗದಿಯಾಗಿದ್ದ ಟೆಂಟ್‌ಗಳಿಗೆ ತಲುಪಿದ ಸ್ವಲ್ಪ ಹೊತ್ತಿನಲ್ಲೇ ಜೋರು ಮಳೆ ಪ್ರಾರಂಭವಾಯಿತು. ವಾತಾವರಣ ತುಂಬಾ ಹದಗೆಟ್ಟ ಕಾರಣ ಆ ದಿನ ಯಾರೂ ಟೆಂಟ್‌ಗಳಿಂದ ಆಚೆ ಬರಲು ಸಾಧ್ಯವಾಗಲಿಲ್ಲ. ಪ್ರತಿ ರಾತ್ರಿ 7 ಗಂಟೆಗೆ ಪರ್ವತಾರೋಹಣದ ಗುಂಪಿನ ನಾಯಕತ್ವ ವಹಿಸಿದ್ದ ಸಂತೋಷ್ ದೇವರಾಜಪ್ಪ ಮಾರನೆ ದಿನ ಕೈಗೊಳ್ಳಬೇಕಾದ ಚಾರಣದ ಮಾಹಿತಿ, ಕೈಗೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳು, ಬರಬಹುದಾದ ತೊಂದರೆಗಳು ಇತ್ಯಾದಿಗಳ ಮಾಹಿತಿ ನೀಡುತ್ತಿದ್ದರು. ಅದೇ ರೀತಿ ನಮ್ಮೊಂದಿಗಿದ್ದ ಕರ್ನಾಟಕ ಪರ್ವತಾರೋಹಣ ಸಂಸ್ಥೆಯ ಮಾಜಿ ಅಧ್ಯಕ್ಷ ಶ್ರೀವತ್ಸ ಅವರ ನಲವತ್ತು ವರ್ಷಗಳ ಅನುಭವದ ಸಾರವನ್ನು ನಮಗೆ ಧಾರೆ ಎರೆಯುತ್ತಿದ್ದರು. ಅಲ್ಲದೆ ಮನಾಲಿಯ 'ಮೌಂಟೇನ್ ಎಕ್ಸ್‌ಪಿಡೇಷನ್' ಸಂಸ್ಥೆಯಿಂದ ನೇಮಕಗೊಂಡಿದ್ದ ಗೈಡ್‌ಗಳು ಪ್ರತಿದಿನ ಚಾರಣದ ಬಗ್ಗೆ ಸೂಕ್ತ ಸಲಹೆ ಸೂಚನೆಗಳನ್ನು ನೀಡುತ್ತಿದ್ದರು.

ಮೂರನೆಯ ದಿನ ಬೆಳಿಗ್ಗೆ 8 ಗಂಟೆಗೆ 'ಸೆರಿ'ಯಿಂದ ಚಾರಣ ಪ್ರಾರಂಭಿಸಿ, ಮಧ್ಯಾಹ್ನ 3 ಗಂಟೆಯ ಹೊತ್ತಿಗೆ 'ದಿಯೋ ತಿಬ್ಬ' ಶಿಖರದ 'ಬೇಸ್ ಕ್ಯಾಂಪ್' 14,690 ಅಡಿ ಎತ್ತರದ 'ಛೋಟಾ ಚಂದ್ರತಾಲ್' ತಲುಪಿದೆವು. ಸೆರಿಯಿಂದ ಹೊರಟ ತಕ್ಷಣ ನಮಗೆ ಅತ್ಯಂತ ಕಡಿದಾದ ಬೆಟ್ಟ ಎದುರಾಗುತ್ತದೆ. ಅದನ್ನು ದಾಟಿದರೆ ಎದುರಾಗುವುದು ಟೆಂಟಾವ್ಯಾಲಿ. ಟೆಂಟಾ ಸುಂದರವಾದ ಹಚ್ಚ ಹಸುರಿನ ಹುಲ್ಲುಹಾಸು ಮತ್ತು ಅಪರೂಪದ ಹೂವುಗಳಿಂದ ಕಂಗೊಳಿಸುತ್ತಿತ್ತು. ಅದರ ಸುತ್ತಲೂ ಇದ್ದ ಕಡಿದಾದ ಪರ್ವತ ಶ್ರೇಣಿಗಳು ನಮಗೆ ಹೊಸಲೋಕವನ್ನು ಪ್ರವೇಶಿಸಿದ ಅನುಭವ ನೀಡುತ್ತವೆ. ಅಲ್ಲಿನ ಸೊಬಗನ್ನು ನೋಡುತ್ತಿದ್ದಂತೆ ಕಡಿದಾದ ಬೆಟ್ಟವನ್ನು ಹತ್ತಿ ಬಂದಾಗ ಆದ ಆಯಾಸವೆಲ್ಲ ಮಾಯವಾಗಿಬಿಡುತ್ತದೆ.

